A / BG-GPO /2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ | ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೦, ೨೦೦೯ (ಭಾದ್ರಪದ ೧೯, ಶಕವರ್ಷ ೧೯೩೧) | ಸಂಚಿಕೆ ೩೭

ವಿಷಯಸೂಚಿ

ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
http//www.Kar.nic.in/gazette.

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1	ಭಾಗ - 1	12-00	700-00
2.	ಭಾಗ - 2	4-00	208-00
3.	ಭಾಗ - 3	30-00	1075-00
4	ಭಾಗ - 4	3-00	240-00
5.	ಭಾಗ - 4ಎ	8-00	285-00
6	ಭಾಗ - 5	13-00	528-00
7.	ಭಾಗ - 6 (ಬೆಂಗಳೂರು)	7-00	325-00
8.	ಭಾಗ - 6ಎ (ಮೈಸೂರು)	50-00	1111-00
9	ಭಾಗ - 6ಬಿ (ಧಾರವಾಡ)	25-00	1637-00
10.	ಭಾಗ - 6ಸಿ (ಗುಲ್ಬರ್ಗ)	29-00	1469-00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	77-00	3360-00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.		

೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು		ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ	...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	7-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ)	...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್	...	11-00
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ	...	½ ಅಥವಾ ¼ ಪುಟಕ್ಕೆ ದರ ನಿಗಧಿ ಕ್ರಮ ಸಂಖ್ಯೆ 1 ಮತ್ತು 3
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ	...	ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು.
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ)	...	1-00

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ | ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೦, ೨೦೦೯ (ಭಾದ್ರಪದ ೧೯, ಶಕ ವರ್ಷ ೧೯೩೧) | ಸಂಚಿಕೆ ೩೭

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ: ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್(ಪರಿಷ್ಕೃತ) ಕನ್ನಡ ಆವೃತ್ತಿಯನ್ನು (2006) ಆಂಗ್ಲ ಭಾಷೆಗೆ ಭಾಷಾಂತರಿಸಲು ಆಡಳಿತತ್ಮಾಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಬೆಂಗಳೂರು ಇವರ ಪತ್ರ ಸಂ:ಕಗ್ಯಾಇ/ದಕಜಿಗ್ಯಾ/2009–10 ದಿ: 21.05.2009.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 21–5–2009ರ ಪತ್ರದಲ್ಲಿ ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಇವರು ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್(ಪರಿಷ್ಕೃತ) ಕನ್ನಡ ಆವೃತ್ತಿಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಲು ಉದ್ದೇಶಿಸಿದ್ದು, ಇದಕ್ಕೆ ತಗಲುವ ರೂ.1.50ಲಕ್ಷಗಳನ್ನು 2009–10ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಭರಿಸಲು ಅವಕಾಶ ಕಲ್ಪಿಸಿಕೊಂಡಿದ್ದು, ಮೇಲ್ಕಂಡ ಭಾಷಾಂತರ ಕಾರ್ಯಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಬೇಕೆಂದು ಕೋರಿರುತ್ತಾರೆ. ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 6 ಕರಾಗೆ 2009, ಬೆಂಗಳೂರು ದಿನಾಂಕ: 18ನೇ ಜುಲೈ 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಗ್ಯಾಸೆಟಿಯರ್(ಪರಿಷ್ಕೃತ) ಕನ್ನಡ ಆವೃತ್ತಿಯನ್ನು ಆಂಗ್ಲ ಭಾಷೆಗೆ ಭಾಷಾಂತರಿಸಲು ರೂ.1,50,000–00 (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ)ಗಳನ್ನು ಮುಖ್ಯಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಅವರಿಗೆ ಬಿಡುಗಡೆ ಮಾಡಲು ಸರ್ಕಾರದ ಅನುಮತಿ ನೀಡಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ಅದರ ನಿಯಮ 2000ನ್ನು ಅನುಸರಿಸುವುದು.

ಈ ಮೊತ್ತವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 3454–02–110–0–01–059 ಇತರೆ ಖರ್ಚು (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರ ಟಿಪ್ಪಣಿ ಸಂ: ಶಿಇ 1313 ಐಎಫ್(ಬಿ.ಎ) 2009 ದಿ: 25–6–2009 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂ:ಎಫ್.ಡಿ. 1 ಟಿ.ಎಫ್.ಪಿ 96 ದಿನಾಂಕ:10–7–96ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಭರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1747

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ).

ವಿಷಯ: ತಮಿಳುನಾಡು ರಾಜ್ಯದ ಚೆನ್ನೈ ಮಹಾನಗರದಲ್ಲಿ ವಿಶ್ವಕವಿ ಸರ್ವಜ್ಞ ರವರ ಪುತ್ಥಳಿ ಸ್ಥಾಪನೆ ಕಾಮಗಾರಿಯ ರೇಖಾ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:
1 ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ ಕಸನಿ 128 ಪ್ರತಿಮೆ 1999-2000 ದಿನಾಂಕ 24.10.2008.
2 ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಪತ್ರ ಸಂಖ್ಯೆ ಕಸಇ 4 ನಿಆಶಾ 2009-10, ದಿನಾಂಕ 14.07.2009.
3 ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರ ಪತ್ರ ಸಂಖ್ಯೆ ಲೋಇ 248 ಬಿಎಂಎಸ್ 2009 ಸರ್ವಜ್ಞ ಮೂರ್ತಿ:ಅಂದಾಜು:09-10, ದಿನಾಂಕ 14.07.2009.

ಪ್ರಸ್ತಾವನೆ:

ಮೇಲೆ (1) ಮತ್ತು (2)ರಲ್ಲಿ ಓದಲಾದ ಪತ್ರಗಳಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರು ಸುಮಾರು 18 ವರ್ಷಗಳಿಂದ ನೆನೆಗುದಿಗೆ ಬಿದ್ದ ಬೆಂಗಳೂರಿನ ಹಲಸೂರಿನ ಕೆರೆ ಸಮೀಪ ತಿರುವಳ್ಳುರ್ ಪ್ರತಿಮೆ, ಚೆನ್ನೈನಲ್ಲಿ ಸರ್ವಜ್ಞ ಪ್ರತಿಮೆಗಳು ಅನಾವರಣ ಆಗುವ ವಿಷಯವು ಸೌಹಾರ್ದಯುತವಾಗಿ ಬಗೆಹರಿಯುವಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ಕ್ರಮಕೈಗೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಸೂಕ್ತವಾದ ರೇಖಾ ಅಂದಾಜು ಪಟ್ಟಿಯನ್ನು ತಯಾರಿಸಿ, ಮತ್ತು ಸಮಾರಂಭಕ್ಕೆ ಉತ್ತಮ ವ್ಯವಸ್ಥೆಗಳನ್ನು ಮಾಡಲು ಕಾರ್ಯನಿರ್ವಾಹಕ ಇಂಜಿನಿಯರ್, ಲೊಕೋಪಯೋಗಿ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ ಇವರಿಗೆ ಪತ್ರವನ್ನು ಬರೆದು, ಮಾಹಿತಿಗಾಗಿ ಸರ್ಕಾರಕ್ಕೆ ತಿಳಿಸಿರುತ್ತಾರೆ ಹಾಗೂ ಅಗತ್ಯವಾದ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ಇವರು ತಮಿಳುನಾಡು ರಾಜ್ಯದ ಚೆನ್ನೈ ಮಹಾನಗರದಲ್ಲಿ ವಿಶ್ವಕವಿ ಸರ್ವಜ್ಞ ರವರ ಪುತ್ಥಳಿಯನ್ನು ಸ್ಥಾಪಿಸುವ ಕಾಮಗಾರಿಗೆ ರೇಖಾ ಅಂದಾಜನ್ನು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ, ಬೆಂಗಳೂರು ಇವರು ರೂ.60.00 ಲಕ್ಷಗಳಿಗೆ ತಯಾರಿಸಿ, ಸಲ್ಲಿಸಿರುತ್ತಾರೆಂದು ತಿಳಿಸಿ, ಈ ರೇಖಾ ಅಂದಾಜು ಪಟ್ಟಿಗೆ (2009-10ನೇ ಸಾಲಿನ ದರಪಟ್ಟಿಯಂತೆ) ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನವನ್ನು ಒದಗಿಸಲು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 40 ಸ್ಮಾಪ್ರನಿ 2008, ಬೆಂಗಳೂರು, ದಿನಾಂಕ: 24ನೇ ಜುಲೈ 2009

ಮೇಲಿನ ಪ್ರಸ್ತಾವನೆಯ ಅಂಶಗಳನ್ನೊಳಗೊಂಡು ತಮಿಳುನಾಡು ರಾಜ್ಯದ ಚೆನ್ನೈ ಮಹಾನಗರದಲ್ಲಿ ವಿಶ್ವಕವಿ ಸರ್ವಜ್ಞ ರವರ ಪುತ್ಥಳಿಯ ಸ್ಥಾಪನೆಗೆ ಹಾಗೂ ಸಮಾರಂಭಕ್ಕೆ ಸೇರಿ ಒಟ್ಟು ರೂ.60.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2205-00-102-4-31-059 ಅಡಿಯಲ್ಲಿ ಒದಗಿಸಲಾದ ಅನುದಾನದಿಂದ ಭರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸರ್ಕಾರದ ಮಂಜೂರಾತಿ ನೀಡಿದೆ. ಪ್ರಸ್ತಾಪಿಸಲಾಗಿರುವ ರೂ.60.00 ಲಕ್ಷಗಳ ಅಂದಾಜಿನಲ್ಲಿ ಲೋಕೋಪಯೋಗಿ ಇಲಾಖೆಯ ಮೂಲಕ ಕೈಗೊಂಡಿರುವ ಕೆಲಸಗಳನ್ನು 2009-10ನೇ ಸಾಲಿನ ಎಸ್.ಆರ್ ದರಗಳು ಅನ್ವಯಿಸುವುದರಿಂದ ಟೆಂಡರ್ ಪ್ರಿಮಿಯಂ ಕನಿಷ್ಠ ಇರುವಂತೆ ನೋಡಿಕೊಳ್ಳತಕ್ಕದ್ದು ಹಾಗೂ ಸಮಾರಂಭಕ್ಕೆ ನಿಗಧಿ ಪಡಿಸಿದ ವೆಚ್ಚದ ಮೊತ್ತ ಸಹ ಮಿತವಾಗಿರುವಂತೆ ಗಮನವಹಿಸತಕ್ಕದ್ದು.

ಕರ್ನಾಟಕ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000 ರ ಪ್ರಕಾರ ಟೆಂಡರ್ ಪ್ರಕಟಣೆಯನ್ನು ಕೈಗೊಂಡು, ಈ ಪ್ರತಿಮೆ ಸ್ಥಾಪಿಸಲು ಕ್ರಮ ಕೈಗೊಳ್ಳುವುದು. ಈ ಮೊತ್ತವು ಒಂದು ಬಾರಿಯಾಗಿದ್ದು, ಯಾವ ಉದ್ದೇಶಕ್ಕೆ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಸತಕ್ಕದ್ದು ಮತ್ತು ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಸಂಬಂಧಪಟ್ಟವರು ಮುಂದಿನ ನಿರ್ವಹಣೆಯನ್ನು ನಿರ್ವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅ.ಟಿ ಸಂಖ್ಯೆ ಆಇ 725 ವೆಚ್ಚ-7/2009, ದಿನಾಂಕ 17.07.2009ರ ಹಾಗೂ ಯೋಜನಾ ಇಲಾಖೆಗಳ ಅ.ಟಿ ಸಂಖ್ಯೆ ಪಿಡಿ 67 ಎಂಇ 2009, ದಿನಾಂಕ 22.07.2009ರನ್ವಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1775

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

I-F-1-(★)

ವಿಷಯ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯಲ್ಲಿನ ಖಾಲಿ ಹುದ್ದೆಗಳನ್ನು ಬಾಹ್ಯ ಮೂಲಗಳಿಂದ ಭರ್ತಿ ಮಾಡುವ ಬಗ್ಗೆ- ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು.

ಓದಲಾಗಿದೆ: 1. ದಿನಾಂಕ 30.04.2009ರಂದು ಸರ್ಕಾರದ ಕಾರ್ಯದರ್ಶಿಗಳು ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ವೆಂಕಟಪ್ಪ ಚಿತ್ರಶಾಲೆಯ ಸಲಹಾ ಸಮಿತಿ ಸಭೆಯ ನಡವಳಿಗಳು

2. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರ ಪತ್ರ ಸಂಖ್ಯೆ: ಡಿಎಎಂ: ಇಎಸ್‌ಟಿ:1:ಕ.ಸಂಖ್ಯೆ:339:ಎ:2009–10/25 ದಿ:08.05.2009

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸಭೆಯ ನಡವಳಿಯಲ್ಲಿ ವೆಂಕಟಪ್ಪ ಚಿತ್ರಶಾಲೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಇದೆಯೆಂದು ತಿಳಿಸಿ, ಶ್ರೀ ಎಸ್.ಆರ್. ಹೊನ್ನಲಿಂಗಯ್ಯ, ಜಂಟಿ ನಿರ್ದೇಶಕರು (ನಿವೃತ್ತ) ಇವರನ್ನು ವೆಂಕಟಪ್ಪ ಚಿತ್ರಶಾಲೆಯಲ್ಲಿ ವಿಶೇಷ ಅಧಿಕಾರಿಯಾಗಿ ನೇಮಿಸಿ ಇವರಿಗೆ ಮಾಸಿಕ ರೂ.15,000/– ಗೌರವ ಧನ ನೀಡಬೇಕೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಅ) ತಾಂತ್ರಿಕ ಸಹಾಯಕ (ಎಲ್.ಸಿ.ಡಿ ಪ್ರೊಜೆಕ್ಟರ್, ಕಂಪ್ಯೂಟರ್, ಧ್ವನಿವರ್ಧಕ ಹಾಗೂ ಸಭಾಂಗಣ ನಿರ್ವಹಣೆಗೆ) ಆ) ಲಿಫ್ಟ್ ಆಪರೇಟರ್ ಇ) ಎ.ಸಿ ಪ್ಲಾಂಟ್ ಆಪರೇಟರ್ ಈ ಮೂರು ಹುದ್ದೆಗಳಿಗೆ ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಅವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಡಾ. ಎಸ್. ಆರ್ ಹೊನ್ನಲಿಂಗಯ್ಯ, ನಿವೃತ್ತ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ಪ್ರಸ್ತುತ ವೆಂಕಟಪ್ಪ ಚಿತ್ರಶಾಲೆಯಲ್ಲಿ ಖಾಲಿ ಇರುವ ಕ್ಯೂರೇಟರ್ ಹುದ್ದೆಯ ಎದುರಿಗೆ ಭರ್ತಿ ಮಾಡಿಕೊಂಡು ಮಾಸಿಕ ವೇತನ ರೂ.15,000/–ಗಳನ್ನು ನೀಡಲು ಪ್ರಸ್ತಾಪಿಸಿರುವರು. ಅಲ್ಲದೇ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಪ್ರಸ್ತುತ ಖಾಲಿ ಇರುವ ಪುರಾತತ್ವ ಸಂರಕ್ಷಣಾ ಸಹಾಯಕರ ಹುದ್ದೆಯ ಎದುರಿಗೆ ಶ್ರೀ ಲ.ನಾ. ಸ್ವಾಮಿ ಇವರನ್ನು ವಿಶೇಷಾಧಿಕಾರಿಯನ್ನಾಗಿ ಹಾಗೂ ದ್ವಿತೀಯ ದರ್ಜೆಯ ಹುದ್ದೆಯ ಎದುರಿಗೆ ಶ್ರೀ ಶೇಷನಾರಾಯಣ, ಇವರನ್ನು ಅಕ್ಷರಸ್ಥ ಸಹಾಯಕರನ್ನಾಗಿ ಭರ್ತಿ ಮಾಡಿಕೊಂಡು ಇವರುಗಳಿಗೆ ಕ್ರಮವಾಗಿ ಮಾಸಿಕ ರೂ.8,997/– ಗಳ ವೇತನ ನೀಡಲು ಪ್ರಸ್ತಾಪಿಸಿರುವರು. ಅಲ್ಲದೇ ಈ ಮೂರು ಹುದ್ದೆಗಳಿಗೆ ತಗಲುವ ವೆಚ್ಚವನ್ನು 2009–10ನೇ ಸಾಲಿನ ಲೆಕ್ಕಶೀರ್ಷಿಕೆ 2205–00–103–001 (ಯೋಜನೇತರ) 059– ಇತರೆ ಖರ್ಚುಗಳು ಅಡಿಯಲ್ಲಿ ಭರಿಸಲಾಗುವುದೆಂದು ತಿಳಿಸುತ್ತಾ, ಸದರಿ ಹುದ್ದೆಗಳನ್ನು ಬಾಹ್ಯ ಮೂಲದಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 88 ಕೆಎಂಯು 2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಕ್ಕೆ ಈ ಕೆಳಕಂಡ 3 ಹುದ್ದೆಗಳನ್ನು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಗೆ ಬಾಹ್ಯ ಮೂಲಗಳಿಂದ ಭರ್ತಿ ಮಾಡಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಿದೆ.

ಕ್ರ. ಸಂ.	ಹೆಸರು ಮತ್ತು ವಿಳಾಸ	ಹುದ್ದೆ, ಸ್ಥಳ ಮತ್ತು ವೇತನ
1	ಡಾ. ಎಸ್. ಆರ್ ಹೊನ್ನಲಿಂಗಯ್ಯ, ನಿವೃತ್ತ ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ವಿಶೇಷ ಅಧಿಕಾರಿ, ವೆಂಕಟಪ್ಪ ಚಿತ್ರಶಾಲೆ, ಬೆಂಗಳೂರು. ಮಾಸಿಕ ರೂ.15,000/–(ರೂಪಾಯಿ ಹದಿನೈದು ಸಾವಿರ ಮಾತ್ರ)
2	ಶ್ರೀ ಲ.ನಾ. ಸ್ವಾಮಿ ನಂ.1063/2004, 9ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ವಿದ್ಯಾರಣ್ಯಪುರಂ, ಮೈಸೂರು	ವಿಶೇಷಾಧಿಕಾರಿ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು. ಮಾಸಿಕ ವೇತನ ರೂ.8,997/–(ರೂ. ಎಂಟು ಸಾವಿರ ಒಂಭೈನೂರ ತೊಭತ್ತೇಳು ಮಾತ್ರ)
3	ಶ್ರೀ ಶೇಷನಾರಾಯಣ, ನಂ. 150, ಗೌರಿಶ್ರೀ, 3ನೇ ಕ್ರಾಸ್, ಸಿದ್ದಲಿಂಗೇಶ್ವರ ಬಡಾವಣೆ, ಜೆ.ಪಿ. ನಗರ, 2ನೇ ಹಂತ, ಮೈಸೂರು–570 008	ಅಕ್ಷರಸ್ಥ ಸಹಾಯಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು. ಮಾಸಿಕ ವೇತನ ರೂ.8,997/–(ರೂ. ಎಂಟು ಸಾವಿರ ಒಂಭೈನೂರ ತೊಭತ್ತೇಳು ಮಾತ್ರ)

ಮೇಲ್ಕಂಡ ಹುದ್ದೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರ ನಿಯಮಗಳು 2000 ರನ್ವಯ ಪರಿಶೀಲಿಸಿ, ಭರ್ತಿ ಮಾಡಿಕೊಳ್ಳತಕ್ಕದ್ದು.

ಈ ಹುದ್ದೆಗಳಿಗೆ ತಗಲುವ ವೆಚ್ಚವನ್ನು 2009-10ನೇ ಸಾಲಿನ ಲೆಕ್ಕಶೀರ್ಷಿಕೆ 2205-00-103-001 (ಯೋಜನೇತರ) 059 ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 628 ವೆಚ್ಚ-7/2009 ದಿನಾಂಕ 20.07.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1837 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಮೈಸೂರು ವಿಭಾಗೀಯ ಪತ್ರಾಗಾರ ಕಛೇರಿಯಿಂದ ಕೇಂದ್ರ ಕಛೇರಿ, ಬೆಂಗಳೂರಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಿದ ಉಪ ನಿರ್ದೇಶಕರ ಹುದ್ದೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಹಿಂದಕ್ಕೆ ಮೈಸೂರಿಗೆ ಸ್ಥಳಾಂತರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ ಇಡಿ 27 ಎಇಎಸ್ 84 ದಿನಾಂಕ 16.06.84

2. ಸರ್ಕಾರದ ಆದೇಶ ಸಂಖ್ಯೆ ಸಂಕಇ 47 ರಾಪಸಿ 97 ದಿನಾಂಕ 01.01.1998

3. ಸರ್ಕಾರದ ಅಧಿಸೂಚನೆ ಸಂಖ್ಯೆ ಕಸಂವಾಪ್ರ 8 ರಾಪಸಿ 2007, ದಿನಾಂಕ 13.12.2007

4. ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ಇವರ ಪತ್ರ ಸಂಖ್ಯೆ ಎಆರ್‌ಎಸ್ 5 ಇಎಸ್‌ಟಿ 8(ಭಾ), ದಿನಾಂಕ 06.07.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 16.06.84ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಭಾಗೀಯ ಪತ್ರಾಗಾರ ಕಛೇರಿಗೆ ಒಂದು ಉಪನಿರ್ದೇಶಕರ ಹುದ್ದೆಯನ್ನು ಸೃಜಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 01.01.1998ರ ಸರ್ಕಾರದ ಆದೇಶದಲ್ಲಿ ಆ ಹುದ್ದೆಯನ್ನು ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ಕೇಂದ್ರ ಕಛೇರಿ, ಬೆಂಗಳೂರಿಗೆ ಸ್ಥಳಾಂತರಿಸಲಾಗಿತ್ತು.

ಮೇಲೆ (3ರಲ್ಲಿ ಓದಲಾದ ದಿನಾಂಕ 13.12.2007ರ ಅಧಿಸೂಚನೆಯಲ್ಲಿ ಡಾ. ಜೆ.ವಿ. ಗಾಯಿತ್ರಿ, ಪತ್ರಪಾಲಕರು ಇವರಿಗೆ ಉಪನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಿ ಉಪನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ ಇರುವ ಹುದ್ದೆಗೆ ನಿಯೋಜನೆ ಮೇಲೆ ನೇಮಿಸಲಾಗಿತ್ತು.

ಮೇಲೆ (4)ರಲ್ಲಿ ಓದಲಾದ ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಅವರ ದಿನಾಂಕ 06.07.2009ರ ಪತ್ರದಲ್ಲಿ ಈಗ ಮೈಸೂರಿನಲ್ಲಿ ಕೆಲಸದ ಒತ್ತಡವಿರುವುದರಿಂದ, ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಿಕೊಂಡು ಹೋಗಲು ಉಪನಿರ್ದೇಶಕರ ಹುದ್ದೆಯ ಅವಶ್ಯಕತೆ ಇರುತ್ತದೆಯೆಂದು ಉಪನಿರ್ದೇಶಕರ ಹುದ್ದೆಯನ್ನು ಕೇಂದ್ರ ಕಛೇರಿಯಿಂದ ಮೈಸೂರು ವಿಭಾಗಿಯ ಪತ್ರಾಗಾರ ಕಛೇರಿಗೆ ಸ್ಥಳಾಂತರಿಸಬೇಕೆಂದು ಹಾಗೂ ಈ ಹುದ್ದೆಯಲ್ಲಿ ಡಾ. ಜೆ.ವಿ ಗಾಯಿತ್ರಿ, ಉಪನಿರ್ದೇಶಕರು, ಮೈಸೂರು ಇವರನ್ನು ವಿಭಾಗೀಯ ಪತ್ರಾಗಾರ ಕಛೇರಿಯ ಉಪನಿರ್ದೇಶಕರ ಹುದ್ದೆಗೆ ನೇಮಿಸಿ, ಇವರ ಜೊತೆಗೆ ಹೆರಿಟೇಜ್ ಕಛೇರಿಯ ಉಪನಿರ್ದೇಶಕರ ಹುದ್ದೆಯ ಹೆಚ್ಚುವರಿ ಕಾರ್ಯಭಾರವನ್ನು ಮುಂದುವರೆಸಿಕೊಂಡು ಹೋಗಲು ಸೂಚಿಸಬಹುದಾಗಿದೆಂದು ಪ್ರಸ್ತಾಪಿಸಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 12 ರಾಪಸಿ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಕೇಂದ್ರ ಕಛೇರಿ ಇಲ್ಲಿಗೆ ತಾತ್ಕಾಲಿಕವಾಗಿ ಸ್ಥಳಾಂತರಗೊಂಡ ಉಪನಿರ್ದೇಶಕರು, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು, ಹುದ್ದೆಯನ್ನು ಪುನ: ಮೈಸೂರಿನ ವಿಭಾಗೀಯ ಪತ್ರಾಗಾರ ಕಛೇರಿಗೆ ಸ್ಥಳಾಂತರಿಸಿದೆ.

ಉಪನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ ಇರುವ ಹುದ್ದೆಗೆ ನಿಯೋಜನೆ ಮೇರೆಗೆ ನೇಮಿಸಿರುವ ಡಾ. ಜೆ.ವಿ ಗಾಯಿತ್ರಿ ಅವರ ಸೇವೆಯನ್ನು ಮಾತೃ ಇಲಾಖೆಯಾದ ಕರ್ನಾಟಕ ರಾಜ್ಯ ಪತ್ರಾಗಾರ ಕಛೇರಿ, ಮೈಸೂರು ಇಲ್ಲಿಗೆ ತಕ್ಷಣದಿಂದ ಜಾರಿಗೆ ಬರುವಂತೆ ನಿಯುಕ್ತಿಗೊಳಿಸಿದೆ.

ಡಾ. ಜೆ.ವಿ ಗಾಯಿತ್ರಿ, ಉಪನಿರ್ದೇಶಕರು, ವಿಭಾಗಿಯ ಪತ್ರಗಾರ ಕಛೇರಿ, ಮೈಸೂರು ಇವರನ್ನು ತಕ್ಷಣ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಉಪನಿರ್ದೇಶಕರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1877 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೆ ಮತ್ತು ಯೋಜನೇತರ ಹುದ್ದೆಗಳನ್ನು ದಿನಾಂಕ 1–4–2009 ರಿಂದ 31–3–2010ರವರೆಗೆ ಮುಂದುವರಿಸುವ ಬಗ್ಗೆ

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 77 ಕೆಎಂಯು 2008 ದಿನಾಂಕ 17.07.2008.

2) ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ಇವರ ಪತ್ರ ಸಂಖ್ಯೆ: ಡಿಎಎಂ: ಇಎಸ್‌ಟಿ:1:ಕ.ಸಂ:338:2009–10/40 ದಿ:05.06.2009

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ 17.07.2008ರ ಸರ್ಕಾರಿ ಆದೇಶದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಯೋಜನೇತರ 26 ಹುದ್ದೆಗಳು ಹಾಗೂ ಯೋಜನೆಯ 7 ಹುದ್ದೆಗಳು ಸೇರಿದಂತೆ ಒಟ್ಟು 33 ಹುದ್ದೆಗಳನ್ನು ದಿನಾಂಕ 31–3–2009ರವರೆಗೆ ಮುಂದುವರೆಸಲಾಗಿದೆ.

ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಅವರು ಮೇಲೆ (2)ರಲ್ಲಿ ಓದಲಾದ ದಿನಾಂಕ 05.06.2009ರ ಪತ್ರದಲ್ಲಿ ಉಲ್ಲೇಖಿತ ಸರ್ಕಾರದ ಆದೇಶದನ್ವಯ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಹಾಗೂ ಕಮಿಟೆಡ್ ಯೋಜನೇತರ 7 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದ್ದು, ಸದರಿ ಹುದ್ದೆಗಳ ಮುಂದುವರಿಕೆ ಆದೇಶವು ದಿನಾಂಕ 31.3.2009ಕ್ಕೆ ಅಂತ್ಯಗೊಳ್ಳಲಿದೆ ಎಂದು ತಿಳಿಸಿ, ಕಮಿಟೆಡ್ ಯೋಜನೇತರ 7 ಹುದ್ದೆಗಳು ಹಾಗೂ ತಾತ್ಕಾಲಿಕ ಯೋಜನೇತರ 26 ಹುದ್ದೆಗಳು ಸೇರಿದಂತೆ ಒಟ್ಟಾರೆ 33 ಹುದ್ದೆಗಳನ್ನು ದಿನಾಂಕ 1.4.2009ರಿಂದ 31.3.2010ರವರೆಗಿನ ಅವಧಿಗೆ ಮುಂದುವರಿಸಿ ಅಧಿಕಾರಿ ಹಾಗೂ ಸಿಬ್ಬಂದಿಗಳ ವೇತನ ಪಾವತಿಸಲು ಅನುವಾಗುವಂತೆ ಮುಂದುವರಿಕೆ ಆದೇಶ ಹೊರಡಿಸಲು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 104 ಕೆಎಂಯು 2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಅವರು ಪ್ರಸ್ತಾವನೆಯಲ್ಲಿ ಕೋರಿರುವಂತೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಈ ಕೆಳಕಂಡ ಒಟ್ಟು 33 ಹುದ್ದೆಗಳನ್ನು ದಿನಾಂಕ 1–4–2009ರಿಂದ 31–3–2010ರವರೆಗೆ ಒಂದು ವರ್ಷದ ಅವಧಿಗೆ ಮುಂದುವರಿಸಿ ಆದೇಶಿಸಿದೆ.

1. ಲೆಕ್ಕಶೀರ್ಷಿಕೆ 2205–00–103–0–01 (ಕಮಿಟೆಡ್ ನಾನ್‌ಪ್ಲಾನ್)

1. ಉಪನಿರ್ದೇಶಕರು	–	1
2. ಪುರಾತತ್ವ ಸಹಾಯಕರು	–	2
3. ಅಟೆಂಡರ್	–	1
		4 ಹುದ್ದೆಗಳು

2. ಲೆಕ್ಕಶೀರ್ಷಿಕೆ 2205–00–107–0–01 (ಕಮಿಟೆಡ್ ನಾನ್‌ಪ್ಲಾನ್)

1. ಕ್ಯುರೇಟರ್	–	3 ಹುದ್ದೆಗಳು
ಒಟ್ಟು ಕಮಿಟೆಡ್ ನಾನ್‌ಪ್ಲಾನ್		7 ಹುದ್ದೆಗಳು

3. ಲೆಕ್ಕಶೀರ್ಷಿಕೆ 2205–00–103–0–01 (ಯೋಜನೇತರ) (ತಾತ್ಕಾಲಿಕ)

1. ಸಹಾಯಕ ನಿರ್ದೇಶಕರು (ವಸ್ತುಸಂಗ್ರಹಾಲಯಗಳ ಅಭಿವೃದ್ಧಿ)	–	1
2. ಪುರಾತತ್ವ ಸಹಾಯಕರು	–	1

3. ಮಾನ್ಯುಮೆಂಟ್ ಅಟೆಂಡೆಂಟ್ಸ್	–	5
		7 ಹುದ್ದೆಗಳು

4. ಲೆಕ್ಕಶೀರ್ಷಿಕೆ 2205–00–107–0–01 (ಯೋಜನೇತರ) (ತಾತ್ಕಾಲಿಕ)

1. ಕ್ಯುರೇಟರ್	–	2
2. ದ್ವಿತೀಯ ದರ್ಜೆ ಸಹಾಯಕರು	–	5
3. ಅಟೆಂಡರ್	–	1
4. ಗ್ರೂಪ್–ಡಿ	–	8
5. ಪ್ಯೂನ್	–	2
6. ರಾತ್ರಿ ಕಾವಲುಗಾರ	–	1
		19 ಹುದ್ದೆಗಳು
ಒಟ್ಟು ಯೋಜನೇತರ (ತಾತ್ಕಾಲಿಕ)		26 ಹುದ್ದೆಗಳು

ಘೋಷ್ವಾರೆ

1) ಕಮಿಟೆಡ್ ಯೋಜನೇತರ ಹುದ್ದೆಗಳು	–	7
2) ತಾತ್ಕಾಲಿಕ ಯೋಜನೇತರ ಹುದ್ದೆಗಳು	–	26
ಒಟ್ಟು ಹುದ್ದೆಗಳು		33

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 801 ಐಎಫ್ಎಸ್ 2009 ದಿನಾಂಕ:30–6–2009ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10–7–96 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆ ಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1878 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 74 ಸ್ವೀಮರ 2009, ದಿನಾಂಕ 18.05.2009

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 18.05.2009ರ ಸರ್ಕಾರದ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯವ್ಯಯ ಲೆಕ್ಕಶೀರ್ಷಿಕೆ "2205–00–800–0–09–059 (ಇತರೆ ಖರ್ಚು) ಯೋಜನೆ" ಯಡಿ ರೂ.100.00 ಲಕ್ಷಗಳ ಅನುದಾನ ಕಲ್ಪಿಸಿಕೊಳ್ಳಲಾಗಿದೆ. ಸದರಿ ಮೊತ್ತ ರೂ.100.00 ಲಕ್ಷಗಳಲ್ಲಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇದರ ವೆಚ್ಚಗಳನ್ನು ಭರಿಸಲು ದಿನಾಂಕ 01.04.2009ರಿಂದ 31.07.2009 ರ ಅವಧಿಗೆ ರೂ.33.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 84 ಕಸನಿ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಅನಿವಾಸಿ ಭಾರತೀಯ ಸಮಿತಿ, ಕರ್ನಾಟಕ ಇವರ ದಿನಾಂಕ 01.04.2009 ರಿಂದ 31.07.2009 ರವರೆಗಿನ ವೆಚ್ಚಗಳನ್ನು ಭರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಲೆಕ್ಕಶೀರ್ಷಿಕೆ 2205–00–800–0–09–059 (ಇತರೆ ಖರ್ಚು) (ಯೋಜನೆ) ಅಡಿಯಲ್ಲಿ ಒದಗಿಸಿರುವ ರೂ.100.00 ಲಕ್ಷಗಳಲ್ಲಿ ರೂ.33.00 ಲಕ್ಷಗಳನ್ನು (ರೂಪಾಯಿ ಮೂವತ್ತು ಮೂರು ಲಕ್ಷಗಳು ಮಾತ್ರ) ಆಡಳಿತ ಇಲಾಖೆಯಾದ ಸಿಆಸು ಇಲಾಖೆಗೆ ಬಿಡುಗಡೆ

ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ. ಈ ವೆಚ್ಚವನ್ನು ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 19 ಶಿಆಲೆ 2009, ದಿನಾಂಕ 15.04.2009 ರ ಸೂಚನೆಯ ಪ್ರಕಾರ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಶಿಇ 1660 ಐಎಫ್(ಬಿಎ) 2009, ದಿನಾಂಕ 21.07.2009ರಲ್ಲಿ ಪಡೆದು ಹಾಗೂ ಇಲಾಖಾ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1894 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಗದಗ್‌ನಲ್ಲಿ ಚಟ್ಟೆ ಮರಿಗೆಪ್ಪ ಆರ್ಟ್‌ಗ್ಯಾಲರಿ ನಿರ್ಮಾಣಕ್ಕೆ ಅನುದಾನ ನೀಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅವರ ಪತ್ರ ಸಂಖ್ಯೆ: ಕಸನಿ/05/ಹೊಯೋ/2008-09 ದಿನಾಂಕ:5-6-2009.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅವರ ದಿನಾಂಕ:05-6-2009ರ ಪತ್ರದಲ್ಲಿ ಖ್ಯಾತ ಚಿತ್ರ ಕಲಾವಿದರಾದ ಶ್ರೀ ಚಟ್ಟೆ ಮರಿಗೆಪ್ಪ, ಇವರ ಆರ್ಟ್ ಗ್ಯಾಲರಿ ನಿರ್ಮಾಣ ಮಾಡಲು ರೂ.50.00ಲಕ್ಷಗಳ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ. ಅವರು ಸಲ್ಲಿಸಿದ್ದು, ಸದರಿ ಯೋಜನೆ ಅನುಷ್ಠಾನ ಗೊಳಿಸಲು ರೂ.50.00ಲಕ್ಷಗಳನ್ನು 2009-10ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ಗದಗ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 83 ಕಸನಿ 2009 ಬೆಂಗಳೂರು, ದಿನಾಂಕ: 29ನೇ ಜುಲೈ 2009

ಖ್ಯಾತ ಚಿತ್ರ ಕಲಾವಿದರಾದ ಶ್ರೀ ಚಟ್ಟೆ ಮರಿಗೆಪ್ಪ ಇವರ ಆರ್ಟ್ ಗ್ಯಾಲರಿ ನಿರ್ಮಾಣ ಮಾಡಲು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 1/4ರಷ್ಟು ಹಣ ಬಿಡುಗಡೆ ಮಾಡಲು ಅವಕಾಶವಿರುವುದರಿಂದ ರೂ.50.00ಲಕ್ಷಗಳಲ್ಲಿ ಮೊದಲನೇ ಕಂತಾಗಿ ರೂ.12.50ಲಕ್ಷಗಳನ್ನು (ರೂಪಾಯಿ ಹನ್ನೆರಡು ಲಕ್ಷದ ಐವತ್ತು ಸಾವಿರಗಳು ಮಾತ್ರ) ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ ಇವರಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ನಿದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅವರಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಕೆಯಾಗುವಂತೆ ಇಲಾಖೆಯು ನೋಡಿಕೊಳ್ಳತಕ್ಕದ್ದು ಹಾಗೂ ಈ ಯೋಜನೆಯನ್ನು ಇಲಾಖೆಯು ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸಲು ಕ್ರಮ ವಹಿಸತಕ್ಕದ್ದು.
2. ಈ ಸ್ಮಾರಕದ ಕಾಮಗಾರಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಸ್ತುವಾರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರ ಅಡಿ ಟೆಂಡರ್ ಪ್ರಕ್ರಿಯೆ ಪೂರೈಸಿ ತೆಗೆದುಕೊಳ್ಳತಕ್ಕದ್ದು ಹಾಗೂ ನಂತರದ ನಿರ್ವಹಣೆ ಇಲಾಖೆಯೇ ನೋಡಿಕೊಳ್ಳತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205-00-102-4-31-059 (ಯೋಜನೆ) ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಗಾರ ಟಿಪ್ಪಣಿ ಸಂ: ಶಿಇ 1562 ಐಎಫ್ (ಬಿ&ಎ) 2009 ದಿನಾಂಕ:9.7.09 ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಭರ್ಮರಾಜಪ್ಪ

ಪಿ.ಆರ್. 1897 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋಧ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಗದಗ್ ಜಿಲ್ಲೆಯ ಹೊಳೆ ಆಲೂರಿನಲ್ಲಿ ಅಲೂರು ವೆಂಕಟರಾವ್ ಅವರ ಸ್ಮಾರಕಕ್ಕೆ ಅನುದಾನ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಇವರ ಪತ್ರ ಸಂ:ಕಸನಿ:ಸ್ಮಾರಕ:8: 2007-08, ದಿ:22.06.2009.

ಪ್ರಸ್ತಾವನೆ:

ಮೇಲೆ ಓದಲಾದ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅವರ ದಿನಾಂಕ: 22.06.2009ರ ಪತ್ರದಲ್ಲಿ 2007–08ನೇ ಸಾಲಿನ ಆಯವ್ಯಯದಲ್ಲಿ ಗದಗ್ ಜಿಲ್ಲೆಯ ಹೊಳೆ ಆಲೂರಿನಲ್ಲಿ ಆಲೂರು ವೆಂಕಟರಾವ್ ರವರ ಸ್ಮಾರಕಕ್ಕೆ ರೂ.25.00ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಗದಗ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲಾಗಿದೆ. 2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಈ ಯೋಜನೆಗೆ ಮಾನ್ಯ ಮುಖ್ಯಮಂತ್ರಿಗಳು ರೂ.100.00ಲಕ್ಷಗಳನ್ನು ಬಿಡುಗಡೆ ಮಾಡಲು ಘೋಷಿಸಿದ್ದು, ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ, ಇವರು ಈ ಕೆಳಕಂಡ ಅಂದಾಜು ವೆಚ್ಚ ಪಟ್ಟಿಯನ್ನು ಸಲ್ಲಿಸಿರುವುದಾಗಿ ವರದಿ ಮಾಡಿರುತ್ತಾರೆ.

ಕ್ರ.ಸಂ.	ವಿವರ	ಮೊತ್ತ (ರೂ.ಲಕ್ಷಗಳಲ್ಲಿ)
1	ಆಲೂರು ವೆಂಕಟರಾವ್ ಅವರ ಸ್ಮಾರಕ ಭವನ ನಿರ್ಮಾಣ	ರೂ.93.00ಲಕ್ಷ
2	ಆಲೂರು ವೆಂಕಟರಾವ್ ಅವರ ಪ್ರತಿಮೆ ಹಾಗೂ ಉದ್ಯಾನ ನಿರ್ಮಾಣ	ರೂ.25.00ಲಕ್ಷ
3	ನಿವೇಶನ ಖರೀದಿಗಾಗಿ	ರೂ.10.00ಲಕ್ಷ
	ಒಟ್ಟು	**ರೂ.128.00ಲಕ್ಷ**

ಇದನ್ನು ಪರಿಶೀಲಿಸಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆರವರು ಈಗಾಗಲೇ ಈ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ರೂ.100ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 4202–04–800–1–08–132(ಯೋಜನೆ) ಕ್ರಿಯಾ ಯೋಜನೆ ಸಂಖ್ಯೆ:39 ಗಡಿ ಭಾಗಗಳಲ್ಲಿ ಸುವರ್ಣ ಸೌಧ ನಿರ್ಮಾಣದಡಿ ಭರಿಸಬಹುದೆಂದು ತಿಳಿಸುತ್ತಾ ಸದರಿ ಮೊತ್ತವನ್ನು ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ ಇವರಿಗೆ ಬಿಡುಗಡೆ ಮಾಡಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 24 ಸ್ಮಾಪ್ರನಿ 2009, ಬೆಂಗಳೂರು, ದಿನಾಂಕ: 29ನೇ ಜುಲೈ 2009

ಗದಗ್ ಜಿಲ್ಲೆ ಹೊಳೆ ಆಲೂರಿನಲ್ಲಿ ಆಲೂರು ವೆಂಕಟರಾವ್ ಅವರ ಸ್ಮಾರಕ ನಿರ್ಮಿಸಲು ರೂ.100.00ಲಕ್ಷಗಳು (ರೂಪಾಯಿ ಒಂದು ನೂರು ಲಕ್ಷಗಳು ಮಾತ್ರ)ಗಳನ್ನು ಜಿಲ್ಲಾಧಿಕಾರಿಗಳು, ಗದಗ್ ಜಿಲ್ಲೆ, ಗದಗ್, ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಿದೆ.

1. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಕೆಯಾಗುವಂತೆ ಇಲಾಖೆಯು ನೋಡಿಕೊಳ್ಳತಕ್ಕದ್ದು ಹಾಗೂ ಈ ಯೋಜನೆಯನ್ನು ಇಲಾಖೆಯು ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸಲು ಕ್ರಮ ವಹಿಸತಕ್ಕದ್ದು.
2. ಈ ಮೊತ್ತವು ಸದರಿ ಯೋಜನೆಗೆ ಒಂದು ಸಮಯದ ಅನುದಾನವಾಗಿರುತ್ತದೆ.
3. ಈ ಸ್ಮಾರಕದ ಕಾಮಗಾರಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಸ್ತುವಾರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರ ಅಡಿ ಟೆಂಡರ್ ಪ್ರಕ್ರಿಯೆ ಪೂರೈಸಿ ತೆಗೆದುಕೊಳ್ಳಬೇಕೆಂದು ಹಾಗೂ ನಂತರದ ನಿರ್ವಹಣೆ ಇಲಾಖೆಯೇ ನೋಡಿಕೊಳ್ಳತಕ್ಕದ್ದು.

ಈ ಮೊತ್ತವನ್ನು 2009–10ನೇ ಸಾಲಿನ ಲೆಕ್ಕ ಶೀರ್ಷಿಕೆ 2205–00–102–4–31–059 ಇತರೆ ಖರ್ಚು (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಆಇ 577 ವೆಚ್ಚ–7 2009, ದಿನಾಂಕ:08–07–09 ಹಾಗೂ ಯೋಜನಾ ಇಲಾಖೆಯ ಸಹಮತಿಯನ್ನು ಟಿಪ್ಪಣಿ ಸಂಖ್ಯೆ: ಪಿಡಿ 45 ಎಂಇ 2009, ದಿನಾಂಕ:29–05–09ರಲ್ಲಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1898

ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ).

ವಿಷಯ: ತುಮಕೂರು ಜಿಲ್ಲಾ ಗ್ಯಾಸೆಟಿಯರ್‌ನ ಸಂಪಾದನೆ ಹಾಗೂ ಪ್ರಕಟಣೆಗೆ ಆಡಳಿತಾತ್ಮಕ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಗ್ಯಾಇ: ತುಜಿಗ್ಯಾ:2009–10 ದಿನಾಂಕ 21.05.2009

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 21.05.2009 ಪತ್ರದಲ್ಲಿ ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ರವರು ತುಮಕೂರು ಜಿಲ್ಲಾ ಗ್ಯಾಸೆಟಿಯರ್‌ನ ಸಂಪಾದನೆ ಹಾಗೂ ಪ್ರಕಟಣೆಗೆ ಉದ್ದೇಶಿಸಿದ್ದು, ಇದಕ್ಕೆ ತಗಲುವ ರೂ 4.00 ಲಕ್ಷಗಳನ್ನು 2009–10ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಭರಿಸಲು ಅವಕಾಶ ಕಲ್ಪಿಸಿಕೊಂಡಿದ್ದು, ಮೇಲ್ಕಂಡ ಸಂಪಾದನೆ ಹಾಗೂ ಪ್ರಕಟಣೆಗೆ ಆಡಳಿತಾತ್ಮಕ ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 7 ಕರಾಗೆ 2009, ಬೆಂಗಳೂರು, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲಾ ಗ್ಯಾಸೆಟಿಯರ್‌ನ ಸಂಪಾದನೆ ಹಾಗೂ ಪ್ರಕಟಣೆಗೆ ತಗಲುವ ರೂ.4.00 ಲಕ್ಷಗಳನ್ನು (ರೂಪಾಯಿ ನಾಲ್ಕು ಲಕ್ಷಗಳು ಮಾತ್ರ)ಗಳನ್ನು ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು ಅವರಿಗೆ ಬಿಡುಗಡೆ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

1) ಈ ಯೋಜನೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ನ್ನು ಅನುಸರಿಸಿ ಕ್ರಮ ವಹಿಸುವುದು

2) ಬಿಡುಗಡೆ ಮಾಡಲಾದ ಹಣವನ್ನು ಉದ್ದೇಶಿತ ಕಾರ್ಯಕ್ರಮಕ್ಕೆ ಮಾತ್ರ ಬಳಸತಕ್ಕದ್ದು.

3) ಹಣ ಬಳಕೆ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು 2009–10ನೇ ಸಾಲಿನ ಲೆಕ್ಕಶೀರ್ಷಿಕೆ 3454–02–110–0–01–059 (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಯ ಇಲಾಖೆ ಅವರ ಟಿಪ್ಪಣಿ ಸಂಖ್ಯೆ:ಶಿಇ 1709 ಐಎಫ್ (ಬಿ&ಎ) 2009 ದಿನಾಂಕ 28.07.2009ರಲ್ಲಿ ಸಹಮತಿ ಪಡೆದು ಹಾಗೂ ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2006 ದಿನಾಂಕ 10.07.2006ರಲ್ಲಿ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1899 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಿಷಯ: ಶ್ರೀ ಬಸವರಾಜ ಕುರಿಯವರ್, ಮಾನ್ಯ ಅಧ್ಯಕ್ಷರ ವಾಹನ ಚಾಲಕರು ಇವರನ್ನು ಹೊರ ಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರಾಗಿ ನೇಮಿಸಿರುವುದನ್ನು ಅನುಮೋದಿಸುವ ಬಗ್ಗೆ.

ಓದಲಾಗಿದೆ: ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅವರ ಪತ್ರ ಸಂಖ್ಯೆ ಕಪ್ರಾ/ಕಾ/34/2008–09 ದಿನಾಂಕ:05.06.2009

ಪ್ರಸ್ತಾವನೆ:

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಕಛೇರಿಯ ಸಿಬ್ಬಂದಿ ವಿಭಾಗದಲ್ಲಿ ಕನ್ನಡ ಅನುಷ್ಠಾನದ ಸಲುವಾಗಿ ಅನಿರೀಕ್ಷಿತ ಭೇಟಿ ನೀಡುವ ಹಿನ್ನೆಲೆಯಲ್ಲಿ ಅಂಬಾಸಿಡರ್ ಕಾರು ಕೆಎ–01–ಜಿ–4373ನ್ನು ಉಪಯೋಗಿಸುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ ಕಸಂವಾಪ್ರ 10 ಕೆಓಎಲ್ 2009 ದಿನಾಂಕ 19.06.2009ರ ಆದೇಶದಲ್ಲಿ ಸದರಿ ವಾಹನಕ್ಕೆ ವಾಹನ ಚಾಲಕರ ಹುದ್ದೆಯನ್ನು ಹೊರ ಗುತ್ತಿಗೆ ಆಧಾರದ ಮೇಲೆ ನೇಮಿಸಕೊಳ್ಳಲು ಅನುಮತಿ ನೀಡಲಾಗಿದೆ. ಅದರನ್ವಯ ಅಧ್ಯಕ್ಷರ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅವರ ಟಿಪ್ಪಣಿ ಸಂಖ್ಯೆ ಕಪ್ರಾ/6/62/2009–10 ದಿನಾಂಕ 25.05.2009ರಲ್ಲಿ ಶ್ರೀ ಬಸವರಾಜ ಕುರಿಯವರ್, ಬೆಂಗಳೂರು ಅವರನ್ನು ಹೊರ ಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರಾಗಿ ದಿನಾಂಕ 23.05.2009 ರಿಂದ ಜಾರಿಗೆ ಬರುವಂತೆ ನೇಮಕ ಮಾಡಿ ಆದೇಶ ನೀಡಬೇಕೆಂದು ಕೋರಿರುತ್ತಾರೆ. ಅದರನ್ವಯ ಮೇಲೆ ಓದಲಾದ ದಿನಾಂಕ 05.06.2009ರ ಪತ್ರದಲ್ಲಿ ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅವರು ಶ್ರೀ ಬಸವರಾಜ ಕುರಿಯವರ್ ರವರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿರುವುದನ್ನು ಅನುಮೋದಿಸಿ, ಸಂಚಿತ ವೇತನ ರೂ.,5800.00 ಗಳನ್ನು ನಿಗಧಿಪಡಿಸಿ ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 39 ಕೆಒಎಲ್ 2009, ಬೆಂಗಳೂರು, ದಿನಾಂಕ: 4ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಬಸವರಾಜ ಕುರಿಯವರ್, ನಂ.93, 3ನೇ ಮುಖ್ಯರಸ್ತೆ, 4ನೇ ಹಂತ, ಡಾಲರ್ಸ್ ಕಾಲೋನಿ, ಜೆ.ಪಿ. ನಗರ, 3ನೇ ಹಂತ , ಬೆಂಗಳೂರು–78 ಇವರನ್ನು ಹೊರ ಗುತ್ತಿಗೆ ಆಧಾರದ ಮೇಲೆ ದಿನಾಂಕ 23.05.2009 ರಿಂದ ಜಾರಿಗೆ ಬರುವಂತೆ ಹಾಗೂ ಅಧ್ಯಕ್ಷರು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅವರ ಪದಾವಧಿ ಇರುವವರೆಗೆ ಅಥವಾ ಈ ಬಗ್ಗೆ ಮುಂದಿನ ಆದೇಶದವರೆಗೆ ನೇಮಿಸಲು ಸರ್ಕಾರದ ಅನುಮತಿ ನೀಡಲಾಗಿದೆ. ಈ ನೇಮಕಾತಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಅದರ ನಿಯಮಗಳು 2000ರ ಉಪಬಂಧಗಳನ್ವಯ ಏಜೆನ್ಸಿಯ ಮೂಲಕ ಪಡೆಯಲು ಕ್ರಮ ವಹಿಸಲು ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 649 ವೆಚ್ಚ–7/09 ದಿನಾಂಕ 21.07.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಕೆ. ಧರ್ಮರಾಜಪ್ಪ

ಪಿ.ಆರ್. 1900 ಸರ್ಕಾರದ ಅಧೀನ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ (ಆಡಳಿತ ಕನ್ನಡ)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆಗಳ ಕಾಮಗಾರಿ ಅನುಷ್ಠಾನಕ್ಕಾಗಿ 2009–10ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ: 1. ಆಯುಕ್ತರು ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶಕರವರ ಪತ್ರ ಸಂಖ್ಯೆ: ಡಿಎಸ್‌ಕೆ/ರಕರ/ಅನುದಾನ/3/2009–10 ದಿನಾಂಕ: 19–06–2009.

2. ಸರ್ಕಾರದ ಆದೇಶ ಸಂಖ್ಯೆ: ವಾಕೈ 88 ಆಂಆಸ (1) 2009 ದಿನಾಂಕ 22.4.2009.

ಪ್ರಸ್ತಾವನೆ:

ರಾಜ್ಯದ ಈ ಕೆಳಕಂಡ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿರುವ ರಸ್ತೆ ಕಾಮಗಾರಿಗಳ ಅನುಷ್ಠಾನಕ್ಕಾಗಿ 2009–10ನೇ ಸಾಲಿನಲ್ಲಿ ಒದಗಿಸಲಾಗಿರುವ ರೂ.165/– ಲಕ್ಷಗಳನ್ನು ಆದ್ಯತೆ ಮೇರೆಗೆ ಬಿಡುಗಡೆಗೊಳಿಸಲು ಸಕ್ಕರೆ ನಿರ್ದೇಶಕರು ಮೇಲೆ ಓದಲಾದ ಉಲ್ಲೇಖ (1)ರ ದಿನಾಂಕ 19.06.2009ರ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಖಾನೆಯ ಹೆಸರು	ವರ್ಷ	ಮೊತ್ತ	ಕಿ.ಮೀ.
1	ಹಿರಣ್ಯಕೇಶಿ ಸ.ಸ.ಕಾ, ಸಂಕೇಶ್ವರ	1999–2000	43.40	15.00
2	ಶ್ಯಾಮನೂರು ಶುಗರ್ಸ್, ದುಗ್ಗಾವತಿ	2000–2001	0.21	––
3	ಶ್ರೀ ರೇಣುಕಾ ಶುಗರ್ಸ್, ಮನೋಳಿ	2000–2001	62.40	32.00
4	ದಾವಣಗೆರೆ ಶುಗರ್ಸ್, ಕುಕ್ಕವಾಡ	2000–2001	7.13	4.00
5	ಬೀದರ್ ಸ.ಸ.ಕಾ, ಹಳ್ಳಿಖೇಡ್ (ಒಟ್ಟು ಮೊತ್ತ ರೂ. 93.92ರಲ್ಲಿ ರೂ. 51.86ನ್ನು ಭಾಗಶ: ಬಿಡುಗಡೆಗೆ ಕೋರಿದ್ದಾರೆ)	2000–2001	51.86	10.00
	ಒಟ್ಟು		**165.00**	**61.00**

ಮೇಲೆ ಓದಲಾದ (2)ರ ಆದೇಶದಲ್ಲಿ 2009–10ನೇ ಸಾಲಿನ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಂಜೂರಾತಿ ನೀಡುವ ಸಂಬಂಧ ಹೊರಡಿಸಿರುವ ಆದೇಶದಲ್ಲಿ ಇಲಾಖೆಯ ಲೆಕ್ಕ ಶೀರ್ಷಿಕೆ 4860–04–800–0–01 ರಸ್ತೆಗಳು 172 (ಯೋಜನೆ) ಅಡಿಯಲ್ಲಿ 165.00 ಲಕ್ಷ ರೂ.ಗಳನ್ನು ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒದಗಿಸಲಾಗಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 147 ಎಸ್‌ಜಿಎಫ್ 2009, ಬೆಂಗಳೂರು, ದಿನಾಂಕ: 28ನೇ ಜುಲೈ 2009

ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಪ್ರಸ್ತಾವನೆಯಲ್ಲಿ ಕೋರಿರುವಂತೆ ರಾಜ್ಯದ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸಲು 2009–10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 4860–04–800–0–01–ರಸ್ತೆಗಳು 172 (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ

ರೂ. 165.00 ಲಕ್ಷ ಗಳಲ್ಲಿ ಮೊದಲನೆ ತ್ರೈಮಾಸಿಕಕ್ಕೆ ಶೇ.25 ಭಾಗ ಅಂದರೆ ರೂ. 41.25 ಲಕ್ಷಗಳನ್ನು (ನಲವತ್ತೊಂದು ಲಕ್ಷ ಇಪ್ಪತ್ತೈದು ಸಾವಿರ ರೂ.ಗಳು ಮಾತ್ರ) ಪ್ರಸ್ತಾವನೆಯಲ್ಲಿ ನಮೂದಿಸಿರುವ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಕಾಮಗಾರಿಗಳಿಗಾಗಿ ಆದ್ಯತೆ ಮೇರೆಗೆ ಬಿಡುಗಡೆ ಮಾಡುವ ಸಲುವಾಗಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರಿಗೆ ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಸರ್ಕಾರದ ಉಪ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಟಿಪ್ಪಣಿ ಸಂಖ್ಯೆ ವಾಕೈ 181 ಆಂಆಸ(1) 2009 ದಿನಾಂಕ:16-07-2009ರಲ್ಲಿ ನೀಡಲಾದ ಸಹಮತಿಯಂತೆ ಹಾಗೂ ಸರ್ಕಾರದ ಆಡಳಿತ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1842

ಪಿ. ಆನಂದ್‌ಕುಮಾರ್

ಪೀಠಾಧಿಕಾರಿ(ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಮೈಸೂರು ಸಕ್ಕರೆ ಕಾರ್ಖಾನೆ (ನಿ) ಇದರ ಪುನ:ಶ್ಚೇತನಕ್ಕೆ ಸರ್ಕಾರದಿಂದ ಆರ್ಥಿಕ ನೆರವು-2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಹಣದ ಬಿಡುಗಡೆ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರ ಸಂಖ್ಯೆ: ಎಂಎಸ್‌ಕೋ/09/ಎಂಡಿ/588 ದಿನಾಂಕ 06.05.09 ಮತ್ತು 17.06.2009.

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿರುವ ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರಗಳಲ್ಲಿ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸುವ ಸಲುವಾಗಿ 2009-10ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ 50.00 ಕೋಟಿ ರೂ.ಗಳನ್ನು ಕಾರ್ಖಾನೆಯು ತೆಗೆದುಕೊಳ್ಳಲಿರುವ ಈ ಕೆಳಕಂಡ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

1) ಮಿಲ್ಲಿನ ಆಧುನೀಕರಣಕ್ಕಾಗಿ	1950-00 ಲಕ್ಷ ರೂ.ಗಳು
2) ಬಾಯ್ಲಿಂಗ್ ಹೌಸ್ ನವೀಕರಣ	980-00 ಲಕ್ಷ ರೂ.ಗಳು
3) ಸಹ ವಿದ್ಯುತ್ ಘಟಕಕ್ಕೆ	1450-00 ಲಕ್ಷ ರೂ.ಗಳು
4) ದುಡಿಯುವ ಬಂಡವಾಳ	620-00 ಲಕ್ಷ ರೂ.ಗಳು
ಒಟ್ಟು	**5000-00 ಲಕ್ಷ ರೂ.ಗಳು**

ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ 2009-10ನೇ ಸಾಲಿನ ಅನುದಾನದಲ್ಲಿ ಒದಗಿಸಲಾಗಿರುವ 50.00 ಕೋಟಿ ರೂಗಳಲ್ಲಿ ಕಾರ್ಖಾನೆಯ ಪುನ:ಶ್ಚೇತನ ಸಂಬಂಧ 10.00 ಕೋಟಿ ರೂ.ಗಳನ್ನು (ಹತ್ತು ಕೋಟಿ ರೂಪಾಯಿಗಳು ಮಾತ್ರ) ಮೊದಲನೆಯ ಕಂತಾಗಿ ಕಾರ್ಖಾನೆಗೆ ಬಿಡುಗಡೆಗೊಳಿಸಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 70 ಎಸ್‌ಜಿಎಫ್ 2009, ದಿನಾಂಕ: 3ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ (ನಿ), ಮಂಡ್ಯ ಈ ಕಾರ್ಖಾನೆಗೆ 2009-10ನೇ ಸಾಲಿಗೆ ಕಾರ್ಖಾನೆಯ ಪುನ:ಶ್ಚೇತನ ಸಂಬಂಧ ಸಹ-ವಿದ್ಯುತ್ ಘಟಕ ಹಾಗೂ ಅತ್ಯಾವಶ್ಯಕ ಆಧುನೀಕರಣ ಕಾರ್ಯಕ್ರಮಗಳಿಗೆ, ಬಂಡವಾಳ ಹೂಡಿಕೆಗಾಗಿ 10.00 ಕೋಟಿ ರೂಗಳನ್ನು (ಹತ್ತು ಕೋಟಿ ರೂ.ಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2009-10ನೇ ಸಾಲಿನ ಅನುದಾನದಲ್ಲಿ ಕಾರ್ಖಾನೆಯ ಪುನ:ಶ್ಚೇತನ ಸಂಬಂಧ ಲೆಕ್ಕ ಶೀರ್ಷಿಕೆ "4852-02-190-0-04 (ಯೋಜನೆ) 211 – ಹೂಡಿಕೆ" ಅಡಿಯಲ್ಲಿ ಒದಗಿಸಲಾಗಿರುವ 50.00 ಕೋಟಿ ರೂ.ಗಳಲ್ಲಿ ಮೊದಲನೆಯ ಕಂತು 10.00 ಕೋಟಿ ರೂ.ಗಳನ್ನು ಬಿಡುಗಡೆಗೆ ಮಂಜೂರು ಮಾಡಲಾಗಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ, ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1070 ವೆಚ್ಚ-1/2009 ದಿನಾಂಕ 20.07.09ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1843

ಪಿ. ಆನಂದಕುಮಾರ್

ಪೀಠಾಧಿಕಾರಿ (ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಕಬ್ಬು ಬೆಳೆದ ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ವಿಶೇಷ ನೆರವು 2006–07ನೇ ಸಾಲಿಗೆ.

ಓದಲಾಗಿದೆ: 1) ದಿನಾಂಕ 12.04.2007ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ತೀರ್ಮಾನಗಳು.

2) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2) ದಿನಾಂಕ: 13.06.07.

3) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2) ದಿನಾಂಕ: 12.09.07

4) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2 (2) ದಿನಾಂಕ: 19.10.07

5) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2 (3) ದಿನಾಂಕ: 02.11.2007.

6) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–02 (4)) ದಿನಾಂಕ: 01.01.08.

7) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2) (6) ದಿನಾಂಕ: 22.02.08.

8) ಸರ್ಕಾರದ ಆದೇಶ ಸಂಖ್ಯೆ: ಸಿಐ 19 ಎಸ್‌ಜಿಎಫ್ 08 (ಭಾ–2) ದಿನಾಂಕ: 12.03.2008

9) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2) (7) ದಿನಾಂಕ: 20.03.08

10) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 07 (ಭಾ–2) (8) ದಿನಾಂಕ: 25.03.08

11) ಸರ್ಕಾರದ ಆದೇಶ ಸಂ: ಸಿಐ 58 ಎಸ್‌ಜಿಎಫ್ 07(ಭಾ–2)(9) ದಿನಾಂಕ 21.05.2008

12) ಸರ್ಕಾರದ ಆದೇಶ ಸಂಖ್ಯೆ ಸಿಐ 19 ಎಸ್‌ಜಿಎಫ್ 08 (ಭಾ–2) ದಿನಾಂಕ 13.06.2008.

13) ಸರ್ಕಾರದ ಆದೇಶ ಸಂಖ್ಯೆ:ಸಿಐ 58 ಎಸ್‌ಜಿಎಫ್ 2007,(ಭಾ–2)(10) ದಿನಾಂಕ:30–06–2008.

14) ಸರ್ಕಾರದ ಆದೇಶ ಸಂಖ್ಯೆ:ಸಿಐ 58 ಎಸ್‌ಜಿಎಫ್ 2007,(ಭಾ–2)(11) ದಿನಾಂಕ 24.11.2008.

15) ಸರ್ಕಾರದ ಆದೇಶ ಸಂಖ್ಯೆ: ಸಿಐ 58 ಎಸ್‌ಜಿಎಫ್ 2007 (ಭಾ–2)(12) ದಿನಾಂಕ 02.07.2009

16) ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪತ್ರ ಸಂಖ್ಯೆ ಡಿಎಸ್‌ಕೆ/ಎಸ್‌ಟಿಟಿ/36/ಬಿಜಾಪುರ/2008–09 ದಿನಾಂಕ: 10.11.2008, 25.11.2008.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (2) ರಿಂದ (6) ರಲ್ಲಿರುವ ಸರ್ಕಾರದ ಆದೇಶಗಳಲ್ಲಿ 2006–07ನೇ ಸಾಲಿನ ಸಕ್ಕರೆ ವರ್ಷಕ್ಕೆ ಸಂಬಂಧಿಸಿದಂತೆ ರಾಜ್ಯದ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಸಾಗಾಣಿಕೆ ಸಹಾಯಧನ, ರೂ.3,62,18.916/– ರೈತರಿಗೆ ಪರಿಹಾರ ಧನ ರೂ. 25,00,00,000/– ಮತ್ತು ಕಾರ್ಖಾನೆಗಳಿಗೆ ಸಹಾಯಧನ 21,13,92,000/– ರೂಗಳು ಸೇರಿ ಒಟ್ಟು 49,76,10,916/–ರೂಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (7) (9) (10) ರಲ್ಲಿರುವ ಸರ್ಕಾರದ ಆದೇಶಗಳಲ್ಲಿ ಕಬ್ಬು ಬೆಳೆದ ರೈತರಿಗೆ ಪರಿಹಾರ ನೀಡಲು ಕ್ರಮವಾಗಿ 7.00 ಕೋಟಿ ರೂಗಳು, 6.64 ಕೋಟಿ ರೂಗಳು ಮತ್ತು 1,25,11,000/– ರೂಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (8) ರಲ್ಲಿರುವ ಆದೇಶದಲ್ಲಿ ಕಾರ್ಖಾನೆಗಳು ವಿಸ್ತರಿಸಿದ ಅವಧಿಯ ನಂತರ ಅಂದರೆ ದಿನಾಂಕ: 01.06.07 ರಿಂದ 31.07.07ರ ಅವಧಿಯಲ್ಲಿ ನುರಿಸಿದ ಕಬ್ಬಿಗೆ 8.75 ಕೋಟಿ ರೂಗಳ ಸಹಾಯಧನ ಬಿಡುಗಡೆಗೆ ಮಂಜೂರಾತಿ ನೀಡಲಾಗಿದ್ದು, ಅದರಂತೆ ಮೇಲೆ ಓದಲಾದ (10)ರಲ್ಲಿರುವ ಸರ್ಕಾರದ ಆದೇಶದಲ್ಲಿ ಪ್ರತಿ ಟನ್ ಕಬ್ಬಿಗೆ ರೂ.100/–ನಂತೆ 8,74,92,000/– ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (11)ರಲ್ಲಿರುವ ಆದೇಶದಲ್ಲಿ ಕಾರ್ಖಾನೆಗಳು ವಿಸ್ತರಿಸಿದ ಅವಧಿಯಲ್ಲಿ ನಂತರ ಅಂದರೆ 16.04.2007 ರಿಂದ 31.05.2007ರ ಅವಧಿಯಲ್ಲಿ ನುರಿಸಿದ ಕಬ್ಬಿಗೆ ಪ್ರತಿ ಟನ್ ಕಬ್ಬಿಗೆ ರೂ.100/–ರಂತೆ ರೂ.10,00,00,000/–ಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (13) ರಲ್ಲಿರುವ ಆದೇಶದಲ್ಲಿ ಬಿಜಾಪುರ, ಮೈಸೂರು ಮತ್ತು ಬೆಳಗಾಂ ಜಿಲ್ಲೆಗಳ ರೈತರಿಗೆ ಪರಿಹಾರಧನ ಮತ್ತು ಸಾಗಾಣಿಕೆ ಸಹಾಯಧನ ನೀಡಲು 3.00 ಕೋಟಿ ರೂಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (14) ರಲ್ಲಿರುವ ಆದೇಶದಲ್ಲಿ ರೈತರಿಗೆ ಪರಿಹಾರ ಧನ ಮತ್ತು ಸಾಗಾಣಿಕೆ ಸಹಾಯಧನ ನೀಡಲು ರೂ. 3,03,73,203/– ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (15) ರಲ್ಲಿರುವ ಆದೇಶದಲ್ಲಿ ಬಿಜಾಪುರ, ಗುಲ್ಬರ್ಗಾ, ಬೆಳಗಾಂ ಜಿಲ್ಲೆಗಳಿಂದ ಮಹಾರಾಷ್ಟ್ರ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಪ್ರತಿ ಟನ್‌ಗೆ ರೂ.2/–ರಂತೆ ಸಾಗಾಣಿಕೆ ಸಹಾಯಧನ 1,81,07,599–00 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (16) ರಲ್ಲಿರುವ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ರವರ ಪತ್ರಗಳಲ್ಲಿ ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ 12 ತಿಂಗಳು ಪೂರೈಸಿ ಕಟಾವಾಗದೆ ಜಮೀನಿನಲ್ಲಿ ಉಳಿದಂತಹ

ಕಬ್ಬಿಗೆ ರೈತರಿಗೆ ಪ್ರತಿ ಹೆಕ್ಟೇರಿಗೆ 25,000/– ರೂ.ಗಳಂತೆ ಪರಿಹಾರಧನ ಇಂಡಿ ತಾಲ್ಲೂಕಿನ 5.776 ಅರ್ಹ ರೈತರಿಗೆ 17,27,68,000/– ರೂ.ಗಳನ್ನು ಮತ್ತು ಸಿಂಧಗಿ ತಾಲ್ಲೂಕಿನ 3595 ಅರ್ಹ ರೈತರಿಗೆ 11,77,10,500/– ರೂ.ಗಳನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಆಯುಕ್ತರು ಕಬ್ಬು ಅಭಿವೃದ್ಧಿ ರವರ ಪ್ರಸ್ತಾವನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 58 ಎಸ್‌ಜಿಎಫ್ 2007 (ಭಾ–2) (13), ಬೆಂಗಳೂರು ದಿನಾಂಕ: 11ನೇ ಆಗಸ್ಟ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯದ ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ 2006–07ನೇ ಸಾಲಿನ ಸಕ್ಕರೆ ವರ್ಷದಲ್ಲಿ 12 ತಿಂಗಳು ಪೂರೈಸಿ ಕಟಾವಾಗದೆ ಜಮೀನಿನಲ್ಲಿ ಉಳಿದು ನಷ್ಟವಾದ ಕಬ್ಬಿಗೆ ಪ್ರತಿ ಹೆಕ್ಟೇರಿಗೆ ರೂ. 25,000/– ಗಳಂತೆ ಪರಿಹಾರಧನವನ್ನು ರಾಜ್ಯದ ಬಿಜಾಪುರ ಜಿಲ್ಲೆಯ ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳ ಕಬ್ಬು ಬೆಳೆದ ರೈತರಿಗೆ ಪಾವತಿಸುವ ಸಲುವಾಗಿ 15,00,00,000/– ರೂ.ಗಳನ್ನು (ಹದಿನೈದು ಕೋಟಿ ರೂ.ಗಳು ಮಾತ್ರ) ಬಿಜಾಪುರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "2852–08–201–0–07 (ಯೋಜನೆ)" ಸಹಾಯಧನ ಅಡಿಯಲ್ಲಿ 34.50 ಕೋಟಿ ರೂಗಳನ್ನು ಒದಗಿಸಲಾಗಿದ್ದು, ಈ ಹಣದಲ್ಲಿ ಮೇಲಿನಂತೆ 15,00,00,000/– ರೂ.ಗಳನ್ನು ರೈತರಿಗೆ ಪರಿಹಾರಧನವಾಗಿ ಬಿಡುಗಡೆ ಮಾಡಲು ಮಂಜೂರು ಮಾಡಲಾಗಿದೆ.

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಬಿಡುಗಡೆ ಮಾಡಲಾದ ಈ ಹಣವನ್ನು ಸರ್ಕಾರದ ಆದೇಶ ದಿನಾಂಕ: 13–06–2007 ರಲ್ಲಿ ವಿಧಿಸಲಾಗಿರುವ ನಿಬಂಧನೆ ಮತ್ತು ಮಾರ್ಗಸೂಚಿಗಳಯನ್ವಯ ಪರಿಶೀಲಿಸಿ, ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಕ್ರಮವಹಿಸತಕ್ಕದು. ವಿತರಿಸಲಾದ ಹಣದ ವಿವರವನ್ನು ಆಯುಕ್ತರು ಕಬ್ಬು ಅಭಿವೃದ್ಧಿ ರವರು ಜಿಲ್ಲಾಧಿಕಾರಿಗಳಿಂದ ಪಡೆದು ಸರ್ಕಾರಕ್ಕೆ ವರದಿ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1218 ವೆಚ್ಚ–1/2009 ದಿನಾಂಕ: 07.08.09 ರಂದು ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1933 **ಪಿ. ಆನಂದ್ ಕುಮಾರ್**

ಪೀಠಾಧಿಕಾರಿ (ಸಕ್ಕರೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ವಿಷಯ: ಕೋಲಾರ ಜಿಲ್ಲೆಯ ಮುಳಬಾಗಿಲು ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಯ ಉಪಯೋಗಕ್ಕಾಗಿ ಸರ್ಕಾರಿ ಕಟ್ಟಡ ನಿರ್ಮಿಸಲು ಅನುಮೋದನೆ ನೀಡುವ ಕುರಿತು.

ಓದಲಾಗಿದೆ: ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ: ರೇಬೀರೇಕ್ಷೇ/ಮುಬಾ/ ಕಟ್ಟಡ/ 22/08–09, ದಿನಾಂಕ: 10–2–2009, 3–3–2009, 5–5–2009 ಮತ್ತು 25–6–2009.

ಪ್ರಸ್ತಾವನೆ:

ಕೋಲಾರ ಜಿಲ್ಲೆಯಲ್ಲಿ ಮುಳಬಾಗಿಲು ಬಿತ್ತನೆಕೋಠಿಯು ಸೇರಿದಂತೆ 7 ಸರ್ಕಾರಿ ಬಿತ್ತನೆಕೋಠಿಗಳು ಕಾರ್ಯನಿರ್ವಹಿಸುತ್ತಿದ್ದು, ಮುಳಬಾಗಿಲು ಬಿತ್ತನೆಕೋಠಿಯಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಲಾಗುತ್ತಿದೆ. ಸದರಿ ಬಿತ್ತನೆಕೋಠಿಯು ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಟ್ಟಡದ ಮೇಲ್ಚಾವಣಿಯು ಕಲ್ನಾರಿನದಾಗಿದ್ದು, ಕಟ್ಟಡವು ಸಹ ಹಳೆಯದಾಗಿರುವುದರಿಂದ ಹಾಗೂ ಮುಳಬಾಗಿಲು ಪಟ್ಟಣದಲ್ಲಿ ಬೇಡಿಕೆ ಪ್ರಕಾರ ಇನ್ನೂ ಹೆಚ್ಚಿನ ಪ್ರಮಾಣದ ಮಿಶ್ರತಳಿ ಮೊಟ್ಟೆಗಳನ್ನು ತಯಾರಿಸಲು ಯಾವುದೇ ಖಾಸಗಿ ಕಟ್ಟಡಗಳು ಬಾಡಿಗೆಗೆ ಲಭ್ಯವಿರುವುದಿಲ್ಲವಾದ್ದರಿಂದ ಇಲಾಖಾ ವತಿಯಿಂದ ಸರ್ಕಾರಿ ಬಿತ್ತನೆಕೋಠಿ ಕಟ್ಟಡ ನಿರ್ಮಿಸಲು ಪರಿಶೀಲಿಸಿದ್ದು, ಮುಳಬಾಗಿಲು ಪಟ್ಟಣದ ರಾಷ್ಟ್ರೀಯ ಹೆದ್ದಾರಿ 4 ಕ್ಕೆ ಹೊಂದಿಕೊಂಡಂತಿರುವ ವಿಠಾಲಪುರ ಬಡಾವಣೆಯ ಸರ್ವೆ ನಂ. 45 ರಲ್ಲಿ 13 ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಸರ್ಕಾರಿ ಬಿತ್ತನೆಕೋಠಿ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವಿಸಿ, ಸದರಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರಗಳಲ್ಲಿ ರೇಷ್ಮೆ ಆಯುಕ್ತರು ಸರ್ಕಾರವನ್ನು ಕೋರಿದ್ದರು. ನಂತರ ಮುಳಬಾಗಿಲು ಪಟ್ಟಣದ ಸರ್ವೆ ನಂ. 45ರ ಬದಲಾಗಿ ಮುಳಬಾಗಿಲು ಪಟ್ಟಣದ ದೇವರಾಯಸಮುದ್ರ (ರಾಷ್ಟ್ರೀಯ ಹೆದ್ದಾರಿ–4) ರಲ್ಲಿರುವ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ರೇಷ್ಮೆ ಬಿತ್ತನೆಕೋಠಿ ಕಟ್ಟಡ ನಿರ್ಮಿಸಲು ಪ್ರಸ್ತಾವಿಸಿ, ಅದರಲ್ಲಿರುವ 6.20 ಎಕರೆ ಜಮೀನಿನಲ್ಲಿ ಬಿತ್ತನೆಕೋಠಿ ಕಟ್ಟಡ ನಿರ್ಮಿಸಲು ರೂ. 44.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕಳುಹಿಸಿ, ದೇವರಾಯನಸಮುದ್ರ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಬಿತ್ತನೆಕೋಠಿ ಕಟ್ಟಡ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ದಿನಾಂಕ: 3–3–2009ರ ಪತ್ರದಲ್ಲಿ ಕೋರಿರುತ್ತಾರೆ.

2009-10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕ 4851-00-107-1-01-ಯೋಜನೆ ಯಡಿಯಲ್ಲಿನ ವಂಟನೆಯಿಂದ ಈ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿ, ಲೋಕೋಪಯೋಗಿ ಇಲಾಖೆಯು ನಿರ್ದಿಷ್ಟಪಡಿಸಿದ ಮಾನದಂಡದನ್ವಯ ನಕ್ಷೆ ಹಾಗೂ ಅಂದಾಜುಪಟ್ಟಿಯನ್ನು ತಯಾರಿಸಿ ಕಳುಹಿಸಿರುವುದಾಗಿ ತಿಳಿಸಿ, ಬಿತ್ತನೆಕೋಠಿ ಕಟ್ಟಡ ನಿರ್ಮಾಣಕ್ಕೆ ಅನುಕೂಲವಾಗುವಂತೆ ಆಡಳಿತಾತ್ಮಕ ಅನುಮೋದನೆಯನ್ನು ಶೀಘ್ರವಾಗಿ ನೀಡುವಂತೆ ಮೇಲೆ ಓದಲಾದ ಕ್ರಮಸಂಖ್ಯೆ (1)ರ ದಿನಾಂಕ:5-5-2009 ಹಾಗೂ 25-6-2009ರ ಪತ್ರಗಳಲ್ಲಿ ರೇಷ್ಮೆ ಆಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಅವರು ಕೋರಿರುವಂತೆ ದೇವರಾಯಸಮುದ್ರ ರೇಷ್ಮೆ ಕೃಷಿ ಕ್ಷೇತ್ರದ ಜಮೀನಿನಲ್ಲಿ ರೇಷ್ಮೆ ಬಿತ್ತನೆ ಕೋಠಿ ಕಟ್ಟಡ, ನಿರ್ಮಾಣಕ್ಕೆ ಅನುಮೋದನೆ ನೀಡಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 12 ರೇಯೋವಿ 2009, ಬೆಂಗಳೂರು, ದಿನಾಂಕ: 13ನೇ ಆಗಸ್ಟ್ 2009

ಕೋಲಾರ ಜಿಲ್ಲೆ, ಮುಳಬಾಗಿಲು ತಾಲ್ಲೂಕು, ಮುಳಬಾಗಿಲು ಪಟ್ಟಣದ ದೇವರಾಯಸಮುದ್ರದ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ರೇಷ್ಮೆ ಬಿತ್ತನೆಕೋಠಿ ಕಟ್ಟಡದ ನಿರ್ಮಾಣದ ರೂ. 44.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಯಂತೆ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯ ವೆಚ್ಚವನ್ನು 2009-10ನೇ ಸಾಲಿನಲ್ಲಿ ಕಾಮಗಾರಿ ಉದ್ದೇಶಕ್ಕಾಗಿ ಲೆಕ್ಕಶೀರ್ಷಿಕೆ 4851-00-107-1-01-ಯೋಜನೆಯಡಿಯಲ್ಲಿ ಒದಗಿಸಿರುವ ವಂಟನೆಯಲ್ಲಿ ಭರಿಸತಕ್ಕದ್ದು.

ಸರ್ಕಾರಿ ಆದೇಶ ಸಂಖ್ಯೆ: ಆಇ 1 ಟಿಎಫ್‌ಪಿ 96, ದಿನಾಂಕ: 10-7-96 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1934 **ಭಾರತಿ ಆರ್. ನಾಯಕ್**

ಪೀಠಾಧಿಕಾರಿ (ರೇಷ್ಮೆ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ವಿಷಯ: ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು ಕಲಮೂಡ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ: 10/06/2009ರ ಪತ್ರ ಸಂಖ್ಯೆ: ಮುಇಂ/ಸನೀ/(ಉ)ವ/ ಬಿಜಾ/ಭೂಸ್ವಾಪ್ರ/2009-10/3390.

ಪ್ರಸ್ತಾವನೆ:-

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು, ಕಲಮೂಡ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸ್ವಂತ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ. 1,81,705/-ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ: 31/10/1996,
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ: 15/12/1998,

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಈ ತೀರ್ಪಿನ ವಿರುದ್ಧ ಸರ್ಕಾರದ ಪರವಾಗಿ ಜಿಲ್ಲಾ ನ್ಯಾಯಾಲಯ ಗುಲ್ಬರ್ಗಾ ಇಲ್ಲಿ ಮೇಲ್ಮನವಿ (ಎಲ್.ಎ.ಸಿ.ಎ) ಗಳನ್ನು ದಾಖಲಿಸಿದ್ದು, ಜಿಲ್ಲಾ ನ್ಯಾಯಾಲಯವು ಇನ್ನೂ ಹೆಚ್ಚಿನ ಪರಿಹಾರ ಧನಕ್ಕಾಗಿ ತೀರ್ಪು ನೀಡಿರುತ್ತದೆ.

ಜಿಲ್ಲಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಪತ್ರ ಸಂಖ್ಯೆ: ಆರ್‌ಡಿ 97 ಎಲ್‌ಸಿಜಿ 2009 ದಿನಾಂಕ: 05/01/2009ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ:

ಕ್ರ. ಸಂ.	ಎಲ್ಎಸಿ ಪ್ರಕರಣ ಸಂಖ್ಯೆ	ಎಲ್.ಎ.ಸಿ.ಎ ಸಂಖ್ಯೆ	ಸ್ವಂತ ಗ್ರಾಮದ ಸ.ನಂ	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
01	51/2000	340/2004	211/1-2	0-20	100913
02	55/2000	341/2004	208/1-5	0-16	80792
ಒಟ್ಟು					**181705**

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 94 ಭೂಸ್ವಾಪ್ರ 2009 ಬೆಂಗಳೂರು, ದಿನಾಂಕ: 29ನೇ ಜುಲೈ 2009

ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ ತಾಲ್ಲೂಕು, ಕಲಮೂಡ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸ್ವಂತ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕ ಹಾಕಿದ ಪರಿಹಾರ ಧನ ಮೊತ್ತ ರೂ. 1,81,705/-ಗಳನ್ನು (ಒಂದು ಲಕ್ಷದ ಎಂಭತ್ತೊಂದು ಸಾವಿರದ ಏಳು ನೂರ ಐದು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಡೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳ ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ: 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1830 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಸರ್ಕಾರದ ಆದೇಶ ಸಂಖ್ಯೆ: ಸನೀಇ 118 ಸೇಸಎ 2008 ಬೆಂಗಳೂರು ದಿನಾಂಕ: 14ನೇ ಜುಲೈ 2009

ವಿಷಯ: ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಕಚೇರಿಯನ್ನು ಹಳಿಯಾಳದಿಂದ ಶಿರಸಿಗೆ ಸ್ಥಳಾಂತರಿಸುವ ಬಗ್ಗೆ- ಆದೇಶ.

ಓದಲಾಗಿದೆ: 1. ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜಾಪುರ/ಸಿಬ್ಬಂದಿ-6/2009-10/3989 ದಿನಾಂಕ:09.07.2009.

ಪ್ರಸ್ತಾವನೆ:

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ಮೇಲೆ ಓದಲಾದ ದಿನಾಂಕ:09.07.2009ರ ಪತ್ರದಲ್ಲಿ ಸಣ್ಣ ನೀರಾವರಿ ವಿಭಾಗ, ಹಳಿಯಾಳ ಇಲ್ಲಿನ ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿಯ ಕಾರ್ಯವ್ಯಾಪ್ತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 11 ತಾಲ್ಲೂಕುಗಳು ಒಳಗೊಂಡಿದ್ದು, ಘಟ್ಟದ ಮೇಲಿನ ತಾಲ್ಲೂಕುಗಳಾದ ಹಳಿಯಾಳ, ಮುಂಡಗೋಡ, ಶಿರಸಿ, ಸಿದ್ದಾಪುರ, ಯಲ್ಲಾಪುರ, ಜೋಯಿಡಾ ಕ್ಷೇತ್ರಗಳಲ್ಲಿ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಮತ್ತು ನೀರಾವರಿ ಕ್ಷೇತ್ರಗಳಿದ್ದು, ಕರಾವಳಿ ಪ್ರದೇಶದಲ್ಲಿನ ತಾಲ್ಲೂಕುಗಳಾದ ಕಾರವಾರ, ಅಂಕೋಲಾ, ಕುಮುಟಾ, ಹೊನ್ನಾವರ ಮತ್ತು ಭಟ್ಕಳ ಕ್ಷೇತ್ರಗಳಲ್ಲಿ ಕಡಿಮೆ ಕಾಮಗಾರಿಗಳು ಹಾಗೂ ಕಡಿಮೆ ನೀರಾವರಿ ಕ್ಷೇತ್ರವಿರುತ್ತದೆ. ಕರಾವಳಿ ಪ್ರದೇಶದ ತಾಲ್ಲೂಕುಗಳ ನೀರಾವರಿ ಕ್ಷೇತ್ರಗಳಿಗಿಂತ ಘಟ್ಟದ ಮೇಲಿನ ತಾಲ್ಲೂಕುಗಳ ನೀರಾವರಿ ಕ್ಷೇತ್ರಗಳು ಮೂರುಪಟ್ಟು ಹೆಚ್ಚಿಗೆ ಇರುತ್ತವೆ. ಮತ್ತು ಘಟ್ಟದ ಮೇಲಿನ ತಾಲ್ಲೂಕುಗಳು ಶಿರಸಿ ತಾಲ್ಲೂಕಿನ ಸಮೀಪವಿದ್ದು, ಸರ್ಕಾರದ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಹಳಿಯಾಳ, ಸಣ್ಣ ನೀರಾವರಿ ವಿಭಾಗ, ಕಾರ್ಯಪಾಲಕ ಇಂಜನಿಯರ್‌ರವರ ಕಚೇರಿಯನ್ನು ಶಿರಸಿಗೆ ಸ್ಥಳಾಂತರಿಸಿದಲ್ಲಿ ಆ ವಿಭಾಗದ ವ್ಯಾಪ್ತಿಯಲ್ಲಿನ ಎಲ್ಲಾ ಯೋಜನೆಗಳ ಉಸ್ತುವಾರಿ / ಪರಿವೀಕ್ಷಣೆಗೆ ಅನುಕೂಲವಾಗುವುದಲ್ಲದೆ ಇನ್ನೂ ಹೆಚ್ಚು ನೀರಾವರಿ ಕ್ಷೇತ್ರಗಳನ್ನು ಅಭಿವೃದ್ದಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬಹುದೆಂದು ತಿಳಿಸಿರುತ್ತಾರೆ.

ಮುಖ್ಯ ಇಂಜಿನಿಯರ್‌ರವರ ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾಪಿಸಿರುವ ಹಿನ್ನಲೆ ಹಾಗೂ ಹಳಿಯಾಳ ವಿಭಾಗದ ಕಾಮಗಾರಿಗಳು ಮತ್ತು ನೀರಾವರಿ ಕ್ಷೇತ್ರಗಳ ಅಂಕಿ ಅಂಶಗಳನ್ನು ಪರಿಶೀಲಿಸಿ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಮುಂದಿನಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಹಳಿಯಾಳ ಕಚೇರಿಯನ್ನು ಆಡಳಿತ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿಗೆ ಸ್ಥಳಾಂತರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1833

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ವಿಷಯ: ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಅಲಗಾಪುರ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ 18/04/09ರ ಪತ್ರ ಸಂಖ್ಯೆ:ಮುಸನೀ(ದ)/ಲೆಶಾ/ಲೆಸ-1/ ಭೂಸ್ವಾಧೀನ/2009-10/908.

ಪ್ರಸ್ತಾವನೆ:

ಮೇಲೆ ಓದಲಾದ ಬೆಂಗಳೂರು ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಅಲಗಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಂಡಿಹಳ್ಳಿ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ.1,82,042-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ:

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 12/01/89
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 14/08/91

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಟಿ.ನರಸೀಪುರ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ:ಲಾ 1849 ಎಲ್‌ಎಸ್‌ಎಂ 2005, ದಿನಾಂಕ 20/01/06ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ:

ಕ್ರ ಸಂ	ಎಲ್‌ಎಸಿ ಸಂ.	ಬಂಡಿಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	1079/01	1546/1	2-28	1,82,042-00

- **ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸನೀಇ 80 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ: 17ನೇ ಜುಲೈ 2009.

ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕು ಅಲಗಾಪುರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬಂಡಿಹಳ್ಳಿ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.1,82,042-00 ಗಳನ್ನು (ಒಂದು ಲಕ್ಷದ ಎಂಭತ್ತೆರಡು ಸಾವಿರದ ನಲವತ್ತೆರಡು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತ:ಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16/05/2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1759 **ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ವಿಷಯ: ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಅಂಬಾರಗೊಪ್ಪ ಗ್ರಾಮದ ಹತ್ತಿರ ಕುಮುದ್ವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸನೀಇ 02 ನಯೋಕಾ 2009, ದಿನಾಂಕ 05/02/09.

2. ದಿನಾಂಕ 30/05/09ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸ(ದ)/ತಾಂ–3/ಸಇಂ–8/ ಶಿವಮೊಗ್ಗ/ಅಂಬಾರಗೊಪ್ಪ/2009/2164.

3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ಮುಸದ/ಆಪ್ತ ಶಾಖೆ/ಟೆಂಡರ್/08–09/2407.

ಪ್ರಸ್ತಾವನೆ:

ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಅಂಬಾರಗೊಪ್ಪ ಗ್ರಾಮದ ಕುಮುದ್ವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ 180.00 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಮೇಲೆ(1)ರಲ್ಲಿ ಓದಲಾದ ದಿನಾಂಕ 05/02/09ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಚಿತ್ರದುರ್ಗ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

1	**ಶಿವಮೊಗ್ಗ ಜಿಲ್ಲಾ ಟೆಂಡರ್ ಬುಲೆಟಿನ್**	**ದಿ:13/01/09**
2	**ರಾಜ್ಯ ಟೆಂಡರ್ ಬುಲೆಟಿನ್**	**ದಿ:07/02/09**
3	**ಕನ್ನಡಪ್ರಭ ದಿನಪತ್ರಿಕೆ**	**ದಿ:08/02/09**

ಈ ಟೆಂಡರ್ ಕರೆಗೆ ಪ್ರತಿಕ್ರಿಯಿಸಿ ಖಾಲಿ ಟೆಂಡರ್ ಫಾರಂ ಪಡೆದ ಇಬ್ಬರು ಗುತ್ತಿಗೆದಾರರು ನಿಗದಿತ ದಿನದಂದು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಿರುತ್ತಾರೆ. ಸ್ವೀಕರಿಸಲಾದ ತಾಂತ್ರಿಕ ಬಿಡ್ ಅನ್ನು ದಿನಾಂಕ 30/04/09ರಂದು ತೆರೆಯಲಾಗಿ ಒಬ್ಬರು ಗುತ್ತಿಗೆದಾರರ ಟೆಂಡರ್ ಮಾತ್ರ ಅರ್ಹವಾಗಿದ್ದು, ಅವರ ಆರ್ಥಿಕ ಬಿಡ್‌ನ್ನು ದಿನಾಂಕ 13/05/09ರಂದು ತೆರೆಯಲಾಗಿದೆ. ಆರ್ಥಿಕ ಬಿಡ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳ ತುಲನಾತ್ಮಕ ವಿವರ ಕೆಳಕಂಡಂತಿದೆ:

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			**ರೂ.1,78,19,978/–**
ಕ್ರ.ಸಂ	**ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್**	**ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ**	**ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ**
1	**ಎಸ್.ಮಾಧವ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು**	**ರೂ.2,46,7,488/–**	**38.44 ಹೆಚ್ಚು**

ಮೇಲ್ಕಂಡಂತೆ ಶ್ರೀ ಎಸ್.ಮಾಧವ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ಮೊತ್ತ ರೂ.2,46,70,488–00ಗಳು ಅತಿ ಕಡಿಮೆ ಮೊತ್ತವಾಗಿದ್ದು, ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 38.44ರಷ್ಟು ಹೆಚ್ಚಾಗಿದ್ದು, ಈ ಮೊತ್ತಕ್ಕೆ ಸದರಿಯವರ ಟೆಂಡರ್‌ನ್ನು ಅಂಗೀಕರಿಸಲು ಮುಖ್ಯ ಇಂಜಿನಿಯರ್‌ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 06/06/09ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ

ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿದಾಗ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.1,78,19,978–00ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,03,14,775–00ಗಳಿಗೆ ಕಾಮಗಾರಿಯನ್ನು ಶ್ರೀ ಎಸ್. ಮಾಧವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 29 ಅಪಿಬಂ 2009, ಬೆಂಗಳೂರು, ದಿನಾಂಕ: 15ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕು, ಅಂಬಾರಗೊಪ್ಪ ಗ್ರಾಮದ ಹತ್ತಿರ ಕುಮುದ್ವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯಂತೆ ಪರಿಷ್ಕರಿಸಿದ ಟೆಂಡರಿಗೆ ಇಡಲಾದ ಮೊತ್ತ ರೂ.1,78,19,978–00ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.2,03,14,775–00ಗಳಿಗೆ (ಎರಡು ಕೋಟಿ ಮೂರು ಲಕ್ಷದ ಹದಿನಾಲ್ಕು ಸಾವಿರದ ಏಳುನೂರ ಎಪ್ಪತ್ತೈದು ರೂ.ಗಳು ಮಾತ್ರ) ಶ್ರೀ ಎಸ್. ಮಾಧವರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ಕಾಮಗಾರಿಯನ್ನು ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

INFORMATION TECHNOLOGY, BIOTECHNOLOGY AND SCIENCE & TECHNOLOGY SECRETARIAT

ADDENDUM

No. ITD 39 MDA 2008, Bangalore, Dated:4th July 2009

Sub: Setting up of Rural Business Process Outsourcing [BPO] units.

In the operative portion of Government Order No.ITD 39 MDA 2008 dated:19.1.2009, under the heading "Recurring Financial Support" after the words "Financial Support of Rs .5000/-per employee as subsidy to meet the cost of building rentals and internet connectivity" the following words and para shall be added:

"Restricted to first two years of the operation of each unit."

"Financial support of the Government will be offered even to such BPO units, which set up units exceeding 100 seats.The financial support will however be offered in multiples of 100 seaters and not in fraction".

By order and in the name of Governor of Karnataka

P.R. 1649

M.V. KRISHNAMURTHY

Under Secretary to Government

Information Technology, Biotechnology and Science & Technology Department

ಕಂದಾಯ ಸಚಿವಾಲಯ

ವಿಷಯ : ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ (ಹಾರೋಬೆಲೆ ಯೋಜನೆ) ಸಂತ್ರಸ್ಥರಾದ ಕುಟುಂಬಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ :
1 ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 139 ಆರ್‌ಇಹೆಚ್ 1999, ದಿನಾಂಕ:28.10.1999
2. ಜಲ ಸಂಪನ್ಮೂಲ ಇಲಾಖೆಯ ದಿನಾಂಕ:9/1/2009ರ ಅನಧಿಕೃತ ಟಿಪ್ಪಣಿ ಸಂಖ್ಯೆ:ಜಸಂಇ 99 ಎಂಎಕೆ 2005(ಭಾಗ) ಇದರೊಂದಿಗೆ ಮುಕ್ತಾಯಗೊಂಡ ಪತ್ರ ವ್ಯವಹಾರ.
3. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ಇವರ ಪತ್ರ ಸಂಖ್ಯೆ:ಕಾನೀನಿನಿ/ಆ/ಸಿ-3/ಭೂಸ್ವಾ/ಕಾ.ಇಂ/ರಾಂ.ನಗರ/ಸಿ.ಆರ್. 90/08-09, ದಿನಾಂಕ:26.6.2009

ಪ್ರಸ್ತಾವನೆ:

ಕನಕಪುರ ತಾಲ್ಲೂಕು, ಉಯ್ಯಂಬಳ್ಳಿ ಹೋಬಳಿಯಲ್ಲಿ ಅರ್ಕಾವತಿ ಜಲಾಶಯ ಯೋಜನೆಯನ್ನು 1984-85ನೇ ಸಾಲಿನಲ್ಲಿ ಕೈಗೊಳ್ಳಲಾಗಿರುತ್ತದೆ. ಈ ಯೋಜನೆಯಿಂದ ಒಟ್ಟು 6232 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಉದ್ದೇಶವನ್ನು ಹೊಂದಲಾಗಿದೆ. ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ ಈ ಕೆಳಕಂಡ ಗ್ರಾಮಗಳು ಬಾಧಿತವಾಗಿರುತ್ತದೆ.

ಕ್ರ.ಸಂ.	ಗ್ರಾಮದ ಹೆಸರು	ಷರಾ
1.	ಮಾರ್ಗದಯ್ಯನಗುಂದಿ (ಇದಕ್ಕೆ ಹೊಂದಿಕೊಂಡಿರುವ ಮಾರೇಗೌಡನದೊಡ್ಡಿ)	ಈ ಗ್ರಾಮಗಳ ಜಮೀನು ಹಾಗೂ ಮನೆಗಳು ಸಂಪೂರ್ಣವಾಗಿ ಮುಳುಗಡೆಯಾಗುತ್ತಿದೆ
2.	ಹೊನ್ನಗಾನಹಳ್ಳಿ	
3.	ನಲ್ಲಹಳ್ಳಿ (ಇದಕ್ಕೆ ಹೊಂದಿಕೊಂಡಿರುವ ಅಂತೋಣಿ ದೊಡ್ಡಿ)	
4.	ಕೂತಗಳೆ	
5	ಟೋಕಿನಾಯನಕದೊಡ್ಡಿ	ಈ ಗ್ರಾಮಗಳ ಜಮೀನುಗಳು ಮಾತ್ರ ಮುಳುಗಡೆಗೆ ಒಳಪಟ್ಟಿವೆ.
6	ಮಾರಸಂದ್ರ (ಕೋಡಿಹಳ್ಳಿ ಸರ್ವೆ ನಂಬರ್)	
7	ಮಾರಸಂದ್ರ (ಕೂತಗಳೆ ಸರ್ವೆ ನಂಬರ್)	
8	ಕೊಕ್ಕರೆ ಹೊಸಹಳ್ಳಿ	
9	ಕೂನೂರು	
10	ನಿಡಗಲ್ಲು	

2. ಮೇಲೆ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅರ್ಕಾವತಿ ಜಲಾಶಯ ಯೋಜನೆಯಡಿ ಮೇಲೆ ತಿಳಿಸಿದ ಗ್ರಾಮಗಳಲ್ಲಿ ಸಂತ್ರಸ್ಥರಾದ ಒಟ್ಟು 566 ಕುಟುಂಬಗಳಿಗೆ 653 ಲಕ್ಷ ವೆಚ್ಚದಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಕಲ್ಪಿಸಲು ಪುನರ್ವಸತಿ ಪ್ಯಾಕೇಜನ್ನು ಮಂಜೂರು ಮಾಡಲಾಗಿರುತ್ತದೆ.

3. ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಜಲ ಸಂಪನ್ಮೂಲ ಇಲಾಖೆಯ ಅನಧಿಕೃತ ಟಿಪ್ಪಣಿಯೊಂದಿಗೆ ಮುಕ್ತಾಯಗೊಂಡ ಪತ್ರ ವ್ಯವಹಾರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರು 2006ರಲ್ಲಿ ಪುನಃ 714 ಫಲಾನುಭವಿಗಳ ಹೆಚ್ಚುವರಿ ಪಟ್ಟಿಯನ್ನು ಕಳುಹಿಸಿ ಅವರಿಗೆ ಪುನರ್ವಸತಿ ಸೌಲಭ್ಯಗಳನ್ನು ನೀಡಲು ಒಟ್ಟು ರೂ.4,11,95,400ಗಳ ವೆಚ್ಚಕ್ಕೆ ಮಂಜೂರಾತಿಯನ್ನು ಕೋರಿದ್ದರು.

4. ಕಾವೇರಿ ನೀರಾವರಿ ನಿಗಮ ಮತ್ತು ಜಲಸಂಪನ್ಮೂಲ ಇಲಾಖೆಯು ನೀಡಿರುವ ವರದಿಯಲ್ಲಿ ಅರ್ಕಾವತಿ ಜಲಾಶಯ ಯೋಜನೆಯ ಪುನರ್ವಸತಿ ಸಮಿತಿ ಸಭೆಯಲ್ಲಿ ಹಾಜರಿದ್ದ ರೈತ ಮುಖಂಡರುಗಳು ಹಾಗೂ ಸಂತ್ರಸ್ಥ ಕುಟುಂಬದ ಪ್ರತಿನಿಧಿಗಳ ಮನವಿ ಮೇರೆಗೆ ಈ ಹಿಂದೆ ಫಲಾನುಭವಿಗಳ ಪಟ್ಟಿ ತಯಾರಿಸುವಾಗ ಕೈಬಿಟ್ಟುಹೋದ ಮತ್ತು ಅರ್ಜಿ ಸಲ್ಲಿಸದೇ ಇದ್ದ ಹಾಗೂ ಹೊಸದಾಗಿ ಅರ್ಜಿ ಸಲ್ಲಿಸಿರುವ ಪ್ರಕರಣಗಳನ್ನು ಸಹ ಪರಿಗಣಿಸುವಂತೆ ತೀರ್ಮಾನಿಸಲಾಯಿತೆಂದು ತಿಳಿಸಲಾಗಿದೆ. ಇದಲ್ಲದೆ ಸಂತ್ರಸ್ಥ ಕುಟುಂಬಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುಳುಗಡೆಗೊಂಡಿರುವ ಜಮೀನಿನ ಜಂಟಿ ಖಾತೆಯನ್ನು ಹೊಂದಿದ್ದವರಿದ್ದು, ಆ ಕುಟುಂಬದ ಇತರೆ ಸದಸ್ಯರುಗಳಿಗೂ ಸಹ ಪರಿಹಾರ ಕೊಡಬೇಕೆಂದು ತೀರ್ಮಾನಿಸಲಾಗಿದೆಯೆಂದು ತಿಳಿಸಲಾಗಿದೆ. ಅದರಂತೆ ಅಂತಹ ಒಟ್ಟು 2573 ಅರ್ಜಿಗಳು ಬಂದಿದ್ದು ಅವುಗಳನ್ನು ಕಾವೇರಿ ನೀರಾವರಿ ನಿಗಮದ ಇಂಜನಿಯರ್‌ಗಳು ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಪುನರ್ ಪರಿಶೀಲಿಸಿ ಒಟ್ಟು 714 ಅರ್ಹ ಫಲಾನುಭವಿಗಳ ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗಿದೆಯೆಂದು ತಿಳಿಸಿರುತ್ತಾರೆ. ಇವರುಗಳಿಗೆ ಈ ಹಿಂದೆ 1999ರಲ್ಲಿ ಮಂಜೂರು ಮಾಡಿರುವ ಪ್ಯಾಕೇಜ್ ನಂತೆ ಸೌಲಭ್ಯಗಳನ್ನು ನೀಡಲು ರೂ. 4,11,95, 400ಗಳ ವೆಚ್ಚಕ್ಕೆ ಅನುಮೋದನೆ ಪಡೆಯಲು ಪುನರ್ವಸತಿ ಸಮಿತಿ ಸಭೆಯ ನಿರ್ಣಯದಂತೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

5. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಇವರು ಪ್ರಸ್ತುತ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕುಟುಂಬದ ಫಲಾನುಭವಿಗಳ ಪುನರ್ ಪರಿಶೀಲನೆ ಮಾಡಿಸಲಾಗಿದ್ದು, ಅದರಂತೆ ಅರ್ಹ ಫಲಾನುಭವಿಗಳ ಸಂಖ್ಯೆಯಲ್ಲಿ ಮತ್ತು ಪಾವತಿಸಬೇಕಾದ ಪರಿಹಾರ ಮೊತ್ತದಲ್ಲಿ ಪರಿಷ್ಕರಣೆಯಾಗಿದ್ದು, ಪರಿಷ್ಕರಣೆಯಂತೆ ಪ್ರಸ್ತುತ ಒಟ್ಟು 583 ಅರ್ಹ ಫಲಾನುಭವಿಗಳಿಗೆ ರೂ. 3,33,59,600/- ಪರಿಹಾರಧನ ಪಾವತಿಸುವ ಪ್ರಸ್ತಾವನೆಗೆ ಅನುಮೋದನೆ ಕೋರಿರುತ್ತಾರೆ. ಪರಿಷ್ಕೃತ ಪ್ರಸ್ತಾವನೆಯಂತೆ ಪರಿಹಾರಧನ ಪಾವತಿಸಲು ಮಂಜೂರಾತಿ ನೀಡುವಂತೆ ಜಲಸಂಪನ್ಮೂಲ ಇಲಾಖೆಯು ಶಿಫಾರಸ್ಸು ಮಾಡಿರುತ್ತದೆ.

6. ಪ್ರಸ್ತಾವನೆಯನ್ನು ಪರಿಗಣಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಕಂಇ 44 ಆರ್‌ಇಹೆಚ್ 2006, ಬೆಂಗಳೂರು, ದಿನಾಂಕ:13ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಅರ್ಕಾವತಿ ಜಲಾಶಯ ಯೋಜನೆಯಡಿಯಲ್ಲಿ (ಹಾರೋಬೆಲೆ ಯೋಜನೆ) ಸಂತ್ರಸ್ಥರಾದ ಹಾಗೂ ಪರಿಷ್ಕೃತ ಪಟ್ಟಿಯಂತೆ ತಯಾರಿಸಲಾದ ಮತ್ತು ಮೇಲೆ ಪ್ರಸ್ತಾವನೆಯಲ್ಲಿ ಹೇಳಲಾದ 10 ಗ್ರಾಮಗಳಲ್ಲಿನ ಒಟ್ಟು 583 ಹೆಚ್ಚುವರಿ ಅರ್ಹ ಕುಟುಂಬಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ರೂ. 3,33,59.600/ (ರೂಪಾಯಿ ಮೂರು ಕೋಟಿ ಮೂವತ್ತಮೂರು ಲಕ್ಷ ಐವತ್ತೊಂಬತ್ತು ಸಾವಿರದ ಆರು ನೂರು ಮಾತ್ರ) ವೆಚ್ಚದ ಪ್ಯಾಕೇಜನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ ಮಂಜೂರಾತಿ ನೀಡಲಾಗಿದೆ.

(1) ಪರಿಹಾರ ಮೊತ್ತವನ್ನು ಪಾವತಿಸುವ ಮೊದಲು ಫಲಾನುಭವಿಗಳು ಅರ್ಹರಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

(2) ಈ ವೆಚ್ಚವನ್ನು ಕಾವೇರಿ ನೀರಾವರಿ ನಿಗಮದ ಸಂಪನ್ಮೂಲಗಳಿಂದ ಭರಿಸತಕ್ಕದ್ದು.

(3) ವೆಚ್ಚದ ಬಗ್ಗೆ ನಿಯಮಾನುಸಾರ ಲೆಕ್ಕ ಪತ್ರ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು.

(4) ಯೋಜನಾ ವೆಚ್ಚ ವಿನಿಯೋಗವಾದ ಬಗ್ಗೆ ಹಾಗೂ ಪುನರ್ವಸತಿ ಕಾರ್ಯ ಪೂರ್ಣಗೊಂಡ ಬಗ್ಗೆ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸರ್ಕಾರಕ್ಕೆ ಪ್ರಮಾಣ ಪತ್ರ ಮತ್ತು ಪಾಲನಾ ವರದಿ ಸಲ್ಲಿಸತಕ್ಕದ್ದು.

2) ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಪಿಡಬ್ಲ್ಯೂಡಿ 1027 ಎಫ್-ಸಿ-1/2005 ದಿನಾಂಕ:27.12.2005 ಮತ್ತು ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 143 ವೆಚ್ಚ-7/2009 ದಿನಾಂಕ:28.2.2009 ಹಾಗೂ ಜಲ ಸಂಪನ್ಮೂಲ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಜಸಂಇ 99 ಎಂಎಂಕೆ 2005, ದಿನಾಂಕ:14.5.2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1672

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಪುನರ್ವಸತಿ)

PERSONNEL AND ADMINISTRATIVE REFORMS SECRETARIAT

CORRIGENDUM

No. DPAR 2 SLU 2009, Bangalore, Dated: 18th June, 2009

In Notification No.DPAR 2 SLU 2009 dated:15.6.2009 the figure "Rs 2.500" appearing in sub-rule(ii) of rule 2 shall be read as "Rs. 10,000".

By Order and in the name of the Governor of Karnataka,

P. MARKANDEYA

P.R. 1676

Under Secretary to Government,

Department of Personnel and Administrative Reforms (ServicesRules-2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾನ್ಯ ಮುಖ್ಯಮಂತ್ರಿಯವರ ಅಧಿಕೃತ ನಿವಾಸಕ್ಕೆ ನೂತನ ಮಾದರಿಯ ಪ್ಯಾನಾಸೋನಿಕ್ ಕೀ–ಟೆಲಿಫೋನ್ ಉಪಕರಣಗಳ ಖರೀದಿಸಿ ಅಳವಡಿಸಿರುವ ವೆಚ್ಚ ಪಾವತಿ ಮಾಡುವ ಬಗ್ಗೆ.

ಓದಲಾಗಿದೆ :

1. ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳ ಟಿಪ್ಪಣಿ ಸಂಖ್ಯೆ:ಮುಮ/ವಿಕ/05/2009 ದಿನಾಂಕ:16.1.2009.
2. ಟೆಂಡರ್ ಅಧಿಸೂಚನೆ ಸಂಖ್ಯೆ:ಸಿಆಸುಇ 57 ಡಿಟಿಎನ್ 2009 ದಿನಾಂಕ:24,2,2009
3. ಪತ್ರ ಸಂಖ್ಯೆ:ಸಿಆಸುಇ 57 ಡಿಟಿಎನ್ 2009 ದಿನಾಂಕ:4.4.2009.
4. ಮೆ:ಸ್ಲಿಸ್ ಮಾರ್ಕೆಟಿಂಗ್ ಕಂ., ಬೆಂಗಳೂರು ಸಂಸ್ಥೆಯ ಬಿಲ್ ಸಂಖ್ಯೆ:427 ದಿನಾಂಕ:6.5.09
5. ಮುಖ್ಯ ಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯವರ ಪತ್ರ ಸಂಖ್ಯೆ:ಸಿ.ಎ.ಓಎಸ್‌ಡಿ 1051.09 ದಿನಾಂಕ:5.6.09.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ನ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸಕ್ಕೆ ಕಾಲರ್ ಐಡಿ ಇರುವ ಉತ್ತಮ ಗುಣಮಟ್ಟದ 25 ಇ.ಪಿ.ಎ.ಬಿ.ಎಕ್ಸ್, ಹೊಸ ದೂರವಾಣಿ ಉಪಕರಣಗಳನ್ನು ಖರೀದಿಸಿ ಅಳವಡಿಸುವಂತೆ ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಗಳು ಕೋರಿಕೆ ಸಲ್ಲಿಸಿದ್ದರು, ಅದರಂತೆ, ಮಾನ್ಯ ಮುಖ್ಯ ಮತ್ರಿಯವರ ಅಧಿಕೃತ ನಿವಾಸ ಸಂಖ್ಯೆ:2, ಕಾಟೇಜಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು, ಇಲ್ಲಿಗೆ ಕೆಎಕ್ಸ್–ಟಿಡಿಎ 100 ಡಿಜಿಟಲ್ ಐಪಿ–ಪಿಬಿಎಕ್ಸ್ ಪ್ಯಾನಾಸೋನಿಕ್ ಕೀ–ಟೆಲಿಪೋನ್ ಸಂಪರ್ಕ ವ್ಯವಸ್ಥೆಯನ್ನು 8 ಟ್ರಂಕ್ ಲೈನ್, ಕಾರ್ಡ್, 16 ಡಿಜಿಟಲ್ ಎಕ್ಸ್‌ಟೆನ್‌ಷನ್ 16 ಅನಾಲಾಗ್ ಎಕ್ಸ್‌ಟೆನ್‌ಷನ್ ಉಪಕರಣಗಳೊಂದಿಗೆ ಖರೀದಿಸಿ ಅಳವಡಿಸುವ ಸಂಬಂಧ ಅಧಿಕೃತ ಮಾರಾಟಗಾರರಿಂದ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಟೆಂಡರ್ ಪ್ರಕಟಣೆ ನೀಡಲಾಗಿತ್ತು ಇದಕ್ಕೆ ಪ್ರತಿಕ್ರಯಿಸಿ ನಾಲ್ಕು ಸಂಸ್ಥೆಗಳು ಟೆಂಡರ್ ಸಲ್ಲಿಸಿದ್ದು ಈ 04 ಸಂಸ್ಥೆಗಳ ಟೆಂಡರ್‌ಗಳನ್ನು ನಿಯಮಾನುಸಾರ ಪರಿಶೀಲಿಸಲಾಯಿತು. ನಾಲ್ಕು ಟೆಂಡರ್‌ಗಳನ್ನು ನಿಯಮಾನುಸಾರ ಪರಿಶೀಲಿಸಲಾಗಿ ಮೆ:ಸ್ವಿಸ್ ಮಾರ್ಕೆಟಿಂಗ್ ಕಂ., ಬೆಂಗಳೂರು ಸಂಸ್ಥೆಯು ಕೆಎಕ್ಸ್–ಟಿಡಿಎ 100 ಡಿಜಿಟಲ್ ಐಪಿ–ಪಿಬಿಎಕ್ಸ್ ಪ್ಯಾನಾಸೋನಿಕ್ ಕೀ–ಟೆಲಿಪೋನ್ ಸಂಪರ್ಕ ವ್ಯವಸ್ಥೆಯನ್ನು 8 ಟ್ರಂಕ್ ಲೈನ್ ಕಾರ್ಡ್ 16 ಡಿಜಿಟಲ್ ಎಕ್ಸ್‌ಟೆನ್‌ಷನ್ ., 16 ಅನಾಲಾಗ್ ಎಕ್ಸ್‌ಟೆನ್‌ಷನ್ ಉಪಕರಣಗಳಿಗೆ ಅತಿ ಕಡಿಮೆ ದರ ಅಂದರೆ ರೂ. 3,96,400.00 (ಎಲ್ಲಾ ತೆರಿಗೆ ಸೇರಿ) ಮೊತ್ತವನ್ನು ನಮೂದಿಸಿರುತ್ತದೆ. ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸಕ್ಕೆ ಅತ್ಯಾಧುನಿಕ ಪ್ಯಾನಾಸೋನಿಕ್ ಕೀ–ಟೆಲಿಪೋನ್ ಕಾಲರ್ ಐಡಿ ಇರುವ ಹೊಸ ದೂರವಾಣಿ ಉಪಕರಣಗಳನ್ನು ಒಟ್ಟು ರೂ. 3,96,400.00 (ರೂ. ಮೂರು ಲಕ್ಷ ತೊಂಭತ್ತಾರು ಸಾವಿರದ ನಾಲ್ಕು ನೂರು ಮಾತ್ರ) (ತೆರಿಗೆ ಸೇರಿ) ವೆಚ್ಚದಲ್ಲಿ ಖರೀದಿಸಿ ಅಳವಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಸದರಿ ಸಂಸ್ಥೆಯನ್ನು ಕೋರಲಾಗಿತ್ತು. ಅದರಂತೆ ಈ ಸಂಸ್ಥೆಯು ಮಾನ್ಯ ಮುಖ್ಯ ಮಂತ್ರಿಯವರ ಅಧಿಕೃತ ನಿವಾಸಕ್ಕೆ ಕಾಲರ್ ಐಡಿ ಇರುವ ಹೊಸ ಪ್ಯಾನಾಸೋನಿಕ್ ಕೀ ಟೆಲಿಫೋನ್ ಉಪಕರಣಗಳನ್ನು ಖರೀದಿಸಿ ಅಳವಡಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿನ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿದೆ. ಮಾನ್ಯ ಮುಖ್ಯ ಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯವರ ಮೇಲೆ (5)ರಲ್ಲಿ ಓದಲಾಗಿರುವ ತಮ್ಮ ಪತ್ರದಲ್ಲಿ ಮೇಲ್ಕಂಡಂತೆ ದೂರವಾಣಿ ಉಪಕರಣಗಳನ್ನು ಅಳವಡಿಸಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 57 ಡಿಟಿಎನ್ 2009, ಬೆಂಗಳೂರು, ದಿನಾಂಕ:22ನೇ ಜೂನ್ 2009

ಪ್ರಸ್ತಾವನೆಯಲ್ಲಿನ ವಿವರಣೆಯನ್ವಯ ಮಾನ್ಯ ಮುಖ್ಯಮಂತ್ರಿಯವರ ಅಧಿಕೃತ ನಿವಾಸ ಸಂಖ್ಯೆ:2, ಕಾಟೇಜಸ್ ರೇಸ್ ಕೋರ್ಸ್ ರಸ್ತೆ, ಬೆಂಗಳೂರು, ಇಲ್ಲಿಗೆ ಕೆಎಕ್ಸ್ ಟಿಡಿಎ 100 ಡಿಜಿಟಲ್ ಐಪಿ–ಪಿಬಿಎಕ್ಸ್ ಪ್ಯಾನಾಸೋನಿಕ್ ಕೀ–ಟೆಲಿಪೋನ್ ಸಂಪರ್ಕ ವ್ಯವಸ್ಥೆಯನ್ನು 8 ಟ್ರಂಕ್ ಲೈನ್ ಕಾರ್ಡ್, 16 ಡಿಜಿಟಲ್ ಎಕ್ಸ ಟೆನ್‌ಷನ್, 16 ಅನಾಲಾಗ್ ಎಕ್ಸ್‌ಟೆನ್‌ಷನ್ KXT 7030-5 Nos, KXT 7665-11 Nos., Panasonic Basic Instrument KXT 600 MX-10 Nos, 600 VA UPS-1 No. ಉಪಕರಣಗಳನ್ನು (ಕೇಬಲ್ , ಕೇಸಿಂಗ್ ಮತ್ತು ಅಳವಡಿಕೆ ವೆಚ್ಚ ಸೇರಿ) ಖರೀದಿಸಿ ಅಳವಡಿಸಿರುವ ವೆಚ್ಚ ಒಟ್ಟು ರೂ. 3,96, 400.00 (ರೂ. ಮೂರು ಲಕ್ಷ ತೊಂಭತ್ತಾರು ಸಾವಿರದ ನಾಲ್ಕು ನೂರು ಮಾತ್ರ) (ತೆರಿಗೆ ಸೇರಿ) ಗಳನ್ನು ಮೆ:ಸ್ವಿಸ್

ಮಾರ್ಕೆಟಿಂಗ್ ಕಂ., ನಂ. 277/14, ಪೋಸ್ಟ್ ಆಫೀಸ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–27 ಸಂಸ್ಥೆಗೆ ಪಾವತಿ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ "2013–ಮಂತ್ರಿಮಂಡಲ–800–ಇತರೆ ವೆಚ್ಚಗಳು–051–ಸಾಮಾನ್ಯ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ:10.7.1996 ರಲ್ಲಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1677

ಕೆ.ಎಸ್. ಮಂಜುನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಕಾರ್ಯಕಾರಿ)

ವಿಷಯ : 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ರಚಿಸುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ :ಪಿಎಸ್.ಸಿಎಂ/1985/2009, ದಿನಾಂಕ :11.6.2009

ಪ್ರಸ್ತಾವನೆ:

ಶ್ರೀ ಎ.ಜಿ. ಕೊಡ್ಗಿ ರವರ ನೇತೃತ್ವದಲ್ಲಿ ರಚಿಸಿದ್ದ 3ನೇ ಹಣಕಾಸು ಆಯೋಗವು ಪಂಚಾಯತ್ ರಾಜ್ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಆರ್ಥಿಕ ವ್ಯವಸ್ಥೆ ಮತ್ತು ಆಡಳಿತದ ಬಗ್ಗೆಸಮಗ್ರವಾಗಿ ಅಧ್ಯಯನ ಮಾಡಿ ಸದರಿ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಪೂರಕವಾಗುವಂತೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಪಂಚಾಯತ್ ರಾಜ್ ಮತ್ತಿತರ ಸಂಸ್ಥೆಗಳನ್ನು ಬಲಪಡಿಸಿ ಅವುಗಳು ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುತ್ತದೆ. ಕಾರಣ ಈ ದಿಸೆಯಲ್ಲಿ 3ನೇ ಹಣಕಾಸು ಆಯೋಗ ನೀಡಿರುವ ವರದಿಯನ್ನು ಅನುಷ್ಠಾನಕ್ಕೆ ತರುವುದು ಅಷ್ಟೇ ಅವಶ್ಯಕವಾಗಿರುತ್ತದೆ.

3ನೇ ಹಣಕಾಸು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರುಗಳು ಸದರಿ ಆಯೋಗದ ಜವಾಬ್ದಾರಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸುತ್ತಾರೆ. 3ನೇ ಹಣಕಾಸು ಆಯೋಗದ ವರದಿಯನ್ನು ಸಮರ್ಪಕವಾಗಿ ಜಾರಿಗೆ ತರಬೇಕಾಗಿದೆ. ಈ ವರದಿಯನ್ನು ಅನುಷ್ಠಾನಗೊಳಿಸುವ ಸಂಬಂಧ ಶಿಫಾರಸ್ಸು ನೀಡಲು ಒಂದು ಕಾರ್ಯಪಡೆಯನ್ನು ರಚಿಸುವುದು ಸೂಕ್ತವೆಂದು ಕಂಡುಬರುತ್ತದೆ.

ಮಾನ್ಯ ಮುಖ್ಯಮಂತ್ರಿಯವರು ಮೇಲೆ ಓದಲಾದ ದಿನಾಂಕ:11.6.2009ರ ಟಿಪ್ಪಣಿಯಲ್ಲಿ 3ನೇ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ಈ ಕೆಳಗಿನಂತೆ ರಚಿಸಲು ಆದೇಶಿಸಿರುತ್ತಾರೆ.

1)	ಶ್ರೀ ಎ.ಜಿ. ಕೊಡ್ಗಿ	ಅಧ್ಯಕ್ಷರು
2)	ಡಾ: ಮಹೇಂದ್ರ ಎಸ್. ಕಂಠಿ	ಸದಸ್ಯರು
3)	ಟಿ. ತಿಮ್ಮೇಗೌಡ	ಸದಸ್ಯರು
4)	ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯ ಕಾರ್ಯದರ್ಶಿ

ಮೇಲೆ ವಿವರಿಸಿರುವಂತೆ ಕಾರ್ಯಪಡೆಯನ್ನು ರಚಿಸಲು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 72 ಶಿಸನೇ 2009, ಬೆಂಗಳೂರು, ದಿನಾಂಕ:3ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 3ನೇ ಹಣಕಾಸು ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಕೆಳಕಂಡಂತೆ ಕಾರ್ಯಪಡೆಯನ್ನು ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ.

1)	ಶ್ರೀ ಎ.ಜಿ. ಕೊಡ್ಗಿ	ಅಧ್ಯಕ್ಷರು
2)	ಡಾ: ಮಹೇಂದ್ರ ಎಸ್. ಕಂಠಿ	ಸದಸ್ಯರು
3)	ಟಿ. ತಿಮ್ಮೇಗೌಡ	ಸದಸ್ಯರು
4)	ಸರ್ಕಾರದ ಕಾರ್ಯದರ್ಶಿ (ಪಂಚಾಯತ್ ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1701

ಎಸ್. ತಿಪ್ಪೇಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ರಾಜ್ಯ ಶಿಷ್ಟಾಚಾರ)

ಸುತ್ತೋಲೆ

ಸಂಖ್ಯೆ: ಡಿಪಿಎಆರ್ 262 ಎಸ್‌ಎಎಸ್ 2009, ಬೆಂಗಳೂರು, ದಿನಾಂಕ:26ನೇ ಜೂನ್ 2009

ವಿಷಯ : ಐಎಎಸ್ ವೇತನ ನಿಯಮಗಳು 2007–ನಿಯಮ 5ಎ–ಪೇ ಬ್ಯಾಂಡ್ 3ರಲ್ಲಿರುವ ಕೆಲವು ಅಧಿಕಾರಿಗಳಿಗೆ ಹೆಚ್ಚಿನ ದರದ ವೇತನ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ : 1 ಐಎಎಸ್ (ವೇತನ) 2ನೇ ತಿದ್ದುಪಡಿ ನಿಯಮಗಳು 2008

2 ಮಹಾಲೇಖಪಾಲರ ಪತ್ರ ಸಂಖ್ಯೆ:ಜಿಎಂ/ಐಎಎಸ್/94, ದಿನಾಂಕ:14.5.2009.

ಐಎಎಸ್ (ವೇತನ) 2ನೇ ತಿದ್ದುಪಡಿ ನಿಯಮಗಳು 2008ರ ನಿಯಮ 5ಎ(3)ರಲ್ಲಿ ಪೇ ಬ್ಯಾಂಡ್ –3ರಲ್ಲಿರುವ ಅಧಿಕಾರಿಗಳ ವೃಂದಬಲದ ಶೇ 20 ಅಧಿಕಾರಿಗಳಿಗೆ ಹೆಚ್ಚಿನ ದರದಲ್ಲಿ ವೇತನ ಮುಂಬಡ್ತಿಯನ್ನು ಅಂದರೆ ಶೇ 4ರ ದರದಲ್ಲಿ ವೇತನ ಮುಂಬಡ್ತಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಮಹಾಲೇಖಪಾಲರು ದಿನಾಂಕ:14.5.2009ರ ಪತ್ರದಲ್ಲಿ ಈ ರೀತಿ ಹೆಚ್ಚಿನ ದರದಲ್ಲಿ ವೇತನ ಮುಂಬಡ್ತಿ ಮಂಜೂರು ಮಾಡಲು ಅರ್ಹರಾದ ಅಧಿಕಾರಿಗಳ ಪಟ್ಟಿಯನ್ನು ಒದಗಿಸಲು ಕೋರಿರುತ್ತಾರೆ.

ಪೇ ಬ್ಯಾಂಡ್ 3ರಲ್ಲಿರುವ ಅಧಿಕಾರಿಗಳಲ್ಲಿ, ಹೆಚ್ಚಿನ ದರದಲ್ಲಿ ವೇತನ ಮುಂಬಡ್ತಿಗೆ ಅರ್ಹರಾಗುವ ಅಧಿಕಾರಿಗಳನ್ನು ಗುರುತಿಸಬೇಕಾದ ಅಗತ್ಯವಿದೆ. ತಕ್ಷಣದ ಹಿಂದಿನ ಆರ್ಥಿಕ ವರ್ಷದ ಕಾರ್ಯನಿರ್ವಹಣಾ ವರದಿಯ ಆಧಾರದ ಮೇಲೆ ಅರ್ಹ ಅಧಿಕಾರಿಗಳನ್ನು ಗುರುತಿಸಲಾಗುವುದು. ಪೇ ಬ್ಯಾಂಡ್–3ರಲ್ಲಿ 80 ಜನ ಅಧಿಕಾರಿಗಳಿದ್ದು, ಕೇವಲ 16 ಅಧಿಕಾರಿಗಳಿಗೆ ಈ ರೀತಿ ಹೆಚ್ಚಿನ ದರದಲ್ಲಿ ವೇತನ ಮುಂಬಡ್ತಿಯನ್ನು ಮಂಜೂರು ಮಾಡಬೇಕಾಗಿರುವುದರಿಂದ, ಒಂದು ವೇಳೆ ಈ ಪೇ ಬ್ಯಾಂಡ್ ನಲ್ಲಿ 16 ಕ್ಕಿಂತ ಹೆಚ್ಚು ಅರ್ಹ ಅಧಿಕಾರಿಗಳಿದ್ದರೆ ಆ ಪಟ್ಟಿಯನ್ನು 16ಕ್ಕೆ ಸೀಮಿತಗೊಳಿಸುವ ಅಗತ್ಯವಿರುವುದರಿಂದ ಸದರಿ ಉದ್ದೇಶಕ್ಕಾಗಿ ಅಪರ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಈ ಕೆಳಕಂಡ ಪರಾಮರ್ಶಕ ಸಮಿತಿಯನ್ನು ರಚಿಸಲಾಗಿದೆ.

ಪರಾಮರ್ಶಕ ಸಮಿತಿ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಅಧ್ಯಕ್ಷರು
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ	ಸದಸ್ಯರು
ಸರ್ಕಾರದ ಕಾರ್ಯದರ್ಶಿ, ಸಿಆಸುಇ	ಸದಸ್ಯರು

ಈ ಹೆಚ್ಚಿನ ದರದ ವೇತನ ಮುಂಬಡ್ತಿಯನ್ನು ಪ್ರತಿ ವರ್ಷ ಜುಲೈ ಮೊದಲನೇ ದಿನಾಂಕದಿಂದ ಜಾರಿಗೆ ಬರುವಂತೆ ಕೇವಲ ಒಂದು ವರ್ಷದ ಅವಧಿಗೆ ಮಾತ್ರ ಪೇ ಬ್ಯಾಂಡ್ 3ರಲ್ಲಿರುವ ಅಧಿಕಾರಿಗಳ ವೃಂದಬಲದ ಶೇ 20 ಅರ್ಹ ಅಧಿಕಾರಿಗಳಿಗೆ ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಹೆಚ್ಚಿನ ದರದ ವೇತನ ಮುಂಬಡ್ತಿಗೆ ಅರ್ಹರಾಗಲು ಪೇ–ಬ್ಯಾಂಡ್ 3ರಲ್ಲಿರುವ ಅಧಿಕಾರಿಗಳ ತಕ್ಷಣ ಹಿಂದಿನ ವರ್ಷದ ಕಾರ್ಯ ನಿರ್ವಹಣಾ ವರದಿಯನ್ನು ಆಧರಿಸಿ ಸಮಿತಿಯು ನಿರ್ಧಾರ ತೆಗೆದುಕೊಳ್ಳುವುದು. ಒಂದು ವೇಳೆ ಶೇ. 20ಕ್ಕಿಂತ ಹೆಚ್ಚಿನ ಅಧಿಕಾರಿಗಳು ಅರ್ಹರಾಗಿದ್ದಲ್ಲಿ ಪರಾಮರ್ಶಕ ಸಮಿತಿಯು ಅಂತಹ ಎಲ್ಲಾ ಅಧಿಕಾರಿಗಳ ಪರಸ್ಪರ ಅರ್ಹತೆಯನ್ನು ಪರಿಗಣಿಸಿ ಪಟ್ಟಿಯನ್ನು ಶೇ. 20ಕ್ಕೆ ಮೀರದಂತೆ ಸಿದ್ದಪಡಿಸುವುದು ಹಾಗೂ ಶೇ. 20ಕ್ಕಿಂತ ಕಡಿಮೆ ಅಧಿಕಾರಿಗಳು ಮಾತ್ರ ಈ ಮೌಲ್ಯಮಾಪನದ ಅನ್ವಯ ಅರ್ಹರಿದ್ದಲ್ಲಿ, ಸಮಿತಿಯು ಅಷ್ಟು ಅಧಿಕಾರಿಗಳಿಗೆ ಮಾತ್ರ ಈ ಒಂದು ಹೆಚ್ಚಿನ ದರದ ವೇತನ ಮುಂಬಡ್ತಿ ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು. ಅಂತಹ ಅಧಿಕಾರಿಗಳಿಗೆ ಜುಲೈ ಮೊದಲನೇ ದಿನಾಂಕದಿಂದ ಅನ್ವಯವಾಗುವಂತೆ ಒಂದುವರ್ಷದ ಅವಧಿಗೆ ಮಾತ್ರ ಹೆಚ್ಚಿನ ದರದಲ್ಲಿ ಅಂದರೆ ಶೇ 4 ರಂತೆ ವೇತನ ಮುಂಬಡ್ತಿಯನ್ನು ಮಂಜೂರು ಮಾಡಲಾಗುವುದು.

ಎಂ.ಟಿ. ರೇಜು

ಪಿ.ಆರ್. 1703

ಸರ್ಕಾರದ ಉಪ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು)

PERSONNEL AND ADMINISTRATIVE REFORMS SECRETARIAT

Sub: Counting the re-employment service of Sri Bapu Sheshagiri Rao, Retired Section Officer, Karnataka Government Secretariat for the purpose of pay and pension-regarding.

Read: 1 Notification No.DPAR 490 MSO 83 dated:20.2.1984

2 Notification No.DPAR 363 MSO85 dated:25.6.1985

3 G.O.No. DPAR 584 MSO 86 dated:3.3.1987

4 G.O. DPAR 18 SDE 84 dated:24.8.1984

5 G.O. No. DPAR 18 SDE 84 dated:31.12.1984

6 KAT Order dated:25.7.2008 in Application No. 210/2005.

Preamble:

Sri Bapu Sheshagiri Rao, who was working as Section Officer in the Karnataka Government Secretariat retired on 31.10.1983 on completion of superannuation age of 55 years. In Notification No. DPAR 490 MSO 83 dated:20.2.1984 read at (1) above, he was re-employed on contract basis with effect from 1.11.1983 as Private Secretary to the Chairman, Local Finance Commission, Bangalore, in the exigencies of public service for a period co-terminus with the tenure of the Officer of the Chairman. In Notification No.DPAR 363 MSO 85 dated:25.6.1985 read at (2) above, he was transferred and posted as Private Secretary to Government Chief Whip, Karnataka Legislative Assembly with immediate effect and until further orders, Further, in Government Order No. DPAR 584 MSO 86 dated 3.3.1987 read at (3) above, permission was accorded for re-employment as Personal Secretary to Government Chief Whip from 16.10.1986 until he attains the age of 60 years or co-terminus with the tenure of the Office of the Government Chief Whip, whichever is earlier, Accordingly, he began to draw admissible pay as per KCSR's plus pension, In G.O.No. DPAR 18 SDE 84 dated 24.8.1984 read at (4) above, orders were issued enhancing the superannuation age of Government servants from 55 to 58 years. Subsequently in G.O.No. DPAR 18 SDE 84 dated 31.12.1984 read at (5) above, re-employed persons were also given the benefit of continuance in service till they attained the age of 58 years subject to fulfillment of the conditions specified therein. Thus while Sri Bapu Sheshagiri Rao got the benefit of continuance of service upto his attaing the age of 58 years, he remained a retired employee and re-employed on contract basis for all purposes, In the meanwhile, the KCS (Revised Pay)Rules 1987 came into force with effect from 1.7.1986 revising the pay scales of State Government Employees, Sri Bapu Sheshagiri Rao, Section Officer, Karnataka Government Secretariat who was re-employed consequent on his retirement from service on superannuation, filed an Application No. 210/2005 before the KAT challenging the endorsement dated 19.6.2004 bearing No.DPAR 127 SishaSe 2003 wherein he was endorsed as follows;

> "ಪ್ರಸಕ್ತ ವಿಷಯದಲ್ಲಿ ಉಲ್ಲೇಖಿತ ಮನವಿಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ನ್ಯಾಯಾಲಯದಲ್ಲಿ ಆದೇಶ ಪಡೆದ ಅರ್ಜಿದಾರರಿಗೆ ಸಂಬಂಧಿಸಿದಂತೆ ಮಾತ್ರ ನ್ಯಾಯಾಲಯ ಆದೇಶವನ್ನು ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದ್ದು, ನಿಮ್ಮ ಪ್ರಕರಣದಲ್ಲಿ ಯಾವುದೇ ಆದೇಶ ಇಲ್ಲದಿರುವುದರಿಂದ, ಶ್ರೀ ವಾಸುದೇವಮಯ್ಯ ರವರ ಪ್ರಕರಣವನ್ನು ಆಧರಿಸಿ ಸದರಿ ಸೌಲಭ್ಯವನ್ನು ನಿಮ್ಮ ಪ್ರಕರಣಕ್ಕೆ ವಿಸ್ತರಿಸಲು ಸಾಧ್ಯವಿಲ್ಲವೆಂದು ತಿಳಿಸಲಾಗಿದೆ"

The claims were examined by the KAT which allowed the Application and while doing so, in para 6 of its order has ordered as follows;

"For the above reasons, we allow the Applications and direct the respondents to consider the claim of applicants for giving the benefit similar to the one given to K. Vasudeva Mayya and A.H. Someswara, but any monetary benefits that is admissible shall be given for the period subsequent to 1.1.2005 and 1.9.2005 respectively"

ನ್ಯಾಯಮಂಡಳಿ ಅರ್ಜಿ ಸಂಖ್ಯೆ 210/2005 ರಲ್ಲಿನ ಅರ್ಜಿದಾರರಾದ ಶ್ರೀ ಬಾಪು ಶೇಷಗಿರಿರಾವ್, ನಿವೃತ್ತ ಶಾಖಾಧಿಕಾರಿ, ಇವರು 55 ವರ್ಷಗಳ ತರುವಾಯದಲ್ಲಿ 58 ವರ್ಷಗಳವರೆಗೆ ಮರುನೇಮಕಾತಿ ಮೇರೆಗೆ ಸಲ್ಲಿಸಿದ ಸೇವೆಯನ್ನು "ಸತತವಾಗಿ ಸೇವೆಯಲ್ಲಿ ಮುಂದುವರೆದ ಅವಧಿ" ಯೆಂದು ಪರಿಗಣಿಸಿದೆ ಹಾಗೂ ಇವರ ವೇತನವನ್ನು ಕಾಲಕಾಲಕ್ಕೆ ಪರಿಷ್ಕರಿಸುವಲ್ಲಿ ಶ್ರೀಯುತರು 55 ವರ್ಷಗಳ ವಯೋನಿವೃತ್ತಿಯ ನಂತರದಲ್ಲಿ ಯಾವುದೇ ಸೇವಾ ವಿಚ್ಛಿನ್ನತೆಯಿಲ್ಲದೆ ಮರುನೇಮಕಾತಿಗೊಂಡು 58 ವರ್ಷಗಳವರೆಗೆ ಸತತವಾಗಿ ಸೇವೆಯನ್ನು ಸಲ್ಲಿಸಿರುವುದರಿಂದ ಶ್ರೀಯುತರ ವೇತನ, ನಿವೃತ್ತಿ ವೇತನ ಮತ್ತು ಅರ್ಹತಾದಾಯಕ ಸೇವೆಯನ್ನು ಪರಿಷ್ಕರಿಸಲು ಮತ್ತು ಅದರಂತೆ ನಿವೃತ್ತಿ ಸೌಲಭ್ಯಗಳಾದ ನಿವೃತ್ತಿ ಉಪದಾನ, ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮತ್ತು ತತ್ಸಂಬಂಧವಾಗಿ ಮುಂಬಡ್ತಿಗೆ ಅರ್ಹರಾದಲ್ಲಿ ನಿಯಮಾನುಸಾರ ಪರಿಗಣಿಸಿದೆ.

ಆದರೆ ನ್ಯಾಯಮಂಡಳಿಯು ತನ್ನ ಆದೇಶದಲ್ಲಿ ತತ್ಸಂಬಂಧದಲ್ಲಿ ಅರ್ಹರಾಗುವ ಆರ್ಥಿಕ ಸೌಲಭ್ಯಗಳಿಗೆ. ದಿ:1.1.2005ರ ನಂತರದಲ್ಲಿ ಅರ್ಹರಾಗತಕ್ಕದೆಂದು ನಿರ್ದಿಷ್ಟವಾಗಿ ಆದೇಶಿಸಿರುವ ಹಿನ್ನೆಲೆಯಲ್ಲಿ ದಿ:1.11.1983 ರಿಂದ 1.1.2005ರ ನಡುವಣ ಅವಧಿಗೆ ಸಂಬಂಧಿಸಿದಂತೆ ಲಭ್ಯವಾಗುವ ಯಾವುದೇ ನಿವೃತ್ತಿ ವೇತನದ ಹಣಕಾಸಿನ ಸೌಲಭ್ಯಕ್ಕೆ ಅರ್ಜಿದಾರರು ಅರ್ಹರಾಗುವುದಿಲ್ಲವೆಂದೂ, ಇದರಿಂದಾಗಿ ದಿ:16.10.1986 ರಿಂದ 16.10.1988ರವರೆಗಿನ ಮರುನೇಮಕಾತಿ ಅವಧಿಯ ವೇತನ ಪುನರ್ ನಿಗದಿಪಡಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

In view of the foregoing circumstances, the proposal has been examined in detail and hence, the following orders.

Order No. DPAR 294 MSO 2008, Bangalore, Dated:8th July, 2009

In the circumstancese explained above, sanction is accorded for the continuation of service from 55 to 58 years i.e. 15.10.83 (effective from 31.10.83 to 31.10.86) in respect of Sri Bapu Seshagiri Rao, similar to the one given to Sri Vasudeva mayya & Sri Someswara, as ordered in Application No. 210/2005 dated 25.7.2008 but any monetary benefit that is admissible shall be admissible only for the period subsequent to 1.1.2005.

This order issues with the concurrence of Finance Department vide its U.O. Note No.FD 1829 Expenditure-05/2008 dated 27.9.2008.

By Order and in the name of the Governor of Karnataka,

P.R.1705

S.N. KRISHNAMURTHY

Under Secretary to Government,

Department of Personnel and Administrative Reforms (Personnel)

ಆರ್ಥಿಕ ಸಚಿವಾಲಯ

ವಿಷಯ : ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫಿ.ಅಲ್ಪೋಪಹಾರದ ಸಲುವಾಗಿ ಮಾಡುವ ವೆಚ್ಚದ ಪರಿಷ್ಕೃತ ಆರ್ಥಿಕ ಮಿತಿ ಬಗ್ಗೆ.

ಓದಲಾಗಿದೆ : 1 ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 1 ಟಿಸಿಇ 2000 ದಿ:3.1.2001.

2 ಸರ್ಕಾರಿ ಆದೇಶ ಸಂಖ್ಯೆ:ಆಇ:6:ಟಿ.ಸಿ.ಇ. 2005 ದಿನಾಂಕ:3.11.2005.

ಪ್ರಸ್ತಾವನೆ:

ಸಾದಿಲ್ವಾರು ವೆಚ್ಚ ಕೈಪಿಡಿ 1958 ರ ನಿಯಮ 55 (51)ರ ಪ್ರಕಾರ ಮುಖ್ಯಮಂತ್ರಿಗಳು, ಸಚಿವರು, ರಾಜ್ಯ ಸಚಿವರು, ಉಪ ಸಚಿವರು, ಅಧಿಕಾರಿಗಳು ಹಾಗೂ ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫಿ/ಅಲ್ಪೋಪಹಾರದ ಸಲುವಾಗಿ ಮಾಡುವ ವೆಚ್ಚದ ಆರ್ಥಿಕ ಮಿತಿಯನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ:3.1.2001ರ ಆದೇಶದಲ್ಲಿ ಪರಿಷ್ಕರಿಸಿ ನಿಗದಿಗೊಳಿಸಲಾಗಿತ್ತು. ಹಾಗೆಯೇ ಸದರಿ ಆದೇಶದ ಕ್ರಮ ಸಂಖ್ಯೆ (5)ರಲ್ಲಿ ನಿಗದಿಗೊಳಿಸಲಾಗಿದ್ದ ಮಿತಿಯನ್ನು ವಾರ್ಷಿಕ 4000/- ರೂ.ಗಳಿಂದ 5000/- ರೂ.ಗಳಿಗೆ ಏರಿಸಿ ಮೇಲೆ (2)ರಲ್ಲಿ ಓದಲಾದ ದಿನಾಂಕ:3.11.2005ರ ಆದೇಶವನ್ನು ಹೊರಡಿಸಲಾಗಿತ್ತು. ದಿನೇ ದಿನೇ ಹೆಚ್ಚುತ್ತಿರುವ ಬೆಲೆ ಏರಿಕೆಯ ಕಾರಣದಿಂದ ಹಾಗೂ ಹೆಚ್ಚು ಹೆಚ್ಚು ಸಭೆಗಳನ್ನು ನಡೆಸಬೇಕಾಗಿರುವುದರಿಂದ ಮತ್ತು ಈ ಮಿತಿಗಳನ್ನು 2001ರಲ್ಲಿ ನಿಗದಿಪಡಿಸಿರುವುದನ್ನು ಗಮನದಲ್ಲಿರಿಸಿಕೊಂಡು ಮಿತಿಯನ್ನು ಹೆಚ್ಚಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸಿ ಪರಿಷ್ಕರಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 (ಬಾ) ಟಿಸಿಇ 2009, ಬೆಂಗಳೂರು, ದಿನಾಂಕ:2ನೇ ಜುಲೈ 2009

ಅಧಿಕೃತ ಸಭೆಗಳಲ್ಲಿ ನೀಡುವ ಟೀ/ಕಾಫೀ/ಅಲ್ಪೋಪಹಾರದ ಸಲುವಾಗಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಇಲಾಖಾ ಮುಖ್ಯಸ್ಥರು ಹಾಗೂ ಇತರೆ ಅಧಿಕಾರಿಗಳು ಮಾಡಬಹುದಾದ ವೆಚ್ಚದ ಮಿತಿಯನ್ನು ಪರಿಷ್ಕರಿಸಿ ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

1	ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸಮಾನಾಂತರ ಅಧಿಕಾರಿಗಳು, ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾ ನಿರೀಕ್ಷಕರು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 20,000-00

2	ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಿಶೇಷ ಕಾರ್ಯದರ್ಶಿಗಳು, ಪ್ರಾದೇಶಿಕ ಆಯುಕ್ತರು, ವಾಣಿಜ್ಯ ತೆರಿಗೆ ಆಯುಕ್ತರು; ಅಬಕಾರಿ ಆಯುಕ್ತರು; ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನಿರ್ದೇಶಕರು, ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಮತ್ತು ನಿರ್ದೇಶಕರು, ಅಪರ ಆರಕ್ಷಕ ಮಹಾ ನಿರೀಕ್ಷಕರು, ಆರಕ್ಷಕ ಆಯುಕ್ತರು, ಪ್ರಧಾನ ಮುಖ್ಯ ಅರಣ್ಯಪಾಲಕರು, ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 15,000–00
3	ಅಪರ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಯವರ ಪತ್ರಿಕಾ ಕಾರ್ಯದರ್ಶಿ ಇಲಾಖಾ ಮುಖ್ಯಸ್ಥರು (ಮೇಲೆ (2)ರಲ್ಲಿ ತಿಳಿಸಿರುವವರನ್ನು ಹೊರತುಪಡಿಸಿ)	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 10,000–00
4	ಜಿಲ್ಲಾಧಿಕಾರಿಗಳು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 15,000–00
5	ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಸಮಿತಿಗಳು	ಪ್ರತಿಯೊಬ್ಬರಿಗೆ ಒಂದು ವರ್ಷಕ್ಕೆ	ರೂ. 5,000–00

ನಿಗಧಿಪಡಿಸಿರುವ ಪರಿಷ್ಕೃತ ದರಗಳು ಕೂಡಲೇ ಜಾರಿಗೆ ಬರುತ್ತದೆ. ಈ ಬಗ್ಗೆ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1707

ಸಿ. ಶಾಮರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

(ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆ)

ಆರ್ಥಿಕ ಇಲಾಖೆ

ಕೃಷಿ ಮತ್ತು ತೋಟಗಾರಿಕೆ ಸಚಿವಾಲಯ

ವಿಷಯ : ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಕೃಷಿಕರಿಗೆ ಮತ್ತು ಕೃಷಿಕರ ಮಕ್ಕಳಿಗೆ 2009–10ನೇ ಸಾಲಿನ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ –ಸಮಿತಿ ರಚನೆ.

ಓದಲಾಗಿದೆ : ಕುಲಸಚಿವರು, ಕೃಷಿ ವಿಶ್ವವಿದ್ಯಾಲಯದ ಬೆಂಗಳೂರು ರವರ ಪತ್ರ ಸಂಖ್ಯೆ: R/S-I/&S II/UG Admn. PT/2009-10 ದಿನಾಂಕ:9.5.2009.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 2009–10ನೇ ಸಾಲಿನಲ್ಲಿ ಕೃಷಿಕರಿಗೆ ಮತ್ತು ಕೃಷಿಕರ ಮಕ್ಕಳಿಗೆ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ದಿನಾಂಕ:11.7.2009 ಮತ್ತು 12.7.2009ರಂದು ನಡೆಯುವ ಸಂದರ್ಶನಕ್ಕೆ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ. ಸದರಿ ಸಮಿತಿಯಲ್ಲಿ ಡಾ:ಎಂ.ಜಿ. ಚಂದ್ರಕಾಂತ್ ಡೀನ್ (ಅಗ್ರಿ) ಕೃಷಿ ಕಾಲೇಜು ಜಿ.ಕೆ.ವಿ.ಕೆ. ಬೆಂಗಳೂರು ರವರನ್ನು ಅಧ್ಯಕ್ಷರನ್ನಾಗಿ ಹಾಗೂ ಕೃಷಿ ಇಲಾಖೆ ಹಾಗೂ ಪಶುಸಂಗೋಪನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖಾ ವತಿಯಿಂದ ಒಬ್ಬರಂತೆ ಸದಸ್ಯರನ್ನಾಗಿ ನೇಮಿಸಲು ವಿನಂತಿಸಿರುತ್ತಾರೆ. ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕೃತೋಇ 113 ಕೃವಿವಿ 2009, ಬೆಂಗಳೂರು, ದಿನಾಂಕ:8ನೇ ಜುಲೈ 2009

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೃಷಿಕರಿಗೆ ಮತ್ತು ಕೃಷಿಕರ ಮಕ್ಕಳಿಗೆ 2009–10ನೇ ಸಾಲಿನ ಪದವಿ ಕೋರ್ಸ್‌ಗಳಿಗೆ ಪ್ರವೇಶದಲ್ಲಿ ಮೀಸಲಿಟ್ಟಿರುವ ಸ್ಥಾನಗಳಿಗೆ ದಿನಾಂಕ:11.7.2009 ಮತ್ತು 12.7.2009 ರಂದು ನಡೆಯಲಿರುವ ಸಂದರ್ಶನದಲ್ಲಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಈ ಕೆಳಕಂಡಂತೆ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಲಾಗಿದೆ:

1	ಡಾ:ಎಂ.ಜಿ. ಚಂದ್ರಕಾಂತ್, ಡೀನ್ (ಕೃಷಿ) ಕೃಷಿ ಕಾಲೇಜು, ಯುಎಎಸ್, ಜಿ.ಕೆ.ವಿ.ಕೆ. ಬೆಂಗಳೂರು.	ಅಧ್ಯಕ್ಷರು

2	ಡಾ: ಕೆ.ವಿ. ಕುಲಕರ್ಣಿ, ಜಂಟಿ ನಿರ್ದೇಶಕರು (ವಿಸ್ತರಣೆ ಮತ್ತು ತರಬೇತಿ) ಕೇಂದ್ರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಬೆಂಗಳೂರು.	ಸದಸ್ಯರು
3	ಶ್ರೀ ಎ.ಎನ್. ಶಂಕರಪ್ಪ, ಜಂಟಿ ಕೃಷಿ ನಿರ್ದೇಶಕರು (ವಿಸ್ತರಣೆ ಮತ್ತು ತರಬೇತಿ) ಕೃಷಿ ಆಯುಕ್ತರ ಕಾರ್ಯಾಲಯ, ಬೆಂಗಳೂರು–1	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1714

ಜಿ.ಕೆ. ಗುರಾಣಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕೃಷಿ ಮತ್ತು ತೋಟಗಾರಿಕೆ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ–ಬೆಂಗಳೂರು ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ :
1. ಪತ್ರ ಸಂಖ್ಯೆ : ವಶ್ರೇಅ(3)/20/2005–06, ದಿನಾಂಕ :15.2.2006.
2. ಸರ್ಕಾರದ ನೋಟೀಸ್ ಸಂಖ್ಯೆ :ಆಕುಕ 18 ಎಂಸಿಎಲ್ 2005, ದಿನಾಂಕ :6.4.2006.
3. ಡಾ : ಎ.ಎಸ್. ದಿನೇಶ್ ಉಪನ್ಯಾಸಕರು, ಅರವಳಿಕೆ ವಿಭಾಗ ಇವರ ಹೇಳಿಕೆ ದಿನಾಂಕ :8.5.2006.
4. ಸರ್ಕಾರದ ಆದೇಶ ಸಂಖ್ಯೆ :ಆಕುಕ 45 ಕೆವಿಎಂ 2008, ದಿನಾಂಕ :30.8.2008.

ಪ್ರಸ್ತಾವನೆ:

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ:15.2.2006ರ ಪತ್ರದಲ್ಲಿ ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಅನಧಿಕೃತ ಗೈರುಹಾಜರಾಗಿರುವುದಾಗಿ ತಿಳಿಸಿ ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಸದರಿಯವರು ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಅರವಳಿಕೆ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 25.5.2004 ರಿಂದ 22.8.2004ರ ವರೆವಿಗೆ 90 ದಿನಗಳ ಗಳಿಕೆ ರಜೆಯನ್ನು ಮಂಜೂರು ಮಾಡಲಾಗಿದ್ದು ದಿನಾಂಕ:23.8.2004ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ.

1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ 11ನೇ ನಿಯಮದಡಿ ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಇವರಿಗೆ ದೋಷಾರೋಪಣೆಗಳನ್ನು, ದುರ್ನಡತೆಯ ಮತ್ತು ದುರ್ವರ್ತನೆಯ ಆರೋಪದ ವಿವರಣಾ ಹೇಳಿಕೆಯನ್ನು ಆರೋಪಗಳನ್ನು ಸಮರ್ಥಿಸುವ ದಾಖಲೆಗಳು ಮತ್ತು ಸಾಕ್ಷಿಗಳ ಪಟ್ಟಿಯನ್ನು ಅನುಬಂಧ–1 ರಿಂದ 4ರಲ್ಲಿ ಮೇಲೆ (2)ರಲ್ಲಿ ಓದಲಾದ ನೋಟೀಸ್ ನೊಂದಿಗೆ ಹೊರಡಿಸಲಾಗಿತ್ತು.

ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರು ಮೇಲೆ (3)ರಲ್ಲಿ ಓದಲಾದ ತಮ್ಮ ಲಿಖಿತ ಪ್ರತಿಪಾದನಾ ಹೇಳಿಕೆಯನ್ನು ಸಲ್ಲಿಸಿ, ದಿನಾಂಕ:23.8.2004 ರಿಂದಲೇ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ.

ಮೇಲೆ (4)ರಲ್ಲಿ ಓದಲಾ ಸರ್ಕಾರಿ ಆದೇಶದಲ್ಲಿ ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ನಿರಂತರ ಅನಧಿಕೃತ ಗೈರುಹಾಜರಿ ನಡತೆಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತಿನಲ್ಲಿಡಲಾಗಿತ್ತು.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಡಾ: ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರಿಗೆ ಸಂಬಂಧಿಸಿದಂತೆ ಮಾತ್ರ ಅಮಾನತ್ ಆದೇಶವನ್ನು ಹಿಂದಕ್ಕೆ ಪಡೆದು ದಿನಾಂಕ:23.8.2004ರಿಂದ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಆಕುಕ 18 ಎಂಸಿಎಲ್ 2005, ಬೆಂಗಳೂರು, ದಿನಾಂಕ:30ನೇ ಜೂನ್, 2009

ಕರ್ನಾಟಕ ನಾಗರೀಕ ಸೇವಾ ನಿಯಮಗಳ (ಸಿಸಿಎ) ನಿಯಮಗಳು 1957ರ ನಿಯಮ 10(5)ರ ಪ್ರಕಾರ ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಅಮಾನತ್ತಿನಲ್ಲಿಟ್ಟಿದ್ದ ಸರ್ಕಾರಿ ಆದೇಶ ಸಂಖ್ಯೆ ಆಕುಕ 45 ಕೆವಿಎಂ 2008 ದಿನಾಂಕ:30.8.2008ನ್ನು ಅವರಿಗೆ ಸಂಬಂಧಿಸಿದಂತೆ ಮಾತ್ರ ಹಿಂದಕ್ಕೆ ಪಡೆಯಲಾಗಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮ 252ರ ಪ್ರಕಾರ ಡಾ:ಎ.ಎಸ್. ದಿನೇಶ್, ಉಪನ್ಯಾಸಕರು, ಅರವಳಿಕೆ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ರಾಜೀನಾಮೆಯನ್ನು ಅವರು ಅನಧಿಕೃತ ಗೈರುಹಾಜರಾದ ದಿನಾಂಕ:23.8.2004 ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1717

ಎ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ವಿಷಯ : ಡಾ: ಟಿ.ಜಿ. ಮಂಜುನಾಥ್, ಉಪನ್ಯಾಸಕರು, ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ಡಾ:ನಂದಕಿಶೋರ್, ಉಪನ್ಯಾಸಕರು, ವೈದ್ಯ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಅನಧಿಕೃತ ಗೈರುಹಾಜರಿ ಶಿಸ್ತು-ಕ್ರಮ ಕುರಿತು.

ಓದಲಾಗಿದೆ :
1. ಪತ್ರ ಸಂಖ್ಯೆ : ವಶ್ರೇಅ(3)/20/2005-06, ದಿನಾಂಕ :15.2.2006.
2. ಸಂಖ್ಯೆ :ಆಕುಕ 18 ಎಂಸಿಎಲ್ 2005, ದಿನಾಂಕ :6.4.2006ರ ನೋಟೀಸು.
3. ಸಂಖ್ಯೆ :ಆಕುಕ 18 ಎಂಸಿಎಲ್ 2005, ದಿನಾಂಕ :6.4.2006ರ ನೋಟೀಸು
4. ವಿಜಯ ಕರ್ನಾಟಕ ಪತ್ರಿಕೆ-ದಿನಾಂಕ :11.8.2008.
5. ಸರ್ಕಾರದ ಆದೇಶ ಸಂಖ್ಯೆ :ಆಕುಕ 45 ಕೆವಿಎಂ 2008, ದಿನಾಂಕ :30.8.2008.

ಪ್ರಸ್ತಾವನೆ:

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಮೇಲೆ (1)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಡಾ:ಟಿ.ಜಿ. ಮಂಜುನಾಥ್ ಉಪನ್ಯಾಸಕರು, ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಬೆಂಗಳೂರು ಹಾಗೂ ಡಾ:ನಂದಕಿಶೋರ್, ಉಪನ್ಯಾಸಕರು, ವೈದ್ಯ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇವರ ಅನಧಿಕೃತ ಗೈರುಹಾಜರಾತಿ ಬಗ್ಗೆ ಕರಡು ದೋಷಾರೋಪಣ ಪಟ್ಟಿಯನ್ನು ಸಂಬಂಧಿಸಿದ ದಾಖಲೆಗಳ ಪ್ರತಿಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದರು.

ಡಾ: ಟಿ.ಜಿ. ಮಂಜುನಾಥ್, ಉಪನ್ಯಾಸಕರು, ಜನರಲ್ ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇವರು ದಿನಾಂಕ:1.8.2000ರಿಂದ ಅನಧಿಕೃತ ಗೈರುಹಾಜರಾತಿ ಬಗ್ಗೆ ಮೇಲೆ (2)ರಲ್ಲಿ ಓದಲಾದ ದೋಷಾರೋಪಣಾಪಟ್ಟಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಹೊರಡಿಸಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಡಾ: ನಂದಕಿಶೋರ್, ಉಪನ್ಯಾಸಕರು, ವೈದ್ಯ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇವರು ದಿನಾಂಕ:15.3.2005ರಿಂದ ಕರ್ತವ್ಯಕ್ಕೆ ಗೈರು ಹಾಜರಾತಿ ಬಗ್ಗೆ ಅವರಿಗೆ ಮೇಲೆ (3)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸ್‌ನೊಂದಿಗೆ ದೋಷಾರೋಪಣಾಪಟ್ಟಿಯನ್ನು ಹೊರಡಿಸಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಡಾ: ಟಿ.ಜಿ. ಮಂಜುನಾಥ್, ಉಪನ್ಯಾಸಕರು ಮತ್ತು ಡಾ: ನಂದಕಿಶೋರ್ ಉಪನ್ಯಾಸಕರು, ಇವರಿಗೆ ನೊಂದಾಯಿತ ಅಂಚೆ ಮೂಲಕ ಹೊರಡಿಸಿದ ನೋಟೀಸ್‌ಗಳು ಜಾರಿಯಾಗದೆ ಹಿಂತಿರುಗಿ ಬಂದಿದ್ದವು.

ಡಾ: ಟಿ.ಜಿ. ಮಂಜುನಾಥ್, ಉಪನ್ಯಾಸಕರು ಮತ್ತು ಡಾ:ನಂದಕಿಶೋರ್, ಉಪನ್ಯಾಸಕರು ಇವರ ಅನಧಿಕೃತ ಗೈರುಹಾಜರಿ ಬಗ್ಗೆ ಕ್ರಮಸಂಖ್ಯೆ(4)ರಲ್ಲಿ ಓದಲಾದ ದಿನ ಪತ್ರಿಕೆಯಲ್ಲಿ ಪ್ರಕಟಣೆ ನೀಡಲಾಗಿತ್ತು. ಅದಾಗ್ಯೂ, ಅವರಿಂದ ಪ್ರತಿಕ್ರಿಯೆ ಇರುವುದಿಲ್ಲ.

ಏತನ್ಮಧ್ಯೆ, ಮೇಲೆ (5)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಡಾ:ಟಿ.ಜಿ. ಮಂಜುನಾಥ್, ಉಪನ್ಯಾಸಕರು, ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ಡಾ:ನಂದಕಿಶೋರ್, ಉಪನ್ಯಾಸಕರು, ವೈದ್ಯ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ನಿರಂತರ ಅನಧಿಕೃತ ಗೈರುಹಾಜರಿ ದುರ್ನಡತೆಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತಿನಲ್ಲಿಡಲಾಗಿದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಆಪಾದಿತ ಸರ್ಕಾರಿ ಅಧಿಕಾರಿಗಳಾದ ಡಾ:ಟಿ.ಜಿ. ಮಂಜುನಾಥ್, ಉಪನ್ಯಾಸಕರು ಮತ್ತು ಡಾ:ನಂದಕಿಶೋರ್ ಉಪನ್ಯಾಸಕರು ಬೆಂಗಳೂರು ವೈದ್ಯಕೀಯ ಕಾಲೇಜು ಸೇವೆಯಿಂದ ವಜಾ ಮಾಡಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಆಕುಕ 18 ಎಂಸಿಎಲ್ 2005, ಬೆಂಗಳೂರು, ದಿನಾಂಕ:30ನೇ ಜೂನ್, 2009

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಪ್ರಕಾರ ಅದೇ ನಿಯಮಗಳ ನಿಯಮ 8 (VIII) ರನ್ವಯ ಡಾ:ಟಿ.ಜಿ. ಮಂಜುನಾಥ್, ಉಪನ್ಯಾಸಕರು, ಜನರಲ್ ಸರ್ಜರಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು ಹಾಗೂ ಡಾ: ನಂದಕಿಶೋರ್, ಉಪನ್ಯಾಸಕರು, ವೈದ್ಯ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು ಇವರ ಮೇಲೆ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1718

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2009–10ನೇ ಸಾಲಿಗೆ ಕಿಯೋನಿಕ್ಸ್ ಸಂಸ್ಥೆಗೆ ಹುಬ್ಬಳ್ಳಿಯ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ :ಮಾತಂಇ 30 ಆಡವಿ 2009 ದಿನಾಂಕ :12.5.09.
2. ನಿರ್ದೇಶಕರು [ಆಪರೇಷನ್] ಕಿಯೋನಿಕ್ಸ್ ರವರ ಪತ್ರ ಸಂ,KSEDC/INFRA/ITPH/01/09-10 ದಿನಾಂಕ :9.6.2009.
3. ನಿರ್ದೇಶಕರು, ಮಾತಂ ಮತ್ತು ಜೈತಂ ನಿರ್ದೇಶನಾಲಯ ಇವರ ಪತ್ರ ಸಂ :ಮಾತಂನಿ/ಲೆಕ್ಕ–2/ ಕಿಯೋನಿಕ್ಸ್/ ಐಟಿ ಪಾರ್ಕ್/09–10/214, ದಿನಾಂಕ :25.6.2009.
4. ಸರ್ಕಾರದ ಆದೇಶ ಸಂಖ್ಯೆ :ಆಕುಕ 45 ಕೆವಿಎಂ 2008, ದಿನಾಂಕ :30.8.2008.

ಪ್ರಸ್ತಾವನೆ:

2009–10 ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451–00–090–2–01 ಮಾಹಿತಿ ತಂತ್ರಜ್ಞಾನ–ಉನ್ನತೀಕರಣ ಮತ್ತು ಅಭಿವೃದ್ಧಿ 059 ಇತರೆ ಖರ್ಚು [ಯೋಜನೆ] ರಡಿಯಲ್ಲಿ ರೂ. 920.00 ಲಕ್ಷಗಳ ಅನುದಾನವು ಒದಗಣೆಯಾಗಿದ್ದು, ಅದರಲ್ಲಿ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಕಿಯೋನಿಕ್ಸ್ ಸಂಸ್ಥೆಗೆ ರೂ. 30.00 ಲಕ್ಷ [ರೂ. ಮೂವತ್ತು ಲಕ್ಷಗಳು ಮಾತ್ರ]ಗಳ ಅನುದಾನವನ್ನು ಮೇಲೆ [1]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

ನಿರ್ದೇಶಕರು ಮಾತಂ ಮತ್ತು ಜೈತಂ ನಿರ್ದೇಶನಾಲಯ ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ:25.6.2009ರ ಪತ್ರದಲ್ಲಿ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ಮೇಲೆ [1] ರಲ್ಲಿನ ಸರ್ಕಾರಿ ಆದೇಶದಲ್ಲಿ ಹಂಚಿಕೆಯಾಗಿರುವ ರೂ. 30.00 ಲಕ್ಷಗಳ ಅನುದಾನವನ್ನು ಉಲ್ಲೇಖ (2)ರಲ್ಲಿ ಕಿಯೋನಿಕ್ಸ್ ಸಂಸ್ಥೆಯವರು ಪ್ರಸ್ತಾಪಿಸಿರುವಂತೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕಿಯೋನಿಕ್ಸ್ ಸಂಸ್ಥೆಗೆ ರೂ. 30.00 ಲಕ್ಷ [ರೂ., ಮುವ್ವತ್ತು ಲಕ್ಷಗಳು ಮಾತ್ರ] ಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಮಾತಂಇ 43 ಅಡವಿ 2009, ಬೆಂಗಳೂರು, ದಿನಾಂಕ:13ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2009–10ನೇ ಸಾಲಿಗೆ ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ವಹಣೆಗಾಗಿ ರೂ. 30.00 ಲಕ್ಷಗಳ (ಮುವ್ವತ್ತು ಲಕ್ಷ ರೂ.ಗಳು ಮಾತ್ರ]ಅನುದಾನವನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ [ಕಿಯೋನಿಕ್ಸ್] ಸಂಸ್ಥೆಗೆ ನೀಡುವ ಸಲುವಾಗಿ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಸೆಳೆದು [ಡ್ರಾ ಮಾಡಿ] ವಿತರಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ '3451–00–090–2–01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ–059–ಇತರೆ ಖರ್ಚು (ಯೋಜನೆ)– ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ನಿರ್ದೇಶಕರು [ನಿರ್ವಹಣೆ] ರವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶಗಳ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ:16.5.08 ಇದರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1725

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಉನ್ನತಶಿಕ್ಷಣ ಸಚಿವಾಲಯ

ವಿಷಯ : 2009–10ನೇ ಸಾಲಿನಲ್ಲಿ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿ ಚಿಕ್ಕಳುವಾರ ಗ್ರಾಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪಿಸಲು ಅನುದಾನ ಒದಗಿಸುವ ಬಗ್ಗೆ.,

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ :ಇಡಿ 77 ಯೋಯೋಕ 2009 ಬೆಂಗಳೂರು ದಿನಾಂಕ :16.4.2009 (ಇಡಿ 57ಎ ಸ್ಕೀಮರ (ಯುನಿಕ್) 2009 ದಿನಾಂಕ :16.4.2009.
2. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ ರವರ ಪತ್ರ ಸಂಖ್ಯೆ :ಮವಿ:ಹವಿ/ ಹ17/ ಅಭಿವೃದ್ಧಿ ಅನುದಾನ/2009–10 ದಿನಾಂಕ :30.5.2009.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2009–10ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಲೆಕ್ಕಶೀರ್ಷಿಕೆ "2202–03–1–2–0–05–101 ಅಡಿಯಲ್ಲಿ ರೂ. 170.00 ಲಕ್ಷಗಳನ್ನು ಮಂಜೂರು ಮಾಡಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ, 2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು ಕುಶಾಲನಗರ ಹೋಬಳಿಯ ಚಿಕ್ಕಳುವಾರು ಗ್ರಾಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಲು ರೂ. 2.00 ಕೋಟಿ ಸೇರಿದಂತೆ ಒಟ್ಟು ರೂ. 370.00 ಲಕ್ಷಗಳಿಗೆ ಕ್ರಿಯಾಯೋಜನೆ ತಯಾರಿಸಿ, ಮೊದಲ ತ್ರೈಮಾಸಿಕ ಕಂತಿನ ಅನುದಾನ ರೂ. 92.50 ಲಕ್ಷಗಳನ್ನು ಬಿಡುಗಡೆಗೊಳಿಸುವಂತೆ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಇಡಿ 52 ಯುಡಿವಿ 2009, ಬೆಂಗಳೂರು, ದಿನಾಂಕ:20ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ 2009–10ನೇ ಸಾಲಿಗೆ ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಕುಶಾಲನಗರ ಹೋಬಳಿ ಚಿಕ್ಕಳುವಾರ ಗ್ರಾಮದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಲು ಆಯವ್ಯಯವಲ್ಲಿ ನಿಗಧಿಪಡಿಸಿರುವ ರೂ 200.00 ಲಕ್ಷಗಳಲ್ಲಿ (ಇನ್ನೂರು ಲಕ್ಷಗಳು) ಮೊದಲ ತ್ರೈಮಾಸಿಕ ಕಂತಾಗಿ ರೂ. 50.00 ಲಕ್ಷಗಳನ್ನು (ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲಾಗಿದೆ.

ವೆಚ್ಚ ಮಾಡುವ ಮುನ್ನ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅಧಿಕಾರಿಗಳು ಈ ಹಿಂದಿನ ಸಾಲಿನ ಆದೇಶದಲ್ಲಿ ತಿಳಿಸಿದಂತೆ ಎಲ್ಲಾ ನಿಯಮಗಳನ್ನು ಪಾಲಿಸಲು ಸೂಚಿಸಿದೆ.

ಸದರಿ ವೆಚ್ಚವನ್ನು ಲೆಕ್ಕಶೀರ್ಷಿಕೆ "2202–03–102–0–05–101 ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 937 ವೆಚ್ಚ–8/09 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1761

ಎಸ್.ಎಂ. ನಂದಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಉನ್ನತ ಶಿಕ್ಷಣ ಇಲಾಖೆ (ಯೋಜನೆ)

ಶಿಕ್ಷಣ ಸಚಿವಾಲಯ

ವಿಷಯ : ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡರವರಿಗೆ ಕಛೇರಿ ಕೆಲಸಗಳಿಗಾಗಿ ವಾಹನವನ್ನು ಖರೀದಿಸಲು ಅನುಮತಿ ನೀಡುವ ಕುರಿತು.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ :ಇಡಿ 76 ಯೋಯೋಕ 2009, ಬೆಂಗಳೂರು, ದಿನಾಂಕ :28.4.2009.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ಪತ್ರ ಸಂಖ್ಯೆ :ಎ1/ಲೆ.ಪ./ವಾಹನಖರೀದಿ/2007-08, ದಿನಾಂಕ :11.6.2009.

ಪ್ರಸ್ತಾವನೆ:

1. ಮೇಲೆ ಓದಲಾದ (1) ಸರ್ಕಾರದ ಆದೇಶದಲ್ಲಿ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇಲ್ಲಿಗೆ 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202-02-001-0-06-041, 195 ಮತ್ತು 059 (ಯೋಜನೆ)ರಡಿ ಒಟ್ಟು 40.00 ಲಕ್ಷರೂಗಳನ್ನು ಒದಗಿಸಲಾಗಿದೆ. ಅದರಲ್ಲಿ ಸಾರಿಗೆ ವೆಚ್ಚಗಳಿಗಾಗಿ 10.00 ಲಕ್ಷರೂಪಾಯಿಗಳನ್ನು ಒದಗಿಸಿದೆ.
2. ಮೇಲೆ ಓದಲಾದ (2)ರ ಪತ್ರದಲ್ಲಿ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಪರ ಆಯುಕ್ತರು, ನಿರ್ದೇಶಕರು ಮತ್ತು ಸಹ ನಿರ್ದೇಶಕರು (ಆಡಳಿತ) ಇವರುಗಳಿಗೆ ಕಛೇರಿ ಆಡಳಿತಾತ್ಮಕ ಉಪಯೋಗಕ್ಕಾಗಿ ಸ್ವಂತ ವಾಹನಗಳು ಇಲ್ಲದಿರುವುದರಿಂದ ಮೂರು ವಾಹನಗಳನ್ನು ಸರ್ಕಾರದ ಆದೇಶದಂತೆ ಖಾಸಗಿ ಏಜೆನ್ಸಿಯವರುಗಳಿಂದ ಬಾಡಿಗೆಗೆ ಪಡೆಯುತ್ತಿದ್ದು, ಅನೇಕ ತೊಂದರೆಗಳಿಂದಾಗಿ, ಕನಿಷ್ಠ ಅಪರ ಆಯುಕ್ತರಿಗಾಗಿ ಒಂದು ವಾಹನವನ್ನು 6.25 ಲಕ್ಷರೂ.ಗಳಲ್ಲಿ ಖರೀದಿಸಲು ಸರ್ಕಾರದ ಅನುಮತಿ ನೀಡುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ :ಇಡಿ 143 ಯೋಯೋಕ 2009, ಬೆಂಗಳೂರು, ದಿನಾಂಕ :17ನೇ ಜುಲೈ, 2009

[ಇಡಿ :90 :ಸ್ಪೀಮರ (ಯುನಿಕ್) 2009, ದಿನಾಂಕ :17.7.2009]

3. 2009-10ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202-02-001-06-195 (ಯೋಜನೆ) ಅಡಿ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡರವರಿಗೆ ಸಾರಿಗೆ ವೆಚ್ಚಕ್ಕಾಗಿ ಒದಗಿಸಲಾಗಿರುವ 10.00 ಲಕ್ಷರೂ.ಗಳಲ್ಲಿ (ಹತ್ತು ಲಕ್ಷರೂಪಾಯಿಗಳು ಮಾತ್ರ) 5.00 ಲಕ್ಷರೂ.ಗಳ (ಐದುಲಕ್ಷರೂಪಾಯಿಗಳು ಮಾತ್ರ) ಮಿತಿಯೊಳಗೆ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರಿಗೆ ಕಛೇರಿ ಉಪಯೋಗಕ್ಕಾಗಿ ಒಂದು ಸ್ವಂತ ವಾಹನವನ್ನು, ಖರೀದಿಗಳಿಗೆ ಸಂಬಂಧಿಸಿದ ಪ್ರಚಲಿತವಿರುವ ಎಲ್ಲಾ ನಿಯಮಗಳನ್ನು ಪಾಲಿಸುವ ಷರತ್ತನ್ನು ವಿಧಿಸಿ ಖರೀದಿಸಲು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರಿಗೆ ಅನುಮತಿ ನೀಡಿದೆ.
4. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ :ಆಇ 930 ವೆಚ್ಚ 8/09, ದಿನಾಂಕ :3.7.2009ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1762

ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 2009-10ನೇ ಸಾಲಿಗೆ ಡಿಆರ್‌ಡಿಎ ಆಡಳಿತ ಯೋಜನೆಯ ರಾಜ್ಯದ ಪಾಲಿನ ಒಂದನೇ ಕಂತಿನ ಅನುದಾನವನ್ನು ರಾಮನಗರ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ :ಆರ್-18014 :03 :2009-10-ಡಿಆರ್‌ಡಿಎ (ಎಸ್‌ಆರ್ ನಂ. 10) ದಿನಾಂಕ :13.4.2009.
2. ರಾಜ್ಯ ಸರ್ಕಾರದ ಆದೇಶ ಗ್ರಾಅಪ 1 ಎಸ್‌ಜೆವೈ (ಡಿಆರ್ ಡಿಎ) 2009, ಬೆಂಗಳೂರು, ದಿನಾಂಕ:20.5.2009.
3. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ :ಆರ್-17014 :10 :2009-10-ಡಿಆರ್‌ಡಿಎ (ಎಸ್‌ಆರ್ ನಂ. 32) ದಿನಾಂಕ :19.6.2009

ಪ್ರಸ್ತಾವನೆ:

2009–10ನೇ ಸಾಲಿನಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಡಿಆರ್‌ಡಿಎ ಆಡಳಿತ ಯೋಜನೆಗೆ ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಭಾಗಶಃ ಅನುದಾನ ರೂ. 3,98,75,000 ಗಳನ್ನು ಚಿಕ್ಕಬಳ್ಳಾಪುರ, ರಾಮನಗರ ಮತ್ತು ರಾಯಚೂರು ಜಿಲ್ಲಾ ಪಂಚಾಯತಿಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲಾ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ಉಲ್ಲೇಖಿತ (2)ರ ಆದೇಶದಲ್ಲಿ ಮೊದಲನೇ ಕಂತಿನ ಅನುದಾನ ರೂ. 1,32,92,000 ಬಿಡುಗಡೆ ಮಾಡಲಾಗಿತ್ತು. ಕೇಂದ್ರ ಸರ್ಕಾರ ಉಲ್ಲೇಖಿತ (3)ರ ಆದೇಶದಲ್ಲಿ ರಾಮನಗರ ಜಿಲ್ಲಾ ಪಂಚಾಯತಿಗೆ ರೂ. 13,51,000 ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ರಾಮನಗರ ಜಿಲ್ಲಾ ಪಂಚಾಯಿತಿಗೆ ರೂ. 4,50,000ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 1 ಎಸ್‌ಜಿವೈ (ಡಿಆರ್‌ಡಿಎ) 2009, ಬೆಂಗಳೂರು, ದಿನಾಂಕ:15ನೇ ಜುಲೈ, 2009

ರಾಜ್ಯ ಸರ್ಕಾರವು, ಡಿಆರ್‌ಡಿಎ ಆಡಳಿತ ಯೋಜನೆಯಡಿ ರಾಮನಗರ ಜಿಲ್ಲಾಪಂಚಾಯತಿಗೆ ಮೊದಲನೇ ಕಂತಿನ ಅನುದಾನ ರೂ. 4,50,000ಗಳನ್ನು (ರೂ. ನಾಲ್ಕು ಲಕ್ಷದ ಐವತ್ತು ಸಾವಿರ ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಕ್ರ. ಸಂ	ಜಿಲ್ಲಾ ಪಂಚಾಯತಿ	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರಸರ್ಕಾರ ಬಿಡುಗಡೆ ಮಾಡಿದ ಮೊದಲನೇ ಕಂತಿನ ಭಾಗಶಃ ಅನುದಾನ	ರಾಜ್ಯಸರ್ಕಾರವು ಬಿಡುಗಡೆ ಮಾಡುತ್ತಿರುವ ಮೊದಲನೇ ಕಂತಿನ ಅನುದಾನ
1	ರಾಮನಗರ	452	0400ZZ0001	13,51,000	4,50,000

ಷರತ್ತುಗಳು:

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಪಂಚಾಯಿತಿಗಳ ಅನುದಾನವನ್ನು ಜಿಲ್ಲಾ ಪಂಚಾಯಿತಿಗಳ ಸಿಬ್ಬಂದಿಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ನಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

ಅನುದಾನದ ಮಾದರಿಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 75:25 ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00–196–ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ –6–ಜಿಲ್ಲಾ ಪಂಚಾಯುತ್ –06–ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ–(ಕೇಂದ್ರ ಪುರಸ್ಕೃತ ಯೋಜನೆ) 2009–2010 (2515–00–196–6–06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆಎಫ್ ಡಿ 1 ಜಡ್‌ಪಿಎ 2007 (ಪಿ2) ದಿನಾಂಕ:26.4.2007 ರನ್ವಯ ಜಿಲ್ಲಾ ಪಂಚಾಯ್ತಿ ನಿಧಿ–1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದ ಆಂತರಿಕ ಲೆಕ್ಕ ಪರಿಶೋದನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಮನಗರ ಇವರು ಆಯಾ ತಿಂಗಳ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ನಿರ್ದೇಶಕರು [ಸ್ವ ಉಕಾ] ಹಾಗೂ ಪದ ನಿಮಿತ್ತ, ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಮುಖ್ಯ ಲೆಕ್ಕಾಧಿಕಾರಿಗಳ, ಜಿಲ್ಲಾ ಪಂಚಾಯುತ್, ರಾಮನಗರ ಇವರು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ನಿರ್ದೇಶಕರು [ಸ್ವ ಉಕಾ] ಹಾಗೂ ಪದ ನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರ ಇವರ ಸಹಮತಿ ಸಂಖ್ಯೆ:ಗ್ರಾಅಪ 194 ಪಿಬಿಎಸ್ 2009 ದಿನಾಂಕ:4.7.2009ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1764

ಡಾ:ಶಮ್ಲಾ ಇಕ್ಬಾಲ್

ನಿರ್ದೇಶಕರು (ಸ್ವ.ಉ.ಕಾ) ಹಾಗೂ ಪ.ನಿ.

ಸರ್ಕಾರದ ಉಪ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖೆಯಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸೃಜಿಸಲಾಗಿರುವ ಬಾಲ ಕಾರ್ಮಿಕರ ಕೋಶವನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ :ಸಿಆಸುಇ 100 ಸಸಿವಿ 1997, ದಿನಾಂಕ :17.6.1997.

2. ಸರ್ಕಾರಿ ಆದೇಶ ಸಂಖ್ಯೆ :ಸಿಆಸುಇ 19 ಸಸಿವಿ 2004, ದಿನಾಂಕ :19.11.2004.

3. ಸರ್ಕಾರಿ ಆದೇಶ ಸಂಖ್ಯೆ :ಸಿಆಸುಇ 570 ಸಅಸೇ 2008, ದಿನಾಂಕ :7.7.2008.

4. ಕಾರ್ಮಿಕ ಇಲಾಖೆಯ ಕಡತ ಸಂಖ್ಯೆ :ಕಾಇ 46 ಸಿಎಲ್‌ಸಿ 2009.

ಪ್ರಸ್ತಾವನೆ:

ಮೇಲೆ (1) ಮತ್ತು (2)ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಬಾಲಕಾರ್ಮಿಕರ ಕಲ್ಯಾಣಕ್ಕಾಗಿ ಬಾಲ ಕಾರ್ಮಿಕ ಕೋಶವನ್ನು ಸೃಜಿಸಿ ಕಾಲಕಾಲಕ್ಕೆ ಮುಂದುವರಿಸಲಾಗಿದೆ ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಕೆಳಕಂಡ ಹುದ್ದೆಗಳನ್ನು ದಿನಾಂಕ:18.6.2008 ರಿಂದ ಒಂದು ವರ್ಷದ ಅವಧಿಗೆ ಮುಂದುವರಿಸಲಾಗಿದೆ.

ಕ್ರ ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
2	ಉಪ ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
3	ಸಹಾಯಕರು	2 ಹುದ್ದೆಗಳು
4	ಶೀಘ್ರಲಿಪಿಗಾರರು	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ಗ್ರೂಪ್–ಡಿ	1 ಹುದ್ದೆ

ಮೇಲೆ (4) ರಲ್ಲಿ ಓದಲಾದ ಕಾರ್ಮಿಕ ಇಲಾಖೆಯ ಕಡತದಲ್ಲಿ ಒಂದು ವರ್ಷದ ಅವಧಿಗೆ ಬಾಲ ಕಾರ್ಮಿಕ ಕೋಶವನ್ನು ಮೇಲೆ ತಿಳಿಸಿರುವ ಹುದ್ದೆಗಳೊಂದಿಗೆ ಮುಂದುವರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 343 ಸಅಸೇ 2009, ಬೆಂಗಳೂರು, ದಿನಾಂಕ:10ನೇ ಜುಲೈ, 2009

ಕರ್ನಾಟಕ ಸರ್ಕಾರದ ಸಚಿವಾಲಯದ ಕಾರ್ಮಿಕ ಇಲಾಖೆಯಲ್ಲಿ ಸೃಜಿಸಲಾಗಿರುವ ಬಾಲ ಕಾರ್ಮಿಕ ಕೋಶವನ್ನು ಈ ಕೆಳಕಂಡ ಹುದ್ದೆಗಳೊಂದಿಗೆ ದಿನಾಂಕ:18.6.2009 ರಿಂದ ಜಾರಿಗೆ ಬರುವಂತೆ ಮತ್ತೆ ಒಂದು ವರ್ಷ ಅವಧಿಗೆ ತಾತ್ಕಾಲಿಕವಾಗಿ ಮುಂದುವರಿಸಿ ಆದೇಶಿಸಿದೆ.

ಕ್ರ ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
2	ಉಪ ವಿಶೇಷಾಧಿಕಾರಿ (ವೇತನ ಶ್ರೇಣಿ ರಹಿತ ಹುದ್ದೆ)	1 ಹುದ್ದೆ
3	ಸಹಾಯಕರು	2 ಹುದ್ದೆಗಳು
4	ಶೀಘ್ರಲಿಪಿಗಾರರು	1 ಹುದ್ದೆ
5	ವಾಹನ ಚಾಲಕರು	1 ಹುದ್ದೆ
6	ಗ್ರೂಪ್–ಡಿ	1 ಹುದ್ದೆ

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಎಫ್ ಡಿ 1 ಟಿಎಫ್‌ಪಿ 96, ದಿನಾಂಕ:10.7.1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಆರ್ಥಿಕ ಇಲಾಖೆ ಸಹಮತಿ ನೀಡಿದೆ ಎಂದು ಪರಿಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1766

ಎಂ.ಎಸ್. ಶಿವರಾಮ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವೆಗಳು–3)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : 2009–10ನೇ ಸಾಲಿಗೆ ರಾಜ್ಯದಲ್ಲಿರುವ ವಿವಿಧ ನ್ಯಾಯವಾದಿಗಳ ಸಂಘಗಳಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಬಗ್ಗೆ ಆದೇಶ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ :ಲಾ 32 ಎಲ್ ಸಿಎಲ್ 1982 ದಿನಾಂಕ :17/18.3.1983 ಮತ್ತು ತಿದ್ದುಪಡಿ ದಿನಾಂಕ :30.10.1996ರ ಅಧಿಸೂಚನೆ ಸಂಖ್ಯೆ :ಲಾ 112 ಎಲ್‌ಸಿಎಲ್ 1996.

2. ನಿಯಮಗಳ ತಿದ್ದುಪಡಿ ಅಧಿಸೂಚನೆ ಸಂಖ್ಯೆ :ಲಾ 120 ಎಲ್‌ಸಿಎಲ್ 2007 ದಿನಾಂಕ :18.2.2008 ಮತ್ತು ಸೇರ್ಪಡೆ ದಿನಾಂಕ :16.5.2008.

ಪ್ರಸ್ತಾವನೆ:

ರಾಜ್ಯದಲ್ಲಿರುವ ವಿವಿಧ ವಕೀಲರುಗಳ ಸಂಘಗಳಿಗೆ ಕಾನೂನು ಪುಸ್ತಕ ಮತ್ತು ಪೀಠೋಪಕರಣಗಳನ್ನು ಖರೀದಿಸಲು ದಿ ಕರ್ನಾಟಕ ಗ್ರಾಂಟ್–ಇನ್–ಏಡ್–ಟು–ಬಾರ್ ಅಸೋಸಿಯೇಷನ್ ರೂಲ್ಸ್ 1983 ನ್ನು ಮೇಲೆ ಓದಲಾದ ಕ್ರಮಾಂಕ (1)ರ ದಿನಾಂಕ:17/18–03–1983ರಲ್ಲಿ ರಚಿಸಲಾಗಿದೆ ಮತ್ತು ಇದಕ್ಕೆ ಹಂತ ಹಂತವಾಗಿ ತಿದ್ದುಪಡಿ ತರಲಾಗಿದ್ದು, ದಿನಾಂಕ:30.10.1996ರ ಅಧಿಸೂಚನೆಯಲ್ಲಿ ಆಯಾ ಜಿಲ್ಲೆಯ ಪ್ರಧಾನ/ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಅಧಿಸೂಚನೆ ದಿನಾಂಕ:18.2.2008 ಮತ್ತು ಸೇರ್ಪಡೆ ದಿನಾಂಕ:16.5.2008ರಲ್ಲಿ ಸಹಾಯಾನುದಾನದ ಮೊತ್ತವನ್ನು ಹೆಚ್ಚಿಸಿ ಕರ್ನಾಟಕ ವಕೀಲರ ಸಂಘಗಳಿಗೆ ಸಹಾಯಾನುದಾನ (ತಿದ್ದುಪಡಿ) ನಿಯಮಗಳು (2007) ರಚಿಸಲಾಗಿದ್ದು, ದಿನಾಂಕ:18.2.2008ರಿಂದ ಜಾರಿಗೆ ಬಂದಿದೆ. ಅದರಂತೆ ಹಣ ಬಿಡುಗಡೆಗಾಗಿ ರಾಜ್ಯದಲ್ಲಿನ ವಿವಿಧ ವಕೀಲರ ಸಂಘಗಳು ಸಹಾಯಾನುದಾನ ಬಿಡುಗಡೆಗಾಗಿ ಒತ್ತಾಯಿಸಿದೆ.

2009–10ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2014–00–105–0–01–051 ಸಾಮಾನ್ಯ ವೆಚ್ಚ (ಯೋಜನೇತರ) ಅಡಿಯಲ್ಲಿ ರೂ. 241.28 ಲಕ್ಷಗಳನ್ನು ಒದಗಿಸಿದೆ. ಅದರಲ್ಲಿ ರೂ. 50.00 ಲಕ್ಷಗಳನ್ನು ವಕೀಲರ ಸಂಘಗಳಿಗೆ ನಿಗಧಿಪಡಿಸಿ ಸದರಿ ಮೊತ್ತದಲ್ಲಿ ವಿವಿಧ ವಕೀಲರ ಸಂಘಗಳಿಗೆ ನಿಯಮಾನುಸಾರ ಸಹಾಯಾನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ತಿಳಿಸಿದೆ.

ಸರ್ಕಾರದ ಆದೇಶ ಸಂ. ಲಾ 84 ಎಲ್‌ಸಿಎಲ್ 2009, ಬೆಂಗಳೂರು, ದಿನಾಂಕ:15ನೇ ಜುಲೈ, 2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕರ್ನಾಟಕ ವಕೀಲರ ಸಂಘಗಳಿಗೆ ಸಹಾಯಾನುದಾನ ನಿಯಮಗಳು 1983 ಹಾಗೂ ತಿದ್ದುಪಡಿ ನಿಯಮಗಳನ್ವಯ ರಾಜ್ಯದಲ್ಲಿರುವ ವಿವಿಧ ವಕೀಲರುಗಳ ಸಂಘಗಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವಂತೆ ಒಟ್ಟು ರೂ. 41,55,000/– (ರೂಪಾಯಿ ನಲವತ್ತೊಂದು ಲಕ್ಷದ ಐವತ್ತೈದು ಸಾವಿರ ಮಾತ್ರ) ಮೊತ್ತದ ಸಹಾಯಾನುದಾನಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಎಲ್ಲಾ ವಿಭಾಗೀಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಕೀಲರ ಸಂಘಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರಗಳು ಅಂದರೆ ಆಯಾ ಜಿಲ್ಲೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಸಹಾಯಾನುದಾನವನ್ನು ಆಯಾ ವಕೀಲರ ಸಂಘಗಳಿಂದ ವರದಿಯೊಂದಿಗೆ ಅರ್ಜಿಗಳನ್ನು ಪಡೆದು ಪರಿಶೀಲಿಸಿ ಈ ಕೆಳಗೆ ನಿಗಧಿಪಡಿಸಲಾಗಿರುವಂತೆ ಮಂಜೂರು ಮಾಡಬಹುದು ಮತ್ತು ಆರ್ಥಿಕ ಇಲಾಖೆಯು ಆಗಿಂದಾಗ್ಗೆ ಹೊರಡಿಸಿರುವ ಮಾರ್ಗಸೂಚಿಗಳ ಅನ್ವಯ ನಿಗಧಿತ ಕಾಲಮಿತಿಯೊಳಗೆ ಸಂಬಂಧಪಟ್ಟ ಖಜಾನೆಗಳಿಗೆ ಬಿಲ್‌ಗಳನ್ನು ಸಲ್ಲಿಸಿ ಹಣ ಪಡೆಯತಕ್ಕದ್ದು.

* ತಾಲ್ಲೂಕು ಮಟ್ಟದ ವಕೀಲರ ಸಂಘ	ರೂ. 20,000/–
* ಜಿಲ್ಲಾ ಮಟ್ಟದ ವಕೀಲರ ಸಂಘ	ರೂ. 35,000/–
* ವಿಭಾಗೀಯ ಮಟ್ಟದ ವಕೀಲರ ಸಂಘ	ರೂ. 50,000/–
* ಬೆಂಗಳೂರು ವಕೀಲರ ಸಂಘ	ರೂ. 1,25,000/–

ಹಿಂದಿನ ಸಾಲಿನಲ್ಲಿ ಸಹಾಯಾನುದಾನ ಪಡೆದಿದ್ದಾಗ್ಯೂ ಸಹಾಯಾನುದಾನ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸದೇ ಇರುವ ವಕೀಲರುಗಳ ಸಂಘಗಳಿಂದ ಉಪಯೋಗಿತ ಪ್ರಮಾಣಪತ್ರ ಪಡೆದು, ಪ್ರಸಕ್ತ ಸಾಲಿನ ಸಹಾಯಾನುದಾನ ಬಿಡುಗಡೆ ಮಾಡುವ ಷರತ್ತಿಗೆ ಈ ಆದೇಶ ಒಳಪಟ್ಟಿದೆ.

ಪ್ರಸಕ್ತ ಆರ್ಥಿಕ ವರ್ಷದ ನಂತರ ಆ ಸಾಲಿನ ಅನುದಾನ ಬಿಡುಗಡೆಗಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗದು. ಆರ್ಥಿಕ ವರ್ಷ ಮುಗಿದ ಕೂಡಲೇ ಈ ಉದ್ದೇಶಕ್ಕಾಗಿ ಸಕ್ಷಮ ಪ್ರಾಧಿಕಾರಿಗಳು ಬಿಡುಗಡೆ ಮಾಡಿದ ಮತ್ತು ಅದ್ಯರ್ಪಣೆ ಮಾಡಿದ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

ಈ ಸಹಾಯಾನುದಾನವನ್ನು ಲೆಕ್ಕ ಶೀರ್ಷಿಕೆ 2014–00–105–0–01–051 ಸಾಮಾನ್ಯ ವೆಚ್ಚಗಳು (ಯೋಜನೇತರ) ಅಡಿಯಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 322 ವೆಚ್ಚ–10/2009 ದಿನಾಂಕ:25.6.2009ರಲ್ಲಿ ನೀಡಲಾಗಿರುವ ಸಹಮತಿಯನ್ವಯ ಹಾಗೂ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿರುವ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ:10.7.1996ರ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಶಕುಂತಲ ಹೆಚ್.ಆರ್.

ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–2)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಆದೇಶ ಲಾ 84 ಎಲ್‌ಸಿಎಲ್ 2009, ದಿನಾಂಕ:15.07.2009

ಅನುಬಂಧ

ರಾಜ್ಯದಲ್ಲಿನ ವಿವಿಧ ಮಟ್ಟದ ವಕೀಲರ ಸಂಘಗಳಿಗೆ 2009–10ನೇ ಸಾಲಿಗೆ ಬಿಡುಗಡೆ ಮಾಡಬೇಕಾದ ಅನುದಾನದ ವಿವರಗಳು

ಕ್ರ.ಸಂ.	ಜಿಲ್ಲೆ ಹೆಸರು	ವಕೀಲರುಗಳ ಸಂಘಗಳ ಸಂಖ್ಯೆ		ಬಿಡುಗಡೆ ಗೊಳಿಸಬೇಕಾದ ಮೊತ್ತ
		ಜಿಲ್ಲಾ ಮಟ್ಟದ ವಿಭಾಗ ವಕೀಲರು ಸಂಘಗಳು	ತಾಲ್ಲೂಕು ಮಟ್ಟದ ವಕೀಲರ ಸಂಘಗಳು	
1	2	3	4	5
1	ಬೆಂಗಳೂರು ನಗರ ವಕೀಲರ ಸಂಘ	–	1(ಆನೇಕಲ್)	1,45,000–00
2	ಬೆಂಗಳೂರು (ಗ್ರಾಮಾಂತರ)	–	4	80,000–00
3	ರಾಮನಗರ ಜಿಲ್ಲೆ	1	3	95,000–00
4	ಕೋಲಾರ	1	6	1,55,000–00
5	ಚಿಕ್ಕಬಳ್ಳಾಪುರ	1	4	1,15,000–00
6	ತುಮಕೂರು	1	9	2,15,.000–00
7	ಮೈಸೂರು	1(ವಿ.ಮ)	6	1,70,000–00
8	ಚಾಮರಾಜನಗರ	1	3	95,000–00
9	ಮಂಡ್ಯ	1	6	1,55,000–00
10	ಹಾಸನ	1	7	1,75,000–00
11	ಶಿವಮೊಗ್ಗ	1	6	1,55,000–00
12	ಚಿಕ್ಕಮಗಳೂರು	1	6	1,55,000–00
13	ಚಿತ್ರದುರ್ಗ	1	5	1,35,000–00
14	ದಾವಣಗೆರೆ	1	5	1,35,000–00
15	ಬಳ್ಳಾರಿ	1	6	1,55,000–00
16	ಬೆಳಗಾಂ	1(ವಿ.ಮ)	11	2,70,000–00
17	ಬಿಜಾಪುರ	1	4	1,15,000–00
18	ಬಾಗಲಕೋಟೆ	1	6	1,55,000–00
19	ಧಾರವಾಡ	1	3	95,000–00
20	ಹಾವೇರಿ	1	6	1,55,000–00
21	ಗದಗ್	1	4	1,15,000–00
22	ಉತ್ತರ ಕನ್ನಡ	1	10	2,55,000–00
23	ಬೀದರ್	1	4	1,15,000–00
24	ಗುಲ್ಬರ್ಗ	1(ವಿ.ಮ)	10	2,50,000–00
25	ರಾಯಚೂರು	1	4	1,15,000–00
26	ಕೊಪ್ಪಳ	1	3	95,000–00
27	ದಕ್ಷಿಣ ಕನ್ನಡ	1	5	1,35,000–00
28	ಉಡುಪಿ	1	2	75,000–00
29	ಕೊಡಗು	1	2	75,000–00
	ಒಟ್ಟು			**41,55,000–00**

ಶಕುಂತಲ ಹೆಚ್.ಆರ್.
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–2)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1774

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಸಿಬ್ಬಂದಿ ವರ್ಗದವರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ :ಡಿಪಿಎಆರ್ (ಬಿಪಿಇ) 13 ಎಆರ್‌ಯು 2001, ದಿನಾಂಕ :10.8.2001.

2. ಸರ್ಕಾರಿ ಆದೇಶ ಸಂಖ್ಯೆ :ವಾಕೈ 40 ರೇಉನಿ 2007, ದಿ :24.7.2008.

3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರ ಪತ್ರ ಸಂಖ್ಯೆ :ಕರೇಮಾಮ/ಆಡಳಿತ/ಎ1/2008–09/807,ದಿನಾಂಕ :18.9.2008 ಹಾಗೂ 27.11.2008.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆದೇಶದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯಡಿಯಲ್ಲಿ ನಿವೃತ್ತಿ ನೀಡುವುದಕ್ಕೆ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಯನ್ವಯ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವಿವಿಧ ವೃಂದಗಳ ಒಟ್ಟು 35 ಅಧಿಕಾರಿ/ನೌಕರರಿಗೆ ದಿನಾಂಕ:31.7.2008ರ ಅಪರಾಹ್ನದಿಂದ ಜಾರಿಗೆ ಬರುವಂತೆ ವಿಶೇಷ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ಹೊಂದಲು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಅನುಮತಿ ನೀಡಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರಗಳಲ್ಲಿ ಮಂಡಳಿಯಲ್ಲಿ ಇನ್ನೂ ಹೆಚ್ಚಿನ ದಕ್ಷತೆಗಾಗಿ ಮತ್ತು ವಹಿವಾಟಿಗೆ ಅನುಗುಣವಾಗಿ ಸಿಬ್ಬಂದಿ ವರ್ಗವನ್ನು ಸರಿದೂಗಿಸಲು 2ನೇ ಬಾರಿ ಸ್ವಯಂ ನಿವೃತ್ತಿ ಯೋಜನೆಯನ್ನು ಅಳವಡಿಸಲು ತೀರ್ಮಾನಿಸಿ, ವಿವಿಧ ವೃಂದಗಳಲ್ಲಿ 28 ಸಿಬ್ಬಂದಿಯನ್ನು ಹೆಚ್ಚುವರಿಯೆಂದು ಗುರುತಿಸಿದ್ದು, ಅದರನ್ವಯ ಸ್ವಯಂ ನಿವೃತ್ತಿಗಾಗಿ ಅರ್ಜಿ ಸಲ್ಲಿಸಿದ 11 ಅಧಿಕಾರಿ/ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ನೀಡುವುದಕ್ಕೆ ಸರ್ಕಾರದ ಅನುಮೋದನೆ ನೀಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಇವರು ಸರ್ಕಾರವನ್ನು ಕೋರಿರುತ್ತಾರೆ.

ಸಾರ್ವಜನಿಕ ಉದ್ದಿಮೆಗಳ ವಲಯಗಳ ಉದ್ದಿಮೆಯ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯನ್ವಯ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ತನ್ನ ಮಂಡಳಿಯಲ್ಲಿ ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿರುವ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರಗಳಲ್ಲಿ ತಿಳಿಸಿದ್ದು, ಸದರಿ ಪತ್ರಗಳಲ್ಲಿಯ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಸ್ವಯಂ ನಿವೃತ್ತಿ ಯೋಜನೆಯ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ನಷ್ಟದಲ್ಲಿರುವುದರಿಂದ ಅದರ ಒಟ್ಟು 11 ವಿವಿಧ ವೃಂದಗಳ ಅಧಿಕಾರಿ/ನೌಕರರಿಗೆ 2ನೇ ಬಾರಿ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ನೀಡಲು ಅನುಮತಿಸಲು ತೀರ್ಮಾನಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ವಾಕೈ 40 ರೇಉನಿ 2007(ಭಾಗ), ಬೆಂಗಳೂರು, ದಿನಾಂಕ:18ನೇ ಜುಲೈ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರಿ ಆದೇಶ ಸಂಖ್ಯೆ:ಡಿಪಿಎಆರ್ (ಬಿಪಿಇ) 13 ಎಆರ್‌ಯು 2001, ದಿನಾಂಕ:11.8.2001ರಲ್ಲಿಯ ಷರತ್ತುಗಳನ್ನು ಪೂರೈಸಬೇಕೆನ್ನುವ ಷರತ್ತಿಗೊಳಪಟ್ಟು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ವಿವಿಧ ವೃಂದಗಳ ಒಟ್ಟು 11 ಅಧಿಕಾರಿ / ನೌಕರರಿಗೆ ದಿನಾಂಕ:31.7.2009ರ ಅಪರಾಹ್ನದಿಂದ ಜಾರಿಗೆ ಬರುವಂತೆ ವಿಶೇಷ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ಹೊಂದಲು ಅನುಮತಿ ನೀಡಿದೆ.

ರದ್ದತಿಗಾಗಿ ಹೆಚ್ಚುವರಿಯೆಂದು ಗುರುತಿಸಿರುವ ಹುದ್ದೆಗಳು ದಿನಾಂಕ:31.7.2009ರ ಅಪರಾಹ್ನದಿಂದ ಜಾರಿಗೆ ಬರುವಂತೆ ರದ್ದಾಗುತ್ತವೆ ಮತ್ತು ಅಂತಹ ಹುದ್ದೆಗಳ ಎದುರು ಅಧಿಕಾರಿ/ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರಿಗೆ ಸೂಕ್ತ ಪರ್ಯಾಯ ಸ್ಥಳವನ್ನು ನೀಡತಕ್ಕದ್ದು.

ಈ ನೌಕರರ ವಿಶೇಷ ಸ್ವಯಂ ನಿವೃತ್ತಿಗಾಗಿ ಅಗತ್ಯವಿರುವ ಮೊತ್ತವನ್ನು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ತನ್ನ ಆಂತರಿಕ ಸಂಪನ್ಮೂಲದಿಂದ ಭರಿಸತಕ್ಕದ್ದು. ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ.

ಯಾವಾಗಲೂ ಒಂದು ಕಾರ್ಪೋರೇಷನ್ನಿನಲ್ಲಿ ಒಂದು ಸಾರಿ ಮಾತ್ರ ಇಂತಹ ಯೋಜನೆಯನ್ನು ಅನುಷ್ಠಾನಗೊಳಿಸಬಹುದೆಂಬ ನಿಯಮ ಪಾಲಿಸುವುದು.

ಹೆಚ್ಚುವರಿ ಎಂದು ಗುರುತಿಸಿರುವ ಹುದ್ದೆಗಳನ್ನು ಅಲ್ಲಿ ಕೆಲಸ ನಿರ್ವಹಿಸುತ್ತಿರುವವರು ಸ್ವಯಂ ನಿವೃತ್ತಿ ಅಥವಾ ಇನ್ನಾವುದೇ ರೀತಿ ನಿವೃತ್ತಿಯಾದ ನಂತರ ಕಡ್ಡಾಯವಾಗಿ ರದ್ದುಪಡಿಸತಕ್ಕದ್ದು.

ಈ ಆದೇಶವನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಟಿಪ್ಪಣಿ ಸಂಖ್ಯೆ:ಡಿಪಿಇ 75 ಎಸ್‌ಪಿಯು 2008, ದಿನಾಂಕ:16.2.2009 ಮತ್ತು ಸಾಉಇ 28 ಎಸ್‌ಪಿಯು 2009, ದಿನಾಂಕ:29.6.2009 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಎಫ್ ಡಿ/592/ವೆಚ್ಚ–1/2009, ದಿನಾಂಕ:6.5.2009ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1778

ಭಾರತಿ ಆರ್. ನಾಯಕ್
ಪೀಠಾಧಿಕಾರಿ (ರೇಷ್ಮೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸಮಾಜ ಕಲ್ಯಾಣ ಸಚಿವಾಲಯ

ವಿಷಯ: ಮೊರಾರ್ಜಿ ದೇಸಾಯಿ ಪದವಿ ಪೂರ್ವ ಕಾಲೇಜುಗಳ ನಿರ್ವಹಣಾ ಸಮಿತಿ ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಅದೇಶ ಸಂಖ್ಯೆ: ಸಕಇ 33 ಮೊದೇಶಾ 2008 ದಿನಾಂಕ: 7.7.2009.

2) ಪತ್ರ ಸಂಖ್ಯೆ: ಕವಶಿಸಸ/ಸಿಆರ್(ಶಿಕ್ಷಣ)–04/2008–09, ದಿನಾಂಕ: 09.07.2009.

ಪ್ರಸ್ತಾವನೆ:

ಮೇಲಿನ ಕಾರಣಗಳಿಂದ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರ ವರದಿಯ ಮೇರೆಗೆ ಈ ಸಂಘದಿಂದ ಯಾವುದೇ ಪ್ರಯೋಜನವಿಲ್ಲದಿರುವುದರಿಂದ ಸದರಿ ಸಂಘದ ನೋಂದಣಿಯನ್ನು ರದ್ಧುಪಡಿಸುವುದು ಸೂಕ್ತವೆಂದು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 75 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎಂಡಬ್ಲ್ಯೂ/69/ಸಿಎಲ್ಎಂ/2001, ದಿನಾಂಕ:21.11.2001ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಸಿ.ಎಸ್. ವೀರೇಶ್, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು, ಆದ ನಾನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ನೌಕರರ ಪತ್ತಿನ ಸಹಕಾರ ಸಂಘ ನಿ., ಹೆಬ್ಬಾಳ, ಬೆಂಗಳೂರು, ಈ ಸಂಘದ ನೊಂದಣಿ ಸಂಖ್ಯೆ: ಡಿಆರ್‌ಡಿ/ಎಸ್‌ಎಬಿ/ಆರ್‌ಸಿಎಸ್/7607/1981-82 ನ್ನು ಈ ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿರುತ್ತೇನೆ. ಈ ದಿನದಿಂದ ಸದರಿ ಸಂಘವು ಕಾರ್ಪೋರೇಷನ್ ಬಾಡಿಯಾಗಿರುವ ಅಸ್ತಿತ್ವವನ್ನು ಕಳೆದುಕೊಂಡಿರುತ್ತದೆ.

ಈ ಆದೇಶವನ್ನು ನನ್ನ ಸ್ವಹಸ್ತಾಕ್ಷರ ಹಾಗೂ ಕಛೇರಿಯ ಮೊಹರಿನೊಂದಿಗೆ ಈ ದಿನ ದಿನಾಂಕ:31.03.2009 ರಂದು ನೀಡಿದೆ.

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು,
ಬೆಂಗಳೂರು ಪ್ರಾಂತ, ಬೆಂಗಳೂರು.

ಪಿ.ಆರ್.353

ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರ ನ್ಯಾಯಾಲಯದಲ್ಲಿ
ವ್ಯಾಜ್ಯ ಸಂಖ್ಯೆ: ಡಿಆರ್/ಡಿವಿಜಿ/ದಾವಾ/1/2009-10, ಮಧ್ಯಂತರ ಅರ್ಜಿ ಸಂಖ್ಯೆ:01

ವಾದಿ:		**ಪ್ರತಿವಾದಿಗಳು:**
ಪ್ರಧಾನ ವ್ಯವಸ್ಥಾಪಕರು, ದಿ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ., ದಾವಣಗೆರೆ.	**ವಿರುದ್ಧ**	1) ಕೆ.ಸಿ.ವಿಶ್ವನಾಥ್ ಬಿನ್ ಜೆ. ಚಿದಾನಂದಪ್ಪ, ಪಾಲುದಾರರು, ವಿಶ್ವಾಸ್ ಇಂಡಸ್ಟ್ರೀಸ್, ಬಸವಾಪಟ್ಟಣರಸ್ತೆ, ಕಮ್ಮಾರಘಟ್ಟ, ಹೊನ್ನಾಳಿ ತಾಲ್ಲೂಕು, ದಾವಣಗೆರೆ. 2) ಬಿ.ಆರ್. ಜಯದೇವ್ ಬಿನ್ ಬಿ. ರುದ್ರಪ್ಪ, ಪಾಲುದಾರರು, ವಿಶ್ವಾಸ್ ಇಂಡಸ್ಟ್ರೀಸ್, ಬಸವಾಪಟ್ಟಣರಸ್ತೆ, ಕಮ್ಮಾರಘಟ್ಟ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ. 3) ಜೆ. ಚಿದಾನಂದಪ್ಪ ಬಿನ್ ಅಜ್ಜಪ್ಪ, ಡೋರ್ ನಂ.1089/1-2, ಅಮರಪ್ಪನ ತೋಟ, ಆನೆಕೊಂಡ ರಸ್ತೆ, ದಾವಣಗೆರೆ-1. 4) ಕೆ.ಬಿ. ವಿರೂಪಾಕ್ಷಪ್ಪ ಬಿನ್ ಜೆ. ಬಸವರಾಜಪ್ಪ, ಮನೆ ನಂ.116/98, ಕಿರುವಾಡಿ ಲೇಔಟ್, ಕೆ.ಬಿ. ಬಡಾವಣೆ, ದಾವಣಗೆರೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರಡಿಯಲ್ಲಿ ಸ್ಥಿರ ಸ್ವತ್ತುಗಳನ್ನು ಅವಾರ್ಡ್ ಪೂರ್ವ ಜಪ್ತಿ ಮಾಡಲಾಗಿರುವ ಸಂಬಂಧ ನೋಟೀಸ್

ಈ ಪ್ರಕರಣದಲ್ಲಿ:

1. ವಾದಿಯವರು ಪ್ರತಿವಾದಿಗಳವರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70(1) ರಡಿಯಲ್ಲಿ ಬ್ಯಾಂಕಿಗೆ ವಸೂಲಾಗಬೇಕಾಗಿರುವ ಸಾಲದ ಬಾಕಿ ಮೊತ್ತ ರೂ.20,18,634-00 (ರೂಪಾಯಿ ಇಪ್ಪತ್ತು ಲಕ್ಷದ ಹದಿನೆಂಟು ಸಾವಿರದ ಆರುನೂರ ಮೂವತ್ತನಾಲ್ಕು ಮಾತ್ರ) ದಿನಾಂಕ:28.02.2009 ರವರೆಗೆ) ಮತ್ತು ನಂತರದ ಬಡ್ಡಿ ಮತ್ತು ಇತ್ಯಾದಿಗಳ ವಸೂಲಿಗಾಗಿ ನ್ಯಾಯಾಲಯದಲ್ಲಿ ವ್ಯಾಜ್ಯವನ್ನು ಹೂಡಿರುತ್ತಾರೆ. ಈ ನ್ಯಾಯಾಲಯವು ಈ ವ್ಯಾಜ್ಯವನ್ನು ತನ್ನ ಕಡತದ ಮೇಲೆ ಕ್ರಮಸಂಖ್ಯೆ: ಡಿಆರ್/ಡಿವಿಜಿ/ದಾವಾ/1/2009-10 ರಡಿಯಲ್ಲಿ ದಾಖಲಿಸಿಕೊಂಡಿರುತ್ತದೆ.

2. ಮೂಲ ದಾವಾ ಅರ್ಜಿಯೊಂದಿಗೆ ವಾದಿಯವರು ಕಲಂ 103 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಈ ಪ್ರಕರಣದಲ್ಲಿ ಬ್ಯಾಂಕಿಗೆ ಆಧಾರವಾಗಿಲ್ಲದಿರುವ ಪ್ರತಿವಾದಿಗಳ ಈ ಅರ್ಜಿಯಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಅವಾರ್ಡ್ ಪೂರ್ವ ಜಪ್ತಿ ಮಾಡಲು ಕೋರಿರುತ್ತಾರೆ.

3. ಈ ಮಧ್ಯಂತರ ಅರ್ಜಿಗೆ ಸಂಬಂಧವಾಗಿ ವಾದಿಯವರು ಪ್ರಮಾಣ ಪತ್ರವನ್ನು ಸಲ್ಲಿಸಿ, ಈ ಪ್ರಕರಣಕ್ಕೆ ಸಂಬಂಧವಾಗಿರುವ ಅಂಶಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಹಾಗೂ ಇದರ ಕುರಿತಂತೆ ಅಗತ್ಯ ದಾಖಲಾತಿಗಳನ್ನು ಲಗತ್ತುಪಡಿಸಿರುತ್ತಾರೆ.

ಈ ನ್ಯಾಯಾಲಯವು ವಾದಿಯವರ ಮಧ್ಯಂತರ ಅರ್ಜಿಯಲ್ಲಿನ ಅಂಶಗಳ ಗಂಭೀರತ್ವವನ್ನು ಪರಿಗಣಿಸಿ ದಿನಾಂಕ:24.04.2009ರಂದು ಅವರಿಗೆ ನೋಟೀಸನ್ನು ನೀಡಿ ದಿನಾಂಕ:05.05.2009ರಂದು ಈ ಮಧ್ಯಂತರ ಅರ್ಜಿಯ ತ್ವರಿತ ವಿಚಾರಣೆಗೆ ಹಾಜರಾಗಿ ಅವರ ಆಹ್ವಾಲನ್ನು ಸಲ್ಲಿಸಲು ಮತ್ತು ಸಾಕ್ಷಾಧಾರಗಳನ್ನು ಹಾಜರುಪಡಿಸಲು ಸೂಚಿಸಿದ್ದರ ಪ್ರಕಾರ ಈ ದಿನ ದಿನಾಂಕ:05.05.2009ರಂದು ಈ ಮಧ್ಯಂತರ ಅರ್ಜಿಗೆ ಸಂಬಂಧವಾಗಿ ವಾದಿಯವರ ವಿಚಾರಣೆ ನಡೆಸಿದ್ದು,

ವಾದಿಯವರು ಮತ್ತು ಅವರ ಪರವಾಗಿ ಅವರ ವಕೀಲರು ಹಾಜರಿದ್ದು, ಈ ಪ್ರಕರಣಕ್ಕೆ ಸಂಬಂಧವಾಗಿರುವ ಅಂಶಗಳನ್ನು ಮತ್ತು ಸಾಕ್ಷ್ಯಾಧಾರಗಳನ್ನು ಈ ನ್ಯಾಯಾಲಯದ ಅವಗಾಹನೆಗೆ ಅವರು ಸಲ್ಲಿಸಿರುತ್ತಾರೆ.

ಈ ವಿಚಾರಣೆಯಿಂದ ಮೇಲ್ನೋಟಕ್ಕೆ ಕಂಡುಬಂದಿರುವ ಪ್ರಕಾರ:

(1) 1 ಮತ್ತು 2ನೇ ಪ್ರತಿವಾದಿಗಳಿಗೆ ಸೇರಿದ ವಿಶ್ವಾಸ್ ಇಂಡಸ್ಟ್ರೀಸ್ (ರೈಸ್ ಮಿಲ್) ಕಮ್ಮಾರಘಟ್ಟ, ಹೊನ್ನಾಳಿ ತಾಲ್ಲೂಕು, ಇದರ ಭತ್ತದ ವ್ಯವಹಾರದ ಅಭಿವೃದ್ಧಿಗಾಗಿ 1ನೇ ಪ್ರತಿವಾದಿಯವರು ವಾದಿಯರವರ ಬ್ಯಾಂಕಿನಿಂದ ರೂ.19,95,000–00 ಮೊತ್ತದ ಮಾಲು ಮತ್ತು ಜಾಮೀನು ಆಧಾರ ಸಾಲವಾಗಿ ಅವರ ರೈಸ್‌ಮಿಲ್ಲಿನಲ್ಲಿನ ಉಗ್ರಾಣದಲ್ಲಿ ಶೇಖರಿಸಿಟ್ಟ 3970 ಚೀಲ ಸೋನಾ ಮಸೂರಿ ಭತ್ತದ ದಾಸ್ತಾನು ಆಧಾರ ಮಾಡಿ ಇದನ್ನು ಬ್ಯಾಂಕಿನ ಕಸ್ಟಡಿಗೆ ಒಪ್ಪಿಸಿ ಸಾಲವನ್ನು ಪಡೆದಿರುತ್ತಾರೆ. ಈ ಸಾಲಕ್ಕೆ ಸದರಿ 3970 ಚೀಲ ಭತ್ತದ ದಾಸ್ತಾನು ಮತ್ತು ಜಾಮೀನು ಹೊರತಾಗಿ ಬೇರೆ ಆಧಾರಗಳು ಇರುವುದಿಲ್ಲ.

(2) ಈ ಸಾಲದ ಸಂಬಂಧ ಅಗತ್ಯ ಕರಾರುಗಳನ್ನು ಸದರಿ ಪ್ರತಿವಾದಿಗಳು ಬ್ಯಾಂಕಿನೊಂದಿಗೆ ಮಾಡಿಕೊಂಡು ಆನ್‌ಡಿಮಾಂಡ್ ಪ್ರನೋಟನ್ನು ನೀಡಿ, ಈ ಸಾಲವನ್ನು ಪಡೆದಿರುತ್ತಾರೆ. ಈ ಸಾಲಕ್ಕೆ ಪ್ರತಿವಾದಿಗಳೆಲ್ಲರೂ ವೈಯುಕ್ತಿಕವಾಗಿ ಮತ್ತು ಜಂಟಿಯಾಗಿ ಜವಾಬ್ದಾರರಾಗಿರುತ್ತಾರೆ.

(3) ಸದರಿ 1ನೇ ಮತ್ತು 2ನೇ ಪ್ರತಿವಾದಿಗಳು ಬ್ಯಾಂಕಿಗೆ ಯಾವುದೇ ಮಾಹಿತಿಯನ್ನು ನೀಡದೇ, ಅಥವಾ ಬ್ಯಾಂಕಿನ ಅನುಮತಿಯನ್ನು ಪಡೆಯದೇ ಬ್ಯಾಂಕಿನ ಕಸ್ಟಡಿಯಲ್ಲಿದ್ದ ಹಾಗೂ 3970 ಚೀಲ ಭತ್ತ ದಾಸ್ತಾನು ಮಾಡಿದ್ದ ಉಗ್ರಾಣದ ಬೀಗವನ್ನು ಒಡೆದು, ಬ್ಯಾಂಕಿಗೆ ಆಧಾರ ಮಾಡಿದ್ದ ಸಂಪೂರ್ಣ 3970 ಚೀಲ ಭತ್ತದ ದಾಸ್ತಾನನ್ನು ಅಕ್ರಮವಾಗಿ ಹೊರಗಡೆ ಸಾಗಿಸಿರುತ್ತಾರೆ. ಈ ಸಂಬಂಧವಾಗಿ ಸದರಿಯವರ ವಿರುದ್ಧ ವಾದಿಯವರು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಕಂಪ್ಲೇಂಟನ್ನು ದಾಖಲಿಸಿರುತ್ತಾರೆ. ದಿನಾಂಕ:08.03.2009ರಂದು ಎಫ್.ಐ.ಆರ್. ದಾಖಲಾಗಿರುತ್ತದೆ. ಆದರೆ ಅವರು ಪತ್ತೆಯಾಗಿರುವುದಿಲ್ಲ.

(4) ಸದರಿ ಪ್ರತಿವಾದಿಗಳು ಬ್ಯಾಂಕಿಗೆ ಸದರಿ ಭತ್ತದ ದಾಸ್ತಾನಿನ ಬದಲಾಗಿ ಬೇರೆ ಸ್ವತ್ತನ್ನು ಬ್ಯಾಂಕಿಗೆ ಆಧಾರವಾಗಿ ಒದಗಿಸಿ ಈ ದಾಸ್ತಾನನ್ನು ರಿಲೀಜ್ ಮಾಡಿಸಿಕೊಂಡಿರುವುದಿಲ್ಲ ಅಥವಾ ಸಾಲವನ್ನು ಮರುಪಾವತಿಸಿರುವುದಿಲ್ಲ.

(5) ಆದ್ದರಿಂದ ಸದರಿ ಪ್ರತಿವಾದಿಗಳು ಬ್ಯಾಂಕಿಗೆ ವಿಶ್ವಾಸ ದ್ರೋಹವನ್ನು ಮಾಡಿರುವುದು ಖಚಿತಪಟ್ಟಿರುತ್ತದೆ.

(6) ಬ್ಯಾಂಕು ಸದರಿಯವರಿಗೆ ನೀಡಿರುವ ಈ ಪ್ರಕರಣದಲ್ಲಿನ ಸಾಲಕ್ಕಾಗಿ ಜಾಮೀನುದಾರರ ಹೊರತಾಗಿ ಬೇರೆ ಆಧಾರಗಳಿರುವುದಿಲ್ಲ. ಈ ಸಾಲದ ಬಾಕಿಯ ವಸೂಲಿಗಾಗಿ ಬ್ಯಾಂಕು ಸದರಿ ಎಲ್ಲಾ ಪ್ರತಿವಾದಿಗಳ ಚರ ಸ್ಥಿರ ಸ್ವತ್ತುಗಳನ್ನು ಬ್ಯಾಂಕಿಗೆ ಆಧಾರ ಮಾಡಿಕೊಂಡು ವಸೂಲಾತಿಗಾಗಿ ಕ್ರಮವಿಡಬೇಕಾಗಿರುವುದು ಅನಿವಾರ್ಯವೆಂದು ಕಂಡುಬಂದಿರುತ್ತದೆ. ಈ ಕಾರಣಕ್ಕಾಗಿ ಬ್ಯಾಂಕು ಕಲಂ 103 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ದಾಖಲಿಸಿರುತ್ತದೆ.

ಕಾಯ್ದೆಯ ಕಲಂ 103 ರ ಉಪಬಂಧಗಳ ಪ್ರಕಾರ ವಾದಿಯವರ ಪರ ಮಂಡಿಸಲಾದ ವಾದ ಮಂಡನೆ ಮತ್ತು ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿ ವಿಚಾರಣೆ ನಡೆಸಲಾದ ಪ್ರಕಾರ ಈ ಪ್ರಕರಣದಲ್ಲಿನ 3ನೇ ಪ್ರತಿವಾದಿಯಾಗಿರುವ ಜಾಮೀನುದಾರರು ಹಾಗೂ 1ನೇ ಪ್ರತಿವಾದಿಯ ತಂದೆಯಾಗಿರುವ ಅವರಿಗೆ ಸೇರಿದ ಸ್ಥಿರಾಸ್ತಿ:

ದಾವಣಗೆರೆ ನಗರದ ಸಿ ಡಿವಿಜನ್ ಆನೆಕೊಂಡ ರಸ್ತೆ, ಅಮರಪ್ಪನ ತೋಟ, ಡೋರ್ ನಂ.1089/1–2 ರಲ್ಲಿರುವ **10x30** ಅಡಿ ಅಳತೆಯ ಎರಡು ಮದ್ರಾಸ್ ಆರ್.ಸಿ.ಸಿ. ಮನೆಗಳನ್ನು ದಾನಪತ್ರಗಳ ಮೂಲಕ ದಿನಾಂಕ:21.03.2009ರಂದು ವರ್ಗಾವಣೆ ಮಾಡಿರುತ್ತಾರೆ. ಇದರಿಂದಾಗಿ ಬ್ಯಾಂಕು ಈ ಆಸ್ತಿಯ ಮೇಲೆ ಯಾವುದೇ ಕ್ರಮಕೈಗೊಳ್ಳುವಂತಿಲ್ಲ. ಇದೇ ರೀತಿಯಾಗಿ ಸದರಿಯವರು ಹೊಂದಿರುವ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಶ್ರೀ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಖಾಲಿ ನಿವೇಶನ, ಸೈಟ್ ನಂ.703, ಅಳತೆ **30x35** ಅಡಿ ಇದನ್ನೂ ಸಹ ವಿಲೇ ಮಾಡಲು ಪ್ರಯತ್ನಪಡುತ್ತಿರುವುದಾಗಿ ವಿಶ್ವಾಸ ಮೂಲಗಳಿಂದ ವಾದಿಯವರಿಗೆ ತಿಳಿದು ಬಂದಿರುವುದನ್ನು ಅವರು ಈ ನ್ಯಾಯಾಲಯದ ಸಮ್ಮುಖಕ್ಕೆ ಸಲ್ಲಿಸಿರುತ್ತಾರೆ.

ವಾದಿಗಳು ಕಲಂ 103 ರಡಿಯಲ್ಲಿ ಮಧ್ಯಂತರ ಅರ್ಜಿಯಲ್ಲಿ ಸಲ್ಲಿಸಿರುವಂತೆ ಈ ಸ್ಥಿರ ಸ್ವತ್ತುಗಳ ಹೊರತಾಗಿ ಪ್ರತಿವಾದಿಗಳು ಬೇರೆ ಸ್ವತ್ತುಗಳನ್ನು ಹೊಂದಿರುವುದಿಲ್ಲ. ಈ ಸ್ವತ್ತುಗಳನ್ನು ಪ್ರತಿವಾದಿಗಳು ವಿಲೇ ಮಾಡಿದಲ್ಲಿ ಬ್ಯಾಂಕಿಗೆ ಅವರಿಗೆ ನೀಡಿರುವ ಸಾಲವನ್ನು ವಸೂಲಿ ಮಾಡಿಕೊಳ್ಳಲು ಬೇರೆ ರಹಾವಿಲ್ಲದೇ ಇರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಎಲ್ಲಾ ಅಂಶಗಳನ್ನು ನ್ಯಾಯಾಲಯವು ಪರಿಗಣಿಸಿರುತ್ತದೆ. ಬ್ಯಾಂಕು ಪ್ರತಿವಾಧಿಯವರಿಗೆ ನೀಡಿರುವ ಹಣವು ಸಾರ್ವಜನಿಕರ ಹಣವಾಗಿದ್ದು, ಇದನ್ನು ರಕ್ಷಿಸುವ ಜವಾಬ್ದಾರಿಯು ಬ್ಯಾಂಕಿಗೆ ಇರುತ್ತದೆ. ಆದ್ದರಿಂದ ವಾದಿಯವರು ಮಧ್ಯಂತರ ಅರ್ಜಿಯಲ್ಲಿ ಪ್ರತಿವಾದಿಗಳ ಬ್ಯಾಂಕಿಗೆ ಆಧಾರವಾಗಿಲ್ಲದೇ ಇರುವ ಹಾಗೂ ಸಧ್ಯಕ್ಕೆ ಲಭ್ಯವಿರುವ ಸ್ಥಿರಾಸ್ತಿಗಳನ್ನು ಅವಾರ್ಡ್ ಪೂರ್ವ ಜಪ್ತಿ ಮಾಡಲು ಮಾಡಲಾಗಿರುವ ಮನವಿಯನ್ನು ಅನಿವಾರ್ಯವಾಗಿ ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ ಪುರಸ್ಕರಿಸಲು ನಿರ್ಧರಿಸಿದೆ ಹಾಗೂ ಪ್ರತಿವಾದಿಗಳು ಕಲಂ 103 ರಡಿಯಲ್ಲಿ ಉಲ್ಲೇಖಿಸಲಾಗಿರುವಂತೆ ತಮ್ಮ ವಿರುದ್ಧ ಮಾಡಬಹುದಾದ ಯಾವುದೇ ಅವಾರ್ಡನ್ನು ಜಾರಿಗೊಳಿಸುವ ಸಂಬಂಧ ವಿಳಂಬಗೊಳಿಸುವುದನ್ನು ಅಥವಾ ಅಡ್ಡಿಪಡಿಸುವುದನ್ನು ಮಾಡಲು ಅವರ ಸ್ಥಿರಾಸ್ತಿಗಳನ್ನು ಪರರಿಗೆ ಪರಭಾರೆ ಮಾಡಿ ಬ್ಯಾಂಕಿಗೆ ವಿಶ್ವಾಸ ದ್ರೋಹವನ್ನು ಮಾಡಲು

ಹಾಗೂ ಸಾಲದ ಬಾಕಿಯ ವಸೂಲಿಗೆ ತೊಂದರೆಯನ್ನುಂಟು ಮಾಡಲು ಅವರ ಪ್ರಯತ್ನಗಳನ್ನು ತಪ್ಪಿಸಲು ವಾದಿಯವರ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಕಲಂ 103 ರಡಿಯಲ್ಲಿ ಈ ಪ್ರಕರಣದಲ್ಲಿನ ಪ್ರತಿವಾದಿಗಳ ಷೆಡ್ಯೂಲ್‌ನಲ್ಲಿ ಕಾಣಿಸಲಾಗಿರುವ ಸ್ಥಿರಸ್ವತ್ತುಗಳ ಸಂಬಂಧ ಅವಾರ್ಡ್ ಪೂರ್ವ ಜಪ್ತಿಯನ್ನು ಮಾಡುವ ಸಂಬಂಧ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ದಾವಣಗೆರೆ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು, ಬಿ. ಕುಬೇರಪ್ಪ, ಕೆಸಿಎಸ್, ಆದ ನಾನು ಈ ಆದೇಶದ ಷೆಡ್ಯೂಲ್‌ನಲ್ಲಿ ಕಾಣಿಸಲಾಗಿರುವ ಈ ಪ್ರಕರಣದಲ್ಲಿನ ಪ್ರತಿವಾದಿಗಳ ಸ್ಥಿರ ಸ್ವತ್ತುಗಳು ಆಗಿರುವ ಸ್ಥಿರಾಸ್ತಿಗಳನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 103 ರಡಿಯಲ್ಲಿ ಈ ಕಲಂನ ಉಪನಿಬಂಧನೆಗೊಳಪಟ್ಟು ಈ ಪ್ರಕರಣದಲ್ಲಿನ ಅವಾರ್ಡ್ ಪೂರ್ವ ಷರತ್ತುಬದ್ಧ ಜಪ್ತಿಗಾಗಿ ಈ ಮೂಲಕ ಆದೇಶಿಸಿರುತ್ತೇನೆ. ಈ ಆಸ್ತಿಗಳ ಮೇಲೆ ವಾದಿಯವರ ಬ್ಯಾಂಕಿನ ಹಕ್ಕನ್ನು ಈ ಆದೇಶದ ಪ್ರಕಾರ ಉದ್ಭವಿಸಿರುತ್ತದೆ ಎಂದು ಈ ಮೂಲಕ ನಿರ್ದೇಶಿಸಿರುತ್ತೇನೆ. ಪ್ರತಿವಾದಿಗಳು ಈ ನ್ಯಾಯಾಲಯದ ಅನ್ಯಥಾ ಆದೇಶದವರೆಗೆ ಈ ಆಸ್ತಿಗಳನ್ನು ವಿಲೇ ಮಾಡಕೂಡದು ಎಂದು ಆದೇಶಿಸಿರುತ್ತೇನೆ.

ಈ ಆದೇಶದ ಪ್ರಕಾರ ಸದರಿ ಪ್ರತಿವಾದಿಗಳಿಗೆ ಸೇರಿದ ಷೆಡ್ಯೂಲ್‌ನಲ್ಲಿ ಕಾಣಿಸಲಾಗಿರುವ ಸ್ಥಿರ-ಸ್ವತ್ತುಗಳ ಆಸ್ತಿ ದಾಖಲಾತಿಗಳಲ್ಲಿ ಈ ಅವಾರ್ಡ್ ಪೂರ್ವ ಜಪ್ತಿ ಮಾಡಲಾಗಿರುವ ನಿರ್ದೇಶನದ ಕುರಿತು ದಾಖಲು ಮಾಡಲು ಎಲ್ಲಾ ಸಂಬಂಧಪಟ್ಟವರಿಗೆ ನಿರ್ದೇಶಿಸಿದೆ.

ಈ ಆದೇಶವನ್ನು ನನ್ನ ಸ್ವಹಸ್ತ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಈ ದಿನ ದಿನಾಂಕ:05.05.2009ರಂದು ಜಾರಿ ಮಾಡಲಾಗಿದೆ.

ಸಹಕಾರ ಸಂಘಗಳ ಉಪನಿಬಂಧಕರು,
ದಾವಣಗೆರೆ ಜಿಲ್ಲೆ, ದಾವಣಗೆರೆ.

ಷೆಡ್ಯೂಲ್

(ಎ) 1ನೇ ಪ್ರತಿವಾದಿ ಕೆ.ಸಿ. ವಿಶ್ವನಾಥ್ ಬಿನ್ ಜೆ.ಚಿದಾನಂದಪ್ಪ ಮತ್ತು 2ನೇ ಪ್ರತಿವಾದಿ ಬಿ.ಆರ್. ಜಯದೇವ್ ಬಿನ್ ಬಿ. ರುದ್ರಪ್ಪನವರಿಗೆ ಸೇರಿದ ವಿಶ್ವಾಸ್ ಇಂಡಸ್ಟ್ರೀಸ್ (ರೈಸ್ ಮಿಲ್) ಕಮ್ಮಾರಘಟ್ಟ ಗ್ರಾಮದ ಸರ್ವೆ ನಂ.96/6, 4ಎ, 4ಬಿ, ಖಾನೇಷುಮಾರಿ ನಂ.184, 03 ಎಕರೆ 14 ಗುಂಟೆ ಜಾಗದಲ್ಲಿ ಕಟ್ಟಿರುವ ರೈಸ್‌ಮಿಲ್ ಕಟ್ಟಡ, ಇದಕ್ಕೆ ಹೊಂದಿಕೊಂಡಿರುವ ಗೋಡೌನ್ ಮತ್ತು ಭತ್ತ ಒಣಗಿಸಲು ಇರುವ ಖಾಲಿ ನಿವೇಶನ ಇದಕ್ಕೆ ಚಕ್ಕುಬಂದಿ:

ಪೂರ್ವಕ್ಕೆ: ಬಸವಾಪಟ್ಟಣ-ಹೊನ್ನಾಳಿ ರಸ್ತೆ;
ಪಶ್ಚಿಮಕ್ಕೆ: ಖಾಸಗಿಯವರ ಜಮೀನು;
ಉತ್ತರಕ್ಕೆ: ಖಾಸಗಿಯವರ ಜಮೀನು;
ದಕ್ಷಿಣಕ್ಕೆ: ಖಾಸಗಿಯವರ ಜಮೀನು;

(ಬಿ) 1ನೇ ಪ್ರತಿವಾದಿ ಕೆ.ಸಿ. ವಿಶ್ವನಾಥ್ ಬಿನ್ ಜೆ. ಚಿದಾನಂದಪ್ಪ, ಇವರಿಗೆ ಸೇರಿದ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ, ಶ್ರೀ ಆಂಜನೇಯ ಬಡಾವಣೆಯಲ್ಲಿರುವ ಖಾಲಿ ನಿವೇಶನ ಡೋರ್ ನಂ.1808/52, ಇದರ ಅಳತೆ 15x40 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ನಿವೇಶನ ಸಂಖ್ಯೆ:54,
ಪಶ್ಚಿಮಕ್ಕೆ: ಇದೇ ಸೈಟ್ ನಂಬರಿನ ಪೈಕಿ ಜಗದೀಶನ ನಿವೇಶನ,
ಉತ್ತರಕ್ಕೆ: ರಸ್ತೆ,
ದಕ್ಷಿಣಕ್ಕೆ: ನಿವೇಶನ ನಂ.53.

(ಸಿ) 3ನೇ ಪ್ರತಿವಾದಿ ಜೆ. ಚಿದಾನಂದಪ್ಪ ಬಿನ್ ಅಜ್ಜಪ್ಪ, 1ನೇ ಪ್ರತಿವಾದಿಯವರು ಪಡೆದಿರುವ ಸಾಲಕ್ಕೆ ಜಾಮೀನುದಾರರು ಹಾಗೂ 1ನೇ ಎದುರುದಾರರ ತಂದೆಯವರಾಗಿದ್ದು, ಅವರು ಈ ಕೆಳಕಂಡ ಸ್ಥಿರಾಸ್ತಿಗಳನ್ನು ಹೊಂದಿರುತ್ತಾರೆ. ಕಾರಣ ಅವರು ಹೊಂದಿರುವ ಆಸ್ತಿಗಳು ಈ ಕೆಳಗಿನಂತೆ ಇರುತ್ತವೆ.

1) 3ನೇ ಪ್ರತಿವಾದಿ ಜೆ. ಚಿದಾನಂದಪ್ಪ ಬಿನ್ ಅಜ್ಜಪ್ಪನವರಿಗೆ ಸೇರಿದ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಶ್ರೀ ಆಂಜನೇಯ ಬಡಾವಣೆಯಲ್ಲಿರುವ ಖಾಲಿ ನಿವೇಶನ ಡೋರ್ ನಂ.1808/56, ಇದರ ಅಳತೆ 30x40 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ನಿವೇಶನ ಸಂಖ್ಯೆ:58,
ಪಶ್ಚಿಮಕ್ಕೆ: ನಿವೇಶನ ಸಂಖ್ಯೆ:54,
ಉತ್ತರಕ್ಕೆ: 30 ಅಡಿ ರಸ್ತೆ,

ದಕ್ಷಿಣಕ್ಕೆ: ನಿವೇಶನ ಸಂಖ್ಯೆ:57.

(2) 3ನೇ ಪ್ರತಿವಾದಿ ಜೆ. ಚಿದಾನಂದಪ್ಪ ಬಿನ್ ಅಜ್ಜಪ್ಪನವರಿಗೆ ಸೇರಿದ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಶ್ರೀ ನಿಜಲಿಂಗಪ್ಪ ಬಡಾವಣೆಯಲ್ಲಿರುವ ಖಾಲಿ ನಿವೇಶನ, ಸೈಟ್ ನಂ.703, ಅಳತೆ 30x35 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ: ನಿವೇಶನ ಸಂಖ್ಯೆ:734,

ಪಶ್ಚಿಮಕ್ಕೆ: ರಸ್ತೆ,

ಉತ್ತರಕ್ಕೆ: ನಿವೇಶನ ಸಂಖ್ಯೆ:702,

ದಕ್ಷಿಣಕ್ಕೆ: ನಿವೇಶನ ಸಂಖ್ಯೆ:704.

ಸಹಕಾರ ಸಂಘಗಳ ಉಪನಿಬಂಧಕರು,

ಪಿ.ಆರ್.414 ದಾವಣಗೆರೆ ಜಿಲ್ಲೆ, ದಾವಣಗೆರೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿ ನಂ.720, ಶಿಂಪಾ ಭವನ, 46ನೇ ಅಡ್ಡರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು ರವರ ನಡವಳಿಗಳು:

ವಿಷಯ: ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ ರಾಯಚೂರು (ಹಾಲಿ ಅನಧಿಕೃತ ಗೈರು ಹಾಜರಿಯಲ್ಲಿರುವ) ಇವರನ್ನು ಸೇವೆಯಿಂದ ವಜಾಗೊಳಿಸುವ ಬಗ್ಗೆ ಆದೇಶ ಹೊರಡಿಸುವ ಕುರಿತು.

ಉಲ್ಲೇಖ:1) ಜಿಲ್ಲಾ ನೋಂದಣಾಧಿಕಾರಿಗಳು, ರಾಯಚೂರು ಇವರ ಪತ್ರದ ಸಂಖ್ಯೆ: ಸಿಬ್ಬಂದಿ-6/04-05, ದಿನಾಂಕ:31.05.2005.

2) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಸಿಬ್ಬಂದಿ-6/04-05, ದಿನಾಂಕ:24.11.2006.

3) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಕಾರಣ ಕೇಳುವ ನೋಟೀಸ್ ಸಂಖ್ಯೆ:ಸಿಬ್ಬಂದಿ-6/04-05, ದಿನಾಂಕ:12.04.2007.

4) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಕಾರಣ ಕೇಳುವ ನೋಟೀಸ್ ಸಂಖ್ಯೆ:ಸಿಬ್ಬಂದಿ-6/04-05, ದಿನಾಂಕ:13.03.2008.

5) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಪತ್ರದ ಸಂಖ್ಯೆ:ಸಿಬ್ಬಂದಿ:08-09, ದಿನಾಂಕ:21.04.2008.

6) ಕನ್ನಡ ಪ್ರಭ ಮತ್ತು ರಾಯಚೂರು ವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಣೆ ದಿನಾಂಕ:22.04.2008.

7) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಪತ್ರದ ಸಂಖ್ಯೆ: ಸಿಬ್ಬಂದಿ-6/04-05, ದಿನಾಂಕ:27.05.2008.

8) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಪತ್ರದ ಸಂಖ್ಯೆ: ಸಿಬ್ಬಂದಿ-6/04-05, ದಿನಾಂಕ:22.10.2008.

9) ಈ ಕಛೇರಿಯ ಸಮಸಂಖ್ಯೆ ಕಾರಣ ಕೇಳುವ ನೋಟೀಸ್ ಮತ್ತು ಅನುಬಂಧ-1 ರಿಂದ 4 ರವರೆಗೆ ಇರುವ ಆರೋಪಣಾ ಪಟ್ಟಿ ದಿನಾಂಕ:11.11.2008.

10) ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರ ಪತ್ರದ ಸಂಖ್ಯೆ: ಸಿಬ್ಬಂದಿ-6/04-05, ದಿನಾಂಕ:12.12.2008.

ಪ್ರಸ್ತಾವನೆ:

ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು ಇವರು ದಿನಾಂಕ:27.03.2005 ರಿಂದ ಯಾವುದೇ ರಜೆ ಅರ್ಜಿ ನೀಡದೆ ಅನಧಿಕೃತ ಗೈರು ಹಾಜರಾಗಿರುತ್ತಾರೆ ಎಂದು ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರು ಉಲ್ಲೇಖ (1) ರನ್ವಯ ದಿನಾಂಕ:31.05.2005 ರಂದು ವರದಿ ಸಲ್ಲಿಸಿರುತ್ತಾರೆ. ತದನಂತರ ಇದೇ ವಿಷಯವಾಗಿ ಉಲ್ಲೇಖ (2) ರನ್ವಯ ದಿನಾಂಕ:24.11.2006 ರಂದು ಈ ಕಛೇರಿಗೆ ವರದಿ ಸಲ್ಲಿಸಿ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು ಇವರು ದಿನಾಂಕ:27.03.2005 ರಿಂದ ಅನಧಿಕೃತ ಗೈರು ಹಾಜರಾಗಿದ್ದು ಅನೇಕ ಪತ್ರ ವ್ಯವಹಾರ ನಡೆಸಿದ್ದರೂ ಸದರಿ ಪತ್ರಗಳನ್ನು ಸ್ವೀಕರಿಸದೇ ಯಾವುದೇ ತರಹದ ಪ್ರತಿಕ್ರಿಯೆ ಕೂಡ ವ್ಯಕ್ತಪಡಿಸದೆ ಇರುವ ವಿಷಯವನ್ನು ವರದಿ ಮಾಡಿರುತ್ತಾರೆ. ನಂತರ ಉಲ್ಲೇಖ (3) ರನ್ವಯ ದಿನಾಂಕ:12.04.2007 ರಂದು ಸದರಿ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು ಇವರ ಮನೆ ವಿಳಾಸಕ್ಕೆ ಕಾರಣ ಕೇಳುವ ನೋಟೀಸ್ ಕಳುಹಿಸಿ ಗೈರು ಹಾಜರಾದ ಬಗ್ಗೆ ಕಾರಣಗಳನ್ನು ಲಿಖಿತ ಮೂಲಕವಾಗಲಿ ಅಥವಾ ಇನ್ನಾವುದೇ ಸಂದೇಶ ಮೂಲಕವಾಗಲಿ ಕಳುಹಿಸದೇ

ಇದ್ದು, ಹಾಗೂ ಕಛೇರಿಯ ಯಾವುದೇ ಪತ್ರಕ್ಕೂ ಪ್ರತಿಕ್ರಿಯೆ ವ್ಯಕ್ತಪಡಿಸದೇ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಮಗೆ ಕರ್ತವ್ಯ ನಿಷ್ಠೆ ಇಲ್ಲದಿರುವುದನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರುತ್ತೀರಿ ಹೀಗಾಗಿ ಇದನ್ನು ಗಂಭೀರ ಸ್ವರೂಪದ ಕರ್ತವ್ಯ ಲೋಪ ಮತ್ತು ದುರ್ನಡತೆ ಎಂದು ಭಾವಿಸುತ್ತಾ ನಿಮ್ಮ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11 ರಡಿಯಲ್ಲಿ ಶಿಸ್ತು ಕ್ರಮಕ್ಕೆ ಅರ್ಹರೆಂದು ಭಾವಿಸಬೇಕಾಗುತ್ತದೆ ಎಂದು ತಿಳಿಸುತ್ತಾ ಈ ನೋಟೀಸಿಗೆ ಏಳು ದಿನಗಳ ಒಳಗಾಗಿ ಹೇಳಿಕೆಯನ್ನು ಸಲ್ಲಿಸತಕ್ಕದ್ದೆಂತಲೂ ತಪ್ಪಿದಲ್ಲಿ ತಮ್ಮಿಂದ ಏನೂ ಹೇಳಿಕೆ ಇಲ್ಲವೆಂದು ಪರಿಗಣಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11 ರಡಿಯಲ್ಲಿ ಪ್ರಸ್ತಾಪಿಸಿರುವಂತೆ ನಿಮ್ಮ ಮೇಲೆ ಸೂಕ್ತ ಕ್ರಮಕ್ಕೆ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದೆಂದು ಕಾರಣ ಕೇಳುವ ನೋಟೀಸ್ ಕೊಡಲಾಗಿತ್ತು. ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರು ಆಪಾದಿತರಿಗೆ ಕಾರಣ ಕೇಳುವ ನೋಟೀಸ್ ಕಳುಹಿಸಿರುತ್ತಾರೆ. ಸದರಿಯವರು ದಿನಾಂಕ:27.03.2005 ರಿಂದ ಕರ್ತವ್ಯದಿಂದ ಅನಧಿಕೃತವಾಗಿ ಗೈರು ಹಾಜರಾದ ಕುರಿತು ಹಾಗೂ ಗೈರು ಹಾಜರಾತಿಯಿಂದ ಸರ್ಕಾರದ ಪರ ನೋಂದಣಿ ಸಾರ್ವಜನಿಕರಿಗೆ ಅಗತ್ಯ ಸೇವೆ ನೀಡುವಲ್ಲಿ ಸಂಪೂರ್ಣ ವಿಫಲರಾದ ಕುರಿತು ತಿಳಿಸುತ್ತಾ ಕರ್ತವ್ಯಕ್ಕೆ ಹಾಜರಾಗಲು ಸೇವಾ ಪುಸ್ತಕದಲ್ಲಿ ನಮೂದಿಸಿದ ವಿಳಾಸಕ್ಕೆ ಸೂಚನಾ ಪತ್ರಗಳನ್ನು ನೋಂದಾಯಿತ ಅಂಚೆ ಮೂಲಕ ರವಾನಿಸಿದ್ದು ಸದರಿ ಪತ್ರಗಳು ಸ್ವೀಕೃತವಾಗದೇ ವಾಪಸ್ಸು ಬಂದಿರುವುದಾಗಿ ವರದಿ ಮಾಡಿರುತ್ತಾರೆ.

ಆಪಾದಿತರಾದ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು ಇವರ ಅನಧಿಕೃತ ಗೈರು ಹಾಜರಾತಿ ಕುರಿತಂತೆ ಅನಧಿಕೃತ ಗೈರು ಹಾಜರಾತಿ ಪ್ರಕಟಣೆಯನ್ನು ಕನ್ನಡ ಪ್ರಭ ಮತ್ತು ರಾಯಚೂರು ವಾಣಿ ದೈನಂದಿನ ಪತ್ರಿಕೆಯಲ್ಲಿ ಪ್ರಕಟಿಸುವಂತೆ ಕೋರಿ ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ರವರು ಉಲ್ಲೇಖ (5) ರನ್ವಯ ದಿನಾಂಕ:21.04.2008 ರಂತೆ ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ರಾಯಚೂರು ಇವರಿಗೆ ಪತ್ರ ಬರೆಯಲಾಗಿತ್ತು. ಅದರಂತೆ ಸದರಿಯವರು ದಿನಾಂಕ:22.04.2008 ರ ಕನ್ನಡ ಪ್ರಭ ಹಾಗೂ ರಾಯಚೂರು ವಾಣಿ ಪತ್ರಿಕೆಗಳಲ್ಲಿ ಅನಧಿಕೃತ ಗೈರು ಹಾಜರಾತಿ ಪ್ರಕಟಣೆ ಎಂಬ ಶಿರೋನಾಮೆಯಲ್ಲಿ ಪ್ರಕಟಿಸಿರುತ್ತಾರೆ. ಇದಾದ ನಂತರ ಉಲ್ಲೇಖ (7) ರನ್ವಯ ದಿನಾಂಕ:27.05.2008 ರಂದು ವರದಿ ಸಲ್ಲಿಸಿ ಸದರಿ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 108 ರಡಿಯಲ್ಲಿ ಕರ್ತವ್ಯ ಲೋಪ ಎಂದು ಪರಿಗಣಿಸಿ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಕರಡು ಆರೋಪಣ ಪಟ್ಟಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಈ ಕಛೇರಿಯ ಮುಂದಿನ ಕ್ರಮಕ್ಕೆ ಸಲ್ಲಿಸಿರುತ್ತಾರೆ.

ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ರವರು ಉಲ್ಲೇಖ (7) ಮತ್ತು (8) ರನ್ವಯ ವರದಿ ಸಲ್ಲಿಸಿ ಆಪಾದಿತರಾದ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಯ ನಿಯಮ 8(viii) ಮತ್ತು ಕೆ.ಸಿ.ಎಸ್.ಆರ್. ನಿಯಮಾವಳಿಯ ನಿಯಮ 108ರ ಅಡಿಯಲ್ಲಿ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಉಲ್ಲೇಖ (9) ರನ್ವಯ ಕಾರಣ ಕೇಳುವ ನೋಟೀಸ್ ಮತ್ತು ಅನುಬಂಧ 1 ರಿಂದ 4 ರವರೆಗೆ ಇರುವ ಆರೋಪಣಾ ಪಟ್ಟಿಯನ್ನು ಶ್ರೀ ಎಂ.ಎ. ವಹೀದ್ ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು (ಹಾಲಿ ಅನಧಿಕೃತ ಗೈರು ಹಾಜರಿಯಲ್ಲಿರುವ) ಇವರಿಗೆ ಜಾರಿ ಮಾಡುವಂತೆ ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರಿಗೆ ಕಳುಹಿಸಲಾಗಿತ್ತು. ಅದಕ್ಕೆ ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರು ಉಲ್ಲೇಖ (10) ರನ್ವಯ ವರದಿ ಸಲ್ಲಿಸಿ ಅವರ ವಿಳಾಸ ಹುಡುಕಿಕೊಂಡು ಅವರ ಮನೆಗೆ ಹೋಗಲಾಗಿ ಅವರು ಹಳೆಯ ವಿಳಾಸದ ಮನೆಯಲ್ಲಿ ಇಲ್ಲದೇ ಇದ್ದುದರಿಂದ ಈಗ ಹಾಲಿ ಇರುವ ವಿಳಾಸವನ್ನು ಪತ್ತೆ ಮಾಡಿ ದಿನಾಂಕ:12.12.2008 ರಂದು ಅವರ ಮನೆಗೆ ಹೋದಾಗ ಮನೆಯಲ್ಲಿ ಸದರಿ ಶ್ರೀ ಎಂ.ಎ.ವಹೀದ್ ಅವರ ಹೆಂಡತಿಯಾದ ಶ್ರೀಮತಿ ಪಹಮ್ಮಿದಾ ಸುಲ್ತಾನ ಮತ್ತು ಅವರ ಮಗನಾದ ಶ್ರೀ ಎಂ.ಎ. ಮುಜೀದ್ ಇವರು ಇದ್ದರು ಇವರನ್ನು ಕೇಳಲಾಗಿ ಶ್ರೀ ಎಂ.ಎ. ವಹೀದ್ ಇವರು ಅವಾಗಿನಿಂದಲೇ ಅಂದರೆ ದಿನಾಂಕ:27.03.2005 ರಿಂದ ಈ ತಹಲ್‌ವರೆಗೂ ಎಲ್ಲಿ ಇರುವರೆಂಬ ವಿಷಯ ನಮಗೆ ಗೊತ್ತಿರುವುದಿಲ್ಲ ಇವರು ಯಾವತ್ತು ನಮ್ಮನ್ನು ಸಂಪರ್ಕಿಸಿಲ್ಲ ಆದ್ದರಿಂದ ಇವರು ನಾಪತ್ತೆಯಾಗಿದ್ದಾರೆಂದು ಮಾತ್ರ ಹೇಳುತ್ತೇವೆ ಎಂದು ತಿಳಿಸಿದ್ದನ್ನು ಪಂಚನಾಮೆ ಮೂಲಕ ಪಕ್ಕದ ಮನೆಯ ಒಬ್ಬ ಸಾಕ್ಷಿ ಸಮೇತ ದಿನಾಂಕ:12.12.2008 ರಂದು ಪಂಚನಾಮೆ ಬರೆದುಕೊಂಡು ಪಂಚನಾಮೆಯನ್ನು ಲಗತ್ತಿಸುತ್ತಾ ಸದರಿ ಶ್ರೀ ಎಂ.ಎ. ವಹೀದ್ ಇವರಿಗೆ ಜಾರಿ ಮಾಡುವಂತೆ ಕಳುಹಿಸಿದ ಕಾರಣ ಕೇಳುವ ನೋಟೀಸ್ ಹಾಗೂ ಸಂಬಂಧಿಸಿದ ಅನುಬಂಧ 1, 2, 3 ಮತ್ತು 4 ಇವುಗಳನ್ನು ಜಾರಿ ಮಾಡಲಾಗದ್ದರಿಂದ ಈ ಮೂಲಕ ಲಗತ್ತಿಸಿ ತಮಗೆ ಹಿಂದಿರುಗಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಈ ರೀತಿ ಮೇಲೆ ವಿವರಿಸಿರುವಂತೆ ಶ್ರೀ ಎಂ.ಎ. ವಹೀದ್, ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು ಇವರು ದಿನಾಂಕ:27.03.2005 ರಿಂದ ಈ ತಹಲ್‌ವರೆಗೂ ಅನಧಿಕೃತ ಗೈರು ಹಾಜರಾಗಿರುವುದರಿಂದ

ಸದರಿಯವರಿಗೆ ದಿನಾಂಕ:12.04.2007 ಮತ್ತು 13.03.2008 ರಂದು ಕಾರಣ ಕೇಳುವ ನೋಟೀಸ್ ಕಳುಹಿಸಿದ್ದರೂ ಜಾರಿಯಾಗದೇ ಹಿಂದಿರುಗಿ ಬಂದಿರುವುದು ಮತ್ತು ದಿನಾಂಕ:22.04.2008 ರಂದು ರಾಯಚೂರು ವಾಣಿ ಹಾಗೂ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಪ್ರಕಟಿಸಿ ಅವಕಾಶ ನೀಡಿದ್ದರೂ ಸಹ ಮತ್ತು ಜಿಲ್ಲಾ ನೋಂದಣಾಧಿಕಾರಿಗಳು ರಾಯಚೂರು ಇವರು ಶ್ರೀ ಎಂ.ಎ. ವಹೀದ್ ಪ್ರಥಮ ದರ್ಜೆ ಸಹಾಯಕರು ರವರ ವಿರುದ್ಧದ ಆರೋಪಣಾ ಪಟ್ಟಿಯನ್ನು ಜಾರಿ ಮಾಡುವ ಸಂಬಂಧ ಸದರಿಯವರ ಮನೆ ವಿಳಾಸವನ್ನು ಪತ್ತೆ ಹಚ್ಚಿ ದಿನಾಂಕ:12.12.2008 ರಂದು ಮನೆಗೆ ತೆರಳಿದಾಗ ಅವರ ಕುಟುಂಬದವರು ನೀಡಿದ ಹೇಳಿಕೆಯ ಬಗ್ಗೆ ದಿನಾಂಕ:12.12.2008 ರಂದು ತಯಾರಿಸಿರುವ ಪಂಚನಾಮೆಯ ಪ್ರಕಾರ ಶ್ರೀ ಎಂ.ಎ. ವಹೀದ್ ಪ್ರಥಮ ದರ್ಜೆ ಸಹಾಯಕರು ಇವರು ಎಲ್ಲಿದ್ದಾರೆ ಎಂಬ ಬಗ್ಗೆ ಮಾಹಿತಿ ಲಭ್ಯವಾಗದೇ ಇರುವುದು (HIS WHERE ABOUT IS NOT KNOWN) ದೃಢಪಟ್ಟಿರುವ ಕಾರಣ ಸದರಿಯವರು ದಿನಾಂಕ:27.03.2005 ರಿಂದ ಈ ತಹಲ್‌ವರೆಗೂ ಅನಧಿಕೃತ ಗೈರು ಹಾಜರಿಯಲ್ಲಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸಾಧ್ಯವಾಗದೇ ಇರುವುದರಿಂದ ಶ್ರೀ ಎಂ.ಎ. ವಹೀದ್ ಪ್ರಥಮ ದರ್ಜೆ ಸಹಾಯಕರು ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಾವಳಿಯ ನಿಯಮ 8(viii) ಮತ್ತು ಕೆ.ಸಿ.ಎಸ್.ಆರ್. ನಿಯಮಾವಳಿಯ ನಿಯಮ 108ರ ಪ್ರಕಾರ ಸೇವೆಯಿಂದ ವಜಾಗೊಳಿಸುವುದು ಸೂಕ್ತವೆಂದು ಮನಗಂಡು ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ: ಇವಿ-(2)-5/08-09, ದಿನಾಂಕ:5ನೇ ಮೇ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಾವಳಿ 1957ರ ನಿಯಮ 11-ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆ.ಆರ್. ನಿರಂಜನ್ ಭಾ.ಆ.ಸೇ. ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಯಾದ ನಾನು ಸದರಿ ನಿಯಮಾವಳಿಯ ನಿಯಮ 8(viii) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಮತ್ತು ಕೆ.ಸಿ.ಎಸ್.ಆರ್. ನಿಯಮಾವಳಿಯ ನಿಯಮ 108ರ ಪ್ರಕಾರ ಶ್ರೀ ಎಂ.ಎ. ವಹೀದ್ ಪ್ರಥಮ ದರ್ಜೆ ಸಹಾಯಕರು, ಜಿಲ್ಲಾ ನೋಂದಣಿ ಕಛೇರಿ, ರಾಯಚೂರು (ಹಾಲಿ ಅನಧಿಕೃತ ಗೈರು ಹಾಜರಿಯಲ್ಲಿರುವ) ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡಿರುತ್ತೇನೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚಾದ ಪ್ರತಿಯನ್ನು ಲೇಖನಿಸಿ ಸಹಿ ಮಾಡಿರುತ್ತೇನೆ.

ಶಿಸ್ತು ಪ್ರಾಧಿಕಾರಿ ಹಾಗೂ ನೋಂದಣಿ ಮಹಾ ಪರಿವೀಕ್ಷಕರು
ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.

ಪಿ.ಆರ್.409

ಒಳಾಡಳಿತ ಇಲಾಖೆ

ಅಧಿಸೂಚನೆ

ಸಂಖ್ಯೆ: ಒಇ 299 ಪೊಸಿಪ 2008, ಬೆಂಗಳೂರು, ದಿನಾಂಕ:5ನೇ ಆಗಸ್ಟ್, 2009

ಶ್ರೀ ಸಿ. ಕೃಷ್ಣಪ್ಪ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ಸಿವಿಲ್), ಅವರ ಆದಾಯಕ್ಕಿಂತ ಹೆಚ್ಚು ಅಕ್ರಮ ಆಸ್ತಿ ಹೊಂದಿರುವವರೆಂಬ ಆರೋಪಕ್ಕಾಗಿ, ಅವರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ.10/08 ರಲ್ಲಿ ಪ್ರಕರಣವನ್ನು ದಾಖಲು ಮಾಡಿ, ದಿನಾಂಕ:07.08.2008 ರಂದು ಲೋಕಾಯುಕ್ತ ಪೊಲೀಸರು ಅವರ ಮನೆಯ ಮೇಲೆ ಮತ್ತು ಇತರೆ ಕಡೆಗಳಲ್ಲಿ ದಾಳಿ ನಡೆಸಿರುವುದರಿಂದ ಹಾಗೂ ಸದರಿಯವರು ಪ್ರಕರಣದಲ್ಲಿ ಹಸ್ತಕ್ಷೇಪ ಮಾಡುವ ಅಥವಾ ಸಾಕ್ಷಿ ಪುರಾವೆಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ, ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಉಳಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: ಒಇ 299 ಪೊಸಿಪ 2008 ದಿನಾಂಕ:18.11.2008 ರಲ್ಲಿ ಸದರಿ ಅಧಿಕಾರಿಯವರನ್ನು ಸೇವೆಯಿಂದ ಅಮಾನತ್ತಿನಲ್ಲಿರಿಸಲಾಗಿತ್ತು. ದಿನಾಂಕ:22.06.2009ರ ಸರ್ಕಾರದ ಆದೇಶದಲ್ಲಿ ಇವರ ಲೀನ್ ಅನ್ನು ಡಿವೈ.ಎಸ್.ಪಿ., ಡಿ.ಸಿ.ಆರ್.ಬಿ. ಬಿಜಾಪುರ ಹುದ್ದೆಗೆ ಸ್ಥಳಾಂತರಿಸಿ ಆದೇಶಿಸಿದೆ. ಇವರ ವಿರುದ್ಧ ಲೋಕಾಯುಕ್ತ ಪೊಲೀಸ್ ಠಾಣೆ ಮೊ.ಸಂ.10/08 ರಲ್ಲಿನ ವಿಚಾರಣೆಯನ್ನು ಬಾಕಿ ಇರಿಸಿ, ಈ ಕೂಡಲೇ ಜಾರಿಗೆ ಬರುವಂತೆ ಅಮಾನತ್ತು ತೆರವುಗೊಳಿಸಿ, ಸೇವೆಗೆ ಪುನರ್‌ಸ್ಥಾಪಿಸಿ, ಡಿವೈ.ಎಸ್.ಪಿ. ಸಿ.ಸಿ.ಬಿ., ಮೈಸೂರು ಇಲ್ಲಿ ಶ್ರೀ ಎಂ. ನಾಗರಾಜ, ಡಿವೈ.ಎಸ್.ಪಿ ಇವರ ಸ್ಥಾನದಲ್ಲಿ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.751

ತಹಸೀಲ್ದಾರ್, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ

ಅಧಿಸೂಚನೆ

ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಪ್ರಕರಣ ಕಲಂ 4(1)(b) ಅನುಸಾರ ಪ್ರಕಟಿಸಬೇಕಾದ ವಿವರಗಳು

ತಹಶೀಲ್ದಾರ್‌ರವರ ಕಛೇರಿ–ಚನ್ನರಾಯಪಟ್ಟಣ

ತಾಲ್ಲೂಕು ಕಛೇರಿಯಲ್ಲಿ ಮಾಹಿತಿ/ ದಾಖಲೆಗಳನ್ನು ನೀಡುವ ಅಧಿಕಾರಿಗಳ ವಿವರ

ಕ್ರ ಸಂ.	ಇಲಾಖಾ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಪ್ರಾಧಿಕಾರದ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ 5 (1)ರ ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ 5 (1)ರ ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ 5 (1)ರ ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾಧಿಕಾರಿ
1.	ತಹಶೀಲ್ದಾರ್ ಕಛೇರಿ	ತಹಶೀಲ್ದಾರ್ ಚನ್ನರಾಯಪಟ್ಟಣ	ತಾಲ್ಲೂಕು ಕಛೇರಿ ಸಂಬಂಧಪಟ್ಟ ಶಿರಸ್ತೇದಾರ್ (ವಿಷಯವಾರು) ಚನ್ನರಾಯಪಟ್ಟಣ	ಉಪ ವಿಭಾಗಾಧಿಕಾರಿಗಳು ಹಾಸನ ಉಪ ವಿಭಾಗ ಹಾಸನ.
2.	ನಾಡ ಕಛೇರಿ ನುಗ್ಗೇಹಳ್ಳಿ ಮತ್ತು ಶ್ರವಣಬೆಳಗೊಳ	ರಾಜಸ್ವ ನಿರೀಕ್ಷಕರು ನುಗ್ಗೇಹಳ್ಳಿ ಮತ್ತು ಶ್ರವಣಬೆಳಗೊಳ	ಗ್ರಾಮ ಲೆಕ್ಕಾಧಿಕಾರಿ ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್ ನಾಡ ಕಛೇರಿ ನುಗ್ಗೇಹಳ್ಳಿ ಮತ್ತು ಶ್ರವಣಬೆಳಗೊಳ

ಈ ಕಛೇರಿಯ ನೌಕರರ ಕರ್ತವ್ಯದ ವಿವರಗಳು

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
1.	ಶ್ರೀ ಎ.ಸಿ ಶಿವಸ್ವಾಮಿ ತಾಲ್ಲೂಕು ಶಿರಸ್ತೆದಾರರು	1.ಲೆಕ್ಕ ತಪಾಸಣೆ ಮತ್ತು ಆಡಿಟ್ ವರದಿಗಳಿಗೆ ಅನುಮರ್ತನಾ ವರದಿ ಕಳುಹಿಸುವುದು. 2.ವಿಷಯ ನಿರ್ವಾಹಕರ ಮೇಲ್ವಿಚಾರಣೆ ಮತ್ತು ಮೇಜು ತಪಾಸಣೆ. 3.ಕಸಬಾ, ಹಿರೀಸಾವೆ, ನುಗ್ಗೇಹಳ್ಳಿ, ಶ್ರವಣಬೆಳಗೊಳ ಹೋಬಳಿ ಬಗರ್ ಹುಕ್ಕುಂ ಶಾಖೆಗಳ ಮೇಲ್ವಿಚಾರಣೆ. 4. ಅಭಿಲೇಖಾಲಯ ಶಾಖೆ ಮೇಲ್ವಿಚಾರಣೆ. 5. ನಗದು ಪುಸ್ತಕ ನಿರ್ವಹಣೆ. 6. ಅನ್ಯಸಂಕ್ರಮಣ ಶಾಖೆ ಮೇಲ್ವಿಚಾರಣೆ. 7. ಮುಜರಾಯಿ ಶಾಖೆ, ಸಿಬ್ಬಂದಿ ಶಾಖೆ ವಿವಿಧ ದೃಢೀಕರಣ ಪತ್ರಗಳು ದರಖಾಸ್ತು ನ್ಯಾಯಾಂಗ ಪ್ರಕೃತಿ ವಿಕೋಪ ಆಡಳಿತ ಶಾಖೆ ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಮತ್ತು ಇತರೆ ಶಾಖೆಗಳ ಮೇಲ್ವಿಚಾರಣೆ.
2.	ಶ್ರೀ ಜಗದೀಶ್ ಕಾರ್ಯಪಾಲಕ ಶಿರಸ್ತೆದಾರ್ (ಪ್ರಭಾರ ಚುನಾವಣಾ ಶಾಖೆ)	1. ಭೂ ಹಕ್ಕು ದಾಖಲಾತಿ ಶಾಖೆ 2. ಗಣಕೀಕೃತ ಆರ್ ಟಿ ಸಿ ಮತ್ತು ಮುಟೇಷನ್ ವಿತರಿಸುವ ಕೆಲಸದ ಮೇಲ್ವಿಚಾರಣೆ. 3. ವಿವಿಧ ಮಾಶಾಸನಗಳ ಶಾಖೆ 4. ಎನ್ ಸಿ ಆರ್ ಬಾಗೂರು ದಂಡಿಗನಹಳ್ಳಿ ಶಾಖೆ 5. ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳ ಶಾಖೆ 6. ಜನಸ್ಪಂದನ ಶಾಖೆಗಳ ಮೇಲ್ವಿಚಾರಣೆ. ಚುನಾವಣಾ ಶಾಖೆಯ ಮೇಲ್ವಿಚಾರಣೆ.
3.	ಶ್ರೀ ಸೋಮಶೇಖರ್, ಉಪ -ತಹಶೀಲ್ದಾರ್ ನಾಡ ಕಛೇರಿ, ನುಗ್ಗೇಹಳ್ಳಿ /ಶ್ರವಣಬೆಳಗೊಳ (ಪ್ರಭಾರ ನೆಮ್ಮದಿ ಶಾಖೆ)	ನುಗ್ಗೇಹಳ್ಳಿ ಮತ್ತು ಶ್ರವಣಬೆಳಗೊಳ ನಾಡ ಕಛೇರಿ ಮೇಲ್ವಿಚಾರಣೆ, ನೆಮ್ಮದಿ ಶಾಖೆಯ ಮೇಲ್ವಿಚಾರಣೆ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
4.	ಶ್ರೀ ಹೆಚ್ ಆರ್. ಶಿವಣ್ಣ ಪ್ರ.ದ.ಸ	1. ಭೂ ಹಕ್ಕು ದಾಖಲೆ ಶಾಖೆ 2. ನೀರಾವರಿ ತೆರಿಗೆ ಶಾಖೆ .
5.	ಶ್ರೀ ವೀರಯ್ಯ ಪ್ರ.ದ.ಸ	1.ಗ್ರಾಮಲೆಕ್ಕಿಗರ ಸಿಬ್ಬಂದಿ ಶಾಖೆ ಕೆಲಸ ನಿರ್ವಹಣೆ 2. ಪ್ರಯಾಣ ಭತ್ಯೆ ಬಿಲ್ಲು ತಯಾರಿಕೆ 3. ಗ್ರಾಮ ಸಹಾಯಕರ ವೇತನ ನಿರ್ವಹಣೆ 4. ಪಟೇಲರು ಶಾನುಬೋಗರ ಪಿಂಚಣಿ ಬಿಲ್ಲು ತಯಾರಿಸುವುದು. 5. ಡಿ.ಸಿ ಬಿಲ್ಲುಗಳ ನಿರ್ವಹಣೆ.
6.	ಶ್ರೀ ಪಿ.ಎನ್ ಸಣ್ಣನಂಜಯ್ಯ ಪ್ರದಸ	1.ಜಾತಿ ಆದಾಯ ದೃಢೀಕರಣ ಪತ್ರಗಳು 2.ಬಾಗೂರು ಹೋಬಳಿ ಎನ್ ಸಿ ಆರ್ ಮತ್ತು ಡಿ.ಸಿ.ಬಿ. 3. ತಾಲ್ಲೂಕು ಡಿಸಿಬಿ ನಿರ್ವಹಣೆ.
7.	ಶ್ರೀ ಎನ್ ಬಿ. ವೀರಭದ್ರಯ್ಯ ಪ್ರದಸ	1.ಚುನಾವಣೆ -1 (ಕೇಂದ್ರ ಚುನಾವಣೆ) 2.ಚುನಾವಣೆ-2 (ರಾಜ್ಯ ಚುನಾವಣೆ)
8.	ಶ್ರೀಎನ್ ಬಿ. ಪರಶುರಾಮ್ ದ್ವಿದಸ	1. ನ್ಯಾಯಾಂಗ ಶಾಖೆ 2. ಜೀತ ವಿಮುಕ್ತಿ ಶಾಖೆ 3. ಕಸಬಾ ಹೋಬಳಿ ಎನ್ ಸಿ ಆರ್ ಮತ್ತು ಡಿ.ಸಿ.ಬಿ
9.	ಶ್ರೀ ದೇವರಸೇಗೌಡ ದ್ವಿದಸ	ಸಿಬ್ಬಂದಿ (1) ಶಾಖೆ, 2. ನುಗ್ಗೇಹಳ್ಳಿ ಎನ್ . ಸಿ. ಆರ್ ಶಾಖೆ.
10.	ಶ್ರೀಮತಿ ಮಣಿಯಮ್ಮ ದ್ವಿದಸ	1. ಮುಜರಾಯಿ ಶಾಖೆ 2. ಆರಾಧನಾ ಶಾಖೆ
11.	ಶ್ರೀ ಹೆಚ್ ಎಸ್ ರವಿಕುಮಾರ್ ದ್ವಿದಸ	1.ದರಖಾಸ್ತು 2. ಪಿಟಿಸಿಎಲ್ 3.ಅನಧಿಕೃತ ಮನೆಗಳ ಸಕ್ರಮ 4. ಭೂ ಸ್ವಾಧೀನ 5. ಅನ್ಯಸಂಕ್ರಮಣ ಗ್ರಾಮಾಂತರ 6. ನಾಡ ಕಛೇರಿ ಉಪ ತಹಶೀಲ್ದಾರ್ ಎಲ್ಲಾ ಹೋಬಳಿಯ ರಾ.ನಿ ಮತ್ತು ಗ್ರಾ.ಲೆ ಯವರ ದಫ್ತರ್ ಮತ್ತು ದಿನಚರಿ ಪರಿಶೀಲನೆ.
12.	ಶ್ರೀ ಹೆಚ್.ಎಸ್ ವಿಜಯ ಕುಮಾರ್ ದ್ವಿದಸ	1. ಆಡಳಿತ ಶಾಖೆ 2. ಕಛೇರಿ ಅಂಕಿ ಅಂಶ ಹಾಗೂ ಸಭೆಗಳ ಅಂಕಿ ಅಂಶ ಕ್ರೋಡೀಕರಣ ಶಾಖೆ 3. ತಹಶೀಲ್ದಾರ್ ದಿನಚರಿ ನಿರ್ವಹಣೆ 4. ಮಿಸಲೇನಿಯಸ್ ಡಿಸಿಬಿ 5..ಹಿರೀಸಾವೆ ಹೋಬಳಿ ಎನ್ ಸಿ ಆರ್ ಮತ್ತು ಡಿಸಿಬಿ 6. ರಾಷ್ಟ್ರೀಯ ಹಬ್ಬಗಳ ಆಚರಣೆ7. ಎನ್ ಸಿ ಆರ್ ಕ್ರೋಡೀಕೃತ ವರದಿ 8. ದೃಢೀಕರಣ ಪತ್ರಗಳು 9. ಅನ್ಯಸಂಕ್ರಮಣ ಕಸಬಾ ಹೋಬಳಿ 10. ಮಾಹಿತಿ ಹಕ್ಕು ಕಾಯಿದೆ ಶಾಖೆ.
13.	ಶ್ರೀ ಎಂ.ಆರ್. ಮಂಜುನಾಥ್ ದ್ವಿದಸ	1. ಭೂಸುಧಾರಣೆ 2. ಎನ್ ಸಿ ಆರ್ ಶ್ರವಣಬೆಳಗೊಳ ಹೋಬಳಿ 3. ಜನಸ್ಪಂದನ ಶಾಖೆ.
14.	ಶ್ರೀಮತಿ ಎಲ್ ಹೇಮಾವತಿ ಸಿ.ಶೇಖರ್ ದ್ವಿದಸ	1.ಪ್ರಕೃತಿ ವಿಕೋಪ ಶಾಖೆ 2.ಶವಸಂಸ್ಕಾರ ನಿಧಿ ಶಾಖೆ 3.ಸ್ವತಂತ್ರ್ಯ ಹೋರಾಟಗಾರರ ಮಾಶಾಸನ 4. ರಾಷ್ಟ್ರೀಯ ಕುಟುಂಬ ನೆರವು ಯೋಜನೆ ಶಾಖೆ 5. ದಂಡಿಗನಹಳ್ಳಿ ಹೋಬಳಿ ಎನ್ ಸಿ ಆರ್ ಮತ್ತು ಡಿಸಿಬಿ 6. ಆಶ್ರಯ ಯೋಜನೆ ಶಾಖೆ 7.ಜನಶ್ರೀಯೋಜನೆ ಶಾಖೆ.
15.	ಶ್ರೀಸತೀಶ್ ಕುಮಾರ್ ದ್ವಿದಸ	ಚುನಾವಣಾ ಶಾಖೆ
16.	ಶ್ರೀಮತಿ ಲಲಿತಮ್ಮ ದ್ವಿದಸ	ಅಭಿಲೇಖಾಲಯ ಶಾಖೆಯಲ್ಲಿ ಕೆಲಸ ನಿರ್ವಹಣೆ
17.	ಶ್ರೀ ಸೂರ್ಯನಾರಾಯಣ ಜಿಎನ್ , ದ್ವಿದಸ	ರವಾನೆ ಶಾಖೆ
18.	ಶ್ರೀ ಡಿ ಜ್ಞಾನೇಶ, ಸಾಂಕಿಕ ನಿರೀಕ್ಷಕರು	1.ಜನನ ಮತ್ತು ಮರಣ ದೃಢೀಕರಣ ಪತ್ರಗಳ ವಿತರಣೆ 2. ಸಾಂಕಿಕ ಇಲಾಖೆಗೆ ಸಂಬಂಧಿಸಿದ ಕೆಲಸಗಳ ನಿರ್ವಹಣೆ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
19.	ಶ್ರೀಮತಿ ಬಿ.ಟಿ ಸವಿತ, ದ್ವಿದಸ	ಚುನಾವಣೆ 1- ಕೇಂದ್ರ ಚುನಾವಣೆ
20.	ಕು॥ ರಶ್ಮಿ ಬಿ.ಎನ್, ಗ್ರಾ.ಲೆ	ಆಮದು ಶಾಖೆ
21.	ಶ್ರೀಮತಿ ಜಿ.ಕೆ.ವೀಣಾ, ಗ್ರಾ.ಲೆ	1. ವಿಧವಾ/ ಅಂಗವಿಕಲ /ವೃದ್ದಾಪ್ಯ/ ಸಂಧ್ಯಾ ಸುರಕ್ಷಾ ಯೋಜನೆ ಶಾಖೆ
22.	ಶ್ರೀಮತಿ ದಿವಿಜಾ, ಗ್ರಾ.ಲೆ	ಚುನಾವಣಾ ಶಾಖೆಯ ಕೆಲಸ ನಿರ್ವಹಣೆ.
23.	ಶ್ರೀ ಕೆ.ಆರ್ ಬೆಟ್ಟಪ್ಪ ಗ್ರಾ.ಲೆ	ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಣೆ
24.	ಶ್ರೀ ಕೆ.ಪಿ. ರಮೇಶ್, ಗ್ರಾ.ಲೆ	ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಣೆ
25.	ಶ್ರೀ ರವಿಶಂಕರ್, ಗ್ರಾಲೆ	ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಣೆ
26.	ಶ್ರೀ ಟಿ.ಜೆ .ಹೇಮರಾಜ್, ಗ್ರಾ.ಲೆ	ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಣೆ
27.	ಶ್ರೀ ಜಿ. ಗಿರೀಶ್, ಗ್ರಾಲೆ	ಭೂಮಿ ಯೋಜನೆಯಲ್ಲಿ ಕೆಲಸ ನಿರ್ವಹಣೆ
28.	ಶ್ರೀ ಆರ್. ಗುರುರಾಜ್, ಗ್ರಾ.ಲೆ	ಅಭಿಲೇಖಾಲಯ ಶಾಖೆ ನಿರ್ವಹಣೆ ಹಾಗೂ ಅಭಿಲೇಖಾಲಯ ಕಡತಗಳನ್ನು ಗಣಕೀಕರಣಕ್ಕೆ ಅಳವಡಿಸುವ ಕಾರ್ಯದ ಮೇಲ್ವಿಚಾರಣೆ.
29.	ಶ್ರೀವೆಂಕಟರಮಣ ಸ್ವಾಮಿ ಟೈಪಿಸ್ಟ್	ಕಛೇರಿ ಕಾಗದ ಪತ್ರಗಳ ಬೆರಳಚ್ಚು ಕಾರ್ಯ ನಿರ್ವಹಣೆ
30.	ಶ್ರೀ ಸಿದ್ದರಾಮಣ್ಣ ಅಟೆಂಡರ್	ಭೂ ಹಕ್ಕು ದಾಖಲಾತಿ ಶಾಖೆಯಲ್ಲಿ ಕಂದಾಯ ದಾಖಲೆಗಳ ದೃಢೀಕೃತ ಪ್ರತಿ ವಿತರಿಸುವ ಕಾರ್ಯ ನಿರ್ವಹಣೆ.
31.	ಶ್ರೀ ಲೋಕೇಶ ಅಟೆಂಡರ್	ಅಭಿಲೇಖಾಲಯ ಶಾಖೆಯ ಸಹಾಯಕರಾಗಿ ಕೆಲಸ ನಿರ್ವಹಣೆ.

ಆಹಾರ ಶಾಖೆ

32.	ಶ್ರೀ ಕೆ. ಚಂದ್ರಶೇಖರ್ ಆಹಾರ ನಿರೀಕ್ಷಕರು	ಆಹಾರ ಶಾಖೆಯ ಕೆಲಸಗಳ ನಿರ್ವಹಣೆ, ಮತ್ತು ಆಹಾರ ಶಿರಸ್ತೇದಾರರ ಪ್ರಭಾರ ಕೆಲಸಗಳು.
33.	ಶ್ರೀ ರಾಮೇಗೌಡ ಆ.ನಿ	ಆಹಾರ ಶಾಖೆಯ ಕೆಲಸಗಳ ನಿರ್ವಹಣೆ
34.	ಶ್ರೀ ಅಬ್ದುಲ್ ವಾಹೀದ್ ದ್ವಿದಸ	ಆಹಾರ ಶಾಖೆಯ ಕೆಲಸಗಳ ನಿರ್ವಹಣೆ

ಭೂ ಮಾಪನಾ ಶಾಖೆ

35.	ಶ್ರೀ ಡಿ.ಎನ್ ಮಹಾಲಿಂಗಪ್ಪ ಪರ್ಯಾವೀಕ್ಷಕರು	ಭೂ ಮಾಪನಾ ಶಾಖೆ ಮೇಲ್ವಿಚಾರಣೆ
36.	ಶ್ರೀ ನಿಂಗರಾಜು ಪ್ರ.ದ.ಭೂಮಾಪಕರು	ದುರಸ್ತಿ ಕೆಲಸ ನಿರ್ವಹಣೆ
37.	ಶ್ರೀ ಚಿಕ್ಕೇಗೌಡ ಪ್ರದಸ	1.ಭೂ ಮಾಪನ ಸಿಬ್ಬಂದಿ ಶಾಖೆ 2. ವೇತನ ಬಿಲ್ಲು ನಿರ್ವಹಣೆ ಪ್ರಯಾಣ ಭತ್ಯೆ ನಿರ್ವಹಣೆ 4.ಭೂ ದಾಖಲೆಗಳ ನಕ್ಷೆ ಮತ್ತು ನಕಲು ಕೋರಿ ಬಂದ ಅರ್ಜಿಗಳಿಗೆ ಶುಲ್ಕ ಪಾವತಿಸಿಕೊಳ್ಳುವಿಕೆ 5.ತಾತ್ಕಾಲಿಕ ಪೋಡಿ ಯೋಜನೆ ಬಂದ ಅರ್ಜಿಗಳ ಶುಲ್ಕ ಪಡೆದು ಕೊಳ್ಳುವಿಕೆ. 6.ಪರವಾನಗಿಗೆ ಭೂ ಮಾಪಕರಿಗೆ 11ಇ ನಕ್ಷೆಗಳ ಬಾಬ್ತು ಬಂದ ಹಣವನ್ನು ಪಾವತಿಸುವುದು. 7. ಭೂ ಮಾಪನಾ ಶಾಖೆಗೆ ಸಂಬಂಧಪಟ್ಟ ಪತ್ರ ವ್ಯವಹಾರ ಮಾಡುವುದು.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
38.	ಶ್ರೀ ಬಿ.ಎಂ. ಪುಟ್ಟಸ್ವಾಮಿ ದ್ವಿದಭೂ	1.ಪೋಡಿ ಶಾಖೆಯ ವಿಷಯ ನಿರ್ವಾಹಣೆ 2. ಪೋಡಿ ಕಡತಗಳ ನಿರ್ವಹಣೆ
39.	ಶ್ರೀ ಜಿ.ಆರ್. ಅಶೋಕ ದ್ವಿ.ದ.ಭೂಮಾಪಕರು	1.11ಇ ನಕ್ಷೆಗಳ ಪರಿಶೀಲನೆ.
40.	ಶ್ರೀ ಕೆ.ಹೆಚ್ ಪ್ರಕಾಶ್ ದ್ವಿದಭೂ	ಅಭಿಲೇಖಾಲಂು ಪಾಲಕರು.
41.	ಶ್ರೀ ಪಿ.ಪಾರ್ಥಸಾರಥಿ ದ್ವಿದಭೂ	1.ಹದ್ದು ಬಸ್ತು ಕೆಲಸ ನಿರ್ವಹಣೆ
42.	ಶ್ರೀ ಕೆ. ಯೋಗೇಶ ದ್ವಿದಭೂ	ನಕಲು ತಯಾರಿಕೆ
43.	ಶ್ರೀ ಹೆಚ್ ಜಿ. ರಮೇಶ್ ದ್ವಿದಭೂ	ನುಗ್ಗೇಹಳ್ಳಿ, ಹಿರೀಸಾವೆ, ಶ್ರವಣಬೆಳಗೊಳ ಹೋಬಳಿಗಳ ಅಡವಿ ಭೂಮಾಪಕರು
44.	ಶ್ರೀ ರಂಗಪ್ಪ ದ್ವಿದಭೂ	ತತ್ಕಾಲ್ ಪೋಡಿ ಕಡತಗಳ ನಿರ್ವಹಣೆ
45.	ಶ್ರೀ ಎನ್ ಎಸ್ ನಟೇಶ್ ದ್ವಿದಭೂ	ತತ್ಕಾಲ್ ಪೋಡಿ, 11ಈ, ಸ್ಕೆಚ್ ಪರಿಶೀಲನೆ.
46.	ಶ್ರೀ ವಿ.ಟಿ ಶಂಕರೇಗೌಡ ದ್ವಿದಭೂ	ಕಸಬಾ, ದಂಡಿಗನಹಳ್ಳಿ, ಬಾಗೂರು ಹೋಬಳಿಗಳ ಅಡವಿ ಭೂಮಾಪಕರು. ಮತ್ತು ತಾಲ್ಲೂಕು ಸರ್ವೆಯರ್
47.	ಶ್ರೀ ಬಿ.ಜೆ ಹೇಮಂತ ಕುಮಾರ್ ದ್ವಿದಭೂ	ದುರಸ್ತಿ ಕೆಲಸ ನಿರ್ವಹಣೆ
48.	ಶ್ರೀ ಹೆಚ್ ಎನ್ ಮಹಾದೇವಪ್ಪ ದ್ವಿದಭೂ	ಅನಧಿಕೃತ ಗೈರು ಹಾಜರಿ.
49.	ಎಂ.ಡಿ. ಬೊಮ್ಮೇಗೌಡ ದ್ವಿದಭೂ	ದುರಸ್ತಿ ಕೆಲಸ ನಿರ್ವಹಣೆ.
50.	ಆರ್. ಮಂಜೇಗೌಡ ದ್ವಿದಭೂ	ದುರಸ್ತಿ ಕೆಲಸ ನಿರ್ವಹಣೆ.
51.	ರಮೇಶ್. ದ್ವಿದಭೂ	ಹದ್ದು ಬಸ್ತು ಅಳತೆ ಕೆಲಸ ನಿರ್ವಹಣೆ.

ನಾಡ ಕಛೇರಿ ನುಗ್ಗೇಹಳ್ಳಿ

52.	ಸೋಮ ಶೇಖರ್ ಉಪ ತಹಶೀಲ್ದಾರ್	ನುಗ್ಗೇಹಳ್ಳಿ ಹೋಬಳಿಗೆ ಒಳಪಡುವ ಕೆಲಸ ಕಾರ್ಯಗಳ ಸಂಪೂರ್ಣ ಮೇಲ್ವಿಚಾರಣೆ.
53.	ಗೌಡೀರಪ್ಪ ದ್ವಿದಸ	ನುಗ್ಗೇಹಳ್ಳಿ ನಾಡ ಕಛೇರಿಗೆ ಒಳಪಡುವ ಕಾರ್ಯವ್ಯಾಪ್ತಿಗಳ ಸಂಪೂರ್ಣ ನಿರ್ವಹಣೆ

ನಾಡ ಕಛೇರಿ ಶ್ರವಣಬೆಳಗೊಳ

54.	ಸೋಮ ಶೇಖರ್ (ಪ್ರಭಾರ) ಉಪ ತಹಶೀಲ್ದಾರ್	ಶ್ರವಣಬೆಳಗೊಳ ಹೋಬಳಿಗೆ ಹೋಬಳಿಗೆ ಒಳಪಡುವ ಕೆಲಸ ಕಾರ್ಯಗಳ ಸಂಪೂರ್ಣ ಮೇಲ್ವಿಚಾರಣೆ.
55.	ಕೆ.ಎಂ. ರುದ್ರಮುನಿ ಪ್ರ.ದ.ಸ	ಶ್ರವಣಬೆಳಗೊಳ ಹೋಬಳಿಗೆ ಒಳಪಡುವ ಕೆಲಸ ಕಾರ್ಯವ್ಯಾಪ್ತಿಗಳ ಸಂಪೂರ್ಣ ನಿರ್ವಹಣೆ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ

ಕಾರ್ಯಪಾಲಕ ಸಿಬ್ಬಂದಿ ವಿವರ:

56.	ಕೆ.ವಿ. ನಂಜುಂಡಯ್ಯ, ರಾ.ನಿ ಕಸಬಾ	ಕಸಬಾ ಹೋಬಳಿ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ
57.	ಎ.ಸತ್ಯನಾರಾಯಣ, ಗ್ರಾ.ಲೆ. ಡಿ.ಕಾಳೇನಹಳ್ಳಿ ಕಲಸಿಂದ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಹಾಗೂ ಎಲ್ಲಾ ದೃಢೀಕರಣ ಪತ್ರಗಳಿಗೆ ವರದಿ ಮಾಡುವುದು, ಖಾತೆ ಬದಲಾವಣೆ ಕಡತ ತಯಾರಿಸುವುದು. ಸರ್ಕಾರದ ಇತರೆ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ ನಿರ್ವಹಿಸುವುದು.
58.	ಎ.ಎನ್ ಮೋಹನ್ ಕುಮಾರ್, ಗ್ರಾ.ಲೆ ಜನಿವಾರ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
59.	ಬಿ.ರಾಮೇಗೌಡ, ಗ್ರಾ.ಲೆ ನಲ್ಲೂರು	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
60.	ಸಂಭೇಗೌಡ, ಗ್ರಾಲೆ. ಗೌಡಗೆರೆ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
61.	ಎಸ್ ಎನ್ ಮಹಾದೇವಪ್ಪ, ಗ್ರಾಲೆ ದಿಂಡಗೂರು	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
62.	ಕೆ.ಕೆ. ಜವರೇಗೌಡ ಗ್ರಾ.ಲೆ ಬರಾಳು	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
63.	ಎ.ಜಿ. ನಿಂಗರಾಜು, ಗ್ರಾ.ಲೆ ಗೊಲ್ಲರಹೊಸಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಮರಣ ಮತ್ತು ಜನನ ನೋಂದಾಣಿ ಕೆಲಸ.
64.	ಕೆ.ಕೆ ತಿಮ್ಮಯ್ಯ ಗ್ರಾ.ಲೆ ಶ್ರೀನಿವಾಸಪುರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ

ರಾಜಸ್ವ ನಿರೀಕ್ಷಕರು: ಬಾಗೂರು ಹೋಬಳಿ

65.	ಬಿ.ಹೆಚ್ ಶಾಂತರಾಜು ರಾ.ನಿ ಬಾಗೂರು	ಬಾಗೂರು ಹೋಬಳಿ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
67.	ಬಲರಾಮ ಗ್ರಾ.ಲೆ ಬಾಗೂರು ವೃತ್ತ ಕುಂಬಾರಹಳ್ಳಿ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
68.	ಮೋಹನ್ ಕುಮಾರ್, ಗ್ರಾ.ಲೆ ಕಾರೇಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
69.	ಹೆಚ್ ಬಿ ಲೋಕೇಶ ಗ್ರಾ.ಲೆ ಬಳಘಟ್ಟ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
70.	ಎಂ.ಎಸ್ ಉದಯಕುಮಾರ್ ಗ್ರಾ. ಲೆ.	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
71.	ರಾಘವೇಂದ್ರ ಬಿ.ಟಿ ಗ್ರಾ.ಲೆ ಎಂ.ಶಿವರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
72.	ಲತೇಶ್ ಕುಮಾರ್ ಗ್ರಾ.ಲೆ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
73.	ನಂಜೇಗೌಡ ಗ್ರಾ.ಲೆ ನವಿಲೆ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
74.	ಭದ್ರಾಚಾರ್ ಗ್ರಾ.ಲೆ ಬ್ಯಾಡರಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ

ರಾಜಸ್ವ ನಿರೀಕ್ಷಕರು:- ಹಿರೀಸಾವೆ ಹೋಬಳಿ

75.	ರಾಮಶೆಟ್ಟಿ ರಾ.ನಿ. ಹಿರೀಸಾವೆ	ಬಾಗೂರು ಹೋಬಳಿ ವ್ಯಾಪ್ತಿಗೆ ಒಳಪಡುವ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
76.	ಸುಕುಂದರಾಜ್ ಗ್ರಾ.ಲೆ ಹಿರೀಸಾವೆ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
77.	ಶಿವಲಿಂಗಯ್ಯ ಗ್ರಾ.ಲೆ ದಿಡಿಗ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
78.	ಪ್ರಕಾಶ್ ಗ್ರಾ.ಲೆ ಮತಿಘಟ್ಟ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
79.	ಸೋಮಶೇಖರ ಗ್ರಾಲೆ ಬಾಳಗಂಚಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
80.	ಕೆಂಪಯ್ಯ ಗ್ರಾ.ಲೆ ಜನ್ನೇನಹಳ್ಳಿ, ಹೊಸಹಳ್ಳಿ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
81.	ನಿಂಗಪ್ಪಾಜಿ ಗ್ರಾ.ಲೆ ಕಬ್ಬಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ರಾಜಸ್ವ ನಿರೀಕ್ಷಕರು: ದಂಡಿಗನಹಳ್ಳಿ ಹೋಬಳಿ

82.	ದೇವರಾಜೇಗೌಡ ರಾ.ನಿ ದಂಡಿಗನಹಳ್ಳಿ	ದಂಡಿಗನಹಳ್ಳಿ ಹೋಬಳಿಗೆ ಸಂಬಂಧಿಸಿದ ಎಲ್ಲಾ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
83.	ಶ್ರೀಮತಿ ನಾಗರತ್ನಮ್ಮ ಗ್ರಾ.ಲೆ ದಂಡಿಗನಹಳ್ಳಿ ವೃತ್ತ ಬಳದಾರೆ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
84.	ದೇವರಾಜು ಗ್ರಾ.ಲೆ ಚೌಳಗಾಲ ವೃತ್ತ ಆನೇಕೆರೆ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
85.	ರಂಗೇಗೌಡ ಎಸ್ ಎಂ ಗ್ರಾ.ಲೆ ಬರಗೂರು ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
85.	ಪ್ರಕಾಶ್ ಗ್ರಾ.ಲೆ ಎನ್ ಬಂಡೇನಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
86.	ಕೆ.ಜೆ ಪುಟ್ಟಲಕ್ಕೇಗೌಡ ಗ್ರಾ.ಲೆ ಸಾಗತವಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
87.	ಕೆ.ಕೆ. ತಿಮ್ಮಯ್ಯ ಗ್ರಾ.ಲೆ ಕುಂದೂರು ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
88.	ಎನ್ ಟಿ. ರಾಮಕೃಷ್ಣ ಗ್ರಾ.ಲೆ ಯಲಿಯೂರು	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
89.	ಹೆಚ್ ಎನ್ ರಾಜು ಗ್ರಾ.ಲೆ ಕುಂಬೇನಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ರಾಜಸ್ವ ನಿರೀಕ್ಷಕರು :- ಜೆ.ಪಿ. ಉದಯಕುಮಾರ್ ಶ್ರವಣಬೆಳಗೊಳ ಹೋಬಳಿ.

90.	ಜೆ.ಪಿ. ಉದಯಕುಮಾರ್ ರಾ.ನಿ ಶ್ರವಣಬೆಳಗೊಳ ಹೋಬಳಿ	ದಂಡಿಗನಹಳ್ಳಿ ಹೋಬಳಿಗೆ ಸಂಬಂಧಿಸಿದ ಎಲ್ಲಾ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
91.	ಬಿ.ಕೆ. ನವೀನ್ ಕುಮಾರ್ ಗ್ರಾ.ಲೆ ಕೊತ್ತನಘಟ್ಟ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
92.	ದೊರೆ ಸ್ವಾಮಿ ಗ್ರಾ.ಲೆ ದಮ್ಮನಿಂಗಲ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
93.	ಯೋಗೇಶ್ ಎಸ್ ಎಲ್ ಗ್ರಾ.ಲೆ ವಡ್ಡರಹಳ್ಳಿ, ಕಾಂತರಾಜಪುರ ಪ್ರಭಾರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
94.	ಜಿ.ಸಿ.ವಿಜಯಕುಮಾರ್ ಗ್ರಾ.ಲೆ ಜುಟ್ಟನಹಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
95.	ಬಿ.ಟಿ. ರಾಜು ಪ್ರೇಂ ಕುಮಾರ್ ಗ್ರಾ.ಲೆ ಹಳೇಬೆಳಗೊಳ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
96.	ಸ್ವಾಮಾಚಾರ್ ಗ್ರಾ.ಲೆ. ಸುಂಡಳ್ಳಿ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
97.	ಜಿ.ಕೆ. ಕುಮಾರ ಸ್ವಾಮಿ ಗ್ರಾ.ಲೆ ಬೆಕ್ಕ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
98.	ಬಷೀರ್ ಅಹಮ್ಮದ್ ಗ್ರಾ.ಲೆ ಚಲ್ಯ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ರಾಜಸ್ವ ನಿರೀಕ್ಷಕರು ನುಗ್ಗೇಹಳ್ಳಿ ಹೋಬಳಿ

99.	ಕುಮಾರಸ್ವಾಮಿ ಎನ್.ಎಸ್. ರಾ.ನಿ ನುಗ್ಗೇಹಳ್ಳಿ ಹೋಬಳಿ	ನುಗ್ಗೇಹಳ್ಳಿ ಹೋಬಳಿಗೆ ಸಂಬಂಧಿಸಿದ ಎಲ್ಲಾ ಕಂದಾಯ ಇಲಾಖೆಯ ಎಲ್ಲಾ ಕೆಲಸಗಳ ನಿರ್ವಹಣೆ ಹಾಗೂ ಅವರ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರ ಕೆಲಸ ಕಾರ್ಯಗಳ ಮೇಲ್ವಿಚಾರಣೆ.
101.	ಸಿ. ಸ್ವಾಮಿ ಗ್ರಾ.ಲೆ. ಜಂಬೂರು	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಮೇಲ್ವಿಚಾರಕರು/ ವಿಷಯ ನಿರ್ವಾಹಕರ ಹೆಸರು ಮತ್ತು ಪದನಾಮ	ನಿರ್ವಹಿಸಬೇಕಾದ ಉಪ ವಿಭಾಗದ ವಿವರ
102.	ಜಿ.ಇ.ವಿಶ್ವನಾಥಾಚಾರ್ ಗ್ರಾ.ಲೆ ಕಲ್ಕೆರೆ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
103.	ಸತ್ಯನಾರಾಯಣ ಗ್ರಾ.ಲೆ ನುಗ್ಗೇಪಳ್ಳಿ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
104.	ನಾಗಪ್ಪ ಗ್ರಾ.ಲೆ. ಭೂವನಹಳ್ಳಿ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
105.	ಎಸ್.ಎನ್ ಮಹಾದೇವಪ್ಪ ಗ್ರಾ.ಲೆ ಎಂ. ಹೊನ್ನೇನಹಳ್ಳಿ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
106.	ಮೋಹನ್ ಕುಮಾರ್ ಗ್ರಾ.ಲೆ ಸಂತೆ ಶಿವರ ವೃತ್ತ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
107.	ಎಂ.ಸಿ.ಜವರೇಗೌಡ ಗ್ರಾ.ಲೆ ಸೊಸಲಗೆರೆ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.
108.	ಎಂ.ವಿ.ಉದಯಕುಮಾರ್ ಗ್ರಾ.ಲೆ ತಗಡೂರ	ಕಂದಾಯ ವಸೂಲಾತಿ, ಚುನಾವಣೆ ಕೆಲಸ ಆಹಾರ ಪಡಿತರ ಚೀಟಿ ಕೆಲಸ, ಇತರೆ ಬಾಕಿ ವಸೂಲಿ, ಜಾತಿ ಮತ್ತು ಆದಾಯ ದೃಢೀಕರಣ ಇತರೆ ಎಲ್ಲಾ ದೃಢೀಕರಣ ಖಾತೆ ಬದಲಾವಣೆ ಇತರೆ ಸರ್ಕಾರದ ಎಲ್ಲಾ ಕೆಲಸ ನಿರ್ವಹಿಸುವುದು ಜನನ ಮತ್ತು ಮರಣ ನೋಂದಾಣಿ ಕೆಲಸ.

ಕ್ರ. ಸಂ.	ಆಡಳಿತ ಶಾಖೆ	ನಾಗರೀಕರಿಗೆ ಮಾಹಿತಿ ಪಡೆಯುಲು ಈ ಕಛೇರಿಯಲ್ಲಿ ಇರುವ ಅನುಕೂಲಗಳ ವಿವರ
1.	ಸಿಬ್ಬಂದಿ ಶಾಖೆ	ಈ ಶಾಖೆಯಲ್ಲಿ ಈ ಕಛೇರಿಯ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳಾದ ಕಛೇರಿ ಸಿಬ್ಬಂದಿ ವರ್ಗದವರ ಹಾಗೂ ಕಾರ್ಯಪಾಲಕ ಸಿಬ್ಬಂದಿಗಳಾದ ಉಪ ತಹಶೀಲ್ದಾರ್ ರಾಜಸ್ವ ನಿರೀಕ್ಷಕರು ಗ್ರಾಮ ಲೆಕ್ಕಿಗರು ಗ್ರಾಮ ಸಹಾಯಕರುಗಳಿಗೆ ವೇತನ ಪ್ರಮಾಣ ಭತ್ಯೆ ಮತ್ತು ಇತರೆ ಭತ್ಯೆಗಳ ಬಿಲ್ಲು ತಯಾರಿಸುವುದು ಮತ್ತು ಬಟಾವಾಡೆ ಮಾಡುವುದು ಹಾಗೂ ಮಾಜಿ ಪಟೇಲರು ಮತ್ತು ಶಾನುಬೋಗರಿಗೆ ಅನುಕಂಪ ಭತ್ಯೆ ನೀಡುವುದು ಹಾಗೂ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸುವುದು. ಸಿಬ್ಬಂದಿ ವರ್ಗದವರ ರಜೆ ಮಂಜೂರಾತಿ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವುದು.

ಕ್ರ. ಸಂ.	ಆಡಳಿತ ಶಾಖೆ	ನಾಗರೀಕರಿಗೆ ಮಾಹಿತಿ ಪಡೆಯುಲು ಈ ಕಛೇರಿಯಲ್ಲಿ ಇರುವ ಅನುಕೂಲಗಳ ವಿವರ
2.	ಭೂ ಹಕ್ಕು ದಾಖಲಾತಿ	ಕರ್ನಾಟಕ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ಪಟ್ಟಾ ಜಮೀನುಗಳಲ್ಲಿ ಹಕ್ಕು ದಾಖಲೆಗಳ ನಿರ್ವಹಣೆ ಹಕ್ಕು ಬದಲಾವಣೆ ವಿವಾದಾಸ್ಪದ ಪ್ರಕರಣಗಳ ವಿಚಾರಣೆ ನಡೆಸುವದು. ಗಣಕೀಕೃತ ಆರ್ ಟಿ ಸಿ ಮತ್ತು ಮುಟೇಷನ್‌ಗಳನ್ನು ಗಣಕಯಂತ್ರದ ಮೂಲಕ 15.00 ರೂ.ಗಳನ್ನು ಪಡೆದು ವಿತರಿಸುವುದು. ಕಂದಾಯ ಮೇಲ್ಮನವಿ ಪ್ರಕರಣಗಳ ನೋಟೀಸು ಜಾರಿ ಮಾಡುವುದು ಭೂಮಿ ತಂತ್ರಾಂಶದ ಮುಖೇನ ಹಕ್ಕು ಬದಲಾವಣೆ ಕಾರ್ಯ ನಿರ್ವಹಿಸುವುದು ಸದರಿ ತಂತ್ರಾಂಶಗಿಂದ ಸರ್ವೆ ಸ್ಕೆಚ್ ಮ್ಯುಟೇಷನ್ ದಾಖಲೆಗಳನ್ನು ಸ್ಕ್ಯಾನ್ ಮಾಡಿ ಗಣಕೀಕೃತಗೊಳಿಸುವುದು. ಆರ್ ಟಿ ಸಿ ಮತ್ತು ಮ್ಯುಟೇಷನ್ ಕಿಯೋಸ್ಕನಲ್ಲಿ ವಸೂಲಾಗುವ ಹಣದ ಲೆಕ್ಕ ಪತ್ರ ನಿರ್ವಹಣೆ.
3.	ಬೇಡಿಕೆ ವಸೂಲಿ ಬಾಕಿ (ಡಿಸಿಬಿ)	ಕೃಷಿ ಹಿಡುವಳಿ ಜಮೀನುಗಳ ಮೇಲೆ ನಿಗದಿಪಡಿಸಿದ ಕಂದಾಯ ನೀರಾವರಿ ಮತ್ತು ಇತರೆ ಕಂದಾಯಗಳ ಬೇಡಿಕೆ ಪಟ್ಟಿ ತಯಾರಿಸುವುದು ವಸೂಲಿ ಮತ್ತು ಬಾಕಿಗಳ ನಿರ್ವಹಣೆ ಕೈಗೊಳ್ಳುವುದು ಸರ್ಕಾರದ ಇತರೆ ಇಲಾಖೆಗಳಿಂದ ವಸೂಲಿ ಮಾಡದೆ ಇರುವ ತೆರಿಗೆಗಳ ಬಾಕಿಗಳು ಮತ್ತು ಸಾಲಗಳನ್ನು ಬಾಕಿ ಇರುವ ಮೊತ್ತವನ್ನು ಕರ್ನಾಟಕ ಪಬ್ಲಿಕ್ ಮನೀಸಿ (ರಿಕವರಿ ಆಫ್ ಡ್ಯೂಸ್) ಕಾಯ್ದೆ 1979ರನ್ವಯ ಭೂ ಕಂದಾಯ ಬಾಕಿಯಂತೆ ವಸೂಲಾತಿಗೆ ಕ್ರಮ ವಹಿಸುವುದು.
4.	ಜಮಾ ಬಂದಿ	ಎಲ್ಲಾ ಕಂದಾಯ ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕಂದಾಯ ನಿಗದಿ ವಸೂಲಾತಿ ಮತ್ತು ಬಾಕಿ ವಿವರಗಳನ್ನೊಳಗೊಂಡಂತೆ ಹಾಗೂ ಭೂ ಕಂದಾಯ ಮನ್ನಾ ಮಾಡಲಾಗಿರುವ ಮತ್ತು ಸರ್ಕಾರಿ ಜಮೀನುಗಳ ವಿವರಗಳನ್ನೊಳಗೊಂಡಂತೆ ವಾರ್ಷಿಕ ಜಮಾ ಬಂದಿ ತಾಲ್ಲೂಕು ಜಮಾ ಬಂದಿಯ ತಾಲ್ಲೂಕು ತಹಶೀಲ್ದಾರ್‌ಗಳು ಮತ್ತು ಹುಜೂರು ಲೆಕ್ಕವನ್ನು ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಜಮಾ ಬಂದಿ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ.
5.	ಭೂ ಮಂಜೂರಾತಿ	ಈ ಶಾಖೆಯಲ್ಲಿ ಸರ್ಕಾರಿ ಜಮೀನುಗಳಲ್ಲಿ ಕೃಷಿಗೆ ಯೋಗ್ಯವಾದ ಜಮೀನನ್ನು ಭೂ ರಹಿತರಿಗೆ ಹಂಚುವುದು ಹಾಗೂ ಇನ್ನಿತರೆ ಸಾರ್ವಜನಿಕ ಉದ್ದೇಶಗಳಿಗೆ ಭೂ ಮಂಜೂರಾತಿ ಮಾಡುವುದು. ಗ್ರಾಮದ ಸ್ಮಶಾನ/ದನಕರುಗಳಿಗೆ ಮೇಯಲು ಗೋಮಾಳಕ್ಕೆ ಭೂಮಿ ಕಾಯ್ದಿರಿಸುವುದು. ಭೂ ಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಾದ ವ್ಯಕ್ತಿ ಮಂಜೂರಿ ದಿನಾಂಕದಿಂದ 15 ವರ್ಷಗಳ ಕಾಲ ಪರಬಾರೆ ಮಾಡಬಾರದೆಂಬ ಷರತ್ತಿಗೆ ಒಳಪಡಿಸಿ ಜಮೀನು ಮಂಜೂರಿ ಮಾಡಲಾಗುವುದು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗಕ್ಕೆ ಸಂಬಂಧಿಸಿದಂತೆ ಯಾವ ಕಾಲಕ್ಕೂ (ಶಾಶ್ವತ ಪರಭಾರೆ ನಿಷೇದ) ಪರಭಾರೆ ಮಾಡಬಾರದೆಂಬ ಷರತ್ತಿನೊಂದಿಗೆ ಮಂಜೂರಿ ಮಾಡಲಾಗುವುದು. ಮೇಲ್ಕಂಡ ನಿಯಮ ಉಲ್ಲಂಘನೆ ಮಾಡಿ ಜಮೀನು ಮಾರಾಟ ಮಾಡಿದ ಪಕ್ಷದಲ್ಲಿ ಪರಭಾರೆ ಮಾಡಿರುವುದನ್ನು ನಿಯಮಾನುಸಾರ ರದ್ದು ಪಡಿಸಲಾಗುವುದು.ಸರ್ಕಾರಿ ಜಮೀನು ಅನಧಿಕೃತ ಅತಿಕ್ರಮಣ ಮಾಡಿರುವುದನ್ನು ಕ್ರಮ ಜರುಗಿಸಿ ತೆರವುಗೊಳಿಸಲಾಗುವುದು.
6.	ಅನ್ಯಕ್ರಾಂತ (ಭೂ ಪರಿವರ್ತನೆ)	ಈ ಶಾಖೆಯ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ (ವಸತಿ ವಾಣಿಜ್ಯ ಕೈಗಾರಿಕೆ) ಭೂ ಪರಿವರ್ತನೆಗೆ ಅಗತ್ಯ ದಾಖಲಾತಿಗಳೊಂದಿಗೆ ಸ್ಥಳ ತನಿಖೆ ಮಾಡಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಭೂ ಪರಿವರ್ತನೆಗೂ ಮುನ್ನಾ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ ರಾಷ್ಟ್ರೀಯ ಹೆದ್ದಾರಿಗೆ 5 ಕಿ.ಮಿ ಒಳಪಡುವ ಪ್ರದೇಶಗಳಿಗೆ ದಂಡ ವಿಧಿಸಲು ಮಾನ್ಯ ಉಪ ವಿಭಾಗಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ರಾಷ್ಟ್ರೀಯ ಹೆದ್ದಾರಿಗೆ 5 ಕಿಲೋಮೀಟರ್ ನಂತರ ಒಳಪಡುವ ಪ್ರದೇಶಗಳಿಗೆ ಸಂಬಂಧಪಟ್ಟ ತಹಶೀಲ್ದಾರ್‌ರವರು ದಂಡ ವಿಧಿಸಿ ಅನ್ಯಕ್ರಾಂತ ಮಂಜೂರಾತಿಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ಕ್ರ. ಸಂ.	ಆಡಳಿತ ಶಾಖೆ	ನಾಗರೀಕರಿಗೆ ಮಾಹಿತಿ ಪಡೆಯುಲು ಈ ಕಛೇರಿಯಲ್ಲಿ ಇರುವ ಅನುಕೂಲಗಳ ವಿವರ
7.	ಚುನಾವಣೆ	ಪ್ರತಿ ವರ್ಷ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಮತದಾರರ ಭಾವಚಿತ್ರ ತೆಗೆಸುವ ಕೆಲಸ ರಾಜ್ಯ ಸ್ಥಳೀಯ ಸಂಸ್ಥೆಗಳ ಮತ್ತು ಕೇಂದ್ರದ ವಿವಿಧ ಚುನಾವಣೆಗಳನ್ನು ನಡೆಸುವಲ್ಲಿ ಸಕ್ರಿಯ ಪಾತ್ರ ವಹಿಸಲಾಗುತ್ತದೆ.
8.	ನ್ಯಾಯಾಂಗ ಶಾಖೆ	ಈ ಶಾಖೆಯಲ್ಲಿ CRPC ಕಲಂ 107, 108, 109 ಹಾಗೂ 110ರ ಅನ್ವಯ ದಾಖಲಾಗುವ ಪ್ರಕರಣಗಳ ವಿಚಾರಣೆ ನೆಡೆಸಿ ನಿಯಮಾನುಸಾರ ಆದೇಶ ಹೊರಡಿಸುವುದು. ಹಾಗೂ ಶಾಂತಿ ಸುವ್ಯವಸ್ಥೆ ಮತ್ತು ಸಾರ್ವಜನಿಕರ ನೆಮ್ಮದಿಗೆ ಭಂಗ ಬಾರದ ಹಾಗೆ ಅಗತ್ಯ ಕ್ರಮ ವಹಿಸಲಾಗುವುದು.
9.	ಮುಜರಾಯಿ ಮತ್ತು ಆರಾಧನಾ	ಧಾರ್ಮಿಕ ಮತ್ತ ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಾಲಯಗಳ ಕಾರ್ಯ ನಿರ್ವಹಣೆ ಮತ್ತು ಜಾತ್ರಾ ಉತ್ಸವಗಳನ್ನು ನಡೆಸುವುದು. ದೇವಾಲಯದ ಅರ್ಚಕರುಗಳಿಗೆ ತಸ್ತಿಕ್ ಹಣ ಮಂಜೂರು ಮಾಡುವುದು. ದೇವಾಲಯಗಳ ಆದಾಯದ ಹಾಗೂ ಖರ್ಚು ವೆಚ್ಚ ಲೆಕ್ಕ ನಿರ್ವಹಣೆ ಮಾಡುವುದು. ಆರಾಧನಾ ಯೋಜನೆಯಡಿಯಲ್ಲಿ ದೇವಸ್ಥಾನದ ಜೀರ್ಣೋದ್ದಾರ ಸಂಬಂದ ಅನುದಾನ ಮಂಜೂರಾದ ಬಾಬ್ತು ಹಣ ಬಳಕೆ ಮಾಡಿ ಬಳಕೆ ಪ್ರಮಾಣ ಪತ್ರವನ್ನು ಮಾನ್ಯ ಜಿಲ್ಲಾಧಿಕಾರಿಗೆ ಸಲ್ಲಿಸುವುದು.
10.	ಪ್ರಕೃತಿ ವಿಕೋಪ	ಈ ಶಾಖೆಯಲ್ಲಿ ಪ್ರಾಕೃತಿಕವಾಗಿ ಉಂಟಾಗುವ ಬರ ಮತ್ತು ಅತಿವೃಷ್ಟಿ ಸಂಭವಿಸಿದಾಗ ತುರ್ತು ರಕ್ಷಣಾತ್ಮಕ ಕ್ರಮಗಳನ್ನು ಜರುಗಿಸುವುದು. ಬರಗಾಲ ಉಂಟಾದಾಗ ಕಾಮಗಾರಿಗಳನ್ನು ತೆಗೆದುಕೊಂಡು ಕೃಷಿಕರು ಕೂಲಿಗಾರರಿಗೆ ಕೂಲಿ ಕೆಲಸ ಲಭ್ಯವಾಗುವಂತೆ ಸಾರ್ವಜನಿಕ ಮೂಲ ಸೌಲಭ್ಯವಾದ ಕುಡಿಯುವ ನೀರಿನ ಪೂರೈಕೆಗಾಗಿ ಕ್ರಮ ಕೈಗೊಳ್ಳುವುದು. ಅತಿವೃಷ್ಟಿ ಆದಾಗ ತುರ್ತು ರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗುವುದು. ನಷ್ಟ ಸಂಭವಿಸಿದವರಿಗೆ ಪರಿಹಾರ ಸೌಲಭ್ಯ ಒದಗಿಸುವುದು ಆಕಸ್ಮಿಕ ಬೆಂಕಿ ಮತ್ತು ಅತಿವೃಷ್ಟಿ ಅಪಘಾತಗಳು ಹಾಗೂ ಸಿಡಿಲು ಬಡಿದು ಮೃತಪಟ್ಟರವರ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು.
11.	ಮಾಶಾಸನಗಳು	ಅಂಗವಿಕಲ ಮಾಶಾಸನ: ಶೇಕಡ 75ಕ್ಕಿಂತ ಕಡಿಮೆ ಅಂಗವಿಕಲತೆ ಇದ್ದಲ್ಲಿ ಮಾಸಿಕ 400 ಶೇ: 75ಕ್ಕಿಂತ ಹೆಚ್ಚು ಇದ್ದಲ್ಲಿ ಮಾಸಿಕ 1000 ರೂ.ಗಳನ್ನು ಅರ್ಹ ಅರ್ಜಿದಾರರಿಗೆ ಮಂಜೂರು ಮಾಡಲಾಗುವುದು. ನಿರ್ಗತಿಕ ವಿಧವಾ ವೇತನ ವಾರ್ಷಿಕ ಆದಾಯ 6000/- ರೂ.ಗಳಿಗೆ ಒಳಪಟ್ಟು ನಿರ್ಗತಿಕ ವಿಧವೆಯರಿಗೆ ಮಾಸಿಕ 400/- ರೂ.ಗಳನ್ನು ಅರ್ಹಅರ್ಜಿದಾರಿಗೆ ಮಂಜೂರು ಮಾಡಲಾಗುವುದು. 3. ವೃದ್ದಾಪ್ಯ ವೇತನ : 65 ವರ್ಷ ಮೇಲ್ಪಟ್ಟು ಆದಾಯ ರಹಿತ ನಿರ್ಗತಿಕ ವೃದ್ದರಿಗೆ ಮಾಸಿಕ 400/- ರೂ.ಗಳನ್ನು ಅರ್ಹ ಅರ್ಜಿದಾರರಿಗೆ ಮಂಜೂರು ಮಾಡಲಾಗುವುದು. 4. ಸಂಧ್ಯಾ ಸುರಕ್ಷಾ ಯೋಜನೆ : 65 ವರ್ಷ ಮೇಲ್ಪಟ್ಟು ಹಾಗೂ ಮಾಸಿಕ 20000/- ರೂ.ಗಳ ಒಳಗೆ ಆದಾಯ ಉಳ್ಳವಯಸ್ಕರಿಗೆ ಮಾಸಿಕ 400/- ರೂ.ಗಳನ್ನು ಅರ್ಹ ಅರ್ಜಿದಾರರಿಗೆ ಮಂಜೂರು ಮಾಡಲಾಗುವುದು. ಮೇಲ್ಕಂಡ ಎಲ್ಲಾ ಮಾಶಾಸನಗಳನ್ನು ನಾಡ ಕಛೇರಿ ವ್ಯಾಪ್ತಿಗೆ ಒಳಪಡುವ ಹೋಬಳಿಗಳನ್ನು ಹೊರತುಪಡಿಸಿ ಸಂಬಂಧಿಸಿದ ಹೋಬಳಿ ಕಛೇರಿಗೆ ಬೇಟಿ ನೀಡಿ ಅರ್ಜಿದಾರರನ್ನು ಸಂದರ್ಶನ ಮಾಡಿ ಅರ್ಹ ಅರ್ಜಿದಾರರಿಗೆ ಸ್ಥಳದಲ್ಲಿಯೇ ಮಾಶಾಸನವನ್ನು ಮಂಜೂರು ಮಾಡಲಾಗುತ್ತದೆ. ಮೇಲ್ಕಂಡ ನಾಲ್ಕು ಮಾಶಾಸನಗಳು ಜಾರಿಗೆ ಬಂದ ದಿನಾಂಕದಿಂದ ಡಿಸೆಂಬರ್ 2008ರವರೆಗೆ ಈ ಕೆಳಕಂಡಂತೆ ಮಾಶಾಸನವನ್ನು ಮಂಜೂರು ಮಾಡಲಾಗಿರುತ್ತದೆ. 1. ಅಂಗವಿಕಲ ವೇತನ - 3402 2. ನಿರ್ಗತಿಕ ವಿಧವಾ ವೇತನ - 8409 3.ವೃದ್ದಾಪ್ಯ ವೇತನ 12772 4. ಸಂಧ್ಯ ಸುರಕ್ಷಾ ಯೋಜನೆ- 2271.

ಕ್ರ. ಸಂ.	ಆಡಳಿತ ಶಾಖೆ	ನಾಗರೀಕರಿಗೆ ಮಾಹಿತಿ ಪಡೆಯುಲು ಈ ಕಛೇರಿಯಲ್ಲಿ ಇರುವ ಅನುಕೂಲಗಳ ವಿವರ
12.	ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆ	ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಯಾವುದೇ ಕುಟುಂಬದಲ್ಲಿ ದುಡಿಯುವ ಪ್ರಮುಖ ವ್ಯಕ್ತಿಯು ಮೃತಪಟ್ಟಲ್ಲಿ ಮೃತಪಟ್ಟ ದಿನಾಂಕದಿಂದ ಆರು ತಿಂಗಳ ಒಳಗೆ ಅರ್ಜಿಸಲ್ಲಿಸಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ 12,000/- ಹನ್ನೆರಡು ಸಾವಿರ ಮೀರಿರಬಾರದು ಹಾಗೂ ಮೃತಪಟ್ಟ ವ್ಯಕ್ತಿ 65 ವರ್ಷ ಮೀರಿದ ಪಕ್ಷದಲ್ಲಿ ಅರ್ಹ ಅರ್ಜಿದಾರರಿಗೆ 10000/- ರೂ.ಗಳ ಸಹಾಯಧನವನ್ನು ಮಂಜೂರು ಮಾಡಲಾಗುವುದು. ಸದರಿ ಯೋಜನೆ ಪ್ರಾರಂಭಮಾಡಿದ ದಿನಾಂಕದಿಂದ ಡಿಸೆಂಬರ್ 2008ರ ಅಂತ್ಯಯದವರೆಗೆ 1535 ಫಲಾನುಭವಿಗಳಿಗೆ 10000/- ರೂ.ಗಳಿಗೆ ಸಹಾಯ ಧನ ಮಂಜೂರಿ ಮಾಡಲಾಗಿದೆ.
13.	ಅಂತ್ಯ ಸಂಸ್ಕಾರ ಯೋಜನೆ	ಬಡತನ ರೇಖೆಗಿಂತ ಒಳಪಟ್ಟ ಕುಟುಂಬದಲ್ಲಿ ಯಾವುದೇ ವ್ಯಕ್ತಿ ಮೃತಪಟ್ಟಲ್ಲಿ ಆ ವ್ಯಕ್ತಿಯ ಅಂತ್ಯ ಸಂಸ್ಕಾರಕ್ಕಾಗಿ 1000/- ರೂ.ಗಳ ಸಹಾಯಧನ ಮೃತಪಟ್ಟ ವ್ಯಕ್ತಿಯ ಕುಟುಂಬದವರಿಗೆ ಮಂಜೂರಿ ಮಾಡಲಾಗುವುದು. ಸದರಿ ಯೋಜನೆ ಪ್ರಾರಂಭವಾದಾಗಿನಿಂದ ಡಿಸೆಂಬರ್ 2008ರ ಅಂತ್ಯದ ವರೆಗೆ 1198 ಕುಟುಂಬಗಳಿಗೆ ಸಹಾಯಧನ ನೀಡಲಾಗುವುದು.
14.	ಆಡಳಿತ	ತಾಲ್ಲೂಕು ಆಡಳಿತ ವ್ಯಾಪ್ತಿಯಲ್ಲಿ ಬರುವ ಕೆಲವೊಂದು ಇಲಾಖೆಗಳ ಕಛೇರಿಗಳ ತನಿಖೆ ಮಾಡುವುದು. ತಾಲ್ಲೂಕಿನಲ್ಲಿ ನಡೆಯುವ ತಾಲ್ಲೂಕು ಉತ್ಸವ ರಾಷ್ಟ್ರೀಯ ಹಬ್ಬಗಳ ತಾಲ್ಲೂಕು ಅಭಿವೃದ್ದಿ ಕಾರ್ಯಕ್ರಮಗಳ ಬಗ್ಗೆ ಜರುಗುವ ಸಭೆ ಸಮಾರಂಭಗಳನ್ನು ನಿರ್ವಹಣೆ ಮಾಡುವುದು. ಅಧಿಕಾರಿಗಳ ಮಾಸಿಕ ಸಭೆ ಇತರೆ ಶಿಷ್ಟಾಚಾರಗಳ ಸಭೆ ನಿರ್ವಹಣ ಮಾಡುವುದು.
15.	ಭೂ ಸ್ವಾದೀನ	ಸಾರ್ವಜನಿಕ ಕಟ್ಟಡ ನೀರಾವರಿ ಯೋಜನೆಗಳು ವಿದ್ಯುತ್ ಪ್ರಸರಣ ನಿಗಮ ವಸತಿ ಯೋಜನೆ ಹಾಗೂ ಇತ್ಯಾಧಿ ಸಾರ್ವಜನಿಕ ಉಪಯುಕ್ತತೆಗಳಿಗೆ ಪಟ್ಟಾ ಭೂಮಿಗಳನ್ನು ಭೂ ಸ್ವಾಧೀನ ಪಡಿಸಿಕೊಳ್ಳುವ ಉದ್ದೇಶ ಅಧಿಸೂಚನೆ 4 (1) ಮತ್ತು 6(1) ಗಳನ್ನು ಪ್ರಚಾರ ಪಡಿಸುವುದು. ಹಾಗೂ ನೋಟೀಸ್‌ಗಳನ್ನು ಜಾರಿಮಾಡುವುದು. ಭೂ ಸ್ವಾಧೀಸಾಧಿಕಾರಿಗಳ ಕಛೇರಿಯಿಂದ ಬರುವ ನಿರ್ದೇಶಗಳಂತೆ ಕಡತ ತಯಾರಿಸಿ ಪ್ರಸ್ತಾವನೆ ಸಲ್ಲಿಸುವುದು.
16.	ಆಮದು ಶಾಖೆ	ಕಾರ್ಯಾಲಯಕ್ಕೆ ಸ್ವೀಕೃತವಾಗುವ ಸರ್ಕಾರ ಅಥವಾ ಕಾರ್ಯಾಲಯದ ಮತ್ತು ಸಾರ್ವಜನಿಕರಿಂದ ಲೋಕಸಭೆ/ ವಿಧಾನಪರಿಷತ್ ಹಾಗೂ ಸ್ಥಳೀಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತಿಯಾದ ಫ್ಯಾಕ್ಸ್ ತಂತಿ ಸಂದೇಶ ಸುತ್ತೋಲೆ ಸಾಮಾನ್ಯ ಅರ್ಜಿಗಳನ್ನು ಸಾಮಾನ್ಯ ಪುಸ್ತಕದಲ್ಲಿ ಮತ್ತು ಇತರೆ ಪುಸ್ತಕಗಳಲ್ಲಿ ನೋಂದಾಣಿ ಮಾಡಿಕೊಂಡು ಆಯಾಯಾ ಶಾಖೆಯ ವಿಷಯ ನಿರ್ವಾಹಕರಿಗೆ ವಿತರಣೆಯನ್ನು ಮಾಡುವುದು.
17.	ರವಾನೆ ಶಾಖೆ	ಈ ಕಾರ್ಯಾಲಯದಿಂದ ಬಿಡುಗಡೆ ಆಗುವ ವ್ಯವಹಾರಗಳ ಪತ್ರಗಳು ಆದೇಶಗಳು ಹಾಗೂ ನೋಟೀಸುಗಳನ್ನು ರವಾನೆ ಪುಸ್ತಕದಲ್ಲಿ ನೋಂದಣಿ ಮಾಡಿಕೊಂಡು ಸಂಬಂಧಪಟ್ಟ ಕಛೇರಿ ಹಾಗೂ ಇತರರಿಗೆ ರವಾನೆ ಮಾಡುವುದು ಇವುಗಳಲ್ಲಿ ಕೆಲವು ಅಂಚೆ ಮೂಲಕ ಹಾಗೂ ಕೆಲವು ಸ್ಥಳೀಯವಾಗಿ ಜಾರಿ ಮಾಡುವ ಪತ್ರಗಳನ್ನು ಪ್ರತ್ಯೇಕ ವಹಿಯಲ್ಲಿ ನೋಂದಾಯಿಸಿ ರವಾನೆ ಮಾಡುವುದು ಹಾಗೂ ಅಂಚೆ ಚೀಟಿಗಳ ಲೆಕ್ಕವನ್ನು ಸಹ ಇಡಲಾಗುವುದು.

ಕ್ರ. ಸಂ.	ಆಡಳಿತ ಶಾಖೆ	ನಾಗರೀಕರಿಗೆ ಮಾಹಿತಿ ಪಡೆಯುಲು ಈ ಕಛೇರಿಯಲ್ಲಿ ಇರುವ ಅನುಕೂಲಗಳ ವಿವರ
18.	ಭೂ ಸುಧಾರಣೆ	ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರಲ್ಲಿ ಅವಕಾಶವಿದ್ದಂತೆ ಕಲಂ 66 ರಡಿಯಲ್ಲಿ ಎಲ್ಲಾ ಭೂ ಮಾಲೀಕರಿಂದ ಭೂ ಹಿಡುವಳಿಯ ಘೋಷಣೆ ಪಡೆಯುವುದು. ಕಲಂ 38ರ ಅಡಿಯಲ್ಲಿ ವಸತಿ ನಿರ್ಮಾಣ ಮಾಡಿದ ಜಮೀನನ್ನು ಮಂಜೂರು ಮಾಡುವುದು ಕಲಂ 78ರ ಅಡಿಯಲ್ಲಿ ಹೆಚ್ಚುವರಿ ಜಮೀನನ್ನು ಭೂ ರಹಿತರಿಗೆ ಮಂಜೂರು ಮಾಡುವ ಕೆಲಸದ ಮೇಲ್ವಿಚಾರಣೆ 78 ರಡಿಯಲ್ಲಿ ಗೇಣಿ ಭೂಮಿಯನ್ನು ಮಂಜೂರಿ ಮಾಡುವುದು. ಘೋಷಣೆ ಮಾಡುವುದು ಮಾರಾಟ ಮಾಡಿದ ಕೃಷಿಯೇತರ ಕಾರ್ಯಗಳಿಗೆ ಉಪಯೋಗ ಮಾಡಿದ ಮತ್ತು ಹಿಡುವಳಿಯನ್ನು ಉಲ್ಲಂಘನೆಮಾಡಿ ಮಾರಾಟಮಾಡಿದ ಜಮೀನುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು ಮಾಜಿ ಭೂ ಮಾಲೀಕರಿಗೆ ಪರಿಹಾರ ಧನ ಮಂಜೂರಾತಿ ಪ್ರಕ್ರಿಯೆ ಮೇಲ್ವಿಚಾರಣೆ ಸಂಘ ಸಂಸ್ಥೆಗಳಿಗೆ ನಿರ್ವಹಣೆಗಾಗಿ ಬೇಕಾಗುವ ಜಮೀನನು ನಿರ್ಣಯಿಸುವುದು. ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 109ರಡಿ ಸಂಘ ಸಂಸ್ಥೆಗಳು ಜಮೀನು ಹೊಂದಬೇಕಾಗಿದ್ದಲ್ಲಿ ಸರ್ಕಾರದ ಸುತ್ತೋಲೆ ನಂ : ಸಂವಶ್ಯಶಾಇ 47 ಶಾಸನ 2001 ದಿನಾಂಕ: 23-4-03ರಂತೆ ಅನುಮತಿ ಪಡೆಯಬೇಕಾಗಿರುತ್ತದೆ. 2 ಯುನಿಟ್‌ವರೆಗೆ ವಿದ್ಯಾಸಂಸ್ಥೆಗಳಿಗೆ 10 ಯುನಿಟ್‌ವರೆಗೆ ಕೈಗಾರಿಕಾ ಉದ್ದೇಶಕ್ಕೆ 1/4 ಯುನಿಟ್‌ವರೆಗೆ ಮಾನ್ಯತೆ ಪಡೆದ ಅಥವಾ ನೋಂದಾಯಿತ ಪೂಜಾ ಸ್ಥಳಕ್ಕೆ ವ್ಯವಸಾಯೇತರ ಉದ್ದೇಶಕ್ಕೆ ರಾಜ್ಯಸರ್ಕಾರದ ವಸತಿ ಯೋಜನೆಗಳಿಗೆ 10 ಯುನಿಟ್‌ಗಳವರೆಗೆ ಜಮೀನು ಖರೀದಿಸಲು ಅನುಮತಿಯನ್ನು ಜಿಲ್ಲಾಧಿಕಾರಿಗಳಿಂದ ಪಡೆಯಬೇಕಾಗಿರುತ್ತವೆ. ಮೇಲ್ಕಂಡ ಮಿತಿಗಿಂತ ಹೆಚ್ಚು ಜಮೀನು ಖರೀದಿಸಲು ಬರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಒಪ್ಪಿಸಲಾಗುತ್ತದೆ. 2.00 ಲಕ್ಷ ವಾರ್ಷಿಕ ಆದಾಯ ಮಿತಿಯುಳ್ಳವರಿಗೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 80 ರಡಿ ವೈಯಕ್ತಿಕವಾಗಿ ಜಮೀನುಖರೀದಿಸಲು ಉಪ ವಿಭಾಗಾಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಕಲಂ 79ಎ ಮತ್ತು 79ಬಿ ಉಲ್ಲಂಘಿಸಿದ ಜಮೀನುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
19.	ಅಭಿಲೇಖಾಲಯ	ಕಾರ್ಯಾಲಯದ ಪ್ರತಿಯೊಂದು ಶಾಖೆಯಿಂದ ನಿರ್ವಹಣೆಗಾಗಿ ಕಛೇರಿ ಸಹಕಾರದಿಂದ ಬೇರೆ ಬೇರೆ ಬಾಕಿಯು ವಿಲೇಗಳ ಬೇರೆ ಬೇರೆ ವರ್ಗಗಳ [illegible] ಪತ್ರಗಳ ವ್ಯವಹಾರಗಳನ್ನು ಎಷ್ಟು ಕಾಲ ಕಾಯ್ದಿರಿಸಬೇಕೆಂಬುದನ್ನು ತಿಳಿದು ಈ ಕೆಳಕಾಣಿಸಿದ ಪ್ರಕಾರ ವಿಭಜನೆ ಮಾಡಲಾಗುವುದು ಹಾಗೂ ಶ್ರೇಣಿವಾರು ಹೊಂದಿಸಿ ಇಡಲಾಗುವದು. 1. ಎ.ಡಿಸ್ - ಅನಿರ್ದಿಷ್ಟಕಾಲ 2. ಬಿ.ಡಿಸ್ - ಮೂವತ್ತು ವರ್ಷ 3. ಸಿ. ಡಿಸ್ - ಹತ್ತು ವರ್ಷ 4. ಡಿ. ಡಿಸ್ - ಐದು ವರ್ಷ 5. ಇ.ಡಿಸ್ - ಒಂದು ವರ್ಷ ಮೇಲೆ ಕಾಣಿಸಿದ ವಿಲೇವಾರಿಗಳ ಅವಧಿ ಮುಗಿದ ನಂತರ ಕಛೇರಿಯ ಮುಖ್ಯಸ್ಥರ ಆದೇಶವನ್ನು ಪಡೆದು ಎ ಮತ್ತು ಬಿ ಡಿಸ್ ಗಳಲ್ಲಿನ ವಹಿಗಳನ್ನು ಹೊರತು ಪಡಿಸಿ ನಾಶಗೊಳಿಸಲಾಗುವುದು.
		ಕಾರ್ಯಾಲಯದ ಪೀಠೋಪಕರಣಗಳ ಕಾರ್ಯ ನಿರ್ವಹಣೆ ಯಂತ್ರ ಸಾಮಗ್ರಿಗಳ ಖರೀದಿ ಮತ್ತು ದುರಸ್ತಿ ಕಾರ್ಯಾಲಯದ ವ್ಯವಹಾರಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿ ಖರೀದಿ ಮತ್ತು ವಿತರಣೆ ಕಛೇರಿಯ ಸುವ್ಯವಸ್ಥೆ ವಿದ್ಯುದೀಕರಣ ನಿರ್ವಹಣೆ ವಿವಿಧ ಕಾಯ್ದೆ ಅಡಿ ಇರುವ ಎಲ್ಲಾ ಪುಸ್ತಕಗಳನ್ನು ಸುಸ್ಥಿತಿಯಲ್ಲಿ ಇಡುವುದು ಮತ್ತು ಸಂಬಂಧಪಟ್ಟ ವಿಷಯ ನಿರ್ವಾಹಕರು ಕಡತ ಬೇಕೆಂದು ಕೋರಿಕೆ ಚೀಟಿ ಸಲ್ಲಿಸಿದಾಗ ಸಂಬಂಧಪಟ್ಟ ಕಡತವನ್ನು ನೀಡುವುದು ಅಲ್ಲದೆ ಸಾರ್ವಜನಿಕರು ಕೋರುವ ದಾಖಲೆಗಳನ್ನು ನಿಯಮಾನುಸಾರ ನೀಡಲಾಗುವುದು.

ಬಿ.ಎನ್. ವರಪ್ರಸಾದ್ ರೆಡ್ಡಿ, ಕ.ಆ.ಸೇ.,
ತಹಸೀಲ್ದಾರ್,
ಚನ್ನರಾಯಪಟ್ಟಣ ತಾಲ್ಲೂಕು. ಹಾಸನ ಜಿಲ್ಲೆ

ಪಿ.ಆರ್.410

III -F6-B/B

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/157/ಡಿಟಿಸಿಆರ್/2007–08, ದಿನಾಂಕ:20ನೇ ಜೂನ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:	ಆರೋಪಿಗಳು:
ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ, ಮಂಗಳೂರು .	1.ಟಿ.ಎ ಬಾಬು, ಬಿನ್: ಟಿ.ಕೆ ಅಯ್ಯಪ್ಪನ್ ತೋಟಂ ಪರಂಬಿಲ್ ಮನೆ, ಪಾಲರ್ ವೆಟ್ಟ, ಪುಣತ್ತರ ಗ್ರಾಮ.ಕೊಚ್ಚಿನ್, ಕೇರಳ ರಾಜ್ಯ, (ವಾಹನ ಚಾಲಕ) 2. ರಾರ್ಬಟ್, ಬಿನ್ ದಿ:ಮೈಕೆಲ್, ಪಾಲರ್ ವೆಟ್ಟ, ಪುಣತ್ತರ ಗ್ರಾಮ, ಕೊಚ್ಚಿನ್, ಕೇರಳ ರಾಜ್ಯ, ಮತ್ತು ಇತರ ಒರ್ವ ಆರೋಪಿ.

ಪ್ರಕರಣದ ಮುಖ್ಯಾಂಶಗಳು:

ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ, ಮಂಗಳೂರು ಇವರು ದಿನಾಂಕ:08.09.2007 ರಂದು ಉಡುಪಿ ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಪಣಂಬೂರು ಬೈಕಂಪಾಡಿ ಕಡೆಯಿಂದ ವಾಹನಗಳಲ್ಲಿ ಅಕ್ರಮವಾಗಿ ಕೇರಳ ರಾಜ್ಯಕ್ಕೆ ಮದ್ಯಸಾರ ಸಾಗಾಟ ನಡೆಯುತ್ತಿದ್ದೆ ಎಂದು ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂಧಿಗಳೊಂದಿಗೆ ಬೆಳಗ್ಗಿನ ಜಾವ 6–30 ಗಂಟೆ ಸಮಯಕ್ಕೆ ಪಣಂಬೂರು ಬೈಕಂಪಾಡಿ ದೀಪಕ್ ಪೆಟ್ರೋಲ್ ಬಂಕ್ ಬಳಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಬೈಕಂಪಾಡಿ ಕೈಗಾರಿಕಾ ಕಡೆಯಿಂದ ಬರುತ್ತಿದ್ದ ಗೂಡ್ಸ್ ಟೆಂಪೋ ನೊಂದಣಿ ಸಂ: KL-11-D-2565 ಇದನ್ನು ತಪಾಸಣೆಗಾಗಿ ನಿಲ್ಲಿಸಿ ಪರಿಶೀಲನೆ ಕೈಗೊಂಡಾಗ, ಸದ್ರಿ ವಾಹನದಲ್ಲಿ ಕೇಟರಿಂಗ್‌ಗೆ ಸಂಬಂಧಿಸಿದ ಡೈನಿಂಗ್ ಟೇಬಲ್‌ಗಳು ಮತ್ತು ಕುರ್ಚಿಗಳ ಅಡಿಗಳಲ್ಲಿ ಪಾಲಿಥೀನ್ ಟಾರ್ಪಾಲ್‌ಗಳನ್ನು ಮುಚ್ಚಿ 35 ಲೀಟರು ಗಾತ್ರದ 80 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 2800.000 ಲೀಟರ್ ಮದ್ಯಸಾರ ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆ ಹಚ್ಚಿ , ಸದ್ರಿ ಮದ್ಯಸಾರ ಸಾಗಾಟ ಮಾಡಲು ಯಾವುದೇ ಅಧಿಕೃತ ದಾಖಲಾತಿಗಳ ಬಗ್ಗೆ ವಾಹನದಲ್ಲಿ ಇದ್ದ ಇಬ್ಬರು ವ್ಯಕ್ತಿಗಳಲ್ಲಿ ಕೇಳಲಾಗಿ, ಯಾವುದೇ ರಹದಾರಿ ಪತ್ರ ದಾಖಲೆಗಳು ಇಲ್ಲವೆಂದು ತಿಳಿಸಿದ್ದು, ಇದು ಅಕ್ರಮ ಮದ್ಯಸಾರ ಸಾಗಾಟವಾಗಿರುವುದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 1965ರ ಕಲಂ 14,15(1)ರ ಪ್ರಕಾರ ಅಪರಾಧ ಹಾಗೂ ಕಲಂ 32,34 ಮತ್ತು 43(3)ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ವಾಹನ, ಮದ್ಯಸಾರ ಮತ್ತು ಈ ಕೆಳಕಂಡ ಎಲ್ಲಾ ಸೊತ್ತುಗಳನ್ನು ಪಂಚರ ಸಮಕ್ಷಮ ಜಪ್ತುಮಾಡಿ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ, ವಾಹನದಲ್ಲಿದ್ದ ಆರೋಪಿಗಳಾದ 1) ಟಿ.ಎ ಬಾಬು, ಬಿನ್ ಟಿ.ಕೆ ಅಯ್ಯಪ್ಪನ್, ತೋಟಂ ಪರಂಬಿಲ್ ಮನೆ, ಪಾಲರ್‌ವೆಟ್ಟ, ಪುನಿತ್ತರಗ್ರಾಮ,ಕೊಚ್ಚಿನ್,ಕೇರಳರಾಜ್ಯ, (ವಾಹನ ಚಾಲಕ) ರಾಬರ್ಟ್, ಬಿನ್: ದಿ:ಮೈಕೆಲ್, ಪಾಲರ್ ವೆಟ್ಟ, ಪುನಿತ್ತರ ಗ್ರಾಮ, ಕೇರಳ ರಾಜ್ಯ, ಇವರುಗಳ ವಿರುದ್ದ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣಾ,ಪಣಂಬೂರು ಇವರ ತಕ್ಷೀರು ಸಂಖ್ಯೆ:116/2007, ದಿನಾಂಕ:08.09.2007 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿ, ಮಹಜರು ಮತ್ತು ಸೊತ್ತುಗಳ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಈ ಪ್ರಾಧಿಕಾರದ ಆದೇಶದ ಮೇರೆಗೆ ಸೊತ್ತು ಮತ್ತು ಕಡತವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸುವರೇ ಪೊಲೀಸ್ ಉಪನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣಾ, ನವಮಂಗಳೂರು ಇವರು ಪ್ರಾಧಿಕಾರದಲ್ಲಿ ಅನುಮತಿ ಕೋರಿದ ಮೇರೆಗೆ ಪ್ರಾಧಿಕಾರದ ದಿನಾಂಕ:13.11.2007ರ ಆದೇಶದಲ್ಲಿ ಸೊತ್ತುಗಳನ್ನು ಅಬಕಾರಿ ಉಪನಿರೀಕ್ಷಕರು, ಜಾರಿ ಮತ್ತು ತನಿಖೆ, ಮಂಗಳೂರುಉತ್ತರ ಇವರಿಗೆ ಹಸ್ತಾಂತರಿಸಲು ಅದೇಶಿಸಲಾಗಿರುತ್ತದೆ. ಆ ಪ್ರಕಾರ ಮೊಕದ್ದಮೆಗೆ ಸಂಬಂಧಿಸಿ ಸೊತ್ತು ಹಾಗೂ ಕಡತಗಳನ್ನು ಅಬಕಾರಿಉಪನಿರೀಕ್ಷಕರು(1), ಮಂಗಳೂರು ಉತ್ತರ ವಲಯ–I ಇವರಿಗೆ ಹಸ್ತಾಂತರಿಸಲಾಗಿರುತ್ತದೆ.

ಸೊತ್ತುಗಳ ವಿವರ

1) ಗೂಡ್ಸ್ ಟೆಂಪೋ 609 ನೊಂದಣಿ ಸಂ: KL-11D-2565
2) ತಲಾ 35 ಲೀಟರಿನ 80 ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ತುಂಬಿಸಲಾದ ಮದ್ಯಸಾರ–2800 ಲೀಟರು

(ಸದ್ರಿ ಮದ್ಯಸಾರದಿಂದ ತಲಾ 1 ಲೀಟರಿನ ಮೂರು ಕ್ಯಾನುಗಳಲ್ಲಿ ಮದ್ಯಸಾರವನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಗಿದೆ)

3) ಬಿಳಿ ಪಾಲಿಥೀನ್ ಟರ್ಪಾಲ್ –1
4) ಪ್ಲಾಸ್ಟಿಕ್ ಕುರ್ಚಿಗಳು–60

5) ಕಬ್ಬಿಣದ ಟೇಬಲ್ ಸ್ಟಾಂಡ್ ಗಳು-30

6) ಮೇಜಿನ ಹಲಗೆಗಳು-36

7) ನೈಲಾನ್ ಹಗ್ಗ-1

ತಕ್ಷೀರಿನಲ್ಲಿ ವಶಪಡಿಸಿಕೊಂಡ ಗೂಡ್ಸ್ ಟೆಂಪೋ ನೊಂದಣಿ ಸಂ:KL-11-D-2565 ರ ನೊಂದಾಣಿ ಮಾಲೀಕರೆಂದು ಹೇಳಿಕೊಂಡ ಶ್ರೀ ಮುರುಳೀಧರನ್ ಬಿನ್:ಮಾಧವನ್, 7/571 ಕರತ್ತ್ ಪರಂಬಿಲ್ ಹೌಸ್, ಐಯನ್ ತೋಲ, ತ್ರಿಶೂರ್, ಕೇರಳ ರಾಜ್ಯ ಇವರ ಪರ ಜಿ.ಪಿ.ಎದಾರರಾದ ಶ್ರೀ ವಿ.ಜಿ. ಬಿಂದಾಸ್ ಬಿನ್ ಗೋಪಾಲನ್, ವೆಲತ್ತಕ್ಕಿ ಹೌಸ್, ಒಳಪಾಡು ಅಂಚೆ, ತ್ರಿಶೂರ್, ಕೇರಳ ರಾಜ್ಯ ಇವರು ದಿನಾಂಕ:18.01.2008ರಂದು ಅಂದಿನ ಅಧಿಕೃತ ಅಧಿಕಾರಿಗಳು ಮತ್ತು ಅಬಕಾರಿ ಅಧೀಕ್ಷಕರು, ಇಐಬಿ, ದ.ಕ ಜಿಲ್ಲೆ ಮಂಗಳೂರುರವರ ಪ್ರಾಧಿಕಾರದಲ್ಲಿ ತಮ್ಮ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿ ವಾಹನ ಮತ್ತು ಕೇಟರಿಂಗ್ ಸೊತ್ತುಗಳ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿ ಅರ್ಜಿಯನ್ನು ಪರಿಶೀಲಿಸಿ ವಾಹನ ಮಧ್ಯಂತರ ಬಿಡುಗಡೆ ಬಗ್ಗೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಸಹಾಯಕ ಅಭಿಯೋಗ ನಿರ್ದೇಶಕರು ಹಾಗೂ ಪ್ರಕರಣದ ತನಿಖಾದಿಕಾರಿಗಳಿಗೆ ಪ್ರಾಧಿಕಾರದಿಂದ ದಿನಾಂಕ:21.01.2008ರಂದು ನೋಟಿಸುಗಳನ್ನು ನೀಡಲಾಗಿದ್ದು, ದಿನಾಂಕ:14.02.2008 ರಂದು ಪ್ರಕರಣದ ತನಿಖಾದಿಕಾರಿಗಳಿಂದ ಹಾಗೂ ದಿನಾಂಕ:18.03.2008 ರಂದು ಸರ್ಕಾರಿ ಅಭಿಯೋಜಕರಿಂದ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ಮೊಕದ್ದಮೆಯ ತನಿಖೆಯನ್ನು ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಪೊಲೀಸ್ ಠಾಣೆ ಇವರು ಮುಂದುವರಿಸಿ ಪ್ರಕರಣದಲ್ಲಿ ಜಪ್ತಾದ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ,ವಿಶ್ಲೇಷಣಾ ವರದಿಯನ್ನು ಪ್ರಕರಣದ ತನಿಖಾಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I ಇವರಿಗೆ ನೀಡಿರುತ್ತಾರೆ. ಸದ್ರಿ ರಾಸಾಯನಿಕ ಪರೀಕ್ಷಾ ಫಲಿತಾಂಶದ ವರದಿಯಲ್ಲಿ ವಶಪಡಿಸಿಕೊಂಡ ಮದ್ಯಸಾರದಲ್ಲಿ ಮದ್ಯಸಾರದ ಪ್ರಮಾಣ 93.0% ಇರುವುದಾಗಿ ದೃಢೀಕರಣ ನೀಡಿರುತ್ತಾರೆ. ಸದ್ರಿ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟು ಗೋಲು ಹಾಕಿಕೊಂಡು ನಾಶಪಡಿಸಲು ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಮತ್ತು ಇತರ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ವಲಯ-I ಇವರು ದಿನಾಂಕ:08.02.2008ರಂದು ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುತ್ತಾರೆ. ಆ ಪ್ರಕಾರ ಪ್ರಕರಣದಲ್ಲಿ ಜಪ್ತಾದ ಸೊತ್ತುಗಳ ಪೈಕಿ ವಾಹನವನ್ನು ಹೊರತುಪಡಿಸಿ, ಉಳಿದ 2800.000 ಲೀಟರು ಮದ್ಯಸಾರ (ಮಾದರಿಗಳನ್ನು ಹೊರತು ಪಡಿಸಿ)ವನ್ನು ಮತ್ತು ಇತರ ಸೊತ್ತುಗಳನ್ನು ಪ್ರಾಧಿಕಾರದ ದಿನಾಂಕ:08.09.2008 ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ಸೂಕ್ತ ಮಹಜರು ಜರುಗಿಸಿ ನಾಶಪಡಿಸಲಾಗಿರುತ್ತದೆ.

ವಾಹನದ ನೊಂದಣಿ ಮಾಲೀಕರ ಪರ ಜಿ.ಪಿ.ಎ ದಾರರು ವಾಹನದ ಮಧ್ಯಂತರ ಬಿಡುಗಡೆಗಾಗಿ ಸಲ್ಲಿಸಿದ್ದ ಅರ್ಜಿಯ ಬಗ್ಗೆ ಪರಿಶೀಲನೆ ನಡೆಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ ಜಿಲ್ಲೆ ಮಂಗಳೂರು ಇವರು ದಿನಾಂಕ:24.03.2008ರಂದು ಹೊರಡಿಸಿದ ಆದೇಶದಲ್ಲಿ ರೂ.1,10,000/- ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಹಾಗೂ ಇತರೆ ಷರತ್ತುಗಳ ಮೇಲೆ ವಾಹನವನ್ನು ಆರ್.ಸಿ ಮಾಲೀಕರ ಪರ ಮಧ್ಯಂತರ ಬಿಡುಗಡೆಗೊಳಿಸಿ ಆದೇಶಿಸಿರುತ್ತಾರೆ. ಆದರೆ ವಾಹನದ ಮಾಲೀಕರಾಗಲೀ, ಮಾಲೀಕರ ಪರ ಜಿ.ಪಿ.ಎದಾರರಾಗಲೀ ಸದ್ರಿ ಆದೇಶದ ಷರತ್ತುಗಳಿಗನುಗುಣವಾಗಿ ವಾಹನದ ಮಧ್ಯಂತರ ಬಿಡುಗಡೆ ಪಡೆದುಕೊಳ್ಳುವ ಬಗ್ಗೆ ಆಸಕ್ತಿ ತೋರಿಸಿರುವುದಿಲ್ಲ.

ಪ್ರಕರಣದಲ್ಲಿ ಜಪ್ತಾದ ವಾಹನ ಗೂಡ್ಸ್ ಟೆಂಪೋ ನೊಂದಣಿ ಸಂ: KL-11-D-2565 ಇದರ ಬಿ ರಿಜಿಸ್ಟ್ರಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಜಂಟಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ತ್ರಿಶೂರ್ ಕೇರಳ ಇವರಿಂದ ಪಡೆಯಲಾಗಿದ್ದು,ಸದ್ರಿ ವರದಿಯ ಪ್ರಕಾರ ಶ್ರೀ.ಮುರುಳೀಧರನ್, ಬಿನ್: ಮಾಧವನ್ ,7/571 ಕರತ್ತ್ ಪರಂಬಿಲ್ ಹೌಸ್, ಐಯನ್ ತೋಲೆ, ತ್ರಿಶೂರ್, ಕೇರಳ ರಾಜ್ಯ ಇವರು ದಿನಾಂಕ:02.03.2007ರಿಂದ ಅನ್ವಯವಾಗುವಂತೆ ವಾಹನದ ಮಾಲೀಕರಾಗಿರುವುದಾಗಿ ಹಾಗೂ ಸೂಪರ್ ಫೈನಾನ್ಸ್, ಪುತ್ತೂರು ಅಂಚೆ, ಕೇರಳ ರಾಜ್ಯ ಇವರು ವಾಹನದ ಹೆಚ್.ಪಿ.ಎ. ದಾರರಾಗಿರುವುದಾಗಿ ತಿಳಿದು ಬಂದಿರುತ್ತದೆ. ವಾಹನದ ಮಾಲೀಕರಿಗೆ ಮತ್ತು ಹೆಚ್.ಪಿ.ಎ. ದಾರರಿಗೆ ದಿನಾಂಕ:15.01.2009ರಂದು ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ನೀಡಲಾದ ಕಾರಣ ಕೇಳಿ ನೋಟಿಸುಗಳನ್ನು ವಾಹನದ ಮಾಲೀಕರಿಗೆ ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ. ಹಾಗೂ ಹೆಚ್.ಪಿ.ಎ. ದಾರರಿಗೆ ನೀಡಲಾದ ಕಾರಣ ಕೇಳಿ ನೋಟಿಸು ದಿನಾಂಕ:21.01.2009ರಂದು ಜ್ಯಾರಿಯಾಗಿದ್ದು, ಈ ಬಗ್ಗೆ ಅಂಚೆ ಸ್ವೀಕೃತ ಪತ್ರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ಮೇಲಿನ ವಿದ್ಯಾಮಾನಗಳನ್ನು ಅವಲೋಕಿಸಿ ವಾಹನದ ಮುಟ್ಟುಗೋಲು ನಡವಳಿ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಸಾಕ್ಷಿಧಾರರನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಇಲ್ಲದೇ ಇರುವುದರಿಂದ ಪ್ರತಿ ರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) ದಿನಾಂಕ:08.09.2007 ರಂದು ಗೂಡ್ಸ್ ಟೆಂಪೋ ನೊಂದಣಿ ಸಂ: KL-11D-2565 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ 2,800 ಲೀಟರು ಮದ್ಯಸಾರವನ್ನು ಸಾಗಾಣಿಕೆ ಮಾಡಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:

ಶ್ರೀ.ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I ರವರು ದಿನಾಂಕ:03.06.2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ತನಿಖಾಧಿಕಾರಿಯವರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ಕಳೆದ ಮೂರು ವರ್ಷಗಳಿಂದ ಅಬಕಾರಿ ಉಪ ನಿರೀಕ್ಷಕನಾಗಿ ಮಂಗಳೂರು ಉತ್ತರ ವಲಯ-1ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಉಪ ನಿರೀಕ್ಷಕರು, ಪಣಂಬೂರು ಇವರ ಕ್ರೈಂ ಸಂ:116/2007 ದಿನಾಂಕ:08.09.2007ರಂದು ದಾಖಲಿಸಿದ ಮೊಕದ್ದಮೆಯ ಸೊತ್ತುಗಳಾದ ಗೂಡ್ಸ್ ಟೆಂಪೋ ನೊಂದಣಿ ಸಂ: KL-11D-2565 ಮತ್ತು ಅದರಲ್ಲಿದ್ದ 35 ಲೀಟರಿನ 85 ಕ್ಯಾನುಗಳಲ್ಲಿ ಒಟ್ಟು 2800 ಲೀಟರು ಮದ್ಯಸಾರವನ್ನು ದಿನಾಂಕ:14.11.2007ರಂದು ತನ್ನ ಸುಪರ್ಧಿಗೆ ಪಡೆದುಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು ದಿನಾಂಕ:26.11.2007ರಂದು ಆದೇಶಿಸಿರುವಂತೆ, ಪ್ರಕರಣಕ್ಕೆ ಸಂಬಂಧಿಸಿದ ಸೊತ್ತುಗಳಾದ ವಾಹನ ನೊಂದಣಿ ಸಂ:KL-11D-2565 ಗೂಡ್ಸ್ ಟೆಂಪೋ ಮತ್ತು 80 ಕ್ಯಾನುಗಳಲ್ಲಿದ್ದ 2800 ಲೀ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ನಡವಳಿ ನಡೆಸುವ ಬಗ್ಗೆ ವರದಿ ಒಪ್ಪಿಸಲು ಆದೇಶಿಸಿದಂತೆ ದಿನಾಂಕ:08.02.2009ರಂದು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ನಿಶಾನೆ ಪಿ-1 ಎಂದು ಗುರುತಿಸಲಾಗಿರುತ್ತದೆ. ಅಧಿಕೃತ ಅಧಿಕಾರಿಗಳ ದಿನಾಂಕ: 08.09.2008ರ ಆದೇಶದ ಮೇರೆಗೆ ದಿನಾಂಕ:24.09.2008ರಂದು ಮಹಜರು ಮೂಲಕ ಮದ್ಯಸಾರವನ್ನು ನಾಶಪಡಿಸಿರುತ್ತೇನೆ. ನಾಶಪಡಿಸಿ ಉಳಿದ ಕ್ಯಾನುಗಳನ್ನು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಿರುತ್ತೇನೆಂದು ತಮ್ಮ ಸಾಕ್ಷವನ್ನು ನೀಡಿರುತ್ತಾರೆ.

ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಿ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಪ್ರಕರಣ ಪತ್ತೆ ಹಚ್ಚಿದ ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾವಿಭಾಗ ಇವರಿಗೆ ದಿನಾಂಕ:18.03.2009ರಂದು ಪ್ರಾ.ಸಾ-1 ರವರಾಗಿ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ನೋಟಿಸು ನೀಡಲಾಗಿದ್ದು .ಸದ್ರಿಯವರು ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ಅಭಿಯೋಗದ ಪರ ಸದ್ರಿಯವರ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ. ಹಾಗೂ ಸದ್ರಿಯವರ ಸಾಕ್ಷಿಗಾಗಿ ಪ್ರಕರಣವನ್ನು ಮುಂದೂಡಿದ್ದಲ್ಲಿ ಮುಟ್ಟುಗೋಲು ನಡವಳಿ ವಿಳಂಭವಾಗುವ ಸಾಧ್ಯತೆಯಿರುವುದರಿಂದ ಹಾಗೂ ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಪ್ರಕರಣವನ್ನು ನಡೆಸುವ ಬಗ್ಗೆ ಉತ್ಸುಕರಾಗದೇ ಇರುವುದರಿಂದ ಪ್ರಕರಣದಲ್ಲಿ ಮುಂದಿನ ವಿಚಾರಣೆ ಅನಾವಶ್ಯಕವೆಂದು ಪ್ರಾಧಿಕಾರ ಮನಗಂಡು ವಿಚಾರಣೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷಧಾರಗಳೊಂದಿಗೆ ಸಾಬೀತು ಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ಸಿ ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಸಿ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಾಗಿರುವ ದಾಖಲಾತಿಗಳ ಪ್ರಕಾರ ದಿನಾಂಕ:08.09.2007 ರಂದು ವಾಹನ ನೊಂದಣಿ ಸಂ: KL-11-D-2565 ಗೂಡ್ಸ್ ಟೆಂಪೋ ಇದರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಚಾಲಕ ಮತ್ತು ಇನ್ನೊರ್ವ ವ್ಯಕ್ತಿ ಟೇಬಲ್, ಕುರ್ಚಿ ಇತ್ಯಾದಿ ಕೇಟರಿಂಗ್ ಸೊತ್ತುಗಳ ಅಡಿಯಲ್ಲಿ 35 ಲೀಟರು ಗಾತ್ರದ 80 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು 2800 ಲೀ ಮದ್ಯಸಾರವನ್ನು ಪಾಲಿಥೀನ್ ಟರ್ಪಾಲ್ ಮರೆಮಾಡಿ ಸಾಗಾಟ ಮಾಡುತ್ತಿದ್ದುದನ್ನು ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತ ವಿಭಾಗರವರು ಪತ್ತೆಹಚ್ಚಿ, ಪಣಂಬೂರು ಪೊಲೀಸ್ ಠಾಣಾ ಕ್ರೈಂ ಸಂ:116/2007-08

ದಿನಾಂಕ:08.09.2007ರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಲಾದ ವಾಹನ, ಮದ್ಯಸಾರ ಮತ್ತು ಇತರ ಸೊತ್ತುಗಳನ್ನು ಸ್ಥಳ ಮಹಜರು, ಪಂಚನಾಮೆಯ ಮುಖೇನಾ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ಮದ್ಯಸಾರದ ಮಾದರಿಗಳು ರಾಸಾಯನಿಕ ತಜ್ಞರ ವರದಿಯಂತೆ ಮದ್ಯಸಾರ ಎಂದು ದೃಢಪಟ್ಟಿರುವುದರಿಂದ, ಕರ್ನಾಟಕ ಅಬಕಾರಿ ಕಾಯಿದೆ ಕಲಂ 14,15(1) ರ ಪ್ರಕಾರ ಅಪರಾಧ ಹಾಗೂ 32, 34, 35 ಮತ್ತು 43(3)ರ ಪ್ರಕಾರ ಶಿಕ್ಷಾರ್ಹ ಅಪರಾಧ ಎಸಗಿರುವುದರಿಂದ ಹಾಗೂ ವಾಹನದ ಮಾಲೀಕರು ಈ ಪ್ರಾಧಿಕಾರದಿಂದ ವಾಹನದ ಮಧ್ಯಂತರ ಬಿಡುಗಡೆಗೆ ಹೊರಡಿಸಿರುವ ದಿನಾಂಕ:24.03.2008ರ ಆದೇಶದ ಷರತ್ತುಗಳನ್ವಯ ಕಾನೂನು ರೀತ್ಯಾ ವಾಹನವನ್ನು ತನ್ನ ಸುಪರ್ಧಿಗೆ ಪಡೆದುಕೊಳ್ಳಲು ವಿಫಲರಾಗಿರುವುದರಿಂದ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ಮನಗಂಡು ವಾಹನದ ಮುಟ್ಟುಗೋಲು ನಡವಳಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ವಾಹನ ನೊಂದಣಿ ಸಂ:KL-11-D-2565 ಗೂಡ್ಸ್ ಟೆಂಪೋ ಇದರ ಮಾಲೀಕನೆಂದು ಹೇಳಿಕೊಂಡ ಶ್ರೀ ಮುರಳೀಧರನ್ ಎಂಬವನು ತಾನು ವಾಹನದ ಮಾಲೀಕನೆಂದು ಹೇಳಿಕೊಂಡು ತನ್ನ ಜಿ.ಪಿ.ಎ.ದಾರನ ಮೂಲಕ ವಾಹನದ ಮಧ್ಯಂತರ ಬಿಡುಗಡೆಗಾಗಿ ಅರ್ಜಿಯನ್ನು ಸಲ್ಲಿಸಿದ್ದು, ಸದ್ರಿ ಅರ್ಜಿಯನ್ನು ಪರಿಗಣಿಸಿ ಪ್ರಾಧಿಕಾರದಿಂದ ವಾಹನದ ಮಧ್ಯಂತರ ಬಿಡುಗಡೆಗೆ ದಿನಾಂಕ:24.03.2008ರಂದು ಆದೇಶವಾಗಿದ್ದರೂ ತದನಂತರದಲ್ಲಿ ವಾಹನದ ಮಧ್ಯಂತರ ಬಿಡುಗಡೆ ಆದೇಶದ ಷರತ್ತುಗಳನ್ನು ಪಾಲಿಸಿ ವಾಹನವನ್ನು ಮಧ್ಯಂತರ ಸುಪರ್ಧಿಗೆ ಪಡೆದುಕೊಳ್ಳಲು ಮುಂದೆ ಬಾರದಿರುವುದು ಮತ್ತು ಕಾನೂನು ರೀತ್ಯಾ ಪ್ರಯತ್ನ ಮಾಡದಿರುವುದನ್ನು ಗಮನಿಸಿದಾಗ ಪ್ರಕರಣದಲ್ಲಿ ಜಪ್ತು ಪಡಿಸಿರುವ ವಾಹನದಲ್ಲಿದ್ದ ಆರೋಪಿತ ವ್ಯಕ್ತಿಗಳು ಮತ್ತು ವಾಹನದ ಮಾಲೀಕರ ಶಾಮೀಲಾತಿ ಹಾಗೂ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿರುವುದು, ಅಲ್ಲದೇ ವಾಹನದ ಮಧ್ಯಂತರ ಬಿಡುಗಡೆಗೆ ಆದೇಶವಾಗಿದ್ದರೂ ವಾಹನವನ್ನು ತಮ್ಮ ಮಧ್ಯಂತರ ಸುಪರ್ಧಿಗೆ ಪಡೆಯಲು ನಿರಾಸಕ್ತರಾಗಿರುವುದು ಮತ್ತು ತಕ್ಷೀರು ವಿಚಾರಣಾ ಸಮಯದಲ್ಲಿ ವಾಹನದ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಪ್ರಾಧಿಕಾರದಲ್ಲಿ ಹಾಜರಾಗಿ ತಕ್ಷೀರನ್ನು ನಡೆಸಲು ಉತ್ಸುಕರಾಗಿರದೇ ಇರುವುದರಿಂದ ಈ ಪ್ರಾಧಿಕಾರವು ವಾಹನದ ಮುಟ್ಟುಗೋಲು ನಡವಳಿಯಲ್ಲಿ ಅಂತಿಮ ತೀರ್ಮಾನ ತೆಗೆದು ಕೊಳ್ಳಬೇಕಾಗಿರುತ್ತದೆ. ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾವಿಭಾಗ, ಮಂಗಳೂರುರವರು ಸದ್ರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆ ಹಚ್ಚಿ, ಸ್ಥಳ ಮಹಜರಿನ ಮೂಲಕ ಸಾಗಾಣಿಕೆಗೆ ಬಳಸಿದ ವಾಹನವನ್ನು ಹಾಗೂ ಅಕ್ರಮ ಮದ್ಯಸಾರ ಮತ್ತು ಇತರ ಸೊತ್ತುಗಳನ್ನು ಜಪ್ತು ಪಡಿಸಿರುವುದು ಮತ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಜಪ್ತು ಪಡಿಸಲಾದ 2800 ಲೀಟರು ಅಬಕಾರಿ ಸೊತ್ತು ಮದ್ಯಸಾರ ಎಂದು ದೃಡೀಕೃತವಾಗಿರುವುದರಿಂದ ಇದು ಅಕ್ರಮವಾಗಿ ಮದ್ಯಸಾರವನ್ನು ವಾಹನದಲ್ಲಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಈ ಮೇಲಿನ ಎಲ್ಲಾ ದಾಖಲಾತಿಗಳಿಂದ ಸಾಬೀತಾಗಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ, ಮಂಗಳೂರು ಇವರು ವಶಪಡಿಸಿಕೊಂಡ ವಾಹನ ನೊಂದಣಿ ಸಂ:KL-11-D-2565 ಗೂಡ್ಸ್ ಟೆಂಪೋವನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂಭತ್ತು ತಿಂಗಳಿಗಿಂತ ಹೆಚ್ಚು ಸಮಯ ಕಳೆದಿದ್ದು, ಆದರೆ ಯಾವುದೇ ವ್ಯಕ್ತಿಯು ಸೂಕ್ತ ದಾಖಲಾತಿಗಳೊಂದಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ವಾಹನದ ಮಾಲೀಕತ್ವದ ಬಗ್ಗೆ ಹಾಗೂ ತನ್ನ ನಿರಾಪರಾಧಿತ್ವದ ಬಗ್ಗೆ ರುಜುವಾತು ಪಡಿಸಿಕೊಂಡಿರುವುದಿಲ್ಲ. ಕಾರಣ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿದ ವಾಹನ ನೊಂದಣಿ ಸಂ:KL-11-D-2565 ಗೂಡ್ಸ್ ಟೆಂಪೋವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಯೋಗ್ಯವೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಕಂಡ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43ಬಿ ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಲಂ 43ಎ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ನಿರೀಕ್ಷಕರು, ಜಿಲ್ಲಾ ಅಪರಾಧ ಗುಪ್ತ ವಾರ್ತಾ ವಿಭಾಗ, ಮಂಗಳೂರು ಇವರ ಕ್ರೈಂ ಸಂ:116/2007-08, ದಿನಾಂಕ:08.09.2007 ರಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಬಳಸಿದ KL-11-D-2565 (ಚಾಸೀಸ್ ಸಂಖ್ಯೆ: 379045CUQ807319 ಮತ್ತು ಇಂಜಿನ್ ಸಂಖ್ಯೆ: 497D21CUQ720167) ಗೂಡ್ಸ್ ಟೆಂಪೋ ವನ್ನು ಕರ್ನಾಟಕ ಅಬಕಾರಿ ಖಾಯ್ದೆ ಕಲಂ 43ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:20.06.2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ-I: ಶ್ರೀ ವಿನೋದ್ ಕುಮಾರ್, ಅಬಕಾರಿ ನಿರೀಕ್ಷಕರು, ಮಂಗಳೂರು ಉತ್ತರ ವಲಯ-I

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ-I : ಸೊತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರಿಗೆ ದಿನಾಂಕ:08.02.2008ರಂದು ಸಲ್ಲಿಸಿದ ವರದಿ.

ಅನುಬಂಧ-III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ಅರ್ಜಿದಾರರ ಹೇಳಿಕೆ : - ಯಾವುದು ಇಲ್ಲ-

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು : - ಯಾವುದು ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.625

ಸಹಕಾರ ಇಲಾಖೆ

ಸಹಕಾರಿಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು

ಅಮಲ್ಜಾರಿ ಸಂಖ್ಯೆ: 286/2004-2005

ವಿಷಯ: ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯ ತುಮಕೂರು ಇವರ ಸ್ಥಿರಾಸ್ತಿಯನ್ನು ಸೆಕ್ರಡ್ ಹಾರ್ಟ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ತುಮಕೂರು, ಈ ಸಹಕಾರಿ ಹೆಸರಿಗೆ ವರ್ಗಾಯಿಸಿ, ಸ್ಥಿರೀಕರಣ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1) ಮಾರಾಟಾಧಿಕಾರಿಗಳು, ಸೆಕ್ರೆಡ್ ಹಾರ್ಟ್ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ನಿ., ತುಮಕೂರು ಇವರ ಪತ್ರದ ದಿನಾಂಕ:20.05.2006.

2) ಕರ್ನಾಟಕ ಗೌರವ ಮೇಲ್ಮನವಿ ನ್ಯಾಯಾಧೀಕರಣ ಬೆಂಗಳೂರುರವರ ಆದೇಶ ಸಂಖ್ಯೆ: ಅಪೀಲು ನಂ.450/06, ದಿನಾಂಕ:11.06.2007.

3) ವ್ಯವಸ್ಥಾಪಕರು ಸೆಕ್ರೆಡ್ ಹಾರ್ಟ್ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ನಿ., ತುಮಕೂರು ಇವರ ಪತ್ರದ ದಿನಾಂಕ:26.02.2009.

4) ಈ ಕಛೇರಿಯಿಂದ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 18(3)ರ ಪ್ರಕಾರ ನೀಡಲಾದ ನೋಟಿಸು ದಿನಾಂಕ:05.03.2009.

ಪ್ರಸ್ತಾವನೆ:

ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯ, ಹೊಸಬಡಾವಣೆ, ದೇವರಾಯಪಟ್ಟಣ, ತುಮಕೂರು ಇವರು ಸೆಕ್ರೆಡ್ ಹಾರ್ಟ್ ಪತ್ತಿನ ಸಹಕಾರ ಸಂಘ ನಿ., ತುಮಕೂರು ಇದರಲ್ಲಿ ಸಾಲ ಪಡೆದಿದ್ದು, ರೂ.3,48,777=00ಗಳ ಸಾಲ ಬಾಕಿ ಇದ್ದು, ವಸೂಲಾತಿಗಾಗಿ ದಾವೆ ನಂ.96/2004-2005, ದಿನಾಂಕ:03.07.2004ರಲ್ಲಿ ಆದೇಶವಾಗಿದ್ದು, ಅಮಲ್ಜಾರಿ ಸಂಖ್ಯೆ: 286/2004-05ರ ರೀತ್ಯಾ ವಸೂಲಾತಿಗಾಗಿ, ಕಾನೂನು ರೀತ್ಯಾ ತಿಳುವಳಿಕೆ ಪತ್ರವನ್ನು ನಮೂನೆ 2, 8, 9 ನ್ನು ಸಂಘದವರು ಜಾರಿ ಮಾಡಿದ್ದರೂ ಸಹ, ಸುಸ್ತಿ ಸಾಲಗಾರರು ಹಣವನ್ನು ಸಂಘಕ್ಕೆ ಮರುಪಾವತಿಸಿರುವುದಿಲ್ಲ. ಈ ಕಾರಣ ಸದರಿಯವರು ಹೊಂದಿರುವ ಸ್ಥಿರಾಸ್ತಿಯನ್ನು ಮಾರಾಟ ಮಾಡಲು, ಬಹಿರಂಗ ಹರಾಜು ನಡೆಸಲು ದಿನಾಂಕ ನಿಗದಿ ಪಡಿಸಿದ್ದು, ದಿನಾಂಕ:20.03.2006 ರಂದು ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಪಡಿಸಲಾಗಿದ್ದು, ಬಿಡ್‌ದಾರರು ಯಾರು ಭಾಗವಹಿಸದ ಕಾರಣ ಸದರಿ ಸ್ಥಿರಾಸ್ತಿಯನ್ನು ಸಹಕಾರಿಯ ಹೆಸರಿಗೆ ನಿಲ್ಲಿಸಿದ್ದು ಈ ಸ್ಥಿರಾಸ್ತಿಯನ್ನು ಸಹಕಾರಿಯ ಹೆಸರಿಗೆ ಸ್ಥಿರೀಕರಣಗೊಳಿಸಿ ಆದೇಶ ನೀಡಲು ಕೋರಿ ಉಲ್ಲೇಖ (1) ದಿನಾಂಕ:20.05.2006 ರಂದು ಸಹಕಾರಿಯ ವ್ಯವಸ್ಥಾಪಕರು ಹಾಗೂ ಮಾರಾಟಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಮಧ್ಯೆ ಸುಸ್ತಿ ಸಾಲಗಾರರಾದ ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯನವರು, ದಾವೆಯ ವಿರುದ್ಧ ಕರ್ನಾಟಕ ಗೌರವ ಮೇಲ್ಮನವಿ ನ್ಯಾಯಾಧೀಕರಣ ಬೆಂಗಳೂರು ಇಲ್ಲಿ ಅಪೀಲು ಸಂಖ್ಯೆ:456/2006ರ ರೀತ್ಯಾ ಅಪೀಲು ಹಾಕಿದ್ದು, ಸದರಿ ಅಪೀಲು ಅರ್ಜಿಯನ್ನು ಕರ್ನಾಟಕ ಗೌರವ ಮೇಲ್ಮನವಿ ನ್ಯಾಯಾಧೀಕರಣವು ದಿನಾಂಕ:11.02.2007 ರಂದು ವಜಾಗೊಳಿಸಿ ಆದೇಶಿಸಿರುತ್ತಾರೆ. ದಿನಾಂಕ:11.02.2007 ರ ನ್ಯಾಯಾಲಯದ ಆದೇಶದ ಪ್ರತಿಯನ್ನು ಲಗತ್ತಿಸಿ ಸಹಕಾರಿಯ

ವ್ಯವಸ್ಥಾಪಕರು ದಿನಾಂಕ:20.02.2009 ರಂದು ಪತ್ರ ಬರೆದು ದಿನಾಂಕ:20.03.2006 ರಂದು ಸದರಿ ಸ್ವತ್ತಿನ ಬಳಿ ಬಹಿರಂಗ ಹರಾಜು ನಡೆಸಿದ್ದು, ಬಿಡ್‌ದಾರರು ಯಾರು ಭಾಗವಹಿಸದ ಕಾರಣ, ಸದರಿ ಸ್ಥಿರಾಸ್ತಿಯನ್ನು ಸಹಕಾರಿಯ ಹೆಸರಿಗೆ ಸ್ಥಿರೀಕರಣಗೊಳಿಸಲು ಕೋರಿರುತ್ತಾರೆ.

ಸದರಿ ಸಹಕಾರಿಯು, ಈ ಮಧ್ಯೆ ಸೆಕ್ರೆಡ್ ಹಾರ್ಟ್ ಪತ್ತಿನ ಸಹಕಾರ ಸಂಘ ನಿ., ತುಮಕೂರು ಎಂಬುದಾಗಿದ್ದ ಸಂಘದ ಹೆಸರನ್ನು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ರೀತ್ಯಾ ಸೆಕ್ರೆಡ್ ಹಾರ್ಟ್ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು ಎಂಬುದಾಗಿ ಪರಿವರ್ತನೆಯಾಗಿರುತ್ತದೆ.

ಉಲ್ಲೇಖ (3) ದಿನಾಂಕ:26.02.2009 ರಂದು ಸಹಕಾರಿ ವ್ಯವಸ್ಥಾಪಕರು ಕೋರಿರುವಂತೆ, ಉಲ್ಲೇಖ (4) ದಿನಾಂಕ:05.03.2009 ರಂದು ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯ, ತುಮಕೂರುರವರಿಗೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 18(3) ರ ಪ್ರಕಾರ ಈ ಕಛೇರಿಯಿಂದ ನೋಟೀಸ್‌ನ್ನು ನೀಡಿ, ದಿನಾಂಕ:20.03.2006ಕ್ಕೆ ಸಹಕಾರಿಗೆ ಪಾವತಿಸಬೇಕಾದ ಸುಸ್ತಿ ಸಾಲ ಬಾಕಿ ರೂ.4,78,295=00 ನ್ನು 30 ದಿವಸದೊಳಗಾಗಿ ಬಡ್ಡಿ ಸಮೇತ ಪಾವತಿಸಿ, ಪಾವತಿಸಿದ ಬಗ್ಗೆ ದಾಖಲಾತಿ ಮತ್ತು ಈ ಸಂಬಂಧ ನಿಮ್ಮ ಲಿಖಿತ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಸದರಿ ಶ್ರೀ ಚಿಕ್ಕಣ್ಣಸ್ವಾಮಿ ಸುಸ್ತಿದಾರರು ನಿಗದಿಪಡಿಸಿದ ಅವಧಿಯಲ್ಲಿ ಮೇಲ್ಕಂಡ ಸಹಕಾರಿಗೆ ಪಾವತಿಸಬೇಕಾದ ಹಣವನ್ನು ಪಾವತಿಸಿದ ಬಗ್ಗೆಯಾಗಲಿ ಹಾಗೂ ತಮ್ಮ ಆಕ್ಷೇಪಣೆಗಳನ್ನಾಗಲಿ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಈ ಕೆಳಕಂಡಂತೆ ಆದೇಶ ನೀಡಿರುತ್ತೇನೆ.

ಆದೇಶ

ಸಂಖ್ಯೆ: ಸನಿ-32/ಸೌ.ಸ./ಸ್ಥಿರಾಸ್ತಿವರ್ಗಾವಣೆ/97/2008-2009, ದಿನಾಂಕ:11ನೇ ಮೇ, 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಶ್ರೀ ಕೆ. ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರಿಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ ತುಮಕೂರು ಆದ ನಾನು, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಓ/355/ಸಿ.ಎಲ್.ಎಂ./2005, ದಿನಾಂಕ:12.04.2006ರ ರೀತ್ಯಾ ಪ್ರತ್ಯಾಯೋಜಿಸಲ್ಪಟ್ಟ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004ರ ನಿಯಮ 18(5)ರ ರೀತ್ಯಾ ನನಗೆ ದತ್ತವಾಗಿರುವ ಅಧಿಕಾರವನ್ನು ಉಪಯೋಗಿಸಿ, ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯ, ಹೊಸಬಡಾವಣೆ, ದೇವರಾಯಪಟ್ಟಣ, ತುಮಕೂರು ಇವರ ಸ್ಥಿರಾಸ್ತಿಯನ್ನು ಸೆಕ್ರೆಡ್ ಹಾರ್ಟ್ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು, ಈ ಸಹಕಾರಿಯ ಹೆಸರಿಗೆ ವರ್ಗಾವಣೆ ಮಾಡಿ, ಸ್ಥಿರೀಕರಣ ಆದೇಶವನ್ನು ಷರತ್ತು ಮತ್ತು ನಿಯಮಗಳ ಅನ್ವಯ ಸ್ಥಿರೀಕರಣಗೊಳಿಸಿ ಆದೇಶ ನೀಡಿರುತ್ತೇನೆ.

ಈ ಆದೇಶಕ್ಕೆ ಸ್ವತ್ತುಗಳ ಹಸ್ತಾಂತರ ವರ್ಗಾವಣೆ ದೃಢೀಕರಣಪತ್ರ ನಮೂನೆ-12 ನ್ನು ಲಗತ್ತಿಸಿದೆ.

ಷರತ್ತು ಮತ್ತು ನಿಯಮಗಳು:

1) ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 18(12)ರಂತೆ ಸಹಕಾರಿಗೆ ವರ್ಗಾಯಿಸಿರುವ ಸ್ವತ್ತಿನ ಬಗ್ಗೆ ಪ್ರತ್ಯೇಕ ಲೆಕ್ಕವಿಟ್ಟು, ಆ ಸಂಬಂಧದಲ್ಲಿ ತಾನು ವಹಿಸಿದ ವೆಚ್ಚಗಳು ಬಾಹ್ಯ ಋಣಭಾರಗಳು, ಭೂಕಂದಾಯ ಮತ್ತು ಆಸ್ತಿಯ ಮೇಲಿನ ಇತರ ಬಾಕಿಗಳಿಗಾಗಿನ ಸಂದಾಯವು ಸೇರಿದಂತೆ ಎಲ್ಲಾ ವೆಚ್ಚಗಳನ್ನು ಮತ್ತು ಸದರಿ ಸ್ವತ್ತಿನಿಂದ ಪ್ರಾಪ್ತವಾದ, ಪ್ರಾಪ್ತವಾಗುವ ಎಲ್ಲಾ ಆದಾಯಗಳ ಲೆಕ್ಕವನ್ನು ವಿವರವಾಗಿ ಬರೆದಿಡುವುದು.
2) ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 18(13)ರಂತೆ ಸಹಕಾರಿಯು, ಸಾಧ್ಯವಾದಷ್ಟು ಬೇಗ ಸಹಕಾರಿಗೆ ಹಾಗೂ ಸುಸ್ತಿದಾರನಿಗೆ ಹೆಚ್ಚು ಅನುಕೂಲವಾಗುವಂತೆ ಸ್ವತ್ತನ್ನು ಮಾರಾಟ ಮಾಡಲು ಸಾಧ್ಯವಾದಷ್ಟು ಪ್ರಯತ್ನ ಮಾಡತಕ್ಕದ್ದು. ಮತ್ತು ಸ್ವತ್ತನ್ನು ಮೂಲತಃ ಹೊಂದಿದ್ದ ಸುಸ್ತಿದಾರನಿಗೆ ಯಾವಾಗಲು ಕೊಳ್ಳಲು ಮೊದಲನೆಯ ಅವಕಾಶ ಕೊಡತಕ್ಕದ್ದು. ಸ್ವತ್ತಿನ ಮಾರಾಟವು ರಿಜಿಸ್ಟ್ರಾರ್ ರವರ ಸ್ಥಿರೀಕರಿಸುವುದಕ್ಕೊಳಪಟ್ಟಿರತಕ್ಕದ್ದು. ಮಾರಾಟದಿಂದ ಬಂದ ಉತ್ಪನ್ನವನ್ನು, ಮಾರಾಟ ವೆಚ್ಚವನ್ನು ನಿಯಮ 9, 12ರಲ್ಲಿ ಉಲ್ಲೇಖಿಸಿದ ಇತರೆ ವೆಚ್ಚಗಳನ್ನು ಭರಿಸುವುದಕ್ಕೆ ಮತ್ತು ಜಾರಿಯಲ್ಲಿರುವ ಆದೇಶದಡಿ ಸುಸ್ತಿದಾರನಿಂದ ಬರಬೇಕಾದ ಬಾಕಿ ಮೊಬಲಗನ್ನು ಪಾವತಿಮಾಡುವುದಕ್ಕೆ ಉಪಯೋಗಿಸತಕ್ಕದ್ದು ಮತ್ತು ಮೊಬಲಗು ಏನಾದರೂ ಮಿಕ್ಕಿ ಉಳಿದಿದ್ದರೆ ಅದನ್ನು ಸುಸ್ತಿದಾರನಿಗೆ ಸಂದಾಯ ಮಾಡತಕ್ಕದ್ದು.
3) ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 18(13) ರಂತೆ ಸದರಿ ಸ್ವತ್ತು ಮಾರಾಟವಾಗುವವರೆಗೂ ಸಹಕಾರಿಯು, ಸ್ವತ್ತನ್ನು ದೇಣಿಗೆ ಕೊಟ್ಟು ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ವಿನಿಯೋಗಿಸಿ ಸದರಿ ಸ್ವತ್ತಿನಿಂದ ಹೆಚ್ಚಿನ ವರಮಾನವನ್ನು ಪಡೆಯಲು ಹೆಚ್ಚು ಪ್ರಯತ್ನ ಮಾಡಬೇಕು.
4) ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 18(15)ರಂತೆ ಸಹಕಾರಿಯು. ಸದರಿ ಸ್ವತ್ತಿನ ನಿರ್ವಹಣೆಯಿಂದ ಬಂದ ಉತ್ಪನ್ನದಿಂದ ಆದೇಶದಡಿ ಬರಬೇಕಾದ ಎಲ್ಲಾ ಬಾಕಿಯನ್ನು ಪಡೆದಾಗ, ಸ್ವತ್ತು ಮಾರಾಟವಾಗದಿದ್ದರೆ. ಅದನ್ನು ಪುನಃ ಸುಸ್ತಿದಾರನ ವಶಕ್ಕೆ ಕೊಡತಕ್ಕದ್ದು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:11.05.2009 ರಂದು ನೀಡಿದೆ.

ಸಹಕಾರಿಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಸಹಕಾರ ಇಲಾಖೆ

ಸಹಕಾರಿಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು

ಅಮಲ್ಜಾರಿ ಸಂಖ್ಯೆ: 286/2004-2005

ನಮೂನೆ-12

ಕರ್ನಾಟಕ ಸೌಹಾರ್ಧ ಸಹಕಾರಿ ನಿಯಮ 18(5)

ಸ್ವತ್ತುಗಳ ಹಸ್ತಾಂತರ ವರ್ಗಾವಣೆ ದೃಢೀಕರಣ ಪತ್ರ

ಕರ್ನಾಟಕ ಸೌಹಾರ್ಧ ಸಹಕಾರಿ ಅಧಿನಿಯಮ 1997ರ 43ನೇ ಪ್ರಕರಣದಡಿ, ಪ್ರಸ್ತಾಪಿಸಿರುವ ಅವಾರ್ಡ್‌ನ ಆದೇಶದನ್ವಯ ಹಾಗೂ ಅವಾರ್ಡ್ ವಿರುದ್ಧ ಅಮಲ್ಜಾರಿ ಆಗಿದ್ದು, ಅಮಲ್ಜಾರಿ ಸಂಖ್ಯೆ:286/2004-2005ರ ರೀತ್ಯಾ ಶ್ರೀ ಚಿಕ್ಕಣ್ಣಸ್ವಾಮಿ ಬಿನ್ ಹೆಚ್.ಸಿ. ಚಿಕ್ಕಹನುಮಯ್ಯ, ತುಮಕೂರು ಇವರ ಸ್ಥಿರಸ್ವತ್ತನ್ನು ದಿನಾಂಕ:20.03.2006 ರಂದು ಬಹಿರಂಗ ಹರಾಜು ಮಾಡಿದ್ದು, ಸದರಿ ಹರಾಜಿನಲ್ಲಿ ಸ್ಥಿರಾಸ್ತಿಯನ್ನು ಕೊಂಡುಕೊಳ್ಳುವವರು ಇಲ್ಲವೆಂದು ಮತ್ತು ಮಾರಾಟ ಮಾಡಲಿಕ್ಕಾಗಿರುವುದಿಲ್ಲವೆಂದು, ಸದರಿ ಸಹಕಾರಿಯ ಮಾರಾಟಾಧಿಕಾರಿಗಳು ತಿಳಿಸಿರುವುದರಿಂದ, ಅಂತಹ ಆಸ್ತಿಯ ಮೇಲೆ ಇರುವ ಸುಸ್ತಿದಾರನ ಹಕ್ಕು ಸ್ವಾಮ್ಯ ಮತ್ತು ಹಿತಾಸಕ್ತಿ, ಇವು ಈ ಆದೇಶದ ದಿನಾಂಕದಿಂದ ಸದರಿ ಸಹಕಾರಿಗೆ ನಿಹಿತವಾಗತಕ್ಕದ್ದೆಂದು ಮತ್ತು ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಸದರಿ ಸ್ವತ್ತು, ಸೆಕ್ರೆಡ್ ಹಾರ್ಟ್ ಸೌಹಾರ್ಧ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು ರವರ ಹೆಸರಿಗೆ ಹಸ್ತಾಂತರಿಸಲಾಗಿದೆ ಎಂದು ಈ ಮೂಲಕ ಆದೇಶಿಸಲಾಗಿರುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರಗಳು

ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ದೇವರಾಯಪಟ್ಟಣ ಗ್ರಾಮದ ಸರ್ವೆ ನಂ.77/2, ಮುನಿಸಿಪಲ್ ಖಾತೆ ನಂ.339, ನಿವೇಶನ ಸಂಖ್ಯೆ:05, ಇದರ ಅಳತೆ, ಪೂರ್ವ ಪಶ್ಚಿಮ-30 ಅಡಿಗಳು, ಉತ್ತರ ದಕ್ಷಿಣ-45 ಅಡಿಗಳಲ್ಲಿ ಇರತಕ್ಕ ಕಟ್ಟಡವು ಸೇರಿ, ಚೆಕ್ಕುಬಂದಿ:

ಪೂರ್ವಕ್ಕೆ- 8ನೇ ನಂಬರ್ ಸೈಟ್
ಪಶ್ಚಿಮಕ್ಕೆ- 4ನೇ ನಂಬರ್ ಸೈಟ್
ಉತ್ತರಕ್ಕೆ – 30 ಅಡಿ ರಸ್ತೆ
ದಕ್ಷಿಣಕ್ಕೆ- 6ನೇ ನಂಬರ್ ಸೈಟ್, ಈ ಮಧ್ಯೆ ಇರುವ ಸ್ವತ್ತು.

ಅನುಸೂಚಿ

ಸುಸ್ತಿ ಸಾಲಗಾರರು, ಮೇಲ್ಕಂಡ ಸಹಕಾರಿಗೆ ಸಂದಾಯ ಮಾಡಬೇಕಾದ ಬಾಕಿ ಮೊತ್ತದ ತೀರಿಕೆಗಾಗಿ ಸದರಿಯವರ ಸ್ವತ್ತನ್ನು, ಸೆಕ್ರೆಡ್ ಹಾರ್ಟ್ ಸೌಹಾರ್ಧ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು ಈ ಸಹಕಾರಿಯ ಹೆಸರಿಗೆ ಹಸ್ತಾಂತರಿಸಲಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿರುತ್ತೇನೆ.

ಈ ದೃಢೀಕರಣ ಪತ್ರವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:11.05.2009 ರಂದು ನೀಡಿದೆ.

ಸಹಕಾರಿಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಪಿ.ಆರ್.415

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ, (ಆಡಳಿತ) ಮೌ.ತೆ.ವಿ-3, ಬೆಂಗಳೂರು

ಸಂಖ್ಯೆ: ಜಂಆ(ಆ)/ಡಿವಿಓ-3/08-09, ದಿನಾಂಕ:14ನೇ ಆಗಸ್ಟ್, 2009

ಕಳೆದುಕೊಂಡಿರುವ ಸಿ ನಮೂನೆ ಸಂಖ್ಯೆ:TN/E 998947

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಬಯಸುವುದೇನೆಂದರೆ ಮೆ: ಆರ್.ಎಸ್. ಇಂಜಿನಿಯರ್ಸ್, ಶೆಡ್ ನಂ.6, ಆಂಥೋನಿ ಇಂಡಸ್ಟ್ರೀಯಲ್ ಎಸ್ಟೇಟ್, ಕನಕಪುರ ರಸ್ತೆ, ಬೆಂಗಳೂರು-78, ಟಿನ್ ಸಂಖ್ಯೆ: 29390092966 ಈ ನೋಂದಾಯಿತ ವರ್ತಕರಿಗೆ ಮೆ: ಅಶೋಕ ಲೇಲ್ಯಾಂಡ್ ಎನ್ನೋರ್ ಚೆನ್ನೈ ಇವರು ನೀಡಿದ್ದ ಸಿ ನಮೂನೆ ಸಂಖ್ಯೆ: TN/E 998947 ಹಾಳೆಯನ್ನು ವರ್ತಕರು ಕಳೆದುಕೊಂಡಿರುತ್ತಾರೆ. ಕೇಂ.ಮಾ.ತೆ. ಕಾಯ್ದೆಯನ್ವಯ ಮೇಲೆ ತಿಳಿಸಿರುವ ಸಿ-ನಮೂನೆಯನ್ನು ರದ್ದುಗೊಳಿಸಲಾಗಿದೆ.

ಆದುದರಿಂದ, ಈ ಮೇಲ್ಕಂಡ ನಮೂನೆ-'ಸಿ' ಹಾಳೆಯನ್ನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಉಪಯೋಗಿಸಿದಲ್ಲಿ ಸರ್ಕಾರದ ರಾಜಸ್ವಕ್ಕೆ ಉಂಟಾಗುವ ನಷ್ಟಕ್ಕೆ ವೈಯುಕ್ತಿಕವಾಗಿ ಅವರೇ ಜವಾಬ್ದಾರರಾಗಿರುತ್ತಾರೆ.

ಬೆಂಗಳೂರು
ದಿನಾಂಕ:14.08.2009
ಪಿ.ಆರ್.805

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
(ಆಡಳಿತ), ಮೌ.ತೆ.ವಿ-3, ಬೆಂಗಳೂರು.

ತಹಶೀಲ್ದಾರ್ ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

ಅಧಿಸೂಚನೆ

ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005(ಸೆಂಟ್ರಲ್ ಆಕ್ಟ 22 ಆಫ್ 2005)ಸೆಕ್ಷನ್ 5(1),5(1)ಮತ್ತು 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಹಶೀಲ್ದಾರ್ ಕಛೇರಿ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರಿರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ "ಸಾರ್ವಜನಿಕ ಅಧಿಕಾರ" ಮತ್ತು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ"ಹಾಗೂ ಮೇಲ್ಮನವಿ ಪ್ರಾಧಿಕಾರಿಯನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ.

(ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂ.ಇ 37 ವಿಮಕ 2005,ದಿನಾಂಕ:08.02.2006)

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ5(1)ರ ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ5(1)ರ ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005 ಕಲಂ5(1)ರ ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾಧಿಕಾರ
1.	ತಾಲ್ಲೂಕು ಕಛೇರಿ ಹೊಸನಗರ	ತಹಶೀಲ್ದಾರ್ ಹೊಸನಗರ	ತಾಲ್ಲೂಕು ಕಛೇರಿ ಸಂಬಂಧಪಟ್ಟ ಶಿರಸ್ತೇದಾರ್ (ವಿಷಯವಾರು)	ಉಪವಿಭಾಗಾಧಿಕಾರಿಗಳು, ಸಾಗರ ಉಪವಿಭಾಗ, ಸಾಗರ
2.	ನಾಡ ಕಛೇರಿ ಕೆರೆಹಳ್ಳಿ	ರಾಜಸ್ವ ನಿರೀಕ್ಷಕರು ಕೆರೆಹಳ್ಳಿ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್ ಕೆರೆಹಳ್ಳಿ
3.	ನಾಡ ಕಛೇರಿ ನಗರ	ರಾಜಸ್ವ ನಿರೀಕ್ಷಕರು ನಗರ ಹೋಬಳಿ	ಗ್ರಾಮ ಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶೀಲ್ದಾರ್ ನಗರ

ಬ(1)(ಅ)ಹೊಸನಗರ ತಾಲ್ಲೂಕಿನ ಸಾಮಾನ್ಯ ಮಾಹಿತಿಗಳು

ಕ್ರ. ಸಂ.	ವಿವರ	
1	**ಭೌಗೋಳಿಕ ವಿಸ್ತೀರ್ಣ**	351571 ಹೆಕ್ಟೆರ್-11ಗುಂಟೆ
2	ಒಟ್ಟು ಜನಸಂಖ್ಯೆ	1,15000
1	ಗ್ರಾಮೀಣ ಜನಸಂಖ್ಯೆ	1,09,957
2	ನಗರ ಜನಸಂಖ್ಯೆ	5,043
3	ನಗರ ಪ್ರದೇಶ	1
4	ಗಂಡಸರು	57,392
5	ಹೆಂಗಸರು	57,608
6	ಪರಿಶಿಷ್ಟ-ಜಾತಿ	10,834
7	ಪರಿಶಿಷ್ಟ-ಪಂಗಡ	1929
8	ಲಿಂಗಾನುಪಾತ	1004
9	ಜನಸಾಂದ್ರತೆ	ಪ್ರತಿ ಚ.ಕಿ.ಮೀ.ಗೆ 81
3)	**ಶೈಕ್ಷಣಿಕ ಸಂಸ್ಥೆಗಳು**	
1	ಪದವಿ ಪೂರ್ವ ಕಾಲೇಜ್	6
2	ಪದವಿ ಕಾಲೇಜ್	1
3	ಪ್ರಾಥಮಿಕ ಶಾಲೆಗಳು	233
4	ಪ್ರೌಢ ಶಾಲೆಗಳು	23
5	ಸಾಕ್ಷರತೆ ಪ್ರಮಾಣ	78%
4)	**ಮಳೆ ಪ್ರಮಾಣ**	
1	ವಾಡಿಕೆ ಮಳೆ	2,962.3 ಮಿ.ಮೀ

ಕ್ರ. ಸಂ.	ವಿವರ	
2	ವಾಸ್ತವಿಕ ಮಳೆ	–
3	ಮಳೆ ಮಾಪನಗಳು	19
5)	**ಬ್ಯಾಂಕುಗಳು**	
1	ವಾಣಿಜ್ಯ ಬ್ಯಾಂಕು	11
2	ಗ್ರಾಮೀಣ ಬ್ಯಾಂಕು	4
3	ಸಹಕಾರಿ ಬ್ಯಾಂಕು(ಪಿ.ಎಲ್.ಡಿ.ಬಿ)	1
4	ಕ್ರೇಡಿಟ್ ಸಹಕಾರಿ ಸಂಘ	2
6)	**ರಸ್ತೆಗಳು**	
1	ರಾಷ್ಟ್ರೀಯ ಹೆದ್ದಾರಿ	–
2	ರಾಜ್ಯ ಹೆದ್ದಾರಿ	02
3	ಜಿಲ್ಲಾ ಮುಖ್ಯ ರಸ್ತೆ	01
7	ನಾಡಕಛೇರಿಗಳು	2
8	ಹೋಬಳಿಗಳು	4
9	ಕಂದಾಯ ಗ್ರಾಮಗಳು	209
10	ಗ್ರಾಮ ಪಂಚಾಯಿತಿಗಳು	39

4.ಬಿ(1) ಇ.ಕಾರ್ಯವಿಧಾನ:

1) ತಹಶೀಲ್ದಾರ್ ಹೊಸನಗರ ತಾಲ್ಲೂಕಿನ ಕಂದಾಯಾಡಳಿತ ವ್ಯವಸ್ಥೆಯ ಮುಖ್ಯಸ್ಥರಾಗಿದ್ದು ಆಡಳಿತ ಹಾಗೂ ಕಾನೂನು ಸುವ್ಯವಸ್ಥೆಯ ಸಂಪೂರ್ಣ ಅಧಿಕಾರ ಹೊಂದಿರುವವರಾಗಿದ್ದಾರೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 11 ರಂತೆ ತಾಲ್ಲೂಕಿಗೆ ಒಬ್ಬರಂತೆ ತಹಶೀಲ್ದಾರ್‌ರನ್ನಾಗಿ ನೇಮಕ ಮಾಡಲಾಗಿದೆ.ಕರ್ನಾಟಕ ಭೂ ಕಂದಾಯ ಕಾಯ್ದೆ ಮತ್ತು ಕೇಂದ್ರ ಹಾಗೂ ರಾಜ್ಯ ಅಧಿನಿಯಮಗಳಲ್ಲಿ ನಿಯಮಿಸಿದ ಎಲ್ಲಾ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ತಹಶೀಲ್ದಾರ್ ತಾಲ್ಲೂಕಿನ ದಂಡಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

4.(ಬಿ)11.

11. ಕಂದಾಯ ಇಲಾಖೆಯು ಈ ಕೆಳಕಂಡ ಸಾಮಾನ್ಯ ಕಾರ್ಯಗಳನ್ನು ಪ್ರಮುಖವಾಗಿ ನಿರ್ವಹಿಸುತ್ತದೆ.

ಅ.1) ಕಾರ್ಯಕಾರಿ ದಂಡಾಧಿಕಾರಿಯ ಕಾರ್ಯನಿರ್ವಹಣೆ.

2) ಸಾರ್ವಜನಿಕ ದೂರು ನಿರ್ವಹಣೆ.

3) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ.

4) ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು.

5) ಎಲ್ಲಾ ರೀತಿಯ ಗಣತಿ ಕಾರ್ಯಗಳನ್ನು ನಡೆಸುವುದು (ಜನಗಣತಿ,ಜಾನುವಾರು ಗಣತಿ,ಕೃಷಿ ಗಣತಿ, ಆರ್ಥಿಕ ಗಣತಿ).

6) ಜಿಲ್ಲಾಧಿಕಾರಿಗಳ ಪರವಾಗಿ ಶಿಷ್ಟಾಚಾರ ಕಾರ್ಯನಿರ್ವಹಣೆ.

7) ಪ್ರಕೃತಿ ವಿಕೋಪ,ನೈಸರ್ಗಿಕ ವಿಕೋಪ ಮತ್ತು ಮಾನವ ನಿರ್ಮಿತ ವಿಕೋಪಗಳಿಂದ ಬಾದಿತರಾದವರಿಗೆ ಪರಿಹಾರ, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾರ್ಯನಿರ್ವಹಣೆ.

8) ವೃದ್ಧಾಪ್ಯ ವೇತನ, ಅಂಗವಿಕಲ ವೇತನ,ವಿಧವಾ ವೇತನ,ಸಂಧ್ಯಾ ಸುರಕ್ಷಾ ವಶತನ ಮೊದಲಾದ ಸಾಮಾಜಿಕ ಸುರಕ್ಷತೆಯ ನಿರ್ವಹಣೆ.

9) ಆಯುಧ ಕಾಯಿದೆಯಡಿ ಪ್ರಕರಣ ವಿಲೇವಾರಿ.

10) ಆದಾಯ, ಜಾತಿ, ವಾಸ್ತವ್ಯದ ಬಗ್ಗೆ ದೃಢೀಕರಣ ನೀಡುವುದು.

11) ನ್ಯಾಯಾಲಯದಲ್ಲಿ ಸರ್ಕಾರಿ ವ್ಯಾಜ್ಯ ನಿರ್ವಹಣೆ.

12) ಸರ್ಕಾರದಿಂದ ಕಾಲಕಾಲಕ್ಕೆ ಜಾರಿಗೆ ಬರುವ ವಿವಿಧ ಯೋಜನೆಗಳ ಮತ್ತು ಕಾರ್ಯಗಳ ನಿರ್ವಹಣೆ.

ಆ. ಕಂದಾಯ ಆಡಳಿತ

1) ರಾಜ್ಯದಲ್ಲಿನ ಭೂ ದಾಖಲೆಗಳ ನಿರ್ವಹಣೆ, ಎಲ್ಲಾ ಜಮೀನುಗಳ ಭೂ ಮಾಪನ.

2) ಭೂಕಂದಾಯ ನೀರು ತೆರಿಗೆ, ಸರ್ಕಾರಿ ಬಾಕಿ ವಸೂಲಾತಿ.

3) ಗೋಮಾಳ, ಕೆರೆ, ಅಂಗಳ, ಉಪವನಗಳು ಇತ್ಯಾದಿ ಸಾಮುದಾಯಿಕ ಜಮೀನುಗಳನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ.

4) ಅಕ್ರಮ-ಸಕ್ರಮ ಸಮಿತಿಗೆ ಪೂರಕ ಮಾಹಿತಿ ಹಾಗೂ ದಾಖಲಾತಿ ನಿರ್ವಹಣೆ.

5) ಭೂ ಸುಧಾರಣೆ ಮತ್ತು ಗಣಿಗಾರಿಕೆ ನಿಬಂಧನೆಗಳ ನಿರ್ವಹಣೆ.

6) ಭೂ ಪರಿವರ್ತನೆ.

7) ಕರ್ನಾಟಕ ಭೂ ಕಂದಾಯ ಕಾಯ್ದೆಯಡಿಯಲ್ಲಿ ಬರುವ ಎಲ್ಲ ವ್ಯವಹಾರಗಳ ನಿರ್ವಹಣೆ.

ಇ. ಕಾನೂನು ಆಡಳಿತ

ತಹಶೀಲ್ದಾರ್ ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಮತ್ತು ಕಾನೂನುಗಳ ವಿವರ

1) ಕರ್ನಾಟಕ ಭೂ ಕಂದಾಯ ಕಾಯ್ದೆಯ ಅಧಿನಿಯಮ 1961 ಮತ್ತು ನಿಯಮಾವಳಿ 1974

2) ಕರ್ನಾಟಕ ಹಲವು ಇನಾಂ ರದ್ದತಿ ಅಧಿನಿಯಮ 1977

3) ಕರ್ನಾಟಕ ಗ್ರಾಮ ನೌಕರಿಗಳ ರದ್ದತಿ ಅಧಿನಿಯಮ-1961

4) ಕರ್ನಾಟಕ ಪುರ ಸಭೆಗಳ ಅಧಿನಿಯಮ-1964

5) ಕರ್ನಾಟಕ ಕೃಷಿಸಾಲ ಕಾರ್ಯಾಚರಣೆ ಮತ್ತು ಇತರ ಉಪಬಂಧಗಳ ಅಧಿನಿಯಮ-1974 ಮತ್ತು ನಿಯಮಾವಳಿ-1975

6) ಕರ್ನಾಟಕ ವೃದ್ಧಾಪ್ಯ ವೇತನ ನಿಯಮಾವಳಿ

7) ನಿರ್ಗತಿಕ ವಿಧವಾ ವೇತನ ನಿಯಮಾವಳಿ

8) ದೈಹಿಕ ಅಂಗವಿಕಲರಿಗೆ ನಿರ್ವಹಣಾ ಭತ್ಯೆ ಮಂಜೂರಿ ನಿಯಮಾವಳಿ

9) ಕರ್ನಾಟಕ ಋಣ ವಿಮೋಚನಾ ಅಧಿನಿಯಮ.

10) ಮತದಾರರ ನೋಂದಣಿ ನಿಯಮಾವಳಿ

11) ಕರ್ನಾಟಕ ಕೃಷಿಉತ್ಪನ್ನ ಮಾರುಕಟ್ಟೆ ನಿಯಂತ್ರಣ ಅಧಿನಿಯಮ-1966

12) ಕರ್ನಾಟಕ ನೀರಾವರಿ ಅಧಿನಿಯಮ-1965

13) ಕರ್ನಾಟಕ ನೀರಾವರಿ (ನೀರಿನ ಕರ ಆಚರಣೆ) ನಿಯಮಾವಳಿ-1965

14) ಕರ್ನಾಟಕ ಅರಣ್ಯ ನಿಯಮಾವಳಿ-1969

15) ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ-1966

16) ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ-1974 ಮತ್ತು ಅದರಡಿಯ ನಿರ್ವಹಣೆ.

"ದಂಡಾಧಿಕಾರಿಯಾಗಿ ತಹಶೀಲ್ದಾರರು ಈ ಕೆಳಗಿನ ಕಾಯಿದೆಗಳಡಿಯಲ್ಲಿ ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ."

1) ದಂಡ ಪ್ರಕ್ರಿಯೆ ಸಂಹಿತೆ-1974.

2) ಭಾರತ ಸಾಕ್ಷ ಅಧಿನಿಯಮ-1963

3) ಕರ್ನಾಟಕ ಪೋಲಿಸ್ ಅಧಿನಿಯಮ-1976

4) ಜೀತದಾಳು ಪದ್ಧತಿ(ನಿರ್ಮೂಲನೆ) ಅಧಿನಿಯಮ-1976

5) ಪ್ರಮಾಣ ವಚನ ಅಧಿನಿಯಮ-1999

6) ಭಾರತಿಯ ಮುದ್ರಾಂಕ ಅಧಿನಿಯಮ-1899

7) ಪ್ರಾಣಿಗಳ ಹಿಂಸೆ ಅಧಿನಿಯಮ-1960

8) ಕರ್ನಾಟಕ ಭಿಕ್ಷಾಟನಾ ಅಧಿನಿಯಮ-1975

9) ಸಾರ್ವಜನಿಕ ಆರೋಗ್ಯ ಅಧಿನಿಯಮ-1944

10) ಕರ್ನಾಟಕ ಮಾರಾಟಕರ ಅಧಿನಿಯಮ-1957

11) ಪರಿಶಿಷ್ಟ-ಜಾತಿ, ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಷಿದ್ಧ) ಅಧಿನಿಯಮ-1989

12) ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ಅಧಿನಿಯಮ

13) ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ನಿರ್ವಹಣೆ.

4.ಬಿ(1)ರಲ್ಲಿ.11.

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಅಧಿಕಾರಿಗಳ ಮತ್ತು ಕರ್ತವ್ಯದ ವಿವರಗಳು.

ಕ್ರ.ಸಂ.	ವಿವರ
1.	ತಹಶೀಲ್ದಾರ್
2.	ತಾಲ್ಲೂಕು ಶಿರಸ್ತೆದಾರ್
	1) ಪ್ರಥಮ ದರ್ಜೆ ಸಹಾಯಕರು
	2) ದ್ವಿತೀಯದರ್ಜೆ ಸಹಾಯಕರು
	3) ಬೆರಳಚ್ಚುಗಾರರು
	4) ವಾಹನ ಚಾಲಕರು
	5) ದಫೇದಾರ್
	6) ಜವಾನರು
3.	ಹಕ್ಕು ದಾಖಲೆ ಶಿರಸ್ತೆದಾರ್
	1) ಪ್ರಥಮ ದರ್ಜೆ ಸಹಾಯಕರು
	2) ರಾಜಸ್ವ ನಿರೀಕ್ಷಕರು
	3) ದ್ವಿತೀಯದರ್ಜೆ ಸಹಾಯಕರು
	4) ಗ್ರಾಮಲೆಕ್ಕಿಗರು
	5) ದಫ್ತರ್ ಬಂದ್
	6) ಜವಾನರು
2)	ಚುನಾವಣೆ ಶಿರಸ್ತೇದಾರ್
	1) ಪ್ರಥಮ ದರ್ಜೆ ಸಹಾಯಕರು
	2) ದ್ವಿತೀಯದರ್ಜೆ ಸಹಾಯಕರು
3)	1) ಆಹಾರ ನಿರೀಕ್ಷಕರು
	2) ದ್ವಿತೀಯದರ್ಜೆ ಸಹಾಯಕರು
4)	ಉಪ ತಹಶೀಲ್ದಾರ್, ನಾಡಕಛೇರಿ
	1) ದ್ವಿತೀಯದರ್ಜೆ ಸಹಾಯಕರು
.	2) ರಾಜಸ್ವ ನಿರೀಕ್ಷಕರು
	3) ಬೆರಳಚ್ಚುಗಾರರು
	4) ಜವಾನರು
5)	ಪರ್ಯಾವೇಕ್ಷಕರು
	1) ಪ್ರಥಮ ದರ್ಜೆ ಭೂಮಾಪಕರು
	2) ಪ್ರಥಮ ದರ್ಜೆ ಸಹಾಯಕರು
	3) ದ್ವಿತೀಯ ದರ್ಜೆ ಸಹಾಯಕರು
	4) ಜವಾನರು
	5) ಧಫ್ತರ್ ಬಂದ್

111.4(1)(111)

ತಾಲ್ಲೂಕು ಕಛೇರಿಯ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ.

ಕಾರ್ಯವಿಧಾನ:

ತಾಲ್ಲೂಕು ಕಛೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಕಾರ್ಯನಿರ್ವಹಣೆ, ಅಧಿಕೃತ ಜ್ಞಾಪನಗಳಲ್ಲಿ ಕಾರ್ಯನಿರ್ವಹಣಾ ಆದೇಶ ಜಾರಿಗೊಳಿಸಿದೆ ಅಂತೆಯೇ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

ಮೇಲೆ ತಿಳಿಸಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ (ಗ್ರೂಫ್ ಸಿ ಮತ್ತು ಡಿ) ತಹಶೀಲ್ದಾರರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಕಛೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂಧಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ಕೈಗೊಳ್ಳುವ ಅಧಿಕಾರಿ ತಹಶೀಲ್ದಾರ್‌ರಾಗಿರುತ್ತಾರೆ.

1) ಕಾಗದ ಪತ್ರಗಳ ಸ್ವೀಕೃತಿ ವಿಲೇವಾರಿ:

ಸಾರ್ವಜನಿಕರಿಂದ ಅಧೀನ ಕಛೇರಿಗಳಿಂದ ಮತ್ತು ಸರ್ಕಾರ ಹಾಗೂ ಮೇಲಾಧಿಕಾರಿಗಳಿಂದ ಬರುವಂತಹ ಎಲ್ಲಾ ಕಾಗದ ಪತ್ರಗಳನ್ನು, ಕಡತಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ಸ್ವೀಕರಿಸಿ ಸಾರ್ವಜನಿಕರ ಮನವಿ ಬಗ್ಗೆ ಸ್ಥಳದಲ್ಲಿ ಸ್ವೀಕೃತಿ ಪತ್ರವನ್ನು ನೀಡಿದ ನಂತರ ಕಛೇರಿಯ ತಾಲ್ಲೂಕು ಶಿರಸ್ತೇದಾರ್ ಮುಖಾಂತರ ತಹಶೀಲ್ದಾರ್ ಗಮನಕ್ಕೆ ತಂದು ಸ್ವೀಕೃತಿ ಶಾಖೆಯಲ್ಲಿ ದಾಖಲಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಪ್ರತಿ ಕಡತ ಕಾಗದ ಪತ್ರಗಳನ್ನು ಶಾಖಾವಾರು ಗುರುತಿಸುವಂತೆ ಹಾಕಿದ ನಂತರ ಅಗತ್ಯ ಕ್ರಮ ಕೈಗೊಳ್ಳಲು ನೀಡಲಾಗುತ್ತದೆ.

4.(ಬಿ)(1)4.

ಕ್ರ.ಸಂ.	ಕಛೇರಿ ಪ್ರಕಾರ್ಯಗಳ ನಿರ್ವಹಣೆಗೆ ರೂಪಿಸಿದ ಸೂತ್ರಗಳು
1.	ತಹಶೀಲ್ದಾರ್ ಕಛೇರಿಯಲ್ಲಿ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ದಾಖಲಿಸಿ ವಿಷಯ ನಿರ್ವಾಹಕರಿಗೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ
2.	ಸಾರ್ವಜನಿಕರಿಂದ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳಿಗೆ ಸ್ವೀಕೃತಿನೀಡುವುದಲ್ಲದೆ ಕಾರ್ಯಗತ ಅವಧಿ ನಿಗದಿಪಡಿಸಿ ತಿಳಿಸಲಾಗುತ್ತದೆ.
3.	ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆ ಬಗ್ಗೆ ನವೀಕರಿಸಲಾಗುವ ಎಲ್ಲಾ ಮನವಿಗಳನ್ನು ಪ್ರತ್ಯೇಕ ರಿಜಿಸ್ಟರ್ ನಲ್ಲಿ ನಮೂದಿಸಿ ಕ್ಷಿಪ್ರ ಕಾಲದಲ್ಲಿ ಉತ್ತರ ನೀಡುವುದು.

ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಪ್ರತಿ ಮಾಹೆಯಲ್ಲೂ ಕಂದಾಯ ನಿರೀಕ್ಷಕರ ಮತ್ತು ಗ್ರಾಮಲೆಕ್ಕಾಧಿಕಾರಿಗಳ ಸಭೆ ಕರೆಯಲಾಗುವುದು.

ಕಛೇರಿ ಕೈಪಿಡಿ ನಿಯಮಾವಳಿ ರಿತ್ಯಾ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರು ಸ್ವೀಕರಿಸಿ ಗರಿಷ್ಟ 5 ದಿನಗಳೊಳಗಾಗಿ ವಿಷಯ ನಿರ್ವಾಹಕರು ಸ್ವೀಕರಿಸುವ ಎಲ್ಲಾ ಕಾಗದ ಪತ್ರಗಳನ್ನು ವಿಷಯ ನಿರ್ವಾಹಕರ ದಿನಚರಿಯಲ್ಲಿ ನಮೂದಿಸಿಕೊಂಡು ತದನಂತರ ವಿಷಯ ವಹಿಯಲ್ಲಿ ಅನುಕ್ರಮವಾಗಿ ದಾಖಲಿಸಿಕೊಂಡು ಕಡತಗಳಲ್ಲಿ ಟಿಪ್ಪಣಿ ಹಾಕಿ ಮಂಡಿಸುತ್ತಾರೆ. ವಿಷಯ ನಿರ್ವಾಹಕರೆಲ್ಲರೂ ಕಛೇರಿ ಕಾರ್ಯವಿಧಾನ ರಿತ್ಯಾ ಐದುಕಟ್ಟು ವಿಧಾನ ಅಳವಡಿಸಿ ಕಾರ್ಯನಿರ್ವಹಿಸುತ್ತಾರೆ.

ವಿಷಯ ನಿರ್ವಾಹಕರಿಂದ ಬಂದಂತಹ ಎಲ್ಲ ಕಡತಗಳ ಪರಿಶೀಲನೆ ಮಾಡಿ ಶಾಖಾ ಮುಖ್ಯಸ್ಥರು ವಿಳಂಬವಾಗದ ರೀತಿ ಕಡತದಲ್ಲಿ ವಿಷಯವಾರು ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಸೂಕ್ತ ಅಭಿಪ್ರಾಯದೊಂದಿಗೆ ಸಲ್ಲಿಸುತ್ತಾರೆ.

ಕಡತಗಳಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಅನುಸರಿಸುವ ಬಗ್ಗೆ ಕಾರ್ಯವಿಧಾನ ಕಛೇರಿ ಕೈಪಿಡಿಯ ನಿಯಮಾವಳಿ ರಿತ್ಯ ಕ್ರಮವಹಿಸಲಾಗುತ್ತದೆ.

4.ಬಿ(1)5

ತಹಶೀಲ್ದಾರರ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳು ತಹಶೀರೂಪಿಸಲಾದ ಕಾಯಿದೆ ನಿಯಮಗಳಡಿ ನಿರ್ವಹಿಸುವ ಎಲ್ಲಾ ಕಡತಗಳಲ್ಲಿ ಅಂತಿಮ ನೀಡಿ ಮುಕ್ತಾಯವಾದ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನು ಅನುಸರಿಸಿ ಪ್ರವರ್ಗ 'A' 'B' 'C' ಎಂದು ವರ್ಗಿಕರಿಸಿ ನಿರ್ವಹಿಸಲಾಗುತ್ತಿದೆ.

ಪ್ರತಿ ವರ್ಗೀಕರಣ ಅವದಿ ಈ ಕೆಳಕಂಡಂತಿರುತ್ತದೆ.

"ಎ"ಡಿಸ್-ಶಾಶ್ವತ

"ಬಿ"ಡಿಸ್-30 ವರ್ಷಗಳು

"ಸಿ"ಡಿಸ್-10 ವರ್ಷಗಳು

4.ಬಿ(1)6

ಕಛೇರಿಯ ಕೆಲಸಕ್ಕಾಗಿ ಉಪಯೋಗಿಸಬೇಕಾದ ವಹಿಗಳು ದಾಖಲೆಗಳು:

ಕಛೇರಿಯ ಕೆಲಸದ ಬಗ್ಗೆ ಈ ಕೆಳಗಿನ ವಹಿಗಳನ್ನು ಇಟ್ಟು ಕೆಲಸ ನಿರ್ವಹಿಸಲಾಗುತ್ತದೆ.

ಕ್ರ.ಸಂ.	ವಿವರ
1.	ಟಪಾಲು ವಹಿ
2.	ಅರೆ ಸರ್ಕಾರಿ ಪತ್ರಗಳ ವಹಿ
3.	ಚುಕ್ಕೆ ಗುರುತಿನ ಪ್ರಶ್ನೆ ವಹಿ

ಕ್ರ.ಸಂ.	ವಿವರ
4.	ಹಾಜರಾತಿ ವಹಿ
5.	ಚಲನ್ ವಹಿ
6.	ಅಕ್ರಮ–ಸಕ್ರಮ ಮಂಜೂರಾತಿ ವಹಿ
7.	ಮನೆ ನಿವೇಶನ ಮಂಜೂರಾತಿ ವಹಿ
8.	ಬಂದೂಕು ಪರವಾನಿಗೆ ವಹಿ
9.	ವೃದ್ಧಾಪ್ಯ, ವಿಧವಾ, ಅಂಗವಿಕಲ ವೇತನ ವಹಿ
10.	ಸಂಧ್ಯಾ ಸುರಕ್ಷಾ ವಹಿ
11.	ವಿಷಯ ನಿರ್ವಾಹಕರುಗಳಲ್ಲಿರುವ ವಹಿಗಳು
	ಎ) ದಿನ ವಹಿ
	ಬಿ) ದಿನಚರಿ ವಹಿ
	ಸಿ) ವಾರ ವಹಿ
	ಡಿ) ತಿಂಗಳ ಪ್ರಗತಿ ವಹಿ
12.	ವಿವಿದ ಲೆಕ್ಕ ಶೀರ್ಷಿಕೆಗಳ ಸಿಬ್ಬಂದಿ ವೇತನ ವಹಿ
13.	ಪ್ರಕೃತಿ ವಿಕೋಪ ಪರಿಹಾರ ಮಂಜೂರಾತಿ ವಹಿ
14.	ಆರಾಧನಾ ತಸ್ತಿಕ್ ಮಂಜೂರಾತಿ ವಹಿ
15.	ಭೂ ಪರಿವರ್ತನೆ ಹಿಂಬರಹ ವಹಿ
16.	ಸೇವಾ ವಹಿಯ ಸಂಚಲನ ವಹಿ
17.	ಭೂ ಸುಧಾರಣಾ ಮಂಜೂರಾತಿ ವಹಿ

4.ಬಿ(1)7.

ಅದರ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು.

1) ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.

2) ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲನೆ ಬಗ್ಗೆ ಸಭೆಗಳನ್ನು ಏರ್ಪಡಿಸುವುದು.

3) ಸಾರ್ವಜನಿಕರ ಕುಂದುಕೊರತೆ ಆಲಿಸುವುದು.

4) ಪಾರದರ್ಶಕ ಕಾಯ್ದೆ ಅನುಷ್ಠಾನ

5) ಎಲ್ಲಾ ವರ್ಗದ ಜನರಿಂದ ಸ್ವೀಕರಿಸುವಂತಹ ಅಹವಾಲುಗಳು ಸಾರ್ವಜನಿಕರ ಸಂಘ ಸಂಸ್ಥೆಗಳ ಕುಂದುಕೊರತೆಗಳಲ್ಲದೆ, ಇನ್ನಿತರ ಸಂಘಟನೆಗಳಿಂದ ನಡೆಸುವ ಪ್ರತಿಭಟನೆಗಳ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಿಸಿದವರಿಗೆ ರವಾನಿಸಿ ಮಾಹಿತಿ ಪಡೆದು ಪರಿಹಾರ ಒದಗಿಸುವುದಲ್ಲದೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಲಾಗುತ್ತಿದೆ. ಸಾರ್ವಜನಿಕ ದೂರು ಕೋಶ ಮುಖೇನ ಸ್ವೀಕರಿಸುವ ಅರ್ಜಿಗಳ ಪರಿಶೀಲನೆ ಹಾಗೂ ವಿಲೇವಾರಿ.

6) ಪ್ರಕೃತಿ ವಿಕೋಪ

ಪ್ರಕೃತಿ ವಿಕೋಪಗಳಿಂದ ಅತಿವೃಷ್ಠಿ ಸೇರಿದಂತೆ ಎಲ್ಲಾ ವಿಕೋಪಗಳ ಬಗ್ಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತಿದೆ. ಅಲ್ಲದೆ ಸಾರ್ವಜನಿಕರಿಗೆ ಮನವರಿಕೆ ಅಗತ್ಯವಿದ್ದಲ್ಲಿ ಸಂಕಷ್ಟದ ಮಾಹಿತಿ ಪಡೆಯಲು ಹಾಗೂ ತುರ್ತು ಪರಿಹಾರ ನೀಡಲು ತಾಲ್ಲೂಕು ಕಛೇರಿಯಲ್ಲಿ ಕಂಟ್ರೋಲ್ ರೂಂ ತೆರೆಯಲಾಗಿದೆ.

ತಾಲ್ಲೂಕು ಕಛೇರಿಯ ದೂರವಾಣಿ ಸಂಖ್ಯೆ–958185–221235

7) ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94ಸಿ ರಡಿ ಸ್ವೀಕರಿಸಿದ ಅರ್ಜಿಗಳ ವಿಲೇವಾರಿ.

4.ಬಿ(1)8.

ಮಂಡಳಿ, ಪರಿಷತ್ತು ಸಮಿತಿಗಳಲ್ಲಿ ಎರಡು ಹಾಗೂ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳಿಂದ ರಚಿಸಲಾದ ಸಮಿತಿಯ ಸಲಹೆ ಹಾಗೂ ಸರ್ಕಾರದ ನಡುವಳಿಗಳು.

ಕಛೇರಿಯಲ್ಲಿ ಸರ್ಕಾರದ ಆದೇಶದಂತೆ ಅಕ್ರಮ ಸಕ್ರಮೀಕರಣ ಸಮಿತಿ ಭೂನ್ಯಾಯ ಮಂಡಳಿಯ ಸಮಿತಿ ಆರಾಧನಾ ಸಮಿತಿಗಳು ರಚನೆಯಾಗಿ ಕೆಲಸ ನಿರ್ವಹಿಸಲಾಗುತ್ತಿದೆ.

4.ಬಿ(1)9:10.

ತಾಲ್ಲೂಕು ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಮಾಹಿತಿ ಪುಸ್ತಕ ಮತ್ತು ವೇತನ ವಿವರ. ತಹಶೀಲ್ದಾರ್ ಕಛೇರಿಯ ಮುಖ್ಯಸ್ಥರಾಗಿದ್ದು ಕಛೇರಿಯ ಮುಖ್ಯಸ್ಥರಿಗೆ ಸರ್ಕಾರ ಇಲ್ಲವೇ ಇಲಾಖೆ ನೀಡಿದ ಹಕ್ಕು ಬಾಧ್ಯತೆಗಳಿಗನುಗುಣವಾಗಿ ಕರ್ತವ್ಯ ನಿರ್ವಹಣೆ.

ಕ್ರ.ಸಂ.	ಅಧಿಕಾರಿ:ನೌಕರರ ಪದನಾಮ	ವೇತನ ಶ್ರೇಣಿ	ಹುದ್ದೆಗಳು
1.	ತಹಶೀಲ್ದಾರ್	11400–12600	1
2.	ತಾಲ್ಲೂಕು ಶಿರಸ್ತೆದಾರ್	10000–18150	3
3.	ಉಪ ತಹಶೀಲ್ದಾರ್	10000–18150	2
4.	ಪ್ರಥಮದರ್ಜೆ ಸಹಾಯಕರು	7275–13350	5
5.	ರಾಜಸ್ವ ನಿರೀಕ್ಷಕರು	7275–13350	4
6.	ಆಹಾರ ನಿರೀಕ್ಷಕರು	8825–16000	1
7.	ಪ್ರಥಮ ದರ್ಜೆ ಭೂ ಮಾಪಕರು	7275–13350	1
8.	ಬೆರಳಚ್ಚುಗಾರರು	5800–10500	1
9.	ದ್ವಿತೀಯದರ್ಜೆ ಸಹಾಯಕರು	5800–10500	11
10.	ದ್ವಿತೀಯದರ್ಜೆ ಭೂ ಮಾಪಕರು	5800–10500	7
11.	ಗ್ರಾಮ ಲೆಕ್ಕಿಗರು	5800–10500	33
12.	ದಫೇದಾರ್	5200–8200	1
13.	ಆರ್.ಆರ್.ಅಟೆಂಡರ್	5200–8200	1
14.	ವಾಹನ ಚಾಲಕರು	5800–10500	1
15.	ದಫ್ತರ್ ಬಂದ್	5200–8200	1
16.	ಡಿ–ಗ್ರೂಫ್	4800–7275	7
17.	ಬಾಂದು ಜವಾನರು	4800–7275	6

4.ಬಿ(1)9:10.

2008–09 ನೇ ಸಾಲಿನ ಆಯವ್ಯಯ ಬಗ್ಗೆ ಟಿಪ್ಪಣಿ

ಹೊಸನಗರ ತಾಲ್ಲೂಕಿಗೆ ಸಂಬಂಧಪಟ್ಟಂತೆ 2008–09 ನೇ ಸಾಲಿನ ಆಯವ್ಯಯ ಅಂದಾಜು ಈ ಕೆಳಗಿನಂತಿದೆ.

ಕ್ರ. ಸಂ.	ಲೆಕ್ಕಶೀರ್ಷಿಕೆ	ವಿವರ	ಆಯವ್ಯಯದ ಅಂದಾಜು ವೆಚ್ಚ ಮೊಬಲಗು
1.	2015–00–102–0–01	ವೇತನ	5,55,823–00
2.	2053–00–094–7–01	ವೇತನ	5,41,200–00
3.	2053–00–094–7–01	ವೇತನ	9,50,511–00
4.	2053–00–094–7–01	ವೇತನ	1,15,396–00
5.	2506–00–101–1–01	ವೇತನ	2,72,941–00
6.	2053–00–094–7–01	ವೇತನ	1,74,594–00
7.	2053–00–094–7–01	ವೇತನ	25,69,399–00
8.	2515–00–101–0–17	ವೇತನ	1,58,893–00
9.	2071–01–200–0–05	ವೇತನ	42,000–00
10.	2071–01–200–0–06	ವೇತನ	6,60,00–00
11.	2408–01–001–0–0–1	ವೇತನ	3,66,363–00
12.	2029–00–101–01–1	ವೇತನ	27,14,586–00

4.ಬಿ(1)14.

ಕಛೇರಿಯಲ್ಲಿರುವ ಮಾಹಿತಿಯನ್ನು ವೆಬ್‌ಸೈಟ್ ನಲ್ಲಿ ನೀಡಿರುವ ಬಗ್ಗೆ ವಿವರ ಕಛೇರಿಯಲ್ಲಿ ಪಹಣಿ ಮತ್ತು ಖಾತೆ ಬದಲಾವಣೆ ಸಂಬಂಧಿಸಿದಂತೆ "ಕಿಯೋನಿಕ್ಸ ಕೇಂದ್ರ" ತೆರೆಯಲಾಗಿದ್ದು ಜನರಿಗೆ ಪಹಣಿ ಪತ್ರಗಳನ್ನು ನೀಡಲಾಗುತ್ತಿದೆ.

4.ಬಿ(1)15.

ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲು ಲಭ್ಯವಿರುವ ಸುತ್ತೋಲೆಗಳು ಹಾಗೂ ಗ್ರಂಥಾಲಯಗಳು ಮತ್ತು ವಾಚನಾಲಯಗಳು ಇದ್ದಲ್ಲಿ ಅದರ ವಿವರ.

ಕಛೇರಿಯಲ್ಲಿ ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ಸುತ್ತೋಲೆಗಳು ಇರುತ್ತದೆ. ಗ್ರಂಥಾಲಯ ಇರುವುದಿಲ್ಲ.

4.ಬಿ(1)16.

ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ ಮತ್ತು ಇತರ ವಿವರಗಳು.

ಅಧಿಸೂಚನೆಗಳು

ಭಾರತ ಸರ್ಕಾರದ ಮಾಹಿತಿ ಪಡೆಯಲು ಮತ್ತು ಅಧಿನಿಯಮ 2005 (ಸೆಂಟ್ರಲ್ ಆ್ಯಕ್ಟ್ 22 ಎಫ್ 2005) ಸೆಕ್ಷನ್5(1), 5(2) ಮತ್ತು 19(1) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ತಾಲ್ಲೂಕು ಕಛೇರಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಅನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ.

ಕ್ರ. ಸಂ.	ಕಛೇರಿ ಹೆಸರು	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ5(1) ಮಾಹಿತಿ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ5(1) ಮಾಹಿತಿ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರ	ಮಾಹಿತಿ ಪಡೆಯುವ ಹಕ್ಕು ಕಾಯಿದೆ 2005 ಕಲಂ5(1) ಮಾಹಿತಿ ಪ್ರಕಾರ ಮೇಲ್ಮನವಿ ಪ್ರಾದಿಕಾರ
1.	ತಾಲ್ಲೂಕು ಕಛೇರಿ ಹೊಸನಗರ	ತಹಶಿಲ್ದಾರ್ ಹೊಸನಗರ	ತಾಲ್ಲೂಕು ಕಛೇರಿಗೆ ಸಂಬಂಧಪಟ್ಟ ಶಿರಸ್ತೇದಾರ್(ವಿಷಯವಾರು)	ಉಪ ವಿಭಾಗಾಧಿಕಾರಿಗಳು, ಸಾಗರ.
2.	ನಾಡಕಛೇರಿ, ಕೆರೆಹಳ್ಳಿ	ರಾಜಸ್ವನಿರಿಕ್ಷಕರು,ಕೆರೆಹಳ್ಳಿ	ಗ್ರಾಮಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶಿಲ್ದಾರ್, ಕೆರೆಹಳ್ಳಿ
3.	ನಾಡಕಛೇರಿ, ನಗರ	ರಾಜಸ್ವನಿರಿಕ್ಷಕರು,ನಗರ	ಗ್ರಾಮಲೆಕ್ಕಾಧಿಕಾರಿಗಳು ಸಂಬಂಧಪಟ್ಟ ವೃತ್ತ	ಉಪ ತಹಶಿಲ್ದಾರ್, ನಗರ

ನಿರ್ದಿಷ್ಟ ಪಡಿಸಬಹುದಾದ ಇತರ ಮಾಹಿತಿಗಳು:

ಕಛೇರಿಯಲ್ಲಿ ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಅರ್ಜಿಗಳನ್ನು ಪಡೆದು ಹಿಂಬರಹದ ಮೂಲಕ ಅರ್ಜಿದಾರರಿಗೆ ಮಾಹಿತಿ ನೀಡಲಾಗುವುದು.

ದಸ್ತಾವೇಜು ಪ್ರತಿಗಳನ್ನು ಆದೇಶದ ನಕಲುಗಳನ್ನು ಪಡೆಯಲು ಇಚ್ಚಿಸಿದ್ದಲ್ಲಿ ಅರ್ಜಿಯನ್ನು ಸಲ್ಲಿಸಿ ಇದಕ್ಕಾಗಿ ನಿಗದಿಪಡಿಸಿದ ಶುಲ್ಕವನ್ನು ತುಂಬಿ ಗರಿಷ್ಠ 7 ದಿನಗಳ ಒಳಗಾಗಿ ನಕಲು ಪ್ರತಿಗಳನ್ನು ಪಡೆಯುವ ಸೌಲಭ್ಯವನ್ನು ಒದಗಿಸಿ ಕೊಡಲಾಗಿದೆ.

ವಹಿಗಳಲ್ಲಿ ನಮೂದಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ಪತ್ರಗಳನ್ನು ನೀಡಲಾಗುವುದು. ಹಾಗೂ ಸಾರ್ವಜನಿಕ ಮನವಿ ಬಗ್ಗೆ ಪ್ರತ್ಯೇಕ ಸ್ವೀಕೃತಿ ಪತ್ರವನ್ನು ನೀಡಲಾಗುತ್ತದೆ.

ಶಿರಸ್ತೇದಾರ್:

ತಾಲ್ಲೂಕು ಕಛೇರಿಯಲ್ಲಿ ಸಿಬ್ಬಂದಿ ಮತ್ತು ಲೆಕ್ಕ ಪತ್ರ ಚುನಾವಣೆ, ಕಂದಾಯ ಕಾನೂನು, ಶಿಷ್ಟಾಚಾರ, ಸ್ವೀಕೃತಿ ಮತ್ತು ರವಾನೆ ಶಾಖೆಗಳ ಶಿರಸ್ತೆದಾರರು ಇರುತ್ತಾರೆ. ಅವರಿಗೆ ವಹಿಸಲಾದ ಶಾಖೆಯ ಮೇಲ್ವಿಚಾರಣೆ ಮಾಡುತ್ತಾರೆ. ಇವರುಗಳು ಕಛೇರಿಯ ಅಧಿಕಾರಿಗಳು ಇವರಿಗೆ ಅಧೀನ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸುತ್ತಾರೆ.

ಕಛೇರಿ ಸಿಬ್ಬಂದಿಗಳ ಸಂಕಲನ ಕರ್ತವ್ಯ ನಿರ್ವಹಣೆಗಳು:

ಸಿಬ್ಬಂದಿ ನೇಮಕಾತಿ: ಶಿಸ್ತಿನ ಕ್ರಮ ಕಾರ್ಯನಿರ್ವಹಣೆ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಅಧೀನ ಕಾರ್ಯಾಲಯಗಳು ಮತ್ತು ನಾಡಕಛೇರಿಗಳ ಕಾರ್ಯ ನಿರ್ವಹಣೆ ಮಾಡಲಾಗುವುದು.ಗ್ರಾಮ ಸಹಾಯಕರ ನೇಮಕ ವರ್ಗಾವಣೆಗಳನ್ನು ನಡೆಸುವುದು.

ನೈಸರ್ಗಿಕ ವಿಕೋಪ:

ಬರ ಮತ್ತು ಅತಿವೃಷ್ಟಿಗಳು ಸಂಭವಿಸಿದಾಗ ತುರ್ತು ರಕ್ಷಣಾ ಕ್ರಮಗಳನ್ನು ಜರುಗಿಸುವುದು ಮತ್ತು ಸಂತ್ರಸ್ಥರಿಗೆ ಪರಿಹಾರ ನೀಡಲಾಗುವುದು. ಸಿಡಿಲು ಬಡಿದು ಮೃತಪಟ್ಟ ಕುಟುಂಬದವರಿಗೆ ಪರಿಹಾರ ನೀಡಲಾಗುವುದು. ಮತ್ತು ಬೆಂಕಿ ಆಕಸ್ಮಿಕ ಸಂಭವಿಸಿದಾಗ ಕ್ರಮ ಕೈಗೊಳ್ಳಲಾಗುತ್ತಿದೆ.

ಭೂ ಮಂಜೂರಾತಿ:

ಕಛೇರಿಯಲ್ಲಿ ಭೂ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು ಅಕ್ರಮ ಸಕ್ರಮದ ಸಮಿತಿಗಳಲ್ಲಿ ಮಂಜೂರಾದ ಪ್ರಕರಣಗಳಿಗೆ ಹಕ್ಕುಪತ್ರ ನೀಡಲಾಗುತ್ತದೆ. ಸರ್ಕಾರಿ ಜಮೀನು ಅನಧಿಕೃತ ಅತಿಕ್ರಮಣ ಮಾಡಿರುವುದನ್ನು ಕ್ರಮ ಜರುಗಿಸಿ ತೆರವುಗೊಳಿಸಲಾಗುವುದು.

ಭೂ ಸ್ವಾಧೀನ:

ಭೂ ಸ್ವಾಧೀನತೆಯ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸಲಾಗುವುದು.

ಭೂ ಸುಧಾರಣೆ:

ಕರ್ನಾಟಕ ಭೂ ಸುಧಾರಣೆ ಕಾಯಿದೆ 1961ರಲ್ಲಿ ಅವಕಾಶವಿದ್ದಂತೆ ಕಲಂ 48 ರಡಿಯಲ್ಲಿ ನೇಮಕವಾದ ಭೂ ಸುಧಾರಣಾ ಸಮಿತಿಗೆ ಕಾರ್ಯದರ್ಶಿಯಾಗಿ ಕಾನೂನಿನ ಪರಿಮಿತಿಯಲ್ಲಿ ಕೆಲಸ ನಿರ್ವಹಿಸುವುದು.

ಬೇಡಿಕೆ ವಸೂಲಿ ಬಾಕಿ(ಡಿ,ಸಿ,ಬಿ):

ಕೃಷಿ ಜಮೀನುಗಳ ಹಿಡುವಳಿಗಳ ಮೇಲೆ ನಿಗದಿಪಡಿಸಿದ ಕಂದಾಯ ನೀರಾವರಿ ಕರ ಮತ್ತು ಇತರೆ ಕಂದಾಯಗಳ ಬೇಡಿಕೆ ಪಟ್ಟಿ ತಯಾರಿಸುವುದು., ವಸೂಲಿ ಮತ್ತು ಬಾಕಿಗಳ ನಿರ್ವಹಣೆ ಕೈಗೊಳ್ಳುವುದು, ಸರ್ಕಾರದ ಇತರೆ ಇಲಾಖೆಗಳಿಂದ ವಸೂಲಿ ಮಾಡದೆ ಇರುವ ತೆರಿಗೆಗಳ ಬಾಕಿಗಳು ಮತ್ತು ಸಾಲಗಳನ್ನು ಬಾಕಿ ಇರುವ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿವರ್ತಿಸಿ ವಸೂಲಿ ಕ್ರಮ ಜರುಗಿಸುವುದು.

ಗಣಿಗಾರಿಕೆ:

ಗಣಿಗಾರಿಕೆಗೆ ಸಂಬಂಧಿಸಿದಂತೆ ಪ್ರಕರಣಗಳ ತನಿಖೆ ನಡೆಸಿ ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಜಮಾಬಂಧಿ:

ಎಲ್ಲಾ ಕಂದಾಯ ಗ್ರಾಮಗಳ ಜಮೀನುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕಂದಾಯ ನಿಗದಿ, ವಸೂಲಾತಿ ಮತ್ತು ಬಾಕಿ ವಿವರಗಳನ್ನೊಳಗೊಂಡಂತೆ ಹಾಗೂ ಭೂ ಕಂದಾಯ ಮಾಡುವ ಮತ್ತು ಸರ್ಕಾರಿ ಜಮೀನುಗಳ ವಿವರಗಳನ್ನೊಳಗೊಂಡಂತೆ ವಾರ್ಷಿಕ ಜಮಾಬಂಧಿ ನಡೆಸಲಾಗುವುದು.

ಹುಜೂರು ಜಮಾಬಂದಿಗೆ ಸಂಬಂಧಿಸಿದಂತೆ ಟಿಪ್ಪಣಿ ತಯಾರಿಸಿ ಸಹಾಯಕ ಕಮೀಷನರ್ ಶಿವಮೊಗ್ಗ ಅಥವಾ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ದೇವಸ್ಥಾನ:ವಕ್ಫ್

ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಬಿಡುಗಡೆಯಾದ ತಸ್ತಿಕ್ ಭತ್ಯೆ ಪಾವತಿಸುವುದು.

ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕು ಮಟ್ಟದ ಸಮಿತಿಯನ್ನು ಕರೆದು ಧಾರ್ಮಿಕ ಸಂಸ್ಥೆಗಳಿಗೆ ಅನುದಾನದ ಬಗ್ಗೆ ಶಿಫಾರಸ್ಸು ಪಡೆದು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು. ಅನುದಾನ ಮಂಜೂರಾಗಿ ಬಂದ ಧಾರ್ಮಿಕ ಸಂಸ್ಥೆಗಳಿಗೆ ಹಣ ಪಾವತಿಸಿ ಬಳಕೆ ಪ್ರಮಾಣ ಪತ್ರಗಳನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸುವುದು.

ಲೆಕ್ಕ ಪತ್ರ:

ಕಛೇರಿ ಸಿಬ್ಬಂದಿ ವೇತನ, ಪ್ರವಾಸಭತ್ಯೆ, ಸಾದಿಲ್ವಾರುವೆಚ್ಚ, ವಾಹನಗಳ ಇಂಧನ ಮತ್ತು ದುರಸ್ತಿ ವೆಚ್ಚಗಳಿಗೆ ಮಂಜೂರಾದ ಹಣದ ಬಗ್ಗೆ ಬೆಲೆಗಳ ತಯಾರಿಕೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಚುನಾವಣೆ:

ಕೇಂದ್ರ ಚುನಾವಣಾ ಆಯೋಗದಿಂದ ನಿಗದಿಪಡಿಸಿದ ಲೋಕಸಭೆ ಮತ್ತು ವಿಧಾನ ಸಭೆ ಚುನಾವಣೆ ಹಾಗೂ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆ ಚುನಾವಣೆಗಳಾದ ತಾಲ್ಲೂಕ್‌ಪಂಚಾಯತ್, ಗ್ರಾಮಪಂಚಾಯತ್, ನಗರ ಪಂಚಾಯತ್ ಚುನಾವಣಾ ಕಾರ್ಯಸೂಚಿ ಪ್ರಕಾರ ಚುನಾವಣಾ ಕಾರ್ಯಕ್ರಮಗಳನ್ನು ರೂಪಿಸುವುದು. ಚುನಾವಣೆಗೆ ಸಂಬಂಧಿಸಿದ ವ್ಯವಹಾರಗಳ ನಿರ್ವಹಣೆ ಮತ್ತು ಮತದಾರರಿಗೆ ಗುರುತು ಚೀಟಿ ನೀಡುವುದು ಹಾಗೂ ಮತದಾರರ ಪಟ್ಟಿಯ ನಿರ್ವಹಣೆ ಮಾಡುವುದು.

ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಂದ ಬಂದ ಪತ್ರಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ಜಿಲ್ಲಾಧಿಕಾರಿಗಳಿಗೆ ವರದಿ ಒಪ್ಪಿಸುವುದು.

ಕಛೇರಿಯ ಸಿಬ್ಬಂದಿಯ ಕಾರ್ಯ ನಿರ್ವಹಣೆ ವಿವರ

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
1.	ಶ್ರೀ ಬಿ.ಕೆ.ಸುಬ್ರಹ್ಮಣ್ಯ	ತಾಲ್ಲೂಕು ಶಿರಸ್ತೇದಾರರು	1) ಕಛೇರಿ ಮೇಲ್ವಿಚಾರಣೆ, ಸಿಬ್ಬಂದಿ ಶಾಖೆ, ಆಡಳಿತ, ನಗದು ಮತ್ತು ವಹಿ ನಿರ್ವಹಣೆ ಸ್ವೀಕೃತಿ ಮತ್ತುರವಾನೆ, ಅಭಿಲೇಖಾಲಯ ಸಾರ್ವಜನಿಕ ಕುಂದುಕೊರತೆ, ಮಾಹಿತಿ ಹಕ್ಕು ಕಾಯ್ದೆ

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
			2) ಭೂ ಪರಿವರ್ತನೆ. 3) ಭೂ ಸ್ವಾಧೀನ. 4) ಪ್ರಕೃತಿ ವಿಕೋಪ. 5) ಆಶ್ರಯ. 6) ನ್ಯಾಯಾಂಗ 7) ಮಹಾಲೇಖಪಾಲಕ, ಲೆಕ್ಕ ಪರಿಶೋಧನಾ ವರದಿ. 8) ಕಂದಾಯ ಲೆಕ್ಕ ಪರಿಶೋಧನೆ 9) ಸಂಧ್ಯಾ ಸುರಕ್ಷಾ 10) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು.
2.	ಜಿ.ವಿ.ಕರ್ಜಗಿ	ಹಕ್ಕು ದಾಖಲೆ ಶಿರಸ್ತೆದಾರರು	1) ಹಕ್ಕು ಬದಲಾವಣೆ ಮತ್ತು ಭೂಮಿ ಶಾಖೆ, ಕಿಯೋಸ್ಕ ನಿರ್ವಹಣೆ. 2) ನೀರಾವರಿ ಶಾಖೆ, ಜಮಾಬಂಧಿ, ಸಾಲಾಖೈರು, ಲೆಕ್ಕ ಪರಿಶೀಲನೆ. 3) ಮೇಲಾಧಿಕಾರಿಗಳ ಕಛೇರಿ ತಪಾಸಣಾ ಕಂಡಿಕೆಗಳ ವಿಲೇವಾರಿ.
3.	ವಿ.ಎನ್. ನಾಡಗೌಡ	ಚುನಾವಣೆ ಶಿರಸ್ತೆದಾರರು	1) ಚುನಾವಣೆ ಶಾಖೆಯ ಮೇಲ್ವಿಚಾರಣೆ. 2) ಮತದಾರರ ಗುರುತು ಚೀಟಿ ಮೇಲ್ವಿಚಾರಣೆ.
4.	ಶ್ರೀ ಶ್ರೀಪಾದ ಅಡಿಗರು	ಆಹಾರ ನಿರೀಕ್ಷಕರು	1) ಸಾರ್ವಜನಿಕ ವಿತರಣಾ ವ್ಯವಸ್ಥೆ. 2) ಸಗಟು ಮತ್ತು ಚಿಲ್ಲರೆ ಪಡಿತರ ಹಾಗೂ ಸೀಮೆಎಣ್ಣೆ ಎತ್ತುವಳಿ ಪರಿಶೀಲನೆ. 3) ನಿಯೋಜಿಸಿದ ನ್ಯಾಯಬೆಲೆ ಅಂಗಡಿಗಳ ತಪಾಸಣೆ. 4) ಗ್ರಾಮಾಂತರ ಹಾಗೂ ಪಟ್ಟಣ ಪಡಿತರ ಚೀಟಿಗಳಿಗೆ ಸಂಬಂಧಿಸಿದ ಅರ್ಜಿಗಳ ವಿಲೇವಾರಿ 5) ಅಡಿಟ್ ವರದಿಗಳಿಗೆ ಪಾಲನಾ ವರದಿ ಸಲ್ಲಿಸುವುದು. 6) ಲೆವಿ ಸಂಗ್ರಹಣಾ ಕಾರ್ಯದಲ್ಲಿ ಸಹಕರಿಸುವುದು.
5.	ಶ್ರೀ ಬಿ.ನಾಗರಾಜ	ಪ್ರ.ದ.ಸ.	1) ನ್ಯಾಯಾಂಗ ಶಾಖೆಯ ಎಲ್ಲಾ ಪ್ರಕರಣಗಳ ಕಡತವನ್ನು ನಿರ್ವಹಿಸುವುದು. 2) ಕಸಬಾ ಹಾಗೂ ಹುಂಚಾ ಹೋಬಳಿ ಮಾಫೀಪಾಸ್ ಪ್ರಕರಣಗಳ ಕಡತ ತಯಾರಿಸುವುದು. 3) ಹುಂಚಾ ಹೋಬಳಿ,ಡೇಬುಕ್ ಕೆಲಸ ನಿರ್ವಹಿಸುವುದು. 4) ಒತ್ತುವರಿ ಪ್ರಕರಣಗಳು
6.	ಬಿ.ಪ್ರಸನ್ನ	ಪ್ರ.ದ.ಸ.	1) ವಿಫಲ ಬಾವಿ ಪ್ರಕರಣಗಳು 2)ಜೀತ ವಿಮುಕ್ತರಿಗೆ ಪುನರ್ ವಸತಿ 3) ಕಲ್ಲು ಗಣಿಗಾರಿಕೆ 4)ಎಲ್ಲಾ ರೀತಿಯ ಸಭೆಗಳ ಉಸ್ತುವಾರಿ 5) ರಾಷ್ಟ್ರೀಯ ಹಬ್ಬಗಳು 6) ತಾಲ್ಲೂಕು ಜಮಾಬಂದಿ ಹಾಗೂ ಹುಜೂರ ಜಮಾಬಂಧಿ, ಜನಸಂಪರ್ಕ ಸಭೆ 7) ಭೂಮಾಪನ ಶಾಖೆಯ ವೇತನ ಹಾಗೂ ಅದಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳು 8) ಮಿಸಲೇವಿಯಸ್ ಪ್ರಕರಣಗಳು.
7.	ಶ್ರೀ ಕೆ.ಹೆಚ್.ಮಹ ಬಲೇಶ್ವರನಾಯ್ಕ	ದ್ವಿ.ದ.ಸ.	1) ಹಕ್ಕು ಬದಲಾವಣೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು 2) ಎಲ್ಲಾ ತರಹ ಪೋಡಿ ಪ್ರಕರಣಗಳು 3) ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ದಪ್ತರ ತನಿಖೆ, ಟಿಪ್ಪಣಿ ತಯಾರಿಸುವುದು. 4) ಕಸಬಾ ಹೋಬಳಿ, ಡೇ ಬುಕ್ ನಿರ್ವಾಹಕರಾಗಿ ಕೆಲಸ ನಿರ್ವಹಿಸುವುದು. ಹಾಗೂ ಸಭಾ ನಡವಳಿಕೆ ದಾಖಲಾಯಿಸುವುದು.

ಕ್ರ. ಸಂ.	ಹೆಸರು	ಹುದ್ದೆ	ನಿರ್ವಹಿಸುತ್ತಿರುವ ಶಾಖೆಗಳ ವಿವರ
			6) ತಾಲ್ಲೂಕಿನ ಎಲ್ಲಾ ಹೋಬಳಿಗಳ ಭೂ ಸುಧಾರಣೆ ಪ್ರಕರಣಗಳನ್ನು ನಿರ್ವಹಿಸುವುದು. ಹಾಗೂ ಭೂನ್ಯಾಯ ಮಂಡಳಿ 7) ಭೂ ಸುಧಾರಣೆ ಶಾಖೆಯ ಎಲ್ಲಾ ಇತರೆ ಕಾರ್ಯಗಳನ್ನು ನಿರ್ವಹಿಸುವುದು.
8.	ಶ್ರೀ ಎನ್.ರಂಗನಾಥ	ದ್ವಿ.ದ.ಸ.	1) ಲೋಕಸಭೆ ಹಾಗೂ ವಿಧಾನ ಸಭೆ ಚುನಾವಣೆ ಕಾರ್ಯ ನಿರ್ವಹಣೆ 2) ಮತದಾರರ ಪಟ್ಟಿ ಪರಿಷ್ಕರಣೆ.
9.	ಶ್ರೀ ಹೆಚ್.ಶ್ರೀನಿವಾಸ	ದ್ವಿ.ದ.ಸ.	1) ಆಮದು ಮತ್ತು ರವಾನೆ ಶಾಖೆ 2) ಸ್ಟಾಂಪಗಳ ಲೆಕ್ಕ ನಿರ್ವಹಣೆ 3) ಅರೆ ಸರ್ಕಾರಿ ಪತ್ರಗಳ ನಿರ್ವಹಣೆ 4) ರಿಟ್ ಅರ್ಜಿಗಳ ಹಾಗೂ ನ್ಯಾಯಾಲಯದ ಸಮನ್ಸಗಳ ರಿಜಿಸ್ಟರ್ ನಿರ್ವಹಣೆ 5) ಜನರಲ್ ರಿಜಿಸ್ಟರ್ ನಿರ್ವಹಣೆ.
10.	ಶ್ರೀ ಜಿ.ಬಿ.ವಿಶ್ವೇಶ್ವರಯ್ಯ	ದ್ವಿ.ದ.ಸ.	1) ಅಭಿಲೇಖಾಲಯದ ಸಂಪೂರ್ಣ ಕಾರ್ಯ ನಿರ್ವಹಣೆ. 2) ಲೇಖನ ಸಾಮಗ್ರಿ ದಾಸ್ತಾನು ವಿತರಣೆ. 3) ಪೀಠೋಪಕರಣಗಳ ದಾಸ್ತಾನು ಮತ್ತು ಪರಿಶೀಲನೆ, ವಾರ್ಷಿಕ
11.	ಶ್ರೀ ಸುಧೀಂದ್ರಕುಮಾರ್	ಪ್ರ.ದ.ಸ.	1) ಚುನಾವಣೆ ಶಾಖೆ
12.	ಶ್ರೀ ಎಂ.ವಿ.ಕೂಬ್ರಿ	ಸಾಂಖ್ಯಿಕ ಶಾಖೆ	1) ಮಳೆ ಮಾಪನ ವರದಿ ಸಲ್ಲಿಕೆ. 2) ಸಾಂಖ್ಯಿಕ ಶಾಖೆಯ ಎಲ್ಲಾ ಕೆಲಸ ಕಾರ್ಯಗಳು. 3) ಜನನ ಮತ್ತು ಮರಣ ಪ್ರಕರಣಗಳು.
13.	ಶ್ರೀ ಬಿ.ಸಿ.ಮಂಜುನಾಥ	ಪ್ರ.ದ.ಸ.	ಹಕ್ಕು ದಾಖಲೆ ಶಾಖೆ
14.	ತಾರಾಮತಿ.ಎಂ	ದ್ವಿ.ದ.ಸ.	ಎಲ್.ಎನ್.ಡಿ. ಶಾಖೆ
15.	ಶ್ರೀಮತಿ ಧನ್ಯ, ಹೆಚ್.ಎಂ.	ಗ್ರಾ.ಲೆ.	1) ಮುಜರಾಯಿ ಮತ್ತು ಆರಾಧನಾ.
16.	ಶ್ರೀಮತಿ ತಾಜುನ್ನಿಸಾ ಎಲ್.ಡಿ.	ದ್ವಿ.ದ.ಸ.	1) ಆದಾಯ ಮತ್ತುಜಾತಿ ಪ್ರಮಾಣ ಪತ್ರ. 2) ಎಲ್ಲಾ ರೀತಿಯ ದೃಢೀಕರಣ ಪತ್ರಗಳು. 3) ಅಂತ್ಯ ಸಂಸ್ಕಾರ ಸಹಾಯಧನ. 4) ವೃದ್ದಾಪ್ಯ, ಪಿಹೆಚ್ ಪಿ.ಡಿಡಬ್ಲುಪಿ. ರಾಷ್ಟ್ರೀಯ ಕುಟುಂಬ. 5) ನಿರ್ಗತಿಕ ವಿಧವಾ ವೇತನ.
17.	ಶ್ರೀಮತಿ ಜಯಶೀಲ ಜಿ:	ದ್ವಿ.ದ.ಸ.	ಸಿಬ್ಬಂದಿ ಶಾಖೆಯ ಎಲ್ಲಾ ಕೆಲಸ ಕಾರ್ಯಗಳು.
18.	ಶ್ರೀಮತಿ ಶೋಭ ಸಿ.ಆರ್.	ಗ್ರಾ.ಲೆ.	1) ಸಂಧ್ಯಾ ಸುರಕ್ಷಾ
19.	ಶ್ರೀ ಎ.ಕೆ.ಹಾಲೇಶಪ್ಪ	ಪ್ರ.ದ.ರಾ.ನಿ.	1) ಭೂ ಸ್ವಾಧೀನ ಪ್ರಕರಣ. 2) ನ್ಯಾಯಾಲಯ ಪ್ರಕರಣ. 3) ಬ್ಯಾಂಕ್ ವಸೂಲಾತಿ ಪ್ರಕರಣ. 4) ಮುಳುಗಡೆ ದೃಢೀಕರಣ ಪತ್ರಗಳು.
20.	ಶ್ರೀ ಹೇಮಪ್ಪ	ಪ್ರ.ದ.ಸ.	1) ಭಗರ್ ಹುಕ್ಕುಂ ನಗರ, ಕಸಬಾ
21.	ಶ್ರೀ ಜೆ.ಸಿ. ಸುನಿಲ್ ಕುಮಾರ್	ದ್ವಿ.ದ.ಸ.	1) ಬಗರ್ ಹುಕ್ಕುಂ ಕೆರೆಹಳ್ಳಿ, ಹುಂಚ 2) ಮಾಸಿಕ ಅಂಕಿಅಂಶಗಳ ಕ್ರೂಢೀಕರಣ.

ತಾಲ್ಲೂಕು ಕಛೇರಿ ಹೊಸನಗರ-ಗ್ರಾಮಲೆಕ್ಕಿಗರು ಕಾರ್ಯ ನಿರ್ವಹಿಸುತ್ತಿರುವ ವಿವರ

ಕ್ರ. ಸಂ.	ಗ್ರಾಮಲೆಕ್ಕಿಗರ ಹೆಸರು	ಹುದ್ದೆ	ಕಾರ್ಯ ನಿರ್ವಹಿಸುತ್ತಿರುವ ವೃತ್ತ
1.	ಕೆ.ಎನ್. ರಾಘವೇಂದ್ರ	ಗ್ರಾಮಲೆಕ್ಕಿಗರು	ಜೇನಿ
2.	ಐ.ಡಿ. ದತ್ತಾತ್ರೆಯ	ಗ್ರಾಮಲೆಕ್ಕಿಗರು	ನಾಗೋಡಿ
3.	ಕೆ.ಎಸ್. ಶ್ರೀನಿವಾಸ	ಗ್ರಾಮಲೆಕ್ಕಿಗರು	ಹಾರೋಹಿತ್ತಲು
4.	ಎ.ಡಿ. ಚನ್ನಬಸಪ್ಪ	ಗ್ರಾಮಲೆಕ್ಕಿಗರು	ಅರಸಾಳು
5.	ಎಂ. ಚಂದ್ರಪ್ಪ	ಗ್ರಾಮಲೆಕ್ಕಿಗರು	ನಿಡಗೋಡು
6.	ಎನ್. ಈಶ್ವರಪ್ಪ	ಗ್ರಾಮಲೆಕ್ಕಿಗರು	ಮಾರುತಿಪುರ
7.	ಕೆ.ಸಿ. ಉಪೇಂದ್ರನಾಯ್ಕ	ಗ್ರಾಮಲೆಕ್ಕಿಗರು	ಕೆಂಚನಾಲ
8.	ಜಿ.ಬಿ. ವಿಶ್ವೇಶ್ವರಪ್ಪ	ಗ್ರಾಮಲೆಕ್ಕಿಗರು	ಹನಿಯಾ
9.	ಐ.ಬಿ. ಮೋಹನಕುಮಾರ್	ಗ್ರಾಮಲೆಕ್ಕಿಗರು	ಹರತಾಳು
10.	ಎ. ವಿನಯಕುಮಾರ್	ಗ್ರಾಮಲೆಕ್ಕಿಗರು	ಜಂಬಳ್ಳಿ
11.	ಸುಗಮೇಶ ಹೆಚ್.ಎ.	ಗ್ರಾಮಲೆಕ್ಕಿಗರು	ಸುಳುಗೋಡು
12.	ಬಿ.ಸಿ. ಶ್ರೀನಾಥ	ಗ್ರಾಮಲೆಕ್ಕಿಗರು	ಹಾರೋಹಿತ್ತಲು
13.	ಸಿ. ವಿಜಯಕುಮಾರ್	ಗ್ರಾಮಲೆಕ್ಕಿಗರು	ಕರಿಮನೆ
14.	ಶ್ರೀಮತಿ ಹೆಚ್.ಎಂ. ಧನ್ಯ	ಗ್ರಾಮಲೆಕ್ಕಿಗರು	ಅಮೃತ
15.	ಆರ್. ಚಂದ್ರಶೇಖರ್	ಗ್ರಾಮಲೆಕ್ಕಿಗರು	ಮೇಲಿನಬೆಸಿಗೆ
16.	ಎಸ್.ವಿ. ಸದಾಶಿವಪ್ಪ	ಗ್ರಾಮಲೆಕ್ಕಿಗರು	ಗವಟೂರು
17.	ದೇವರಾಜಶೆಟ್ಟಿ	ಗ್ರಾಮಲೆಕ್ಕಿಗರು	ಕೋಡೂರು
18.	ಡಿ.ಕೆ. ಲೋಕೇಶ್	ಗ್ರಾಮಲೆಕ್ಕಿಗರು	ಹಾಲುಗುಡ್ಡೆ
19.	ಆರ್. ರುದ್ರೆಗೌಡ	ಗ್ರಾಮಲೆಕ್ಕಿಗರು	ಸೋನಲೆ
20.	ದಿವಾಕರ್	ಗ್ರಾಮಲೆಕ್ಕಿಗರು	ಹುಂಚ
21.	ಶ್ರೀಮತಿ ಉಷಾದೇವಿ	ಗ್ರಾಮಲೆಕ್ಕಿಗರು	ಪುರಪ್ಪೆಮನೆ
22.	ಶ್ರೀಮತಿ ಶೋಬಾ ಸಿ.ಆರ್.	ಗ್ರಾಮಲೆಕ್ಕಿಗರು	ಮುಂಬಾರು
23.	ಸುಧೀರ ಎಂ.	ಗ್ರಾಮಲೆಕ್ಕಿಗರು	ತಳಲೆ
24.	ಆರ್.ಪಿ. ಸುರೇಶ	ಗ್ರಾಮಲೆಕ್ಕಿಗರು	ಚಿಕ್ಕಜೇನಿ
25.	ನವೀನಕುಮಾರ್ ಹೆಚ್.ಎಂ.	ಗ್ರಾಮಲೆಕ್ಕಿಗರು	ಹರಿದ್ರಾವತಿ
26.	ರೇಣುಕಯ್ಯ	ಗ್ರಾಮಲೆಕ್ಕಿಗರು	ತ್ರಿಣಿವೆ
27.	ಜಾಕೀರ್ ಹುಸೇನ್	ಗ್ರಾಮಲೆಕ್ಕಿಗರು	ಬೆಳ್ಳೂರು
28.	ಮಿಥುನ್ ಕುಮಾರ್	ಗ್ರಾಮಲೆಕ್ಕಿಗರು	ಕಲ್ಲೂರು
29.	ಕೆ.ಎ. ಅಶೋಕ(ನಗರ)	ಗ್ರಾಮಲೆಕ್ಕಿಗರು	ಅರಮನೆಕೊಪ್ಪ
30.	ಎಂ.ಟಿ. ಮುನಿರಾಜು	ಗ್ರಾಮಲೆಕ್ಕಿಗರು	ಅಡಗೋಡಿ (ನಗರ)
31.	ಜಿ.ವಿ. ಸುಧೀರ್	ಗ್ರಾಮಲೆಕ್ಕಿಗರು	ಅಂಡಗದುದೂರು
32.	ವೆಂಕಟೇಶ ಚಾರ್	ಗ್ರಾಮಲೆಕ್ಕಿಗರು	ಮತ್ತಿಕೈ
33.	ಪ್ರವೀಣ್ ಕುಮಾರ್	ಗ್ರಾಮಲೆಕ್ಕಿಗರು	ಮೇಲಿನಸಂಪಳ್ಳಿ

ಸಭೆ ಮತ್ತು ರಾಷ್ಟ್ರೀಯ ಹಬ್ಬಗಳು:

ತಾಲ್ಲೂಕಿನಲ್ಲಿ ನಡೆಯುವ ಎಲ್ಲಾ ಉತ್ಸವ ರಾಷ್ಟ್ರೀಯ ಹಬ್ಬಗಳು ಮತ್ತು ತಾಲ್ಲೂಕು ಅಭಿವೃದ್ದಿ ಕಾರ್ಯಕ್ರಮ ಬಗ್ಗೆ ಜರುಗುವ ಸಭೆ ಸಮಾರಂಭಗಳನ್ನು ನಿರ್ವಹಣೆ ಮಾಡುವುದು.

ಅಭಿಲೇಖಾಲಯ:

ಕಛೇರಿಯ ಪ್ರತಿಯೊಂದು ಶಾಖೆಯಿಂದ ನಿರ್ವಹಣೆಗಾಗಿ ಕಛೇರಿ ಸಹಕಾರದಿಂದ ಬೇರೆ ಬೇರೆ ಬಾಕಿಯ ವಿಲೆಗಳ ಬೇರೆ ಬೇರೆ ವರ್ಗಗಳ ಕಾಗದ ಪತ್ರಗಳನ್ನು ಎಷ್ಟುಕಾಲ ಕಾಯ್ದಿರಿಸಬೇಕೆಂಬುದನ್ನು ತಿಳಿದು ಈ ಕೆಳ ಕಾಣಿಸಿದ ಪ್ರಕಾರ ವಿಭಜನೆ ಮಾಡಲಾಗುವುದು. ಶ್ರೇಣಿವಾರು ಹೊಂದಿಸಿ ಇಡಲಾಗುವುದು.

"ಎ"ಡಿಸ್–ಅನಿರ್ದಿಷ್ಟ (ಖಾಯಂ)

"ಬಿ"ಡಿಸ್–30 ವರ್ಷಗಳು

"ಸಿ"ಡಿಸ್–10 ವರ್ಷಗಳು

A ಮೇಲೆ ಕಾಣಿಸಿದ ವಿಲೇವಾರಿಗಳ ಅವದಿ ಮುಗಿದ ನಂತರ ಕಛೇರಿಯ ಮುಖ್ಯಸ್ಥರ ಆದೇಶವನ್ನು ಪಡೆದು "ಎ" ಮತ್ತು "ಬಿ" ಡಿಸ್‌ಗಳಲ್ಲಿನ ಕಡತಗಳನ್ನು ಹೊರತುಪಡಿಸಿ ನಾಶಗೊಳಿಸಲಾಗುವುದು.

ಕಾರ್ಯಾಲಯದ ಪೀಠೋಪಕರಣ ಕಾರ್ಯನಿರ್ವಹಣೆ ಯಂತ್ರ ಸಾಮಗ್ರಿಗಳ ಖರೀದಿ ಮತ್ತು ದುರಸ್ಥಿ ಕಾರ್ಯದ ವ್ಯವಹಾರಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿ ಖರೀದಿ ಮತ್ತು ವಿತರಣೆ ಕಛೇರಿಯ ಸುವ್ಯವಸ್ಥೆ ವಿದ್ಯುದ್ದೀಕರಣ ನಿರ್ವಹಣೆ ವಿವಿಧ ಕಾಯ್ದೆಯಡಿ ಇರುವ ಎಲ್ಲಾ ಪುಸ್ತಕಗಳನ್ನು ಸುಸ್ಥಿತಿಯಲ್ಲಿ ಇಡುವುದು ಮತ್ತು ಸಂಬಂಧಪಟ್ಟ ಕಡತಗಳನ್ನು ನೀಡುವುದು, ಅಲ್ಲದೇ ಸಾರ್ವಜನಿಕರು ಕೋರುವ ದಾಖಲೆಗಳನ್ನು ನಿಯಮಾನುಸಾರ ನೀಡಲಾಗುತ್ತದೆ.

ಸಾಮಾಜಿಕ ಭದ್ರತಾ ಯೋಜನೆ:

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಅನುದಾನ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ನಂತರ ಪಾವತಿಸುವುದು. ವೃದ್ಧಾಪ್ಯ, ಅಂಗವಿಕಲ, ವಿಧವಾ, ರಾಷ್ಟ್ರೀಯ ಕುಟುಂಬ, ಅಂತ್ಯ ಸಂಸ್ಕಾರ, ಸಂಧ್ಯಾ ಸುರಕ್ಷಾ ವೇತನದಾರರಿಗೆ ಮಂಜೂರಾತಿ ಪತ್ರ ನೀಡಲಾಗುವುದು. ಜಾತಿ ಮತ್ತು ಆದಾಯ ಹಾಗೂ ವಾಸ್ತವ್ಯ ಪ್ರಮಾಣ, ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವುದು. ಮತ್ತು ನಿರ್ವಹಣೆ.

ಸ್ವೀಕೃತಿ:

ಕಛೇರಿಗೆ ಸ್ವೀಕೃತವಾಗುವ ಸರ್ಕಾರದ ಅಧೀನ ಕಾರ್ಯಾಲಯದ ಮತ್ತು ಜಿಲ್ಲಾಧಿಕಾರಿಗಳ ಮತ್ತು ಸಹಾಯಕ ಕಮೀಷನರ್ ಸಾರ್ವಜನಿಕ ಮತ್ತು ಸ್ಥಳಿಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತವಾಗುವ ಅರ್ಜಿಗಳಿಗೆ ಮತ್ತು ಪತ್ರಗಳಿಗೆ ತನಿಖೆ ನಡೆಸಿ ಕ್ಷಿಪ್ರ ಸಮಯದಲ್ಲಿ ಮಾಹಿತಿಯನ್ನು ನೀಡಲಾಗುವುದು.

ದಿನಾಂಕ:31.07.2009 ರವರೆಗಿನ ಮಾಹಿತಿ ಇದ್ದಂತೆ ಸಲ್ಲಿಸಿದೆ.

ತಹಶೀಲ್ದಾರ್

ಪಿ.ಆರ್.816 ಹೊಸನಗರ ತಾಲ್ಲೂಕು.

ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ: ಕವಿಪ/ಶಾರಶಾ/138/ಇತರೆ/2008, ಬೆಂಗಳೂರು, ದಿನಾಂಕ:17ನೇ ಆಗಸ್ಟ್, 2009

ವಿಷಯ: ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಆರ್. ಗುರುದೇವ್ ಇವರ ವಿಳಾಸ ಬದಲಾವಣೆಯ ಬಗ್ಗೆ.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಗುರುದೇವ್‌ರವರ ಹೆಸರಿಗೆ ಕಳುಹಿಸುವ ಎಲ್ಲಾ ಪತ್ರ ಹಾಗೂ ಮಾಹಿತಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ, ವಿಳಾಸ ಬದಲಾವಣೆ ಬಗ್ಗೆ ರಾಜ್ಯಪತ್ರದಲ್ಲಿ ಪ್ರಕಟಿಸಿ ಎಲ್ಲಾ ಇಲಾಖೆಗಳ ಮಾಹಿತಿಗಾಗಿ ರವಾನಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಲು ನಿರ್ದೇಶಿತಳಾಗಿದ್ದೇನೆ.

ಶ್ರೀ ಬಿ.ಆರ್. ಗುರುದೇವ್

ವಿಧಾನ ಪರಿಷತ್ತಿನ ಸದಸ್ಯರು,

ನಂ.1403, ಬಿ ಬ್ಲಾಕ್, ಮಂತ್ರಿ ಗ್ರೀನ್ಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.

ಕೆ.ಎನ್. ಮಂಜುಳ

ಪಿ.ಆರ್.815 ಉಪ ಕಾರ್ಯದರ್ಶಿ,

ಕರ್ನಾಟಕ ವಿಧಾನ ಪರಿಷತ್ತು.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ರಾಮನಗರ ಜಿಲ್ಲೆ, ರಾಮನಗರ

ಅಧಿಸೂಚನೆ

ಸಂಖ್ಯೆ: ರಾಜಿಕಾ/ಎಂಎಜಿ(1)/ಸಿಆರ್/54/2009-10, ದಿನಾಂಕ:28ನೇ ಆಗಸ್ಟ್, 2009

ವಿಷಯ: ರಾಮನಗರ ರೈಲ್ವೆ ನಿಲ್ದಾಣದ ಬಳಿ ಇರುವ ಲೆವೆಲ್ ಕ್ರಾಸಿಂಗ್ ಸಂಖ್ಯೆ:36ರ ವಾಹನಗಳ ಸಂಚಾರವನ್ನು ಹೊಸದಾಗಿ ನಿರ್ಮಿಸಿರುವ ರೈಲ್ವೆ ಕೆಳಸೇತುವೆ ಮೂಲಕ ಸಂಚಾರಕ್ಕೆ ಅನುವು ಮಾಡಿಕೊಟ್ಟಿರುವ ಕುರಿತು.

ಉಲ್ಲೇಖ: 1) ಮುಖ್ಯ ಇಂಜಿನಿಯರ್, ನೈರುತ್ಯ ರೈಲ್ವೆ, ಬೆಂಗಳೂರು ರವರ ಪತ್ರಸಂಖ್ಯೆ: ಎನ್.ಓ.ಡಬ್ಲ್ಯೂ573 / ಡಿಎಲ್/ಬಿಎನ್‌ಸಿ/ಆರ್.ಎಂ.ಜಿ.ಎಂ/ಎಂವಿಸಿ, ದಿನಾಂಕ:08.07.2009.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರದ ಸಂಖ್ಯೆ: ಐಡಿಡಿ/31/ರಾರಾಹೆ/2009, ದಿನಾಂಕ:26.08.2009.

3) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ರಾಮನಗರ ರವರ ಪತ್ರದ ಸಂಖ್ಯೆ:ಕಾ.ಪ.ಅ./ಲೋಬಜಜಿ/ರಾವಿ/ರಾಮ/ಸಿಇ೦1 /ಎಲ್‌ಸಿ/37/ 2009-10, ದಿನಾಂಕ:27.08.2009.

ರಾಮನಗರ ಜಿಲ್ಲೆಯ, ರಾಮನಗರ ಟೌನ್‌ನಲ್ಲಿನ ಬೆಂಗಳೂರು-ಮೈಸೂರು ರೈಲ್ವೆ ಭಾಗದ ಲೆವೆಲ್ ಕ್ರಾಸಿಂಗ್ ಸಂಖ್ಯೆ:36 ಬದಲಿಗೆ ನಿರ್ಮಿಸಿರುವ ಆರ್.ಯು.ಬಿ.ಗೆ ಕೂಡು ರಸ್ತೆ ಕಾಮಗಾರಿ ಕುರಿತಂತೆ ಎಲ್.ಸಿ. 36ರಲ್ಲಿ ಚಲಿಸುವ ವಾಹನಗಳ ಮಾರ್ಗವನ್ನು ಬದಲಿಸಿ ನಿರ್ಮಾಣಗೊಂಡು ಕೆಳ ಸೇತುವೆಯ ರಸ್ತೆಯ ಮಾರ್ಗದಲ್ಲಿ ಚಲಿಸಲು ಅನುವು ಮಾಡಿಕೊಡಲಾಗಿದೆ.

ಆದ್ದರಿಂದ ರಾಮನಗರ ಜಿಲ್ಲೆಯ, ರಾಮನಗರ ಟೌನ್‌ನಲ್ಲಿನ ಬೆಂಗಳೂರು-ಮೈಸೂರು ರೈಲ್ವೆ ಭಾಗದ ಲೆವೆಲ್ ಕ್ರಾಸಿಂಗ್ ಸಂಖ್ಯೆ:36ರ ರಸ್ತೆ ಸಂಚಾರವನ್ನು ಹೊಸದಾಗಿ ನಿರ್ಮಿಸಲಾದ ರೈಲ್ವೆ ಕೆಳಸೇತುವೆ ಮೂಲಕ ಸಂಚರಿಸಲು ಹಾಗೂ ಲೆವೆಲ್ ಕ್ರಾಸಿಂಗ್ ಸಂಖ್ಯೆ: 36ರ ವಾಹನಗಳ ಸಂಚಾರವನ್ನು ಖಾಯಂ ಆಗಿ ನಿಷೇದಿಸಿ ಮೋಟಾರು ವಾಹನ ಕಾಯಿದೆ ಕಲಂ 115ರಲ್ಲಿ ದತ್ತವಾದ ಅಧಿಕಾರದ ಮೇರೆಗೆ ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯಾದ ನಾನು ದಿನಾಂಕ:28.08.2009ರಂದು ಆದೇಶ ಹೊರಡಿಸಿರುತ್ತೇನೆ.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್.821

ಪೋಲಿಸ್ ಅಧೀಕ್ಷಕರ ಕಛೇರಿ, ಉತ್ತರ ಕನ್ನಡ, ಕಾರವಾರ

ಅಧಿಸೂಚನೆ

ಕ್ರ.ಸಾವಿ-1/ಇತರೆ/100/09, ದಿನಾಂಕ: ......ಆಗಸ್ಟ್, 2009

ಮಾಹಿತಿ ಹಕ್ಕು ಅಧಿನಿಯಮ-2005 ನಿಯಮ 4(1) (ಬಿ) ರಡಿಯಲ್ಲಿ ಜಿಲ್ಲಾ ಪೋಲಿಸ್ ಕಛೇರಿ ಕಾರವಾರ, ಉತ್ತರ ಕನ್ನಡ ಜಿಲ್ಲೆಯ ವಿವರವಾದ ಮಾಹಿತಿ ಈ ಕೆಳಗಿನಂತಿರುತ್ತದೆ.

ಪೊಲೀಸ್ ಇಲಾಖೆಯ ವ್ಯವಹಾರಗಳು ಈ ಕೆಳಕಂಡ ಘಟಕಗಳ ಮುಖಾಂತರ ನಡೆಯುತ್ತವೆ.

1. Outpost	1. ಹೊರ ಠಾಣೆ
2. Police Station	2. ಪೋಲಿಸ್ ಠಾಣೆ
3. Circle inspector of police office	3. ಪೋಲಿಸ್ ವೃತ್ತ ಕಛೇರಿ
4. Dy. Supdt. Of Police office	4. ಪೋಲಿಸ್ ಉಪಾಧೀಕ್ಷಕರವರ ಕಛೇರಿ
5. Dist. Special Branch	5. ಜಿಲ್ಲಾ ವಿಶೇಷ ವಿಭಾಗ.
6. Dist. Crime Record Bureau	6. ಜಿಲ್ಲಾ ಅಪರಾಧ ದಾಖಲಾತಿ ವಿಭಾಗ
7. Dist. Crime and information Branch	7. ಜಿಲ್ಲಾ ಅಪರಾಧ ಪತ್ತೆದಳ
8. Finger Print Bureau	8. ಬೆರಳು ಮುದ್ರೆ ಘಟಕ
9. Police Control Room / Wireless Station	9. ನಿಸ್ತಂತು ಘಟಕ
10. Dist. Armed Reserve Police	10. ಸಶಸ್ತ್ರ ಮೀಸಲು ಪಡೆ
11. Dist. Police Office (Administration Wing)	11. ಜಿಲ್ಲಾ ಪೋಲಿಸ್ ಕಛೇರಿ (ಆಡಳಿತ ವಿಭಾಗ)
12. Excise and Lottery Enforcement Squad.	12. ಅಬಕಾರಿ ಮತ್ತು ಲಾಟರಿ ಪ್ರತಿಬಂಧಕ ದಳ.

ಸಂಘಟನೆ:

ಪೋಲಿಸ್ ಅಧೀಕ್ಷಕರು ಜಿಲ್ಲಾ ಪೋಲಿಸ್ ಇಲಾಖೆಯ ಮುಖ್ಯ ಅಧಿಕಾರಿ ಆಗಿರುತ್ತಾರೆ. ಅವರಿಗೆ ಸಹಾಯಕರಾಗಿ ಹೆಚ್ಚುವರಿ ಪೋಲಿಸ್ ಅಧೀಕ್ಷಕರು ಮತ್ತು 4 ಪೋಲಿಸ್ ಉಪಾಧೀಕ್ಷಕರು ಇರುತ್ತಾರೆ. ಹೆಚ್ಚುವರಿ ಪೋಲಿಸ್ ಅಧೀಕ್ಷಕರು

ಅಪರಾಧ ವಿಭಾಗದ ಹೆಚ್ಚುವರಿ ಕಾರ್ಯ ನಿರ್ವಹಿಸುವರು. ಪೋಲಿಸ್ ಉಪಾಧೀಕ್ಷಕರು ಅವರವರ ಉಪ-ವಿಭಾಗದ ಕಾರ್ಯನಿರ್ವಹಿಸುವರು. ಉಪ-ವಿಭಾಗವನ್ನು ವೃತ್ತ ಕಛೇರಿಯಾಗಿ ಕಾರ್ಯನಿರ್ವಹಿಸುತ್ತದೆ. ಅಲ್ಲಿ ಒಂದು ಪೋಲಿಸ್ ನಿರೀಕ್ಷಕರು ಇರುತ್ತಾರೆ: ವೃತ್ತ ಕಛೇರಿ ಪೋಲಿಸ್ ಠಾಣೆಯಾಗಿ ಮಾರ್ಪಡಿಸಲಾಗಿದೆ. ಪ್ರತಿಯೊಂದು ಪೋಲಿಸ್ ಠಾಣೆಯಲ್ಲಿ 1 ಅಥವಾ 2 ಪೋಲಿಸ್ ಉಪ-ನಿರೀಕ್ಷಕರು, ಎ.ಎಸ್.ಐ., ಸಿ.ಎಚ್.ಸಿ. ಮತ್ತು ಸಿ.ಪಿ.ಸಿ ಒಳಗೊಂಡಿರುತ್ತದೆ.

ಸಂಘಟನಾ ನಕ್ಷೆ (Chart) ಕೆಳಕಂಡಂತಿದೆ

ಪೋಲಿಸ್ ಅಧೀಕ್ಷಕರು

↓

ಹೆಚ್ಚುವರಿ ಪೋಲಿಸ್ ಅಧೀಕ್ಷಕರು

↓

ಪೋಲಿಸ್ ಉಪಾಧೀಕ್ಷಕರು

↓

ಪೋಲಿಸ್ ವೃತ್ತ ನಿರೀಕ್ಷಕರು

↓

ಪೋಲಿಸ್ ಉಪ ನಿರೀಕ್ಷಕರು

↓

ಸಹಾಯಕ ಪೋಲಿಸ್ ಉಪ ನಿರೀಕ್ಷಕರು

↓

ಮುಖ್ಯ ಕಾನ್ಸ್‌ಟೇಬಲ್

↓

ಕಾನ್ಸ್‌ಟೇಬಲ್

↓

1. ಉಪವಿಭಾಗಗಳು = 4
2. ವೃತ್ತಗಳು = 9
3. ಪೊಲೀಸ್ ಠಾಣೆಗಳು = 27 ಇದರಲ್ಲಿ ಮೇಲ್ದರ್ಜೆಗೆ ಏರಿಸಿದ 4 ಠಾಣೆಗಳು ಸೇರಿರುತ್ತವೆ.
4. ಉಪ ಠಾಣೆಗಳು = 17
5. ಘಟಕಗಳು = 4
   1. ಕಡಲು ಪಡೆ, ಕಾರವಾರ.
   2. ಡಿ.ಎಸ್.ಬಿ ತಟ್ಟಿ ಹಳ್ಳಿ ಮುಂಡಗೋಡ.
   3. ಸಂಚಾರಿ ಘಟಕ, ಹಿರೆಗುತ್ತಿ.
   4. ಅರಣ್ಯ ಘಟಕ, ದಾಂಡೆಲಿ.

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪೋಲಿಸ್ ಉಪ ವಿಭಾಗ ವೃತ್ತ ಪೋಲಿಸ್ ಠಾಣೆ ಹಾಗೂ ಹೊರ ಠಾಣೆಗಳ ವಿವರ

ಕ್ರ. ಸಂ.	ಉಪ-ವಿಭಾಗ	ವೃತ್ತಗಳು	ಪೊಲೀಸ್ ಠಾಣೆಗಳು	ಹೊರವಲಯ ಠಾಣೆಗಳು
1.	ಕಾರವಾರ ಉಪ-ವಿಭಾಗ	1) ಕಾರವಾರ	1) ಕಾರವಾರ ಶಹರ 2) ಕಾರವಾರ ಗ್ರಾಮಾಂತರ 3) ಕಾರವಾರ ಸಂಚಾರ	
		2) ಕದ್ರಾ	1. ಕದ್ರಾ 2. ಚಿತ್ತಾಕುಲಾ 3. ಮಲ್ಲಾಪುರ	
			1. ಅಂಕೋಲಾ ಎಸ್.ಎಚ್.ಓ-ಪಿ.ಐ.	1. ಬೆಲೆಕೇರಿ 2. ಸುಂಕಸಾಳ
2.	ಭಟ್ಕಳ ಉಪ-ವಿಭಾಗ	1. ಕುಮಟಾ	1. ಕುಮಟಾ 2. ಗೋಕರ್ಣ	1. ಕತಗಾಲ 1. ಮಹಾಬಲೇಶ್ವರ ದೇವಸ್ಥಾನ

		2. ಹೊನ್ನಾವರ	1. ಹೊನ್ನಾವರ 2. ಮಂಕಿ	1. ಗೆರಸೊಪ್ಪ
		3. ಭಟ್ಕಳ	1. ಭಟ್ಕಳ ಶಹರ 2. ಭಟ್ಕಳ ಗ್ರಾ. 3. ಮುರ್ಡೇಶ್ವರ	
3.	ಸಿರ್ಸಿ ಉಪ-ವಿಭಾಗ	1. ಸಿರ್ಸಿ	1. ಸಿರ್ಸಿ ಶಹರ 2. ಸಿರ್ಸಿ ಗ್ರಾಮೀಣ 3.ಸಿರ್ಸಿ ಹೊಸ ಮಾರುಕಟ್ಟೆ 4. ಬನವಾಸಿ	1. ಮಾರಿಕಾಂಬಾ ದೇವಸ್ಥಾನ 1. ಅಮ್ಮಿನಳ್ಳಿ 2. ಹುಲೇಕಲ್
			1. ಸಿದ್ದಾಪುರ ಎಸ್‌ಹೆಚ್‌ಓ-ಪಿಐ	1. ಬಿಳಗಿ
			ಯಲ್ಲಾಪುರ ಎಸ್‌ಹೆಚ್‌ಓ-ಪಿಐ	1. ಎಪಿಎಂಸಿ, 2. ಮಂಚಿಕೇರಿ
			ಮುಂಡಗೋಡ ಎಸ್‌ಹೆಚ್‌ಓ-ಪಿ.ಐ	1. ತಟ್ಟಿಹಳ್ಳಿ 2. ಮಳಗಿ
4.	ದಾಂಡೇಲಿ-ಉಪ ವಿಭಾಗ	1. ದಾಂಡೇಲಿ	1 ದಾಂಡೇಲಿ ಶಹರ 2. ದಾಂಡೇಲಿ ಗ್ರಾಮೀಣ	
		2. ಹಳಿಯಾಳ	1 .ಹಳಿಯಾಳ 2. ಅಂಬಿಕಾನಗರ	1.ಬಾಗವತಿ
		3. ಜೋಯಡಾ	1. ಜೋಯಡಾ 2. ರಾಮನಗರ	1. ಕುಂಬಾರವಾಡ 1. ಗಣೇಶ ಗುಡಿ 2. ಕೆಸಲ್‌ರಾಕ್

ವಿಶೇಷ ಘಟಕಗಳು:

ಜಿಲ್ಲಾ ಪೋಲಿಸ್ ಕಛೇರಿಯ ವ್ಯಾಪ್ತಿಯಲ್ಲಿ ಕೆಲವು ವಿಶೇಷ ಘಟಕಗಳು ಕಾರ್ಯನಿರ್ವಹಿಸುತ್ತವೆ. ಅವು ಈ ಕೆಳಗಿನಂತಿರುತ್ತವೆ.

1) **ಡಿ.ಎಸ್.ಬಿ. - ಜಿಲ್ಲಾ ವಿಶೇಷ ವಿಭಾಗ**

ಜಿಲ್ಲಾ ವಿಶೇಷ ವಿಭಾಗದ ಮುಖ್ಯಾಧಿಕಾರಿ ಪೋಲಿಸ್ ನಿರೀಕ್ಷಕರು ಆಗಿದ್ದು, ಅವರಿಗೆ ಸಹಾಯಕರಾಗಿ ಪೋಲಿಸ್ ಉಪ-ನಿರೀಕ್ಷಕರು, ಸಿವಿಲ್ ಹೆಡ್‌ಕಾನ್ಸಟೇಬಲ್ ರವರು ಇರುತ್ತಾರೆ. ಸದರ ವಿಭಾಗವು ಪೋಲಿಸ್ ಅಧೀಕ್ಷಕರು, ಉ.ಕ. ಕಾರವಾರ ರವರ ನೇರ ಅಧೀನದಲ್ಲಿ ಇರುತ್ತದೆ. ಈ ವಿಭಾಗದಲ್ಲಿ ವಿವಿಧ ರೀತಿಯ ಬಂದೋಬಸ್ತ್, ವಿ.ವಿ.ಐ.ಪಿ. ಬಂದೋಬಸ್ತ್, ಗುಪ್ತ ಮಾಹಿತಿ, ಪಾಸ್‌ಪೋರ್ಟ್, ಗುಣ ನಡತೆ ಪರಿಶೀಲನೆ, ಎನ್.ಓ.ಸಿ ಹಾಗೂ ಇತ್ಯಾದಿ ಕೆಲಸಗಳನ್ನು ಹೊಂದಿರುತ್ತದೆ.

2) **ಡಿ.ಸಿ.ಆರ್.ಬಿ. - ಜಿಲ್ಲಾ ಅಪರಾಧ ದಾಖಲಾತಿ ವಿಭಾಗ.**

ಜಿಲ್ಲಾ ಅಪರಾಧ ವಿಭಾಗದ ಮುಖ್ಯಾಧಿಕಾರಿ ಪೋಲಿಸ್ ನಿರೀಕ್ಷಕರು ಆಗಿದ್ದು, ಅವರಿಗೆ ಸಹಾಯಕರಾಗಿ ಪೋಲಿಸ್ ಉಪ-ನಿರೀಕ್ಷಕರು, ಸಹಾಯಕ ಪೋಲಿಸ್ ಉಪ-ನಿರೀಕ್ಷಕರು, ಸಿವಿಲ್ ಹೆಡ್‌ಕಾನ್ಸಟೇಬಲ್ ರವರು ಒಳಗೊಂಡಿರುತ್ತಾರೆ. ಸದರ ವಿಭಾಗವು ಹೆಚ್ಚುವರಿ ಪೋಲಿಸ್ ಅಧೀಕ್ಷಕರು, ಉತ್ತರಕನ್ನಡ ಕಾರವಾರ ರವರ ನೇರ ಅಧೀನದಲ್ಲಿ ಇರುತ್ತದೆ. ಈ ವಿಭಾಗದಲ್ಲಿ ಜಿಲ್ಲೆಯ ಎಲ್ಲಾ ಅಪರಾಧ ದಾಖಲಾಗುತ್ತವೆ. ಅಲ್ಲದೇ ಸದರ ವಿಭಾಗದಲ್ಲಿ ಗಣಕಯಂತ್ರ ವಿಭಾಗ, ಜಿಲ್ಲಾ ಪೋಲಿಸ್ ಕಛೇರಿಯ ಅಪರಾಧ ವಿಭಾಗ, ಬೆರಳು ಮುದ್ರೆ ಘಟಕ, ಜಿಲ್ಲಾ ವೈಜ್ಞಾನಿಕ ಸಹಾಯಕ ಘಟಕ ಒಳಗೊಂಡಿರುತ್ತದೆ.

3) **ಡಿ.ಸಿ.ಐ.ಬಿ. - ಜಿಲ್ಲಾ ಅಪರಾಧ ಪತ್ತೆ ದಳ**

ಸದರಿ ವಿಭಾಗವು ಪೋಲಿಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಸದರ ವಿಭಾಗದಲ್ಲಿ ಒಂದು ಪಿ.ಐ., ಎ.ಎಸ್.ಐ. ಮತ್ತು ಸಿ.ಎಚ್.ಸಿ. ರವರು ಕಾರ್ಯನಿರ್ವಹಿಸುತ್ತಾರೆ.

4) **ಡಿ.ಎಸ್.ಎ.ಯು-ಜಿಲ್ಲಾ ವೈಜ್ಞಾನಿಕ ಸಹಾಯಕ ಘಟಕ**

ಸದರಿ ವಿಭಾಗದಲ್ಲಿ ಒಂದು ಪಿ.ಎಸ್.ಐ., 2-ಸಿವಿಲ್ ಹೆಡ್‌ಕಾನ್ಸಟೇಬಲ್, 1-ಫೋಟೋಗ್ರಾಫರ/ವಿಡಿಯೋ ಗ್ರಾಫರ ಒಳಗೊಂಡಿರುತ್ತದೆ. ಸದರ ಘಟಕದಲ್ಲಿ ಸಮನ್ಸ್ ವಾರಂಟ್‌ಗಳ ದಾಖಲಾತಿ ಮತ್ತು ಜಿಲ್ಲೆಯ ವ್ಯಾಪ್ತಿಯಲ್ಲಿ ಫೋಟೋ ಅಥವಾ ವಿಡಿಯೋ ತೆರೆಯುವ ಕೆಲಸವನ್ನು ಒಳಗೊಂಡಿರುತ್ತದೆ.

5) **ಬೆರಳು ಮುದ್ರೆ ಘಟಕ**

ಸದರಿ ವಿಭಾಗದಲ್ಲಿ ಒಂದು ಪಿ.ಎಸ್.ಐ, ಒಂದು ಎಚ್.ಸಿ., ಒಂದು ಪಿ.ಸಿ. ಒಳಗೊಂಡಿದ್ದು ಸದರ ವಿಭಾಗವು ಹೆಚ್ಚುವರಿ ಪೋಲಿಸ್ ಅಧೀಕ್ಷಕರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತದೆ.

6) **ಅಬಕಾರಿ ಮತ್ತು ಲಾಟರಿ ಪ್ರತಿಬಂಧಕ ದಳ**

ಕರ್ನಾಟಕ ಸರ್ಕಾರವು ಲಾಟರಿ ಮಾರಾಟ ಮತ್ತು ಸರಾಯಿ ಬಂದ ಮಾಡುವದಕೋಸ್ಕರ ಸದರ ವಿಭಾಗವು ಅಸ್ತಿತ್ವಕ್ಕೆ ಬಂದಿದೆ. ಈ ವಿಭಾಗದಲ್ಲಿ ಪೋಲಿಸ್ ನಿರೀಕ್ಷಕರು, ಸಹಾಯಕ ಪೋಲಿಸ್ ನಿರೀಕ್ಷಕರು, ಸಿವಿಲ್ ಹೆಡ್ ಕಾನ್ಸಟೇಬಲ್, ಸಿವಿಲ್ ಪೊಲೀಸ್ ಕಾನ್ಸಟೇಬಲ್, ಗಣಕಯಂತ್ರ ಆಪರೇಟರ್ ಒಳಗೊಂಡಿರುತ್ತದೆ.

7) **ಡಿ.ಎ.ಆರ್. - ಜಿಲ್ಲಾ ಸಶಸ್ತ್ರ ಮೀಸಲು ಪಡೆ**

ಜಿಲ್ಲಾ ಸಶಸ್ತ್ರ ಮೀಸಲು ಪಡೆಯಲ್ಲಿ ಎರಡು ವಿಭಾಗಗಳಿವೆ (1) ಒಂದು ಸಶಸ್ತ್ರ ಮೀಸಲು ಪಡೆ, (2) ವಾಹನ ವಿಭಾಗ.

(1) ಜಿಲ್ಲಾ ಸಶಸ್ತ್ರ ಮೀಸಲು ಪಡೆ : ಸದರ ಘಟಕದಲ್ಲಿ ಒಂದು ಆರ್.ಪಿ.ಐ, 6-ಆರ್.ಎಸ್.ಐ, 11-ಎ.ಆರ್.ಎಸ್.ಐ, 55-ಎಚ್.ಸಿ, 203-ಎಪಿಸಿ, ಹೀಗೆ ಒಟ್ಟು 276 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡಿದೆ. ಸದರ ವಿಭಾಗದಲ್ಲಿ ಈ ಕೆಳಕಂಡ ಕರ್ತವ್ಯಗಳು ನಿರ್ವಹಿಸುತ್ತದೆ.

1) ವಿಶೇಷ ಜಾತ್ರೆ ಹಾಗೂ ಇತರ ಬಂದೋಬಸ್ತ ಸಲುವಾಗಿ ಡಿ.ಎ.ಆರ್. ಸ್ಟ್ರೈಕಿಂಗ್ ಪಾರ್ಟಿಯನ್ನು ನಿಯೋಜಿಸಲಾಗುತ್ತದೆ.
2) ಕಾನೂನು ಸುವ್ಯವಸ್ಥೆ ಪಾಲನೆಗೆ ನಾಗರೀಕ ಪೋಲಿಸ್‌ರಿಗೆ ನೆರವಾಗಲು ಡಿ.ಎ.ಆರ್. ತುಕಡಿಗಳನ್ನು ನಿಯೋಜಿಸಲಾಗುತ್ತದೆ.
3) ವಿಚಾರಣಾಧೀನ ಆರೋಪಿಗಳ ಬೆಂಗಾವಲು ಕರ್ತವ್ಯಕ್ಕೆ ಈ ಘಟಕ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ.
4) ಬ್ಯಾಂಕುಗಳ ಹಣದ ಬೆಂಗಾವಲು ಕರ್ತವ್ಯಕ್ಕೆ, ಜಿಲ್ಲೆಯ ಪ್ರಮುಖ ವ್ಯಕ್ತಿಗಳ ಅಂಗರಕ್ಷಕ ಕರ್ತವ್ಯಕ್ಕೆ ಸದರ ಘಟಕದ ಸಿಬ್ಬಂದಿಗಳನ್ನು ನೇಮಿಸಲಾಗುತ್ತದೆ.
5) ಜಿಲ್ಲೆಗೆ ವಿ.ಐ.ಪಿ. ಹಾಗೂ ವಿ.ವಿ.ಐ.ಪಿ ಗಳು ಆಗಮಿಸಿದಾಗ ಅವರ ವಿಶೇಷ ಭದ್ರತಾ ಕರ್ತವ್ಯಕ್ಕೆ ಹಾಗೂ ಅವರ ಎಸ್ಕಾರ್ಟ ಹಾಗೂ ಪೈಲೆಟ್ ಕರ್ತವ್ಯಕ್ಕೆ ಸಹ ಸಶಸ್ತ್ರ ಮೀಸಲು ಪಡೆಯ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗುತ್ತದೆ.
6) ಜಿಲ್ಲಾ ಖಜಾನೆ, ಪೋಲಿಸ್ ಅಧೀಕ್ಷಕರ ಕಛೇರಿ, ಬ್ಯಾಲೇಟ್ ಬಾಕ್ಸ್, ಜಿಲ್ಲಾ ಸಶಸ್ತ್ರಗಾರ, ಜಿಲ್ಲಾ ಪೋಲಿಸ್ ಅಧೀಕ್ಷಕರು ಹಾಗೂ ಜಿಲ್ಲಾಧಿಕಾರಿಗಳ ನಿವಾಸದ ಗಾರ್ಡಗಳಿಗೆ ಡಿ.ಎ.ಆರ್. ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ.
7) ಬ್ಯಾಂಕ ಕರೆನ್ಸಿ ಚೆಸ್ಟ್‌ಗಾರ್ಡ ಕರ್ತವ್ಯಕ್ಕೆ, ಜಲವಿದ್ಯುತ್ ಸ್ಥಾವರಗಳಾದ ಕೆ.ಪಿ.ಸಿ. ಗಣೇಶಗುಡಿ, ಸುಪಾ ಡ್ಯಾಂ, ಗೇರುಸೊಪ್ಪಾ ಡ್ಯಾಂ, ಕದ್ರಾ, ಕೊಡಸಳ್ಳಿ ಡ್ಯಾಂ ಹಾಗೂ ಕೆ.ಎಚ್.ಇ.ಪಿ. ಅಂಬಿಕಾ ನಗರ ಪವರ ಹೌಸಗಳ ಗಾರ್ಡ ಕರ್ತವ್ಯಕ್ಕೆ ಸದರ ಸಿಬ್ಬಂದಿಗಳನ್ವಯ ನಿಯೋಜಿಸಲಾಗುತ್ತದೆ.
8) ವಿ.ವಿ.ಐ.ಪಿ. ಗಳಿಗೆ ಗೌರವ ರಕ್ಷೆ ನೀಡುವುದು ಕರ್ತವ್ಯ ನಿರತ ಪೋಲಿಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಹಾಗೂ ಸೈನಿಕರು ಮೃತಪಟ್ಟಲ್ಲಿ ಅವರ ಗೌರವ ರಕ್ಷೆ ನೀಡಲು ಡಿ.ಎ.ಆರ್. ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ.
9) ದಿನನಿತ್ಯ ಹಾಜರಿರುವ ಡಿ.ಎ.ಆರ್. ಸಿಬ್ಬಂದಿಗಳಿಂದ ಕವಾಯತ ನಡೆಸಲಾಗುತ್ತದೆ.
10) ಹೊಸದಾಗಿ ನೇಮಕಗೊಂಡ ಪೋಲಿಸ್ ಪ್ರಶಿಕ್ಷಣಾರ್ಥಿಗಳಿಗೆ ತಾತ್ಕಾಲಿಕ ಪೋಲಿಸ್ ತರಬೇತಿ ಶಾಲೆ ಪ್ರಾರಂಭಿಸಿ ತರಬೇತಿ ನೀಡುವ ಸಲುವಾಗಿ ಡಿ.ಎ.ಆರ್. ಘಟಕದ ನುರಿತ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ.
11) ಪೋಲಿಸ್ ಠಾಣೆಯ ಸಿಬ್ಬಂದಿಗಳಿಗೆ ಹೊರಾಂಗಣ ಹಾಗೂ ಒಳಾಂಗಣ ವಿಷಯಗಳಲ್ಲಿ ಪುನರ್ ಮನನ ತರಬೇತಿ ಸಹ ಈ ಘಟಕದಿಂದ ನೀಡಲಾಗುತ್ತದೆ.

12) ವಿಶೇಷ ಟಪಾಲು ಕರ್ತವ್ಯಕ್ಕೆ ಮತ್ತು ವಿಶೇಷ ಸಂದರ್ಭದಲ್ಲಿ ಚೆಕ್ ಪೋಸ್ಟ್‌ಗಳಿಗೂ ಮತ್ತು ಪೋಲಿಸ್ ನಿರೀಕ್ಷಕರು, ಮೇಲ್ಪಟ್ಟ ಅಧಿಕಾರಿಗಳ ಆರ್ಡರಲಿ ಕರ್ತವ್ಯಕ್ಕೆ ಸಹ ಸದರ ಘಟಕದ ಸಿಬ್ಬಂದಿಗಳನ್ನು ನೇಮಿಸಲಾಗುತ್ತದೆ.

13) ಜಿಲ್ಲಾ ಸಶಸ್ತ್ರ ಘಟಕದ ವಿಭಾಗದಲ್ಲಿ ಸರ್ಕಾರಿ ಆಯುಧಗಳ, ಜಿಲ್ಲೆಯ ಠೇವಣಿ ಇಟ್ಟ ಆಯುಧಗಳನ್ನು ನ್ಯಾಯಾಲಯದಿಂದ ಜಪ್ತಿ ಮಾಡಿದ ಆಯುಧಗಳ ನಿರ್ವಹಣೆ ಹಾಗೂ ಜಿಲ್ಲೆಯ ಎಲ್ಲಾ ಠಾಣೆಗಳಿಗೆ ಆಯುಧ ಗುರಿ ತರಬೇತಿ ಅಭ್ಯಾಸಕ್ಕಾಗಿ ಹಾಗೂ ಆಯುಧಗಳ ಮಾಹಿತಿಯನ್ನು ನೀಡಲು ಸಶಸ್ತ್ರಗಾರ ವಿಭಾಗದಿಂದ ನುರಿತ ಆಯುಧ ತರಬೇತಿಗಾರರನ್ನು ನಿಯೋಜಿಸಲಾಗುತ್ತದೆ.

14) ಜಿಲ್ಲೆಗೆ ವಿ.ಐ.ಪಿ., ವಿ.ವಿ.ಐ.ಪಿ. ಗಳು ಆಗಮಿಸಿದಾಗ ಹಾಗೂ ವಿಶೇಷ ಬಂದೋಬಸ್ತ ಕರ್ತವ್ಯಕ್ಕೆ ಪ್ರಮುಖ ಜನಸಂದಣಿ ಸ್ಥಳಗಳಲ್ಲಿ ಡಿ.ಎ.ಆರ್. ಘಟಕದಿಂದ ವಿದ್ವಾಂಸಕ ಕೃತ್ಯ, ತಪಾಸಣಾ ತಂಡ (ಎ.ಎಸ್.ಸಿ) ವನ್ನು ನಿಯೋಜಿಸಲಾಗುತ್ತದೆ.

15) ಜಿಲ್ಲೆಯ ಯಾವುದೇ ಸ್ಥಳದಲ್ಲಿ ಕಳ್ಳತನ, ದರೋಡೆ ನಡೆದಾಗ ಅದರ ಪರಿಶೀಲನೆಗಾಗಿ ಶ್ವಾನದಳ ತಂಡವನ್ನು ನಿಯೋಜಿಸಲಾಗುತ್ತದೆ.

(2) ವಾಹನ ವಿಭಾಗ:

ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ವಾಹನ ವಿಭಾಗದಲ್ಲಿ 1–ಆರ್.ಪಿ.ಐ, 1–ಎ.ಆರ್.ಎಸ್.ಐ, 11–ಎ.ಎಚ್.ಸಿ, 65–ಎ.ಪಿ.ಸಿ ಒಟ್ಟು 78 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡಿರುತ್ತದೆ.

ಈ ವಿಭಾಗದಲ್ಲಿ ಈ ಕೆಳಕಂಡ ಕರ್ತವ್ಯ ನಿರ್ವಹಿಸಲಾಗುತ್ತದೆ.

1) ಜಿಲ್ಲೆಯ ಎಲ್ಲಾ ಪೊಲೀಸ್ ವಾಹನಗಳ ದುರಸ್ಥಿ ಮತ್ತು ನಿರ್ವಹಣೆ ಕಾರ್ಯ.

2) ಜಿಲ್ಲೆಯಲ್ಲಿ ಅಪರಾಧ/ ದೊಂಬಿ/ ಗಲಾಟೆಯ ಸಮಯದಲ್ಲಿ ಚಾಲಕ ಮತ್ತು ವಾಹನಗಳನ್ನು ನಿಯೋಜಿಸಲಾಗುತ್ತಿದೆ.

3) ಅತಿ ಗಣ್ಯ ವ್ಯಕ್ತಿಗಳ ಪ್ರವಾಸದ ಸಮಯದಲ್ಲಿ ಕಾನವೇ ಉಸ್ತುವಾರಿ ಮತ್ತು ಗಣ್ಯ ವ್ಯಕ್ತಿಗಳು ಆಗಮಿಸಿದ ಸಮಯದಲ್ಲಿ ಅವರಿಗೆ ಎಸ್ಕಾರ್ಟ ಮತ್ತು ಪೈಲೆಟ್ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

4) ವಾಹನ ವಿಭಾಗದ 78 ಸಿಬ್ಬಂದಿಗಳಲ್ಲಿ ಕೆಲವರು ಜಿಲ್ಲೆಯ ನಾಲ್ಕು ಉಪ ವಿಭಾಗದಲ್ಲಿ ಪೊಲೀಸ್ ಅಧಿಕಾರಿಗಳ ವಾಹನ ಚಾಲಕರಾಗಿ ಹಾಗು ಇನ್ನು ಕೆಲವು ಸಿಬ್ಬಂದಿಗಳು ಡಿ.ಎ.ಆರ್. ವಾಹನ ವಿಭಾಗದಲ್ಲಿರುವ ಡಿ.ಎ.ಆರ್. ಬಂದೋಬಸ್ತ ವಾಹನಗಳ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

5) ವಾಹನ ವಿಭಾಗದಲ್ಲಿ ಎರಡು ಕ್ರೇನ್‌ಗಳಿದ್ದು, ಅವುಗಳನ್ನು ರಸ್ತೆ ಅಪಘಾತ ಸಮಯದಲ್ಲಿ ಮತ್ತು ರಸ್ತೆ ಸಂಚಾರ, ಅಡೆತಡೆ ಸಮಯದಲ್ಲಿ ಉಪಯೋಗಿಸಲಾಗುತ್ತಿದೆ.

6) ದುರಸ್ಥಿ ಕಾರ್ಯಗಾರವಿದ್ದು, ಪೊಲೀಸ್ ವಾಹನಗಳ ಸಣ್ಣಪುಟ್ಟ ದುರಸ್ಥಿಗಳನ್ನು ಮಾಡಲಾಗುತ್ತಿದೆ.

II) ಆಡಳಿತ ವಿಭಾಗ :

ಸಹಾಯಕ ಆಡಳಿತಾಧಿಕಾರಿಗಳು: ಶ್ರೀ ಎಂ. ಎಂ. ನಾಯ್ಕ,

ಸಹಾಯಕ ಆಡಳಿತಾಧಿಕಾರಿಯವರು ಲಿಪಿಕ ಸಿಬ್ಬಂದಿವರ್ಗದವರ ಮುಖ್ಯಸ್ಥರಾಗಿದ್ದು ಜಿಲ್ಲಾ ಪೋಲಿಸ್ ಕಛೇರಿಯ ವಿಭಾಗಗಳಾದ ಸಿಬ್ಬಂದಿ ಶಾಖೆ, ಲೆಕ್ಕ ಪತ್ರ ಶಾಖೆ ಮತ್ತು ಅಪರಾದ ಶಾಖೆಗಳ ಮೇಲ್ವಿಚಾರಕರಾಗಿರುತ್ತಾರೆ.

1. ಇವರು ಜಿಲ್ಲಾ ಪೋಲಿಸ್ ಕಛೇರಿಗೆ ವಿವಿಧ ಕಛೇರಿ/ಪೋಲಿಸ್ ಠಾಣೆಗಳಿಂದ ಸ್ವೀಕರಿಸಲಾದ ಎಲ್ಲಾ ಟಪಾಲುಗಳನ್ನು ಪರಿಶೀಲಿಸಿ ಹಿರಿಯ ಅಧಿಕಾರಿಗಳಿಂದ ಬಂದ ಟಪಾಲುಗಳನ್ನು ಪೋಲಿಸ್ ಅಧೀಕ್ಷಕರುಗಳಿಗೆ ಕಳುಹಿಸುವುದು.
2. ಎಲ್ಲಾ ವಿಭಾಗದ ಕಡತಗಳ ಶುದ್ದ ಪ್ರತಿಗಳನ್ನು ಸಹಿ ಮಾಡುವುದು
3. ಲಿಪಿಕ ಸಿಬ್ಬಂದಿ ವರ್ಗದವರ ಸಾಂದರ್ಭಿಕ ರಜೆಯನ್ನು ಮಂಜೂರಿಸುವುದು.
4. ಇವರು ವೇತನ ಆಕರಣೆ ಹಾಗೂ ಬಟವಡೆಯ ಅಧಿಕಾರಿಯಾಗಿರುತ್ತಾರೆ.
5. ಇವರು ಮಾಹಿತಿ ಹಕ್ಕು ಅಧಿನಿಯಮದ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿರುತ್ತಾರೆ.

1. ಶಾಖಾಧೀಕ್ಷಕರು: (ಸಿಬ್ಬಂದಿ ಶಾಖೆ): ಕುಮಾರಿ ವಿಮಲಾ ಜೆ. ನಾಯ್ಕ,

1. ಇವರು ಜಿಲ್ಲಾ ಪೋಲಿಸ್ ಕಛೇರಿಯ ಸಿಬ್ಬಂದಿ ಶಾಖೆಯ ಶಾಖಾಧಿಕ್ಷಕರಾಗಿದ್ದು ಶಾಖೆಯ ಎಲ್ಲಾ ವಿಷಯ ನಿರ್ವಾಹಕರ ಕಡತಗಳನ್ನು ಪರಿಶೀಲಿಸಿ ಸಹಾಯಕ ಆಡಳಿತಾಧಿಕಾರಿಯವರ ಹಾಗೂ ಎಸ್‌ಪಿ. ರವರ ಸಹಿಗಾಗಿ ಕಳುಹಿಸುವುದು.
2. ಪ್ರಧಾನ ಕಛೇರಿ ಹಾಗೂ ವಲಯ ಕಛೇರಿಯ ಪರಿವಿಕ್ಷಣಾ ವರದಿ ಹಾಗೂ ಪಾಲನಾ ವರದಿಯನ್ನು ಸಲ್ಲಿಸುವುದು.
3. ಕೆ.ಎ.ಟಿ ಗೆ ಸಂಬಂಧಿಸಿದಂತೆ ಪ್ರತಿ ತಿಂಗಳು ಮಾಸಿಕ ವರದಿ ಸಲ್ಲಿಸುವುದು.

2. ಶಾಖಾಧೀಕ್ಷಕರು: (ಲೆಕ್ಕ ಪತ್ರ ಶಾಖೆ): ಶ್ರೀ ಪಿ. ಬಿ. ಉಗರಗೊಳ

1. ಇವರು ಜಿಲ್ಲಾ ಪೋಲಿಸ್ ಕಛೇರಿಯ ಲೆಕ್ಕ ಪತ್ರ ಶಾಖೆಯ ಶಾಖಾಧಿಕ್ಷಕರಾಗಿದ್ದು ಶಾಖೆಯ ಎಲ್ಲಾ ವಿಷಯ ನಿರ್ವಾಹಕರ ಕಡತಗಳನ್ನು ಪರಿಶೀಲಿಸಿ ಸಹಾಯಕ ಆಡಳಿತಾಧಿಕಾರಿಯವರ ಹಾಗು ಎಸ್‌ಪಿ. ರವರ ಸಹಿಗಾಗಿ ಕಳುಹಿಸುವುದು.
2. ಈ ಕಛೇರಿಯ ಎ.ಜಿ. ಹಾಗೂ ಪೋಲಿಸ್ ಪ್ರಧಾನ ಕಛೇರಿಯ ಆಡಿಟ್ ಕಡತಗಳ ನಿರ್ವಹಣೆ

3. ಶಾಖಾಧೀಕ್ಷಕರು: (ಅಪರಾಧ ಶಾಖೆ): ಶ್ರೀ ಐ.ಹೆಚ್ ಗೌಡ

1. ಇವರು ಜಿಲ್ಲಾ ಪೋಲಿಸ್ ಕಛೇರಿಯ ಅಪರಾಧ ಶಾಖೆಯ ಶಾಖಾಧಿಕ್ಷಕರಾಗಿದ್ದು ಅಪರಾಧ ಶಾಖೆಯ ಹಾಗೂ ಸಾಮಾನ್ಯ ವಿಭಾಗ -1, 2 ರ ವಿಷಯ ನಿರ್ವಾಹಕರ ಕಡತಗಳನ್ನು ಪರಿಶೀಲಿಸಿ ಸಹಾಯಕ ಆಡಳಿತಾಧಿಕಾರಿಯವರ ಹಾಗೂ ಎಸ್‌ಪಿ. ರವರ ಸಹಿಗಾಗಿ ಕಳುಹಿಸುವುದು.

ಸಿಬ್ಬಂದಿ ಶಾಖೆ

ಸಿಬ್ಬಂದಿ ಶಾಖೆ-1

ಶ್ರೀಮತಿ ಸವಿತಾ ಎಂ. ನಾಯ್ಕ, ಪ್ರದಸ.,

1.	ಸಿಪಿಸಿ, ಯಿಂದ ಸಿಹೆಚ್‌ಸಿ, ಹುದ್ದೆಗೆ ಹಾಗೂ ಸಿಹೆಚ್‌ಸಿ ಹುದ್ದೆಯಿಂದ ಎ.ಎಸ್.ಐ ಪದೋನ್ನತಿ ಕಡತ ನಿರ್ವಹಿಸುವುದು
2.	ಎಪಿಸಿ, ಯಿಂದ ಎಹೆಚ್‌ಸಿ, ಹುದ್ದೆಗೆ ಹಾಗೂ ಎಹೆಚ್‌ಸಿ ಹುದ್ದೆಯಿಂದ ಎ.ಆರ್.ಎಸ್.ಐ ಪದೋನ್ನತಿ ಕಡತ ನಿರ್ವಹಿಸುವುದು
3.	ಪಿ.ಐ. ಯಿಂದ ಡಿ.ಎಸ್.ಪಿ ಹುದ್ದೆಗೆ ಹಾಗೂ ಪಿ.ಎಸ್.ಐ ಯಿಂದ ಪಿ.ಐ ಹುದ್ದೆಗೆ ಪದೋನ್ನತಿಯ ಕಡತ ನಿರ್ವಹಿಸುವುದು
4.	ಎಲ್ಲಾ ಪೋಲಿಸ್ ಅಧಿಕಾರಿ/ಸಿಬ್ಬಂದಿಯವರ ವರ್ಗಾವಣಾ ಕಡತ ನಿರ್ವಹಿಸುವುದು.
5.	ಕೆ.ಎ.ಟಿ ಸಂಬಂಧಿಸಿದ ಕಡತಗಳ ನಿರ್ವಹಣೆ
6.	ಸಿಪಿಸಿ ಸಿಹೆಚ್‌ಸಿ, ಎ.ಎಸ್.ಐ., ಎಪಿಸಿ, ಎಹೆಚ್‌ಸಿ, ಎಆರ್‌ಎಸ್‌ಐ ರವರ ಜೇಷ್ಠತಾ ಪಟ್ಟಿಯನ್ನು ತಯಾರಿಸುವುದು.
7.	ಅಂಶಕಾಲಿಕ ಜಾಡಮಾಲಿಗಳ ಕಡತ ನಿರ್ವಹಣೆ
8.	ಹೊಸ ಪೋಲಿಸ್ ಠಾಣೆ/ ವೃತ್ತ ಕಛೇರಿ/ ಉಪವಿಭಾಗ ಕಛೇರಿ, ಹೆಚ್ಚುವರಿ ಸಿಬ್ಬಂದಿ ಬಲವನ್ನು ಮಂಜೂರಿಸುವ ಬಗ್ಗೆ ಪ್ರಸ್ತಾವನೆಯನ್ನು ಪೋಲಿಸ್ ಪ್ರಧಾನ ಕಛೇರಿಗೆ ಸಲ್ಲಿಸುವುದು.
9.	ಪೋಲಿಸ್ ಅಧಿಕಾರಿಗಳ ಮಾಸಿಕ ಸ್ಥಳ ಪಟ್ಟಿ ತಯಾರಿಸಿ, ಮುಖ್ಯ ಕಛೇರಿಗೆ ಸಲ್ಲಿಸುವುದು
10.	ಪದೋನ್ನತಿ ಹೊಂದಿದ ಸಿಬ್ಬಂದಿಯವರ ವೇತನ ನಿಗಧಿ ಪಡಿಸುವದು
11.	ಸಮ ವಸ್ತ್ರ ಭತ್ಯೆ, ಪ್ರಭಾರ ಭತ್ಯೆ, ವಿಶೇಷ ಭತ್ಯೆ, ಇತ್ಯಾದಿಗಳ ಕಡತ ಮಂಡಿಸುವುದು.
12.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಿಬ್ಬಂದಿ ಶಾಖೆ-2

ಶ್ರೀಮತಿ ನಾಗರತ್ನಾ ನಾಯಕ, ಪ್ರದಸ.,

1.	ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಇಲಾಖಾ ವಿಚಾರಣೆ (ರೂಲ್, 6, 7 ಮತ್ತು 12) ಕಡತಗಳನ್ನು ನಿರ್ವಹಿಸುವುದು
2.	ಅಧಿಕಾರಿ ಸಿಬ್ಬಂದಿಗಳ ಮಾಸಿಕ ಶಿಕ್ಷಾ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
3.	ಅನುಕಂಪದ ಆಧಾರದ ಮೇಲೆ ನೇಮಕಾತಿ ಕುರಿತು ಕಡತ ತಯಾರಿಸಿ, ಮಂಡಿಸಿ ಪ್ರಧಾನ ಕಛೇರಿಗೆ ಪತ್ರ ವ್ಯವಹಾರ ಮಾಡುವುದು
4.	ಕೆ.ಎ.ಟಿಗೆ ಸಂಬಂಧಿಸಿದ ಕಡತಗಳ ನಿರ್ವಹಣೆ
5.	ಪೋಲಿಸ್ ಅಧಿಕಾರಿ , ಸಿಬ್ಬಂಧಿಗಳು ತಮಗೆ ವಿಧಿಸಿದ ಶಿಕ್ಷೆಯ ವಿರುದ್ಧ ಮೇಲ್ಮನವಿ ಸಲ್ಲಿಸಿದ ಬಗ್ಗೆ ಪತ್ರ ವ್ಯವಹಾರ ಮಾಡುವುದು
6.	ಮಾಸಿಕ ಮಾಹಿತಿಯನ್ನು ತಯಾರಿಸಿ ಪೋಲಿಸ್ ಪ್ರಧಾನ ಕಛೇರಿಗೆ ಸಲ್ಲಿಸುವುದು.
7.	ಪೋಲಿಸ್ ಅಧಿಕಾರಿ/ಸಿಬ್ಬಂದಿಯವರನ್ನು ಸೇವೆಯಿಂದ ವಜಾ ಮಾಡುವ ಬಗ್ಗೆ ಕಡತ ನಿರ್ವಹಿಸುವುದು
8.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಿಬ್ಬಂದಿ ಶಾಖೆ-3

ಶ್ರೀ ಆರ್.ಎಸ್. ನಾಯ್ಕ , ಪ್ರದಸ.,

1.	ಎಲ್ಲಾ ತರದ ರಜೆಯನ್ನು ಮಂಜೂರಿಸುವುದು, ಡಿ.ಎಸ್.ಪಿ., ಸಿಪಿಐ/ಪಿಐ, ಪಿ.ಎಸ್.ಐ., ಮ.ಪಿ.ಎಸ್.ಐ. ಎ.ಎಸ್.ಐ. ಮ.ಎ.ಎಸ್.ಐ., ಸಿಹೆಚ್‌ಸಿ., ಮಹೆಚ್‌ಸಿ, ನಿಸ್ತಂತು ಸಿಬ್ಬಂದಿ, ಲಿಪಿಕ ಸಿಬ್ಬಂದಿಗಳ ಸೇವಾ ಪುಸ್ತಕಗಳ ನಿರ್ವಹಣೆ ಹಾಗೂ ಸೇವಾ ಪುಸ್ತಕದಲ್ಲಿ ನಮೂದಿಸುವುದು.

2.	ಅಧಿಕಾರಿ ಸಿಬ್ಬಂದಿಗಳ ಖಾಯಂಪೂರ್ವ ಅವಧಿಯ ಕಡತವನ್ನು ನಿರ್ವಹಿಸುವುದು
3.	ಡಿ.ಎಸ್.ಪಿ., ಸಿಪಿಐ/ಪಿಐ, ಪಿ.ಎಸ್.ಐ., ಮಪಿ.ಎಸ್.ಐ. ಎ.ಎಸ್.ಐ. ಮ.ಎ.ಎಸ್.ಐ., ಸಿಹೆಚ್‌ಸಿ., ಮಹೆಚ್‌ಸಿ, ನಿಸ್ತಂತು ಸಿಬ್ಬಂದಿ, ಲಿಪಿಕ ಸಿಬ್ಬಂದಿಗಳ ವೇತನ ನಿಗಧಿಪಡಿಸುವುದು
4.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳ ರವರ ಟೈಂ ಬಾಂಡ, ಗಳ ಕಡತಗಳನ್ನು ನಿರ್ವಹಿಸುವುದು
5.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳ 15 ವರ್ಷ ಹಾಗೂ 20 ವರ್ಷಗಳನ್ನು ಪೂರೈಸಿದವರ ವಿಶೇಷ ವೇತನದ ಭಡ್ತಿ ಕಡತವನ್ನು ನಿರ್ವಹಿಸುವುದು
6.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳ ವಾರ್ಷಿಕ ವೇತನ ಭಡ್ತಿಯನ್ನು ಕಡತ ನಿರ್ವಹಿಸುವುದು ಹಾಗೂ ಈ ಬಗ್ಗೆ ವಾಚ್ ರಿಜಿಸ್ಟರ್‌ನ್ನು ನಿರ್ವಹಿಸುವುದು.
7.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳ ಅದ್ಯರ್ಪಣ ವೇತನದ ಮಂಜೂರಿಯ ಕಡತವನ್ನು ನಿರ್ವಹಿಸುವುದು
8.	ಹೊಸದಾಗಿ ನೇಮಕಗೊಂಡ ಅಧಿಕಾರಿ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ತೆರೆಯುವುದು.
9.	ಹೆಚ್‌ಟಿಸಿ/ಎಲ್‌ಟಿಸಿ ಯನ್ನು ಈ ಮೇಲಿನ ಅಧಿಕಾರಿ ಸಿಬ್ಬಂದಿಗಳಿಗೆ ಮಂಜೂರಿಸುವುದು
10.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳಿಗೆ ಉನ್ನತ ಹುದ್ದೆಯ ಅರ್ಜಿಸಲ್ಲಿಸಲು ಅನುಮತಿ ಕುರಿತು ಕಡತ ನಿರ್ವಹಣೆ.
11.	ಸೇವಾ ಪ್ರಮಾಣ ಪತ್ರವನ್ನು ನೀಡುವುದು
12.	ಅಧಿಕಾರಿ ಸಿಬ್ಬಂದಿಗಳ ಗಳ ಹೆಸರು ಬದಲಾವಣೆ ಕುರಿತು ಮಂಡಿಸುವುದು.
13.	ಕನ್ನಡ ಬಾಷಾ ಪರೀಕ್ಷೆ ಪಾಸು ಮಾಡುವುದರಿಂದ ವಿನಾಯತಿ ಕುರಿತು ಕಡತ ನಿರ್ವಹಿಸುವುದು
14.	ವೈಯಕ್ತಿಕ ವೇತನ ಮಂಜೂರಿಸುವುದು
15.	ಲಿಪಿಕ ಸಿಬ್ಬಂದಿ ವರ್ಗದವರ ಎಲ್ಲಾ ತರಹದ ರಜೆಯನ್ನು ಮಂಜೂರಿಸುವುದು.
16.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಿಬ್ಬಂದಿ ಶಾಖೆ-4

ಶ್ರೀಮತಿ ಸುಮಂಗಲಾ ನಾಯಕ, ಪ್ರದಸ.,

1.	ಸಿಪಿಸಿ, ಮಪಿಸಿ ರವರ ಎಲ್ಲಾ ತರದ ರಜೆಗಳ ಕಡತ ನಿರ್ವಹಿಸುವುದು
2.	ಸಿಪಿಸಿ, ಮಪಿಸಿ ರವರ ಸೇವಾ ಪುಸ್ತಕಗಳನ್ನು ನಿರ್ವಹಿಸುವುದು ಹಾಗೂ ಸೇವಾ ಪುಸ್ತಕದಲ್ಲಿ ಬಹುಮಾನ ವಾರ್ಷಿಕ ವೇತನ ಇತ್ಯಾದಿ ವಿವರಗಳನ್ನು ನಮೂದಿಸುವುದು
3.	ಸಿಪಿಸಿ, ಮಪಿಸಿ ರವರ ಖಾಯಂಪೂರ್ವ ಅವಧಿಯ ಕಡತವನ್ನು ನಿರ್ವಹಿಸುವುದು
4.	ಸಿಪಿಸಿ, ಮಪಿಸಿ ರವರ ಟೈಂ ಬಾಂಡ, ಗಳ ಕಡತಗಳನ್ನು ನಿರ್ವಹಿಸುವುದು
5.	ಸಿಪಿಸಿ, ಮಪಿಸಿ ರವರ 15 ವರ್ಷ ಹಾಗೂ 20 ವರ್ಷಗಳನ್ನು ಪೂರೈಸಿದವರ ವಿಶೇಷ ವೇತನದ ಬಡ್ತಿ ಕಡತವನ್ನು ನಿರ್ವಹಿಸುವುದು
6.	ಸಿಪಿಸಿ ರವರ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರಿಸುವುದು, ವಾಚ್ ರಿಜಿಸ್ಟರ್ ನಿರ್ವಹಿಸುವುದು
7.	ಸಿಪಿಸಿ ಮಪಿಸಿ ರವರ ಅದ್ಯರ್ಪಣ ವೇತನದ ಕಡತವನ್ನು ನಿರ್ವಹಿಸುವುದು
8.	ಹೊಸದಾಗಿ ನೇಮಕಗೊಂಡ ಸಿಪಿಸಿ, ಮಪಿಸಿ ರವರುಗಳ ಸೇವಾ ಪುಸ್ತಕಗಳನ್ನು ತೆರೆಯುವುದು.
9.	ಹೆಚ್‌ಟಿಸಿ/ಎಲ್‌ಟಿಸಿ ಯ ಸೌಲಭ್ಯವನ್ನು ಸಿಪಿಸಿಗಳಿಗೆ ಮಂಜೂರಿಸುವುದು
10.	ಈ ಮೇಲಿನ ಅಧಿಕಾರಿ ಸಿಬ್ಬಂದಿಗಳಿಗೆ ಉನ್ನತ ಹುದ್ದೆಯ ನೇಮಕಾತಿಗಾಗಿ ಅನುಮತಿ ನೀಡುವುದು
11.	ಸಿಪಿಸಿ ರವರುಗಳಿಗೆ ಸೇವಾ ಪ್ರಮಾಣ ಪತ್ರ ನೀಡುವ ಕಡತ ನಿರ್ವಹಿಸುವುದು
12.	ಸಿಪಿಸಿಗಳ ಹೆಸರು ಬದಲಾವಣೆ ಕುರಿತು ಮಂಡಿಸುವುದು.
13.	ಕನ್ನಡ ಬಾಷಾ ಪರೀಕ್ಷೆ ಪಾಸು ಮಾಡುವುದರಿಂದ ವಿನಾಯತಿ ಕುರಿತು ಕಡತ ನಿರ್ವಹಿಸುವುದು
14.	ವೈಯಕ್ತಿಕ ವೇತನ ಮಂಜೂರಿಸುವುದು
15.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಿಬ್ಬಂದಿ ಶಾಖೆ-5

ಶ್ರೀ ಆನಂದ ನಾಯ್ಕ, ದ್ವಿದಸ.,

1.	ಎಲ್ಲಾ ಅಧಿಕಾರಿ ಸಿಬ್ಬಂದಿಗಳ ಸ್ವ ಇಚ್ಚಾ ನಿವೃತ್ತಿ, ಸೇವಾ ನಿವೃತ್ತಿ, ಸುಪರನ್ಯೂಎಷನ್ ಮತ್ತು ಮೃತ ಪಟ್ಟ ಸಿಬ್ಬಂದಿಗಳ ಪಿಂಚಣಿ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವುದು.

2.	ಮೃತ ಪಟ್ಟ ಸಿಬ್ಬಂದಿಗಳ ಕುರಿತು ಪತ್ರ ವ್ಯವಹಾರ ಮಾಡುವುದು.
3.	ಪಿಂಚಣಿ ಕುರಿತು ಮಾಸಿಕ ತಖ್ತೆ ತಯಾರಿಸುವುದು
4.	ರೂಲ್ ಕೆ.ಸಿ.ಎಸ್.ಆರ್.285 (4)ರ ಪ್ರಕಾರ ಪತ್ರ ವ್ಯವಹಾರ ಮಾಡುವುದು ಹಾಗೂ ಅರ್ಧವಾರ್ಷಿಕ ತಖ್ತೆ ತಯಾರಿಸುವುದು
5.	ಮಾನ್ಯ ಕೆ.ಎ.ಟಿ ಯಿಂದ ಬಂದಂತಹ ಅರ್ಜಿಗಳ ಕುರಿತು ಪತ್ರ ವ್ಯವಹಾರ ಮಾಡುವುದು
6.	ಎ.ಪಿಸಿ/ಸಿಪಿಸಿ/ಮಪಿಸಿ ರವರ ರಿಕ್ರೂಟ್‌ಮೇಂಟ ಕಡತವನ್ನು ನಿರ್ವಹಿಸುವುದು
7.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಿಬ್ಬಂದಿ ಶಾಖೆ-6

ಶ್ರೀ ಜಗದೀಶ ತಿಗಡಿ , ದ್ವಿದಸ.,

1.	ಎಪಿಸಿ, ಎಹೆಚ್‌ಸಿ, ಎಆರ್‌ಎಸ್‌ಐ., ಆರ್‌ಎಸ್‌ಐ., ಆರ್.ಪಿ.ಐ. ರವರ ಎಲ್ಲಾ ತರದ ರಜೆಗಳ ಕಡತ ನಿರ್ವಹಿಸುವುದು
2.	ಅಧಿಕಾರಿ ಸಿಬ್ಬಂದಿಗಳ ಖಾಯಂಪೂರ್ವ ಅವಧಿಯ ಕಡತವನ್ನು ನಿರ್ವಹಿಸುವುದು
3.	ಈ ಮೇಲೆ ನಮೂದಿಸಿದ ಅಧಿಕಾರಿ ಸಿಬ್ಬಂದಿಗಳ ವೇತನ ನಿಗಧಿ ಪಡಿಸುವುದು
4.	ಎಪಿಸಿ, ಎಹೆಚ್‌ಸಿ, ಎಆರ್‌ಎಸ್‌ಐ., ಆರ್‌ಎಸ್‌ಐ., ಆರ್.ಪಿ.ಐ. ರವರ ಟೈಂ ಬಾಂಡಗಳ ಕಡತಗಳನ್ನು ನಿರ್ವಹಿಸುವುದು
5.	ಎಪಿಸಿ, ಎಹೆಚ್‌ಸಿ, ಎಆರ್‌ಎಸ್‌ಐ., ಆರ್‌ಎಸ್‌ಐ., ಆರ್.ಪಿ.ಐ. ರವರ 15 ವರ್ಷ ಹಾಗೂ 20 ವರ್ಷಗಳನ್ನು ಪೂರೈಸಿದವರ ವಿಶೇಷ ವೇತನದ ಭಡ್ತಿ ಕಡತವನ್ನು ನಿರ್ವಹಿಸುವುದು
6.	ಈ ಮೇಲೆ ನಮೂದಿಸಿದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ ಮಂಜೂರಿಸುವುದು
7.	ಎಪಿಸಿ, ಎಹೆಚ್‌ಸಿ, ಎಆರ್‌ಎಸ್‌ಐ., ಆರ್‌ಎಸ್‌ಐ., ಆರ್.ಪಿ.ಐ. ರವರ ಅದ್ಯರ್ಪಣ ವೇತನದ ಕಡತವನ್ನು ನಿರ್ವಹಿಸುವುದು
8.	ಹೊಸದಾಗಿ ನೇಮಕಗೊಂಡ ಎಪಿಸಿ, ರವರುಗಳ ಸೇವಾ ಪುಸ್ತಕಗಳನ್ನು ತೆರೆಯುವುದು.
9.	ಹೆಚ್‌ಟಿಸಿ/ಎಲ್‌ಟಿಸಿ ಯನ್ನು ಈ ಮೇಲಿನ ಅಧಿಕಾರಿ ಸಿಬ್ಬಂದಿಗಳಿಗೆ ಮಂಜೂರಿಸುವುದು
10.	ಅಧಿಕಾರಿ ಸಿಬ್ಬಂದಿಗಳು ಉನ್ನತ ಹುದ್ದೆಗೆ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಕುರಿತು ಮಂಡಿಸುವುದು.
11.	ಸೇವಾ ಪ್ರಮಾಣ ಪತ್ರದ ಅವಶ್ಯವಿದ್ದ ಸಿಬ್ಬಂದಿ/ಅಧಿಕಾರಿಗಳಿಗೆ ಪ್ರಮಾಣ ಪತ್ರ ನೀಡಲು ಮಂಡಿಸುವುವದು
12.	ಎ.ಪಿಸಿ ರವರ ಖಾಯಂಪೂರ್ವ ಅವಧಿಯ ಕಡತವನ್ನು ನಿರ್ವಹಿಸುವುದು
13.	ಅಧಿಕಾರಿ ಸಿಬ್ಬಂದಿಗಳ ಹೆಸರು ಬದಲಾವಣೆ ಕುರಿತು ಮಂಡಿಸುವುದು.
14.	ಮಾನ್ಯ ಕೆ.ಎ.ಟಿ ಯಿಂದ ಬಂದಂತಹ ಅರ್ಜಿಗಳ ಕುರಿತು ಪತ್ರ ವ್ಯವಹಾರ ಮಾಡುವುದು
15.	ಕನ್ನಡ ಬಾಷಾ ಪರೀಕ್ಷೆ ಪಾಸು ಮಾಡುವುದರಿಂದ ವಿನಾಯತಿ ಕುರಿತು ಕಡತ ನಿರ್ವಹಿಸುವುದು
16.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಕಟ್ಟಡ ಶಾಖೆ

ಶ್ರೀ ಜಗದೀಶ ತಿಗಡಿ, ದ್ವಿ.ದ.ಸ. (ಹೆಚ್ಚುವರಿ ಪ್ರಭಾರ)

1.	ವಸತಿ ಮತ್ತು ವಸತಿಯೇತರ ಸರಕಾರಿ ಕಟ್ಟಡಗಳ ನಿರ್ಮಾಣದ ಕುರಿತು ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು
2.	ವಸತಿ ಮತ್ತು ವಸತಿಯೇತರ ಹಳೆಯ ಕಟ್ಟಡಗಳ ದುರಸ್ಥಿಗೆ ಸಂಬಂಧಿಸಿದಂತೆ ಕಡತಗಳನ್ನು ನಿರ್ವಹಿಸುವುದು
3.	ಬಾಡಿಗೆ ಕಟ್ಟಡಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ನಿರ್ವಹಿಸುವುದು
4.	ಆಮೀನು ಲಭ್ಯತೆಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು
5.	ಪೋಲಿಸ್ ವಸತಿಗೃಹಗಳ ವಿತರಣೆಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು.
6.	ವಸತಿ ಮತ್ತು ವಸತಿಯೇತರ ಕಟ್ಟಡಗಳ ರಿಜಿಸ್ಟರ್ ನಿರ್ವಹಿಸುವುದು
7.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ

ಲೆಕ್ಕ ಪತ್ರ ಶಾಖೆ-1

ಶ್ರೀಮತಿ ಸುಧಾ ಶೆಟ್ಟಿ, ಪ್ರ.ದ.ಸ.

1.	ಜಿಲ್ಲಾ ಪೋಲಿಸ್ ಕಛೇರಿಯ ನಗದು ಪುಸ್ತಕ ನಿರ್ವಹಿಸುವುದು ಮತ್ತು ಮೇಲಾಧಿಕಾರಿಗಳ ಸಹಿಗಾಗಿ ಮಂಡಿಸುವುದು

2.	ಪ್ರತಿ ತಿಂಗಳು ವಿವಿಧ ಪೋಲಿಸ್ ಠಾಣೆಯ ಸಿಬ್ಬಂದಿಯವರ ವೇತನದ ಚೆಕ್‌ನ್ನು ಸಂಬಂಧಪಟ್ಟವರಿಗೆ ಕಳುಹಿಸುವುದು
3.	ಪೋಲಿಸ್ ಸಿಬ್ಬಂದಿಗಳ ಪ್ರಯಾಣ ಭತ್ಯೆ, ವೇತನದ ಅರಿಯರ್ಸ್, ವಾರ್ಷಿಕ ವೇತನ ಬಡ್ತಿಯ ಅರಿಯರ್ಸ್ ಮುಂತಾದವುಗಳನ್ನು ಸಂಬಂದಪಟ್ಟ ಪೋಲಿಸ್ ಠಾಣೆಗಳಿಗೆ ಕಳುಹಿಸುವುದು
4.	ವಿವಿಧ ಸಂಸ್ಥೆ/ ವ್ಯಾಪಾರಸ್ಥರು /ಖಾಸಗಿ ಸಂಸ್ಥೆಗಳಿಗೆ ಡಿಡಿ ಮುಖಾಂತರ ಹಣ ಬಟವಡೆ ಮಾಡುವುದು
5.	ಸಾಮಾನ್ಯ ರಸೀದಿ ಪುಸ್ತಕದ ಕಡತ ನಿರ್ವಹಣೆ
6.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-2

ಶ್ರೀ ಪ್ರಮೋದ ಎಸ್ ನಾಯ್ಕ, ಪ್ರ.ದ.ಸ.

1.	ಜಿಲ್ಲೆಯ ಎಲ್ಲಾ ದರ್ಜೆಯ ಅಧಿಕಾರಿ/ಸಿಬ್ಬಂದಿಯವರ ಮಾಸಿಕ ವೇತನ ಬಿಲ್ಲನ್ನು ತಯಾರಿಸುವುದು
2.	ಪೋಲಿಸ್ ಅಧಿಕಾರಿ/ಸಿಬ್ಬಂದಿ ಯವರ 15/30 ಪತ್ರಾಂಕಿತ ರಜಾ ವೇತನ ಬಿಲ್ಲನ್ನು ತಯಾರಿಸುವುದು
3.	ಭಾರತೀಯ ಜೀವ ವಿಮೆ ಮತ್ತು ಕರ್ನಾಟಕ ಸರಕಾರ ಜೀವ ವಿಮೆಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು.
4.	ಪೋಲಿಸ್ ಸಿಬ್ಬಂದಿಗಳ ವೇತನ ಪ್ರಮಾಣ ಪತ್ರ ಹಾಗೂ ಅಂತಿಮ ವೇತನ ಪ್ರಮಾಣ ಪತ್ರವನ್ನು ನೀಡುವುದು
5.	ಎಲ್ಲಾ ಅಧಿಕಾರಿ /ಸಿಬ್ಬಂಧಿಗಳ ಆದಾಯ ತೆರಿಗೆ ಕಡತಗಳನ್ನು ನಿರ್ವಹಿಸುವುದು
6.	ಗಣೇಶಗುಡು ಹಾಗೂ ಅಂಬಿಕಾನಗರದಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಲೆಂಟ್ ಕಡತ ನಿರ್ವಹಣೆ
7.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-3, ಸಾದಿಲ್ವಾರು ವೆಚ್ಚ

ಸಂತೋಷ ಪತ್ತಾರ, ಪ್ರ.ದ.ಸ.

1.	ಜಿಲ್ಲೆಯ ಎಲ್ಲಾ ಪೋಲಿಸ್ ಕಛೇರಿಗೆ ಸಂಬಂಧಿಸಿದ ದೂರವಾಣಿ, ವಿದ್ಯುತ್‌ಶಕ್ತಿ ಬಿಲ್ಲುಗಳನ್ನು ತಯಾರಿಸುವುದು ಮತ್ತು ವಾಚ ರಿಜಿಸ್ಟರ್ ನಿರ್ವಹಿಸುವುದು
2.	ಪ್ರತಿ ತಿಂಗಳು ಅಂಶಕಾಲಿಕ ಜಾಡಮಾಲಿಗಳ ಸಂಬಳದ ಬಿಲ್ಲು ತಯಾರಿಸುವುದು
3.	ಆಹಾರ ಬತ್ಯೆಯ ಬಿಲ್ಲುಗಳನ್ನು ತಯಾರಿಸುವುದು
4.	ಶ್ವಾನ ದಳದ ಆಹಾರ ಭತ್ಯೆ, ಸ್ವಚ್ಚತಾ ಸಾಮಗ್ರಿ ಮುಂತಾದವುಗಳ ಬಿಲ್ಲನ್ನು ತಯಾರಿಸುವುದು.
5.	ಪೋಲಿಸ್ ಠಾಣೆಗಳ ಪ್ರತಿ ತಿಂಗಳ ಸಾದಿಲ್ವಾರು ಬಿಲ್ಲುಗಳನ್ನು ತಯಾರಿಸುವುದು
6.	ಸಂಗ್ರಹ ಶಾಖೆಯಿಂದ ಸ್ವೀಕೃತವಾದ ಎಲ್ಲಾ ಬಿಲ್ಲುಗಳನ್ನು ತಯಾರಿಸುವುದು
7.	ಎಲ್ಲಾ ತರಹದ ಡಿಸಿ ಬಿಲ್ಲ/ ಎ.ಸಿ ಬಿಲ್ಲ ಗಳನ್ನು ತಯಾರಿಸುವುದು
8.	ಪೋಲಿಸ್ ಅಧಿಕಾರಿ/ ಸಿಬ್ಬಂದಿಯವರಿಗೆ ಮಂಜೂರಿಸಲಾದ ಬಹುಮಾನಗಳ ಬಿಲ್ಲನ್ನು ತಯಾರಿಸುವುದು
9.	ಪೋಲಿಸ್ ಸಿಬ್ಬಂದಿಗಳ ವಾರದ ಬಿಡುವಿನ ಭತ್ಯೆ ತಯಾರಿಸುವುದು
10.	ತನಿಖಾ ವೆಚ್ಚದ ಬಿಲ್ಲುಗಳನ್ನು ತಯಾರಿಸುವುದು
11.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-4

ಶ್ರೀಮತಿ ಗೀತಾ ಕೊಳಂಮಕರ, ದ್ವಿ.ದ.ಸ.

1.	ಆರೋಗ್ಯ ಭಾಗ್ಯ ಯೋಜನೆಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ನಿರ್ವಹಿಸುವುದು ಮತ್ತು ಬಿಲ್ಲುಗಳನ್ನು ತಯಾರಿಸುವುದು
2.	ಪೋಲಿಸ್ ಕಲ್ಯಾಣ ನಿಧಿಯ ನಗದು ಪುಸ್ತಕ ನಿರ್ವಹಿಸುವುದು ಮತ್ತು ಕಲ್ಯಾಣ ನಿಧಿಗೆ ಸಂಬಂಧಿಸಿದ ಬ್ಯಾಂಕ್ ಖಾತೆ ಹಾಗೂ ಇತರೆ ಎಲ್ಲಾ ಪತ್ರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ನಿರ್ವಹಿಸುವುದು
3.	ನಿವೃತ್ತ ಪೋಲಿಸ್ ಅಧಿಕಾರಿಗಳ ಕ್ಷೇಮ ನಿಧಿ ನಗದು ಪುಸ್ತಕ ನಿರ್ವಹಿಸುವುದು ಮತ್ತು ಈ ಬಗ್ಗೆ ಸಂಬಂಧಿಸಿದ ಎಲ್ಲಾ ಕಡತಗಳನ್ನು ನಿರ್ವಹಿಸುವುದು ಹಾಗೂ ಪತ್ರ ವ್ಯವಹಾರ ಮಾಡುವುದು
4.	ಪೋಲಿಸ್ ಕ್ರೀಡಾ ನಿಧಿಗೆ ಸಂಬಂಧಿಸಿದ ನಗದು ಪುಸ್ತಕ ಮತ್ತು ಇತರ ಕಡತಗಳನ್ನು ನಿರ್ವಹಿಸುವುದು
5.	ಪೋಲಿಸ್ ಸಿಬ್ಬಂದಿಗಳ ಉಚಿತ ಪಡಿತರ ಚೀಟಿಗೆ ಸಂಬಂಧಿಸಿದ ಬಿಲ್ಲುಗಳನ್ನು ತಯಾರಿಸುವುದು ಹಾಗೂ ಈ ಬಗ್ಗೆ ಪತ್ರ ವ್ಯವಹಾರ ಮಾಡುವುದು

6.	ಪೋಲಿಸ್ ಸಿಬ್ಬಂಧಿಗಳ ವೈದ್ಯಕೀಯ ವೆಚ್ಚ ಮರು ಪಾವತಿ ಬಿಲ್ಲನ್ನು ತಯಾರಿಸುವುದು. ಈ ಕುರಿತು ಪತ್ರ ವ್ಯವಹಾರ ನಡೆಸುವುದು .
7.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-5 ಪ್ರಯಾಣ ಭತ್ಯೆ ಬಿಲ್ಲು

ಶ್ರೀ ಆರ್.ಪಿ ನಾಯ್ಕ, ಪ್ರ,ದ,ಸ,

1.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳ ಪ್ರಯಾಣ ಭತ್ಯೆ ಬಿಲ್ಲನ್ನು ಪರಿಶೀಲಿಸಿ ಮಂಜೂರಾತಿ ಪಡೆದು ಬಿಲ್ಲನ್ನು ತಯಾರಿಸುವುದು.
2.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳ ಹೆಚ್‌ಟಿಸಿ/ಎಲ್‌ಟಿಸಿ ಬಿಲ್ಲನ್ನು ಪರಿಶೀಲಿಸಿ ಮಂಜೂರಾತಿ ಪಡೆದು ಬಿಲ್ಲನ್ನು ತಯಾರಿಸುವುದು.
3.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳ ಪ್ರಯಾಣ ಭತ್ಯೆ ಮುಂಗಡ ಬಿಲ್ಲನ್ನು ಮಂಜೂರಾತಿ ಪಡೆದು ಬಿಲ್ಲನ್ನು ತಯಾರಿಸುವುದು ಹಾಗೂ ಈ ಬಗ್ಗೆ ವಾಚ ರಿಜಿಸ್ಟರ ನಿರ್ವಹಿಸುವುದು
4.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳು ಉಪಯೋಗಿಸಿದ ಬಸ್ಸ ವಾರಂಟ ಕಡತ ನಿರ್ವಹಿಸುವುದು
5.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-5, ಮೋಟಾರು ವಾಹನ ವಿಭಾಗ

ಶ್ರೀಮತಿ ಜಯಶ್ರೀ ನಾಗೇಕರ

1.	ಜಿಲ್ಲೆಯ ಎಲ್ಲಾ ಪೋಲಿಸ್ ವಾಹನಗಳ ನಿರ್ವಹಣೆಯ ಕಡತ ನಿರ್ವಹಿಸುವುದು.
2.	ಜಿಲ್ಲೆಯ ಎಲ್ಲಾ ಪೋಲಿಸ್ ವಾಹನಗಳ ದುರಸ್ತಿ ಕುರಿತು ಬಿಲ್ಲುಗಳನ್ನು ತಯಾರಿಸುವುದು.
3.	ಜಿಲ್ಲೆಯ ಎಲ್ಲಾ ಪೋಲಿಸ್ ವಾಹನಗಳಿಗೆ ಸಂಬಂಧಿಸಿದ ಇಂಧನ ಬಿಲ್ಲುಗಳನ್ನು ತಯಾರಿಸುವುದು.
4.	ಜಿಲ್ಲೆಯ ಎಲ್ಲಾ ಪೋಲಿಸ್ ವಾಹನಗಳ ಮಾಸಿಕ ದುರಸ್ತಿ ವೆಚ್ಚ ವಿವರಣಾ ಪಟ್ಟಿಯನ್ನು ತಯಾರಿಸುವುದು.
5.	ಜಿಲ್ಲೆಯ ಎಲ್ಲಾ ವಿದಧ ಪೋಲಿಸ್ ವಾಹನಗಳಿಗೆ ಟಾಯರ್, ಟ್ಯೆಬ, ಬ್ಯಾಟರಿ ಖರೀದಿ ಕಡತ ನಿರ್ವಹಣೆ
6.	ಟಾಯರ ರಿಟ್ರೇಡಿಂಗ್, ಕುರಿತು ಬಿಲ್ಲುಗಳನ್ನು ತಯಾರಿಸುವುದು.
7.	ಜಿಲ್ಲೆಯ ಎಲ್ಲಾ ಪೋಲೀಸ್ ವಾಹನಗಳ ಕೆ.ಜಿ.ಐ.ಡಿ ಕಂತನ್ನು ನಿಗಧಿತ ಸಮಯದಲ್ಲಿ ಮಂಜೂರಿಸಿ ಭರಣ ಮಾಡುವುದು ಮತ್ತು ಈ ಕುರಿತು ವಾಚ ರಿಜಿಸ್ಟರ್ ನಿರ್ವಹಿಸುವುದು.
8.	ಪೋಲಿಸ್ ವಾಹನಗಳ ಅಪಘಾತಕ್ಕೆ ಸಂಬಂಧಿಸಿದ ಕಡತಗಳ ನಿರ್ವಹಣೆ
9.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-6

ಶ್ರೀ ವಿ.ಎಸ್. ಪಟಗಾರ, ದ್ವಿದ.ಸ.

1.	ಎಲ್ಲಾ ಪೋಲೀಸ್ ಠಾಣೆಗಳ ಮತ್ತು ಲಿಪಿಕ ಸಿಬ್ಬಂದಿ ವರ್ಗದವರಿಗೆ ಹಬ್ಬದ ಮುಂಗಡ ಮಂಜೂರಿಸಿ ನೀಡುವುದು ಹಾಗೂ ಈ ಬಗ್ಗೆ ವಾಚ್ ರಿಜಿಸ್ಟರ್‌ನ್ನು ನಿರ್ವಹಿಸುವುದು
2.	ಜಿಲ್ಲೆಯ ಪೋಲಿಸ್ ಸಿಬ್ಬಂದಿಗಳಿಗೆ ಗೃಹ ನಿರ್ಮಾಣ ಮುಂಗಡ ಹಾಗೂ ಮೋಟಾರು ಸೈಕಲ್ ಮುಂಗಡ ಇತ್ಯಾದಿಗಳ ಕಡತ ನಿರ್ವಹಣೆ ಹಾಗೂ ಈ ಬಗ್ಗೆ ವಾಚ ರಿಜಿಸ್ಟರ್ ನಿರ್ವಹಿಸುವುದು.
3.	ಜಿಲ್ಲೆಯ ಎಲ್ಲಾ ಪೋಲಿಸ್ ಸಿಬ್ಬಂದಿಗಳ ಇ.ಜಿ.ಐ.ಎಸ್ ಬಿಲ್ಲು ಮಂಜೂರಿಸಿ ತಯಾರಿಸುವುದು.
4.	ಜಿಲ್ಲೆಯ ಎಲ್ಲಾ ಪೋಲಿಸ್ ಸಿಬ್ಬಂದಿಗಳ ಜಿ.ಪಿ.ಎಫ್ ಬಿಲ್ಲು ಮಂಜೂರಿಸಿ ತಯಾರಿಸುವುದು.
5.	ಜಿಲ್ಲೆಯ ಎಲ್ಲಾ ಪೋಲಿಸ್ ಸಿಬ್ಬಂದಿಗಳ ಕೆ.ಜಿ.ಐ.ಡಿ. ಬಿಲ್ಲು ಮಂಜೂರಿಸಿ ತಯಾರಿಸುವುದು.
6.	ಮೃತಪಟ್ಟ ಪೋಲಿಸ್ ಸಿಬ್ಬಂದಿಗಳ ವಿಮಾ ಬಿಲ್ಲು ತಯಾರಿಸುವುದು.
7.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಲೆಕ್ಕ ಪತ್ರ ಶಾಖೆ-7, (ಪೂರಕ ಸಂಬಳ ಬಿಲ್ಲು)

ಶ್ರೀ ಎ. ಡಿ. ನಾಯ್ಕ., ದ್ವಿದಸ.

1.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳ 30 ದಿನಗಳ ಗಳಿಕೆ ರಜೆಯ ಅಧ್ಯರ್ಪಣ ವೇತನ ಬಿಲ್ಲು ತಯಾರಿಸುವುದು.
2.	ಜಿಲ್ಲೆಯ ಎಲ್ಲಾ ಸಿಬ್ಬಂದಿ/ಅಧಿಕಾರಿಗಳ ವಾರ್ಷಿಕ ವೇತನ ಬಡ್ತಿ ಅರಿಯರ್ಸ್, ಮನೆಭಾಡಿಗೆ ಭತ್ಯೆ ಅರಿಯರ್ಸ್ ತುಟ್ಟಿ ಭತ್ಯೆ ಅರಿಯರ್ಸ್ ಬಿಲ್ಲುಗಳನ್ನು ತಯಾರಿಸುವುದು.
3.	ಆಯ್ಕೆ ಕಾಲಿಕ ವೇತನ ಬಡ್ತಿ, ಸ್ವಯಂ ಚಾಲಿತ ವೇತನ ಬಡ್ತಿ ಅರಿಯರ್ಸ್ ಬಿಲ್ಲನ್ನು ತಯಾರಿಸುವುದು

4.	20 ವರ್ಷದ ಹೆಚ್ಚುವರಿ ವೇತನ ಬಡ್ತಿ ಹಾಗೂ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಪೂರಕ ಸಂಬಳದ ಬಿಲ್ಲನ್ನು ತಯಾರಿಸುವುದು.
5.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಾಮಾನ್ಯ ವಿಭಾಗ: 1

ಶ್ರೀಮತಿ ಮಂಜುಳಾ ಗೌಡ, ಪ್ರ.ದ.ಸ.

1.	ಮೇಲಾಧಿಕಾರಿಯವರಿಂದ ಸ್ವೀಕೃತವಾದ/ಕುಂದು ಕೊರತೆ ವಿಭಾಗದಿಂದ/ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಂದ ಸ್ವೀಕೃತವಾದ ಎಲ್ಲಾ ಅರ್ಜಿಗಳಿಗೆ ಕುರಿತಂತೆ ವಿಚಾರಣಾ ವರದಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸುವುದು.
2.	ಪೋಲಿಸ್ ಪ್ರಧಾನ ಕಛೇರಿಯ ಕುಂದುಕೊರತೆ ವಿಭಾಗದಿಂದ ಸ್ವೀಕೃತವಾದ ಅರ್ಜಿಗಳ ಕಡತ ನಿರ್ವಹಿಸುವುದು.
3.	ವಲಯ ಕಛೇರಿ, ಪ್ರಧಾನ ಕಛೇರಿ ಹಾಗೂ ಇತರೆ ಘಟಕಗಳಿಂದ ಸ್ವೀಕೃತವಾದ ಅರ್ಜಿಗಳು
4.	ಆನತಾದರ್ಶನದ ಅರ್ಜಿಗಳು
5.	ಮಾನವ ಹಕ್ಕು ಅಯೋಗದಿಂದ ಸ್ವೀಕೃತವಾಗಿರುವ ಅರ್ಜಿಗಳು
6.	ಸರಕಾರದಿಂದ ಸ್ವೀಕೃತವಾದ ಅರ್ಜಿಗಳು
7.	ಮುಖ್ಯ ಮಂತ್ರಿ ಹಾಗೂ ಜಿಲ್ಲಾ ಮಂತ್ರಿ ಇವರಿಂದ ಸ್ವೀಕೃತವಾದ ಅರ್ಜಿಗಳು
8.	ಎಂ.ಎಲ್‌ಎ. ಎಂಪಿ ರವರಿಂದ ಸ್ವೀಕೃತವಾದ ಅರ್ಜಿಗಳ ಕುರಿತಂತೆ ಪ್ರತ್ಯೇಕವಾದ ರಜಿಸ್ಟರ್‌ಗಳನ್ನು ನಿರ್ವಹಿಸುವುದು.
9.	ಮಾಹಿತಿ ಹಕ್ಕು ಅಧಿನಿಯಮ 2005 ನೇದಕ್ಕೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು.
10.	ಸರಕಾರ, ಸಾರ್ವಜನಿಕ ಹಾಗೂ ಮಾನವ ಹಕ್ಕು ಆಯೋಗಕ್ಕೆ ಸಂಬಂಧಿಸಿದ ಅರ್ಜಿಗಳ ಮಾಸಿಕ ವಿವರಣಾ ಪಟ್ಟಿ ತಯಾರಿಸುವುದು
11.	ಪೋಲಿಸ್ ಸಿಬ್ಬಂಧಿ ಹಾಗೂ ಅಧಿಕಾರಿಗಳ ತರಬೇತಿಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು
12.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಸಾಮಾನ್ಯ ವಿಭಾಗ: 2

ರವಾನೆ ಶಾಖೆ

ಶ್ರೀಮತಿ ಸುಧಾ ನಾಯ್ಕ, ದ್ವಿ.ದ.ಸ.

1.	ಸ್ಥಳೀಯ ಸಾರ್ವಜನಿಕರಿಂದ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳಿಂದ ಸ್ವೀಕೃತವಾದ ಅರ್ಜಿಗಳಿಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು
2.	ಸರಕಾರದ ಹಣವನ್ನು ಸಾಗಿಸಲು ಬೆಂಗಾವಲಿಗೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು
3.	ಕ್ಷಯರೋಗ ನಿವಾರಣೆ, ಸಂಘನಿಧಿ, ಕೋಮು ಸೌಹಾರ್ದತೆ, ಸಾಪ್ತಾಹಿಕ ನಿಧಿ ಹಾಗೂ ಸೈನಿಕ ಕಲ್ಯಾಣ ಧ್ವಜ ಮಾರಾಟ ಇವುಗಳಿಂದ ಬಂದ ಹಣಕ್ಕೆ ಸಂಬಂಧಿಸಿದ ಕಡತಗಳನ್ನು ನಿರ್ವಹಿಸುವುದು

ಸಾಮಾನ್ಯ ವಿಭಾಗ: 2

ಶ್ರೀಮತಿ ಸುಧಾ ನಾಯ್ಕ, ದ್ವಿ.ದ.ಸ. (ಹೆಚ್ಚುವರಿ ಪ್ರಭಾರ)

1.	ಕಛೇರಿಯಿಂದ ಹೊರಹೋಗುವ ಎಲ್ಲಾ ಟಪಾಲುಗಳನ್ನು ರವಾನೆ ರಿಜಿಸ್ಟರ್‌ನಲ್ಲಿ ಸರಿಯಾಗಿ ದಾಖಲಿಸಿ ಕಳುಹಿಸುವುದು
2.	ಪ್ರತಿ ದಿನದ ಸ್ಟಾಂಪ್ ರಜಿಸ್ಟರ್ ನಿರ್ವಹಿಸುವುದು
3.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಒಳಬಂದ ಶಾಖೆ (ಇನ್‌ವರ್ಡ ಸೆಕ್ಷನ್)

ಶ್ರೀ ರಮೇಶ ಆರ್ ಆಗೇರ, ದ್ವಿ.ದ.ಸ. ಹಾಗೂ ಶ್ರೀ ತುಕಾರಾಮ ಡಿ. ಪಾಟೀಲ್, ದ್ವಿ.ದ.ಸ.

1.	ಮೇಲಾಧಿಕಾರಿಗಳಿಂದ /ಇತರೆ ಇಲಾಖೆಗಳಿಂದ /ಸಾರ್ವಜನಿಕರಿಂದ ಸ್ವೀಕೃತವಾಗಿರುವ ಎಲ್ಲಾ ಟಪಾಲು, ಸಾಮಾನ್ಯ ಟಪಾಲು ಫ್ಯಾಕ್ಸ್ ಸಂದೇಶ, ಇ-ಮೇಲ್, ಸಂದೇಶ ಇವೆಲ್ಲವುಗಳನ್ನು ಕ್ರಮಬದ್ಧವಾಗಿ ಇನ್‌ವರ್ಡ ರಜಿಸ್ಟರ್‌ನಲ್ಲಿ ನಮೂದಿಸಿ ನಿರ್ವಹಿಸುವುದು
2.	ಎಲ್ಲ ಕಡೆಗಳಿಂದ ಸ್ವೀಕೃತವಾಗಿರುವ ಟಪಾಲುಗಳನ್ನು ಸಂಬಂಧಪಟ್ಟ ಬೇರೆ ಬೇರೆ ಟಪಾಲುಗಳಲ್ಲಿ ನಮೂದಿಸುವುದು.
3.	ಸ್ವೀಕೃತವಾಗಿರುವ ಟಪಾಲುಗಳನ್ನು ಪ್ರತ್ಯೇಕವಾದ ಟಪಾಲು ಪುಸ್ತಕಗಳಲ್ಲಿ ನಮೂದಿಸಿ ವಿಷಯ ನಿರ್ವಾಹಕರಿಗೆ ಹಸ್ತಾಂತರಿಸಿ ಅವರಿಂದ ಸ್ವೀಕೃತಿ ಪಡೆಯುವುದು.
4.	ಮೇಲಾಧಿಕಾರಿಗಳು ನೀಡಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವುದು.

ಬೆರಳಚ್ಚು ವಿಭಾಗ-1

ಶ್ರೀ ನಾಗೇಂದ್ರ ಗುರವ

1.	ಸಿಬ್ಬಂದಿ ಶಾಖೆಗೆ ಸಂಬಂಧಿಸಿದ ಎಲ್ಲಾ ವಿಷಯ ನಿರ್ವಾಹಕರು ನೀಡಿರುವ ಕರಡು ಪ್ರತಿಗಳನ್ನು ಬೆರಳಚ್ಚು ಮಾಡಿಸಿ/ ಗಣಕೀಕರಣ ಮಾಡಿಸಿ ಶುದ್ಧ ಪ್ರತಿ ತಯಾರಿಸುವುದು ಮತ್ತು ಅವುಗಳನ್ನು ವಿಷಯ ನಿರ್ವಾಹಕರಿಗೆ ಸಕಾಲದಲ್ಲಿ ನೀಡುವುದು
2.	ಶುದ್ಧ ಪ್ರತಿಗಳನ್ನು ತಯಾರಿಸಿ ವಿಷಯ ನಿರ್ವಾಹಕರಿಗೆ ನೀಡಿದ ಬಗ್ಗೆ ರಿಜಿಸ್ಟರ್ ನಿರ್ವಹಿಸುವುದು

ಬೆರಳಚ್ಚು ವಿಭಾಗ-2

ಶ್ರೀ ದೀಪಕ ಎಂ. ನಾಯ್ಕ.

1.	ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಎಲ್ಲಾ ವಿಷಯ ನಿರ್ವಾಹಕರು ನೀಡಿರುವ ಕರಡು ಪ್ರತಿಗಳನ್ನು ಬೆರಳಚ್ಚು ಮಾಡಿಸಿ/ ಗಣಕೀಕರಣ ಮಾಡಿಸಿ ಶುದ್ಧ ಪ್ರತಿ ತಯಾರಿಸುವುದು ಮತ್ತು ಅವುಗಳನ್ನು ವಿಷಯ ನಿರ್ವಾಹಕರಿಗೆ ಸಕಾಲದಲ್ಲಿ ನೀಡುವುದು
2.	ಶುದ್ಧ ಪ್ರತಿಗಳನ್ನು ತಯಾರಿಸಿ ವಿಷಯ ನಿರ್ವಾಹಕರಿಗೆ ನೀಡಿದ ಬಗ್ಗೆ ರಿಜಿಸ್ಟರ್ ನಿರ್ವಹಿಸುವುದು

ಬೆರಳಚ್ಚು ವಿಭಾಗ-3

ಶ್ರೀ ಶಂಕರ ಗೋಪಾಲ

1.	ಅಪರಾಧ ಶಾಖೆಗೆ ಹಾಗೂ ಸಾಮಾನ್ಯ ಶಾಖೆಗೆ ಸಂಬಂಧಿಸಿದ ವಿಷಯ ನಿರ್ವಾಹಕರು ನೀಡಿರುವ ಕರಡು ಪ್ರತಿಗಳನ್ನು ಬೆರಳಚ್ಚು ಮಾಡಿಸಿ/ ಗಣಕೀಕರಣ ಮಾಡಿಸಿ ಶುದ್ಧ ಪ್ರತಿ ತಯಾರಿಸುವುದು ಮತ್ತು ಅವುಗಳನ್ನು ವಿಷಯ ನಿರ್ವಾಹಕರಿಗೆ ಸಕಾಲದಲ್ಲಿ ನೀಡುವುದು
2.	ಶುದ್ಧ ಪ್ರತಿಗಳನ್ನು ತಯಾರಿಸಿ ವಿಷಯ ನಿರ್ವಾಹಕರಿಗೆ ನೀಡಿದ ಬಗ್ಗೆ ರಿಜಿಸ್ಟರ್ ನಿರ್ವಹಿಸುವುದು

ಸಂಗ್ರಹ ಶಾಖೆ:

ಶ್ರೀ ಗಣಪತಿ ಎಲ್. ನಾಯ್ಕ, ಪ್ರ.ದ.ಸ.

1.	ಜಿಲ್ಲೆಯ ಎಲ್ಲಾ ಪೋಲಿಸ್ ಸಿಬ್ಬಂದಿ/ಅಧಿಕಾರಿಗಳಿಗೆ ವಾರ್ಷಿಕವಾಗಿ ಬೇಕಾಗುವ ಕಿಟ್ ಸಾಮಗ್ರಿಗಳ ವರದಿಯನ್ನು ತಯಾರಿಸಿ ಪ್ರಧಾನ ಕಛೇರಿಗೆ ಕಳುಹಿಸುವುದು.
2.	ಪ್ರಧಾನ ಕಛೇರಿಯಿಂದ ಹಂಚಿಕೆಯಾದ ಕಿಟ್ ಸಾಮಗ್ರಿಗಳನ್ನು ನಿಯಮಾನುಸಾರ ಜಿಲ್ಲೆಯ ಎಲ್ಲಾ ಸಿಬ್ಬಂದಿಗಳಿಗೆ ಹಂಚಿಕೆ ಮಾಡುವುದು
3.	ಸರಕಾರಿ ಮುದ್ರಣಾಲಯ ಧಾರವಾಡದಿಂದ ಬಸ್ ವಾರಂಟಗಳನ್ನು ಪಡೆದು ಠಾಣೆಗಳಿಗೆ ಹಂಚಿಕೆ ಮಾಡುವುದು
4.	ಉತ್ತರಕನ್ನಡ ಜಿಲ್ಲೆಗೆ ಹಂಚಿಕೆಯಾದ ಸ್ಥಳ ದಂಡ ವಸೂಲಿ ಪುಸ್ತಕಗಳನ್ನು ಜಿಲ್ಲೆಯ ಪೋಲಿಸ್ ಠಾಣೆ/ವೃತ್ತ/ ಉಪವಿಭಾಗಗಳಿಗೆ ಹಂಚಿಕೆ ಮಾಡುವುದು
5.	ಪ್ರಧಾನ ಕಛೇರಿಯಿಂದ ಹಂಚಿಕೆಯಾದ ಗಣಕ ಸಾಮಗ್ರಿಗಳನ್ನು ಠಾಣೆಗೆ ಹಂಚಿಕೆ ಮಾಡುವುದು ಮತ್ತು ಸುಸ್ಥಿತಿಯಲ್ಲಿರುವಂತೆ ನಿರ್ವಹಣೆ ಮಾಡುವುದು
6.	ಜಿಲ್ಲಾ ಪೋಲಿಸ್ ಕಛೇರಿಯ ಅಗತ್ಯತೆಗಾಗಿ ಬೇಕಾಗುವ ಸಾಮಗ್ರಿಗಳನ್ನು ಖರೀದಿಸುವುದು
7.	ಯಂತ್ರೋಪಕರಣಗಳ ದುರಸ್ತಿ
8.	ಪ್ರಧಾನ ಕಛೇರಿಯಿಂದ ಹಂಚಿಕೆಯಾದ ಆಯುಧ ಮದ್ದುಗುಂಡುಗಳನ್ನು ಸಂಗ್ರಹಿಸಿಕೊಳ್ಳುವುದು ಈ ಕುರಿತು ತ್ರೈಮಾಸಿಕ ವರದಿಗಳನ್ನು ಪ್ರಧಾನ ಕಛೇರಿಗೆ ಕಳುಹಿಸುವುದು.
9.	ಹಣ ಸ್ವೀಕೃತಿ ರಸೀದಿ ಪುಸ್ತಕಗಳನ್ನು ಪ್ರಧಾನ ಕಛೇರಿಯಿಂದ ಪಡೆದ ಡಿ.ಪಿ.ಓ., ಠಾಣೆಗಳ ಹಂಚಿಕೆಕೊಡುವುದು.

ಅಪರಾಧ ಶಾಖೆ

ಶ್ರೀ ಸಿ. ಎಂ. ಸಾಳುಂಕೆ, ಪ್ರ.ದ.ಸ.

1.	ಜಿಲ್ಲೆಯಲ್ಲಿ ಘೋರ ಅಪರಾಧಗಳು ವರದಿಯಾದ ತಕ್ಷಣ ಮೇಲಾಧಿಕಾರಿಗಳಿಗೆ ಇ-ಮೇಲ್ ಮುಖಾಂತರ ಸಂಕ್ಷಿಪ್ತ ವಿವರ ತಯಾರಿಸಿ ಕಳುಹಿಸಿಕೊಡುವುದು.
2.	ಘೋರ ಅಪರಾಧದ ವರದಿ (ಜಿ.ಸಿ.ಆರ್) ತಯಾರಿಸಿ ಕಳುಹಿಸಿಕೊಡುವುದು (ಫಾರಂ ನಂಬರ 9 ರಲ್ಲಿ)
3.	ಘೋರ ಅಪರಾಧದ ಪುಸ್ತಕ 2009 ನೇಯದು ಬರೆಯುವುದು
4.	ಘೋರ ಅಪರಾಧದ ಅಡಾವೆ ಪುಸ್ತಕ ಬರೆಯುವುದು.
5.	ಘೋರ ಅಪರಾಧದಲ್ಲಿ ಕೇಳಿರುವ ಎಲ್ಲಾ ವಿಧಾನ ಸಭಾ ಪ್ರಶ್ನಾವಳಿಗೆ ಹಾಗೂ ಲೋಕಸಭಾ ಪ್ರಶ್ನಾವಳಿಗಳಿಗೆ ಉತ್ತರ ನೀಡುವುದು.

6.	ಸ್ಥಾಯಿ ಆದೇಶ ಸಂಖ್ಯೆ 753 ನೇದರಂತೆ ತನಿಖೆಯಲ್ಲಿರುವ ಪ್ರಕರಣಗಳಲ್ಲಿ ತನಿಖಾವರದಿ ವಿಸ್ತರಣೆಗೆ ಆದೇಶ ಹಾಗೂ ವಲಯ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದು.
7.	ತನಿಖೆಯಲ್ಲಿರುವ ಹಾಗೂ ವಿಚಾರಣೆಯಲ್ಲಿರುವ ಎಲ್ಲಾ ಘೋರ ಅಪರಾಧ ಪ್ರಕರಣಗಳಲ್ಲಿ ಫಾರಂ ನಂಬರ 10 ರಲ್ಲಿ ಪಾಕ್ಷಿಕ ಪ್ರಗತಿ ವರದಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
8.	ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸುವುದಕ್ಕಿಂತ ಮೊದಲು ಪರಿಶೀಲನೆಗೆ ಬಂದ ಎಲ್ಲಾ ಘೋರ ಅಪರಾಧಗಳ ಪ್ರಕರಣಗಳಿಗೆ ಅನುಮೋದನೆಗೆ ಮಂಡಿಸುವುದು.
9.	ಘೋರ ಅಪರಾಧದಲ್ಲಿ ಬಿ ಮತ್ತು ಸಿ ಅಂತಿಮ ವರದಿಗೆ ಅನುಮೋದನೆಯ ಆದೇಶ ಮಂಡಿಸುವುದು
10.	ಘೋರ ಅಪರಾಧದಲ್ಲಿ ವಲಯ ಕಛೇರಿಯಿಂದ ಹಾಗೂ ಪ್ರಧಾನ ಕಛೇರಿಯಿಂದ ಮಾಡಿರುವ ಷರಾಗಳಿಗೆ ಪಾಲನಾ ವರದಿ ಸಲ್ಲಿಸುವದು.
11.	ಸಮಾಜ ಕಲ್ಯಾಣ ಅಧಿಕಾರಿಗಳಿಂದ ಎಸ್‌ಸಿ/ಎಸ್‌ಟಿ (ಪಿಎ) ಆ್ಯಕ್ಟ್ ಪ್ರಕರಣದಲ್ಲಿ ನೊಂದವರಿಗೆ ಪರಿಹಾರಧನದ ಕುರಿತು ಹಾಗೂ ಇತರೇ ವಿಷಯದಲ್ಲಿ ಪತ್ರ ವ್ಯವಹಾರ ಮಾಡುವುದು.
12.	ಅಪರಾಧ ವಿಭಾಗದಿಂದ ಮೇಲಾಧಿಕಾರಿಗಳಿಗೆ ಕಳುಹಿಸುವ ತಿಂಗಳ ಮಾಸಿಕ ತಖ್ತೆ ತಯಾರಿಸುವುದು.
13.	ತ್ರೈಮಾಸಿಕ ಅಪರಾಧ ವಿಭಾಗದಿಂದ ಮೇಲಾಧಿಕಾರಿಗಳಿಗೆ ಕಳುಹಿಸುವ ತ್ರೈಮಾಸಿಕ ತಖ್ತೆ ತಯಾರಿಸುವುದು
14.	ವಲಯ ಕಛೇರಿ, ಪ್ರಧಾನ ಕಛೇರಿ ಹಾಗೂ ಜಿಲ್ಲಾಧಿಕಾರಿಗಳ ಹಾಗೂ ಇತರೇ ಕಛೇರಿಗಳಲ್ಲಿ ನಡೆಸಲಾಗುವ ಸಭೆಗೆ ಮಾಹಿತಿ ತಯಾರಿಸುವುದು.
15.	ಅಪರಾಧ ಸಭೆಯ ತಖ್ತೆಯನ್ನು ತಯಾರಿಸುವುದು. ಹಾಗೂ ನಡುವಳಿಯನ್ನು ತಯಾರಿಸಿ ಪಾಲನಾ ವರದಿ ಪಡೆಯುವುದು.
16.	ಆರ್ಮ್ಸ್ ಆ್ಯಕ್ಟ್ ಪ್ರಕರಣಗಳಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಲು ಜಿಲ್ಲಾ ದಂಡಾಧಿಕಾರಿಗಳಿಂದ ಅನುಮತಿ ಪಡೆಯಲು ಪ್ರಸ್ತಾವನೆ ಸಲ್ಲಿಸುವುದು.
17.	ಸಾದಾ ಅಪರಾಧ ಪ್ರಕರಣಗಳಲ್ಲಿ ಕಲಂ 153 (ಎ) ಐ.ಪಿಸಿ ಪ್ರಕಾರ ದೋಷಾರೋಪಣ ಪಟ್ಟಿ ಸಲ್ಲಿಸಲು ಸರಕಾರದಿಂದ ಪೂರ್ವಾನುಮತಿ ಪಡೆಯಲು ಪ್ರಸ್ತಾವನೆ ಸಲ್ಲಿಸುವುದು.
18.	ಸರಕಾರದಿಂದ ಪ್ರಕರಣ ಹಿಂಪಡೆಯುವ ಬಗ್ಗೆ ಪ್ರಧಾನ ಕಛೇರಿಯವರು ಕೇಳಿರುವ ಪ್ರಕರಣಗಳಲ್ಲಿ ಪ್ರಸ್ತಾವನೆ ತಯಾರಿಸಿ ಕಳುಹಿಸಿಕೊಡುವುದು.
19.	ಜಿಲ್ಲೆಯಲ್ಲಿ ಘಟಿಸಿದ ಎಲ್ಲಾ ಘೋರ ಅಪರಾಧ ಪ್ರಕರಣಗಳ ಪ್ರತ್ಯೇಕ ಪೈಲ್ ತೆರೆದು ಪ್ರಕರಣದ ತನಿಖಾ ದಿನಚರಿ ಹಾಗೂ ಪ್ರಕರಣದ ಪ್ರಗತಿಯನ್ನು ಪಡೆದು ಪ್ರಕರಣಕ್ಕೆ ಸೇರಿಸುವುದಲ್ಲದೇ ನ್ಯೂನತೆಯ ನಿಗಾ ಇಡುವುದು.
20.	ಪೇರೋಲ್ ರಜೆಯ ಮೇಲೆ ಬಿಡಲು ಕೇಂದ್ರ ಕಾರಾಗೃಹ ಮತ್ತು ಜಿಲ್ಲಾಧಿಕಾರಿಗಳಿಂದ ಬಂದ ಪತ್ರಕ್ಕೆ ಪತ್ರ ವ್ಯವಹಾರ ನಡೆಸುವುದು.
21.	ಜಿಲ್ಲಾಧಿಕಾರಿಯವರಿಂದ ಬಂದ ಗನ್ ಲೈಸನ್ಸ್ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ವಿಚಾರಣೆ ನಡೆಸಿ ಪತ್ರ ವ್ಯವಹಾರ ಮಾಡುವುದು.
22.	ಮೈಕ್ ಅಳವಡಿಸಲು ಪೂರ್ವಾನುಮತಿ ನೀಡುವುದು.
23.	ರಸ್ತೆ ಅಪಘಾತ ಹಾಗೂ ಆಕಸ್ಮಿಕ ಬೆಂಕಿ ಅನಾಹುತದಿಂದ ನೊಂದ ಕುಟುಂಬದವರಿಗೆ ಇನ್ಸೂರೆನ್ಸ್ ಕಂಪನಿಯಿಂದ ಪರಿಹಾರ ಪಡೆಯಲು ಕೇಳಿರುವ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಒದಗಿಸಲು ಆದೇಶ ಹೊರಡಿಸುವುದು.

III – ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹಾಗೂ ಅವರ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ವಿವರ ಕೆಳಕಂಡಂತಿದೆ.

Sl. No.	Name of the Officer	Designation
1.	Shri Raman Gupta, IPS	Supdt.. of Police, Uttara Kannada Dist
2.	Shri V. B. Gaonkar	Addl. Supdt. of Police
3.	Shri B.D. Kolekar	Dy. S.P. Karwar
4.	Shri Ullas Vernekar	Dy. S.P. Sirsi

Sl. No.	Name of the Officer	Designation
5.	Shri M.L. Naik	Dy. S.P. Dandeli
6.	Dr. C B Vedhamurthy	Dy. S.P. Bhatkal
7.	Sri. Antony John	CPI, Karwar
8.	Shri Manjunath Kavari	CPI., Kadra
9.	Sri. Gurnath B. Mattur	CPI., Bhatkal
10.	Sri. M. Jagadish	CPI., Honavar
11.	Shri P.A. Suraj	CPI., Kumta
12.	Sri. Karunakar Shetty	CPI., Sirsi
13.	Shri C.C. Sankolli	CPI., Dandeli
14.	Shri Habeeb N.A	CPCI., Haliyal
15.	Shri Vijaykumar Bisanalli	CPI., Joida
16.	Sri. N G Bhaskar Rai	PI ,Ankola
17.	Shri P. Veerendra Kumar	PI Mundgod
18.	Sri. T Nagesh Shetty	PI Siddapur
19.	Shri. Gopalkrishna T. Naik	PI Yellapur
20.	VACANCY	PI, DCRB, Karwar
21.	VACANCY	PI, DSB, Karwar
22.	Sri. Arvind Kalguggi	PI, DCIB Karwar
23.	Sri. A.C. Manjunath	RPI DAR Karwar
24.	Shri Manjunath M. Shuklla	RPI DAR Karwar (MT)
25.	Shri Raghavendra	PSI, Karwar Town
26.	Shri N.G. Mukri	PSI, Karwar Town (Crime)
27.	Shri Nijaguni Rayannavar	PSI, Karwar Town III
28.	Shri Chennesh	PSI, Karwar Rural
29.	Shri Vasant Achari	PSI, Karwar Traffic –1
30.	Vacant	PSI, Karwar Traffic II
31.	Shri. Johnson Kiran Dsouza	PSI, Chittakula
32.	Shri Krishnand Naik	PSI, Mallapur
33.	Shri P.P. Sannegouda	PSI, Kadra

Sl. No.	Name of the Officer	Designation
34.	Shri H Jairaj	PSI, Ankola (L&O)-I
35.	Shri Nityanand Pandit	PSI, Ankola (L&O)-1I
36.	Shri S M Raghupati	PSI, Bhatkal Tn (L&O)-I
37.	Shri K.P. Karning	PSI, Bhatkal Tn (L&O)-2
38.	Vacant	PSI, Bhatkal Town (Crime)
39.	Shri Timmappa Naik	PSI, Bhatkal RI, (L & O)
40.	Shri Hanumanthrai Patted	PSI, Bhatkal Rural,(Crime)
41.	Shri S K Holennavar	PSI, Murdeshwar (L & O)
42.	Shri Chayappa Bajantri	PSI, Murdeshwar (Crime)
43.	Shri Govindraj Dasari	PSI, Honnavar (L & O)
44.	Shri F.K. Doddameni	PSI, Honavar (Crime)
45.	Shri Ali A Shaikh	PSI, Manki L & O
46.	Shri Rudrappa	PSI, Manki Crime
47.	Shri T.N Narasihm murthy	PSI, Kumta (L&O)
48.	Shri B.D. Madar	PSI, Kumta (Crime)
49.	Shri Kiran kumar B Nayak	PSI, Gokarn
50.	Shri S.P. Umamahesh	Sirsi Town (L&O)
51.	Shri D.G Madar	PSI, Sirsi Town (Crime)
52.	Shri Manjappa R.D.	PSI, Sirsi RI (L & O)
53.	Shri Ullas Kalgutkar	PSI, Sirsi Rural (Crime)
54.	Shri H Ravi	PSI, Sirsi NM (L&O)
55.	Shri Somalinga Naikar	PSI, Sirsi NM (Crime)
56.	Shri Shivanand Narabola	PSI, Banavasi, (L& O)
57.	Shri B. S Hulaswar	PSI, Banavasi (Crime)
58.	Shri S.V Patil	PSI, Yellapur
59.	Shri Parmeshwar Gunaga	PSI, Siddapur
60.	Shri Dhiraj Shinde	PSI, Mundgod
61.	Shri Siddappa Shimani	PSI, Haliyal
62.	Shri KR Nadakarni	PSI, Ambikanagar

Sl. No.	Name of the Officer	Designation
63.	Shri Harihar	PSI, Dandeli Town (L& O)
64.	Shri D.B. Manjrekar	PSI, Dandeli Town (Crime)
65.	Shri. G. K Kamble	PSI, Dandeli Rural
66.	Shri S B Yadagude	PSI, Joida
67.	Shri A.A Mujawar	PSI, Ramanagar
68.	Shri M Manjunath	PSI, DCRB Karwar
69.	Shri N. Anjaneya	PSI, DSAU (OOD)
70.	Shri M.D. Kamane	PSI, Forest Squad Dandeli
71.	Shri Manjunath Naik	PSI, DSB Karwar
72.	VACANT	PSI, DSAU Karwar
73.	VACANT	PSI, Sea Patrol
74.	VACANT	PSI, DSB Tattihalli
75.	Sri Gopal Pawaskar	RSI, DAR Karwar
76.	Shri Shivanand D. Naik	RSI, DAR Karwar
77.	SriPrabhakar D. Revankar	RSI, DAR Karwar
78.	Shri Vasant Borkar	RSI, DAR Karwar
79.	Shri S.M. Kale	RSI, DAR Karwar
80.	Shri Vidyanand Nayak	RSI, DAR Karwar

Ministrial Staff of DPO Karwar

1.	Shri M. M. Naik	AAO.
2.	Shri I.H Gouda	Sec. Sepdt. (Crime & General Section)
3.	Kum. Vimala J Naik	Sec. Supdt. (EST Section)
4.	Shri P.B. Ugargol	Sec Supdt. (Accounts Section)
5.	Smt Savita M. Naik	FDA
6.	Smt. Sumangala Nayak	FDA
7.	Smt Nagaratna Nayak	FDA
8.	Smt. Manjula Gouda	FDA
9.	Smt Sudha Shetty	FDA
10.	Shri R.S. Naik	FDA
11.	Shri C. M Salunke	FDA

Sl. No.	Name of the Officer	Designation
12.	Shri Pramod S. Naik	FDA
13.	Shri R.P. Naik	FDA
14.	Shri Ganapati Naik	FDA
15.	Shri Santosh Pattar	FDA
16.	Smt. Geeta Kolambkar	SDA
17.	Smt. Deepti Naik	SDA
18.	Smt. Jayashree Naik	SDA
19.	Smt Sudha Naik	SDA
20.	Shri Anand Naik	SDA
21.	Shri Jagdish Tigadi	SDA
22.	Shri A.D. Naik	SDA
23.	Shri T.D. Patril	SDA
24.	Shri Ramesh Ager	SDA
25.	Shri Vasudev Patagar	SDA
26.	Shri K.G. Naik	Steno
27.	Smt. Chaya Talekar	Steno
26.	Shri Nagendra Gurav	Typist
27.	Shri Deepak Naik	Typist
28.	Shri Shankar Gopal	Typist
29.	Shri Premanand Jadav	Dalayat
30.	Smt. Mahadevi Vastradmath	Dalayat
31.	Smt. Baby Manjalikar	Dalayat
32.	Smt. Jyothilaxmi	Dalayat

ಪೋಲಿಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ನಿಗದಿಪಡಿಸಿದ ವೇತನ ಶ್ರೇಣಿ

1) ಎಸ್.ಪಿ. – 15600–39200
2) ಅಡಿಷನಲ್ ಎಸ್.ಪಿ – 18150–26925
3) ಡಿಎಸ್‌ಪಿ – 14050–25050
4) ಪಿ.ಐ. – 10800–20025
5) ಪಿ.ಎಸ್.ಐ – 10000–18150
6) ಎಎಸ್‌ಐ – 7275–13350
7) ಎಚ್‌ಸಿ – 6250–12000
8) ಪಿಸಿ – 5800–10500

9) ಸಹಾಯಕ ಆಡಳಿತ ಅಧಿಕಾರಿ- 11400-21600
10) ಶಾಖಾಧೀಕ್ಷಕರು - 10000-18150
11) ಪ್ರ.ದ.ಸ - 7275-13350
12) ದ್ವಿ.ದ.ಸ - 5800-10500
13) ದಲಾಯತ್ - 4800-7275

ಪಿಂಚಣಿ ಸೌಲಭ್ಯವನ್ನು ನಿಯಮ ಪ್ರಕಾರ ಸಿಬ್ಬಂದಿಯವರಿಗೆ ಕಾಲಕಾಲಕ್ಕೆ ಒದಗಿಸಲಾಗುವುದು.

ವೇತನದ ಬಜೆಟ್ :

ಅ.ನಂ.	ವೇತನದ ವಿವರ	ವೇತನದ ಮುಂಗಡ
1.	ಪೋಲಿಸ್ ಅಧಿಕಾರಿ ಹಾಗೂ ಸಿಬ್ಬಂದಿಯವರ ವೇತನ	ರೂ. 31,62,45,130-00
2.	ನಾನ್ ಸ್ಯಾಲರಿ (ಸಾದಿಲ್ವಾರು)	ರೂ. 6,73,40,848-00

ಅಧಿಸೂಚನೆ :

ಮಾಹಿತಿ ಹಕ್ಕು ಅಧಿನಿಯಮ-2005 ರ ಕಲಂ 5 (1) ಮತ್ತು ಕಲಂ 5 (2) ರ ಪ್ರಕಾರ ಉತ್ತರ ಕನ್ನಡ ಜಿಲ್ಲಾ ಪೋಲಿಸ್ ಅಡಿಯಲ್ಲಿ ಬರುವ ಕೆಳಕಂಡ ವಿವಿಧ ಪೋಲಿಸ್ ಠಾಣೆ / ವೃತ್ತ ಕಛೇರಿ, ಉಪ ವಿಭಾಗ ಕಛೇರಿ, ಮತ್ತು ಜಿಲ್ಲಾ ಪೋಲಿಸ್ ಕಛೇರಿಯ ಕೆಳಕಂಡ ಅಧಿಕಾರಿಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳನ್ನಾಗಿ ಘೋಷಿಸಲಾಗಿದೆ. ಮುಂದುವರೆದ ಮಾಹಿತಿ ಹಕ್ಕು ಅಧಿನಿಯಮ 2005 ಕಲಂ 19 (1) ರ ಪ್ರಕಾರ ಮೇಲ್ಮನವಿ ಪ್ರಾಧಿಕಾರಿಯನ್ನು ಈ ಕೆಳಗೆ ನಮೂದಿಸಿದಂತೆ ನೇಮಿಸಲಾಗಿದೆ.

ಅ. ನಂ.	ಜಿಲ್ಲಾ ಪೋಲಿಸ್ ಕಛೇರಿ / ಉಪ ವಿಭಾಗ ಕಛೇರಿ/ ವೃತ್ತ ಕಛೇರಿ/ ಪೋಲಿಸ್ ಠಾಣೆ/ ಘಟಕ	ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರಿಗಳು	ದೂರವಾಣಿ ಸಂಖ್ಯೆ
1	2	3	4	5
1.	ಜಿಲ್ಲಾ ಪೋಲಿಸ್ ಕಛೇರಿ	ಸಹಾಯಕ ಆಡಳಿತಾಧಿಕಾರಿ (ಎ.ಎ.ಓ)	ಪೋಲಿಸ್ ಅಧೀಕ್ಷಕರು ಜಿಲ್ಲಾ ಪೋಲಿಸ್ ಕಛೇರಿ, ಕಾರವಾರ.	226307
2.	ಕಾರವಾರ ಉಪವಿಭಾಗ	ಡಿ.ಎಸ್.ಪಿ. ಕಾರವಾರ ರವರ ಹಿರಿಯ ಬರಹಗಾರ	ಡಿ.ಎಸ್.ಪಿ. ಕಾರವಾರ	226416
3.	ಭಟ್ಕಳ ಉಪವಿಭಾಗ	ಡಿ.ಎಸ್.ಪಿ. ಭಟ್ಕಳ ರವರ ಹಿರಿಯ ಬರಹಗಾರ	ಡಿ.ಎಸ್.ಪಿ. ಭಟ್ಕಳ	226413
4.	ಶಿರಸಿ ಉಪವಿಭಾಗ	ಡಿ.ಎಸ್.ಪಿ. ಶಿರಸಿ ರವರ ಹಿರಿಯ ಬರಹಗಾರ	ಡಿ.ಎಸ್.ಪಿ. ಶಿರಸಿ	226424
5.	ದಾಂಡೇಲಿ ಉಪವಿಭಾಗ	ಡಿ.ಎಸ್.ಪಿ. ದಾಂಡೇಲಿ ರವರ ಹಿರಿಯ ಬರಹಗಾರ	ಡಿ.ಎಸ್.ಪಿ. ದಾಂಡೇಲಿ	231595
6.	ಕಾರವಾರ ವೃತ್ತ	ಕಾರವಾರ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಕಾರವಾರ.	225337
7.	ಕದ್ರಾ ವೃತ್ತ	ಕದ್ರಾ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಕದ್ರಾ.	256592
8.	ಕುಮಟಾ ವೃತ್ತ	ಕುಮಟಾ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಕುಮಟಾ	220233
9.	ಹೊನ್ನಾವರ ವೃತ್ತ	ಹೊನ್ನಾವರ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಹೊನ್ನಾವರ	220248
10.	ಭಟ್ಕಳ ವೃತ್ತ	ಭಟ್ಕಳ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಭಟ್ಕಳ	226813
11.	ಶಿರಸಿ ವೃತ್ತ	ಶಿರಸಿ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಶಿರಸಿ.	226260

ಅ. ನಂ.	ಜಿಲ್ಲಾ ಪೋಲಿಸ್ ಕಛೇರಿ / ಉಪ ವಿಭಾಗ ಕಛೇರಿ/ ವೃತ್ತ ಕಛೇರಿ/ ಪೋಲಿಸ್ ಠಾಣೆ/ ಘಟಕ	ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರಿಗಳು	ದೂರವಾಣಿ ಸಂಖ್ಯೆ
12.	ದಾಂಡೇಲಿ ವೃತ್ತ	ದಾಂಡೇಲಿ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ದಾಂಡೇಲಿ	231363
13.	ಹಳಿಯಾಳ ವೃತ್ತ	ಹಳಿಯಾಳ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಹಳಿಯಾಳ	220333
14.	ಜೋಯಿಡಾ ವೃತ್ತ	ಜೋಯಿಡಾ ವೃತ್ತದ ಮುಖ್ಯ ಕಾನ್ಸಟೇಬಲ್/ಬರಹಗಾರ	ವೃತ್ತ ನಿರೀಕ್ಷಕರು ಜೋಯಿಡಾ	282733
15.	ಅಂಕೋಲಾ ಠಾಣೆ	ಪಿ.ಎಸ್.ಐ. ಅಂಕೋಲಾ (ಕಾ & ಸು.)	ಪಿ.ಐ. ಅಂಕೋಲಾ	230333
16.	ಸಿದ್ದಾಪೂರ ಠಾಣೆ	ಪಿ.ಎಸ್.ಐ. ಸಿದ್ದಾಪೂರ	ಪಿ.ಐ. ಸಿದ್ದಾಪೂರ	230283
17.	ಯಲ್ಲಾಪೂರ ಠಾಣೆ	ಪಿ.ಎಸ್.ಐ. ಯಲ್ಲಾಪೂರ	ಪಿ.ಐ. ಯಲ್ಲಾಪೂರ	254812
18.	ಮುಂಡಗೋಡ ಠಾಣೆ	ಪಿ.ಎಸ್.ಐ. ಮುಂಡಗೋಡ	ಪಿ.ಐ. ಮುಂಡಗೋಡ	222211
19.	ಕಾರವಾರ ಶಹರ ಠಾಣೆ	ಹಿರಿಯ ಎಎಸ್ಐ ಕಾರವಾರ ಶಹರ	ಪಿಎಸ್ಐ ಕಾರವಾರ ಶಹರ (ಕಾ & ಸು.)	226333
20.	ಕಾರವಾರ ಗ್ರಾಮೀಣ ಠಾಣೆ	ಹಿರಿಯ ಎಎಸ್ಐ ಕಾರವಾರ ಗ್ರಾಮೀಣ	ಪಿಎಸ್ಐ ಕಾರವಾರ ಗ್ರಾಮೀಣ	225337
21.	ಕಾರವಾರ ಸಂಚಾರ ಠಾಣೆ	ಹಿರಿಯ ಎಎಸ್ಐ ಕಾರವಾರ ಸಂಚಾರ	ಪಿಎಸ್ಐ ಕಾರವಾರ ಸಂಚಾರ	228333
22.	ಚಿತ್ತಾಕುಲ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಚಿತ್ತಾಕುಲ	ಪಿಎಸ್ಐ ಚಿತ್ತಾಕುಲ	265733
23.	ಕದ್ರಾ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಕದ್ರಾ	ಪಿಎಸ್ಐ ಕದ್ರಾ	258592
24.	ಮಲ್ಲಾಪುರ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಮಲ್ಲಾಪೂರ	ಪಿಎಸ್ಐ ಮಲ್ಲಾಪೂರ	254812
25.	ಕುಮಟಾ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಕುಮಟಾ	ಪಿಎಸ್ಐ ಕುಮಟಾ (ಕಾ & ಸು.)	222333
26.	ಗೋಕರ್ಣ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಗೋಕರ್ಣ	ಪಿಎಸ್ಐ ಗೋಕರ್ಣ	251133
27.	ಹೊನ್ನಾವರ ಪೋಲಿಸ್ ಠಾಣೆ	ಹಿರಿಯ ಎಎಸ್ಐ ಹೊನ್ನಾವರ	ಪಿಎಸ್ಐ ಹೊನ್ನಾವರ (ಕಾ & ಸು.)	220248
28.	ಮಂಕಿ ಠಾಣೆ	ಹಿರಿಯ ಎಎಸ್ಐ ಮಂಕಿ	ಪಿಎಸ್ಐ ಮಂಕಿ (ಕಾ & ಸು.)	257886
29.	ಭಟ್ಕಳ ಶಹರ ಠಾಣೆ	ಹಿರಿಯ ಎಎಸ್ಐ ಭಟ್ಕಳ	ಪಿಎಸ್ಐ ಭಟ್ಕಳ (ಕಾ & ಸು.)	226333
30.	ಭಟ್ಕಳ ಗ್ರಾಮೀಣ ಠಾಣೆ	ಹಿರಿಯ ಎಎಸ್ಐ ಭಟ್ಕಳ ಗ್ರಾಮೀಣ ಠಾಣೆ	ಪಿಎಸ್ಐ ಭಟ್ಕಳ ಗ್ರಾಮೀಣ ಠಾಣೆ (ಕಾ & ಸು.)	227333
31	ಮುರ್ಡೇಶ್ವರ ಠಾಣೆ	ಹಿರಿಯ ಎಎಸ್ಐ ಮುರ್ಡೇಶ್ವರ	ಪಿಎಸ್ಐ ಮುರ್ಡೇಶ್ವರ (ಕಾ & ಸು.)	268896

ಅ. ನಂ.	ಜಿಲ್ಲಾ ಪೋಲಿಸ್ ಕಛೇರಿ / ಉಪ ವಿಭಾಗ ಕಛೇರಿ/ ವೃತ್ತ ಕಛೇರಿ/ ಪೋಲಿಸ್ ಠಾಣೆ/ ಘಟಕ	ಸಾರ್ವಜನಿಕ ಮಾಹಿತಿ ಅಧಿಕಾರಿ	ಮೇಲ್ಮನವಿ ಪ್ರಾಧಿಕಾರಿಗಳು	ದೂರವಾಣಿ ಸಂಖ್ಯೆ
32.	ಶಿರಸಿ ಶಹರ ಠಾಣೆ	ಹಿರಿಯ ಎಎಸ್ಐ ಶಿರಸಿ ಶಹರ ಠಾಣೆ	ಪಿಎಸ್ಐ ಶಿರಸಿ ಶಹರ ಠಾಣೆ (ಕಾ & ಸು.)	226333
33.	ಶಿರಸಿ ಗ್ರಾಮೀಣ ಠಾಣೆ	ಹಿರಿಯ ಎಎಸ್ಐ ಶಿರಸಿ ಗ್ರಾಮೀಣ ಠಾಣೆ	ಪಿಎಸ್ಐ ಶಿರಸಿ ಗ್ರಾಮೀಣ ಠಾಣೆ (ಕಾ & ಸು.)	236233
34.	ಶಿರಸಿ ಹೊಸಮಾರುಕಟ್ಟೆ	ಹಿರಿಯ ಎಎಸ್ಐ ಶಿರಸಿ ಹೊಸಮಾರುಕಟ್ಟೆ	ಪಿಎಸ್ಐ ಶಿರಸಿ ಶಿರಸಿ ಹೊಸಮಾರುಕಟ್ಟೆ (ಕಾ & ಸು.)	236330
35.	ಬನವಾಸಿ ಠಾಣೆ	ಹಿರಿಯ ಎಎಸ್ಐ ಬನವಾಸಿ ಠಾಣೆ	ಪಿಎಸ್ಐ ಬನವಾಸಿ ಠಾಣೆ (ಕಾ & ಸು.)	264210
26.	ದಾಂಡೇಲಿ ಶಹರ	ಹಿರಿಯ ಎಎಸ್ಐ ದಾಂಡೇಲಿ ಶಹರ	ಪಿಎಸ್ಐ ದಾಂಡೇಲಿ ಶಹರ (ಕಾ & ಸು.)	231333
27.	ದಾಂಡೇಲಿ ಗ್ರಾಮೀಣ	ಹಿರಿಯ ಎಎಸ್ಐ ದಾಂಡೇಲಿ ಗ್ರಾಮೀಣ	ಪಿಎಸ್ಐ ದಾಂಡೇಲಿ ಗ್ರಾಮೀಣ	231363
28.	ಹಳಿಯಾಳ ಠಾಣೆ	ಹಿರಿಯ ಎಎಸ್ಐ ಹಳಿಯಾಳ	ಪಿಎಸ್ಐ ಹಳಿಯಾಳ	220333
29.	ಅಂಬಿಕಾ ನಗರ ಠಾಣೆ	ಹಿರಿಯ ಎಎಸ್ಐ ಅಂಬಿಕಾ ನಗರ	ಪಿಎಸ್ಐ ಅಂಬಿಕಾ ನಗರ	258733
30.	ಜೋಯಿಡಾ ಠಾಣೆ	ಹಿರಿಯ ಎಎಸ್ಐ ಜೋಯಿಡಾ	ಪಿಎಸ್ಐ ಜೋಯಿಡಾ	282733
31.	ರಾಮನಗರ ಠಾಣೆ	ಹಿರಿಯ ಎಎಸ್ಐ ರಾಮನಗರ	ಪಿಎಸ್ಐ ರಾಮನಗರ	248133

ಉತ್ತರ ಕನ್ನಡ ಜಿಲ್ಲಾ ಪೋಲಿಸ್ ವ್ಯವಸ್ಥೆ ವಿವರ ಹಾಲಿ ಇರುವ ಬಲ ಮತ್ತು ರಿಕ್ತ ಸ್ಥಾನಗಳ ವಿವರ (30.06.2009 ರಲ್ಲಿರುವಂತೆ)

ನಾಗರಿಕ ಪೋಲಿಸ್ ವ್ಯವಸ್ಥೆ

ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ಖಾಲಿ ಇರುವ ಸ್ಥಾನ
ಎಸ್.ಪಿ.	1	1	–
ಎ.ಎಸ್.ಪಿ.	1	1	–
ಡಿ.ಎಸ್.ಪಿ.	4	4	–
ಪಿಐ/ಸಿಪಿಐ	16	14	02
ಪಿಎಸ್ಐ ಡಬ್ಲ್ಯೂಪಿ.ಎಸ್.ಐ.	49 01 } 50	45 – } 45	05
ಎ.ಎಸ್.ಐ. ಡಬ್ಲ್ಯೂಎ.ಎಸ್.ಐ	64 02 } 66	62 04 } 66	–
ಸಿ.ಎಚ್.ಸಿ. ಡಬ್ಲ್ಯೂಎಚ್.ಸಿ.	277 23 } 300	275 22 } 297	03
ಸಿ.ಪಿ.ಸಿ. ಡಬ್ಲ್ಯೂಪಿ.ಸಿ.	854 70 } 924	799 98 } 897	27
ಒಟ್ಟು	**1362**	**1325**	**37**

ಡಿ.ಎ.ಆರ್.

ಕ್ರ ಸಂ.	ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ಖಾಲಿ ಸ್ಥಾನ
1.	ಆರ್.ಪಿ.ಐ.	2	2	–
2.	ಆರ್.ಎಸ್.ಐ.	7	6	1
3.	ಎ.ಆರ್.ಎಸ್.ಐ	12	12	–
4.	ಎ.ಎಚ್.ಸಿ.	79	65	14
5.	ಎ.ಪಿ.ಸಿ	344	306	38
6.	ಕ್ಯಾಂಟಿನ ಕುಕ್	2	1	1
7.	ಕ್ಯಾಂಟಿನ್ ಸರ್ವಂಟ್	1	–	1
8.	ಗ್ಯಾರೆಜ್ ಅಸಿಸ್ಟಂಟ್	1	–	1
9.	ಮೊಚಿ	1	–	1
	ಒಟ್ಟು	**449**	**392**	**57**

ನಿಸ್ತಂತು

ಕ್ರ. ಸಂ	ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ರಿಕ್ತ ಸ್ಥಾನ
1.	ಪೊ.ನಿರೀಕ್ಷಕರು (ನಿ)	1	1	–
2.	ಪೊ.ಉ.ನಿರೀಕ್ಷಕರು(ನಿ)	4	1	3
3.	ಎ.ಎಸ್.ಐ. (ನಿ)	8	8	–
4.	ಎಚ್.ಸಿ. (ನಿ)	14	10	4
5.	ಪಿ.ಸಿ. (ನಿ)	10	4	6
	ಒಟ್ಟು	**37**	**24**	**13**

ಕಡಲು ಪಡೆ.

ಕ್ರ. ಸಂ.	ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ರಿಕ್ತ ಸ್ಥಾನ
1.	ಎಂ.ಎಲ್.ಡ್ರೈವರ್	03	02	01
2.	ಸಾರಂಗ	02	–	02
3.	ಡಿಂಗಿ ಡ್ರೈವರ್	03	01	02
4.	ಹೆಲ್ಲಮೆನ್	01	–	01
5.	ಖಲಾಸಿ	08	02	06
	ಒಟ್ಟು	**17**	**5**	**12**

ಬೆರಳು ಮುದ್ರೆ ಘಟಕ

ಕ್ರ. ಸಂ.	ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ರಿಕ್ತ ಸ್ಥಾನ
1.	ಪೊಲೀಸ್ ನಿರೀಕ್ಷಕರು.	1	–	1
2.	ಪೊಲೀಸ್ ಉಪ–ನಿರೀಕ್ಷಕರು	1	–	1
3.	ಸಿ.ಪಿ.ಸಿ.	2	–	2
	ಒಟ್ಟು	**4**	–	**4**

ಲಿಪಿಕ ಸಿಬ್ಬಂದಿ

ಕ್ರ.ಸಂ.	ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ರಿಕ್ತ ಸ್ಥಾನ
1.	ಸಹಾಯಕ ಆಡಳಿತಾಧಿಕಾರಿ	1	1	–
2.	ಶಾಖಾಧಿಕಾರಿ	3	3	–
3.	ಪ್ರ.ದ.ಸ.	12	11	01
4.	ದ್ವಿ.ದ.ಸ.	11	10	01
5.	ಹಿರಿಯ ಶೀಘ್ರ ಲಿಪಿಗಾರರು	2	2	–
7.	ಬೆರಳಚ್ಚುಗಾರರು	4	3	01
8.	ದಲಾಯತ್	5	4	01
9.	ಸ್ವೀಪರ್	21	8	13
	ಒಟ್ಟು	**59**	**42**	**17**

ವಿಶೇಷ ಪ್ರತಿಭಂದಕ ದಳ (ಸರಾಯಿ ಮತ್ತು ಲಾಟರಿ)

ಹುದ್ದೆ	ಮಂಜೂರಾತಿ ಬಲ	ಹಾಲಿ ಇರುವ ಬಲ	ಖಾಲಿ ಇರುವ ಸ್ಥಾನ
ಪಿ.ಐ	01	01	–
ಪಿ.ಎಸ್‌ಐ	11	–	11
ಆರ್‌ಎಸ್‌ಐ	01	–	01
ಸಿ.ಹೆಚ್‌ಸಿ	22	–	22
ಸಿಪಿಸಿ	69	37	32
ಮಪಿಸಿ	22	–	22
ಎ.ಹೆಚ್‌ಸಿ	29	–	29
ಎ.ಪಿಸಿ	91	75	16
ಡ್ರೈವರ್	13	–	13
ಬೆರಳಚ್ಚುಗಾರ	01	01	–
ಒಟ್ಟು	**260**	**114**	**146**

ಪೋಲಿಸ್ ಅಧೀಕ್ಷಕರು
ಉತ್ತರ ಕನ್ನಡ, ಕಾರವಾರ.

ಪಿ.ಆರ್.794

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/548/ಡಿಟಿಸಿಆರ್/99–2000, ದಿನಾಂಕ:16ನೇ ಜೂನ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು(3), ಗುಪ್ತ ವಾರ್ತ ದಳ ಮಂಗಳೂರು, ಮಂಗಳೂರು.

ಆರೋಪಿ:

1) ಲಿಂಗೇ ಗೌಡ,ಬಿನ್:ಸಿದ್ದಪ್ಪ
ಬೇಗೂರು ಗಾಮ, ನೆಲಮಂಗಲ ಅಂಚೆ, ಬೆಂಗಳೂರು.

2) ಸಿದ್ದಪ್ಪ ಬಿನ್:ತಿಮ್ಮ ರಾಯಪ್ಪ, ವೀರಸಾಗರ ಗಾಮ, ದಾಬಸ್‌ಪೇಟೆ ಅಂಚೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ವಾಹನದ ಮಾಲೀಕರು:

ಶ್ರೀ ಜಿ.ಎಸ್. ಗಂಗಯ್ಯ ಬಿನ್:ತೋಪಯ್ಯ,
ಪಬ್ಲಿಕ್ ರೋಡ್ ಲೈನ್ಸ್, 18ನೇ ಕಿ.ಮೀ.
ತುಮಕೂರು ರಸ್ತೆ, ಮಾದನಾಯಕನ ಹಳ್ಳಿ,
ಮಾದಾವರ ಅಂಚೆ, ಬೆಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು(3), ಗುಪ್ತ ವಾರ್ತದಳ, ಮಂಗಳೂರುರವರು ದಿನಾಂಕ:08.05.2000 ರಂದು ಹಗಲು 11.45 ಗಂಟೆ ಸಮಯಕ್ಕೆ ಮಂಗಳೂರು ಮಹಾನಗರ ಪಾಲಿಕೆಯ ಪಂಪ್‌ವೆಲ್ ರಸ್ತೆಯ ಬಳಿ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಕಾರ್ಯ ನಿಮಿತ್ತ ಹೋಗುತ್ತಿರುವಾಗ ಉಳ್ಳಾಲದ ಕಡೆಗೆ ಹೋಗುವ ರಸ್ತೆಯಲ್ಲಿ ವಾಹನ ಸಂ:KA-02A-5687 ಲಾರಿ ನಿಂತಿದ್ದು, ಲಾರಿಯಲ್ಲಿ ಚಾಲಕನಲ್ಲದೇ ಆತನ ಎಡಬದಿಯಲ್ಲಿ ಇನ್ನೊಬ್ಬ ವ್ಯಕ್ತಿ ಕುಳಿತ್ತಿದ್ದು, ಚಾಲಕನಲ್ಲಿ ಲಾರಿಯಲ್ಲಿರುವ ಸರಕಿನ ಬಗ್ಗೆ ವಿಚಾರಿಸಲಾಗಿ ಸುಣ್ಣದ ಪೌಡರ್ ಎಂದು ಉತ್ತರಿಸಿ ದಾಖಲೆ ಪತ್ರಗಳನ್ನು ಕೇಳಲಾಗಿ ಮೆ:ಗೋವಿಂದ ಇಂಡಸ್ಟ್ರೀಸ್, ಬೆಂಗಳೂರು ಇಲ್ಲಿಂದ ಮಂಗಳೂರು ಮಾರ್ಕೇಟ್ ರಸ್ತೆಯಲ್ಲಿರುವ ಹಾರ್ಡ್‌ವೇರ್ ಸ್ಟೋರಿಗೆ 25x 360 ಬ್ಯಾಗ್‌ಗಳಲ್ಲಿ ಒಟ್ಟು 9000 ಕೆ.ಜಿ ಸುಣ್ಣದ ಪೌಡರ್ ಸಾಗಣಿಕೆ ಬಗ್ಗೆ (ಇನ್ವಾಯ್ಸ್) ದಾಖಲೆಗಳು ಇರುವುದು ಕಂಡು ಬಂದಿದ್ದು, ಸರಕಿನ ಒಳಗಿನಿಂದ

ಸ್ಪಿರಿಟ್ ವಾಸನೆ ಬರುತ್ತಿದ್ದು ಚಾಲಕ ಮತ್ತು ಇನ್ನೊಬ್ಬ ವ್ಯಕ್ತಿ ತುಂಬಾ ಗಾಬರಿಗೊಂಡಂತೆ ಕಂಡುಬಂದು ಅನುಮಾನಗೊಂಡು ಲಾರಿ ಶೋಧನೆಗೆ ನ್ಯಾಯಾಲಯದ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದಿರುವುದರಿಂದ ಸರ್ಚ್ ಮೆಮೊ ಆಧಾರದಲ್ಲಿ ಪರಿಶೀಲನೆ ನಡೆಸಿದಾಗ ಸುಣ್ಣದ ಪೌಡರ್ ಸರಕಿನ ಅಡಿಯಲ್ಲಿ 35 ಲೀಟರು ಗಾತದ 211 ಕ್ಯಾನುಗಳಲ್ಲಿ 7385 ಲೀಟರು, 3 ಕ್ಯಾನುಗಳಲ್ಲಿ 90 ಲೀಟರು ಮತ್ತು 1 ಕ್ಯಾನಿನಲ್ಲಿ 25 ಲೀಟರಿನಂತೆ ಒಟ್ಟು 215 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 7500 ಲೀಟರು ಮದ್ಯಸಾರ ಅಕಮವಾಗಿ ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಅರೋಪಿಗಳಾದ 1) ಲಿಂಗೇಗೌಡ, ಬಿನ್:ಸಿದ್ದಪ್ಪ ಬೇಗೂರು ಗಾಮ, ನೆಲಮಂಗಲ ಅಂಚೆ, ಬೆಂಗಳೂರು 2) ಸಿದ್ದಪ್ಪ ಬಿನ್:ತಿಮ್ಮರಾಯಪ್ಪ, ವೀರಸಾಗರ ಗಾಮ, ದಾಬಸ್‌ಪೇಟೆಅಂಚೆ, ನೆಲಮಂಗಲ, ಬೆಂಗಳೂರು ಗಾಮಾಂತರಜಿಲ್ಲೆ ಮತ್ತು ವಾಹನದಲ್ಲಿ ದೊರೆತ ಆರ್.ಸಿ ಪುಸ್ತಕದ ಆಧಾರದಲ್ಲಿ ಆರ್.ಸಿ ಮಾಲೀಕರಾದ ಶೀ ಜಿ.ಎಸ್. ಗಂಗಯ್ಯ ಬಿನ್ ತೋಪಯ್ಯ, ಪಬ್ಲಿಕ್ ರೋಡ್ ಲೈನ್ಸ್, 18ನೇ ಕಿ.ಮೀಟರು, ತುಮಕೂರು ರಸ್ತೆ, ಮಾದನಾಯಕನಹಳ್ಳಿ ಮಾದಾವರ ಅಂಚೆ, ಬೆಂಗಳೂರು ಇವರುಗಳು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 13, 14ರ ಪಕಾರ ಅಪರಾಧ ಮಾಡಿದ್ದು, ಕಲಂ 32,34 ಮತ್ತು 38 ಎರ ಪಕಾರ ಶಿಕ್ಷಾರ್ಹವಾಗಿರುವುದರಿಂದ ಸದಿ ವಾಹನ ಮತ್ತು 7500.000ಲೀ ಮದ್ಯಸಾರ ಮತ್ತು ಇತರ ಸೊತ್ತುಗಳನ್ನು ಜಪ್ತಿ ಪಡಿಸಿಕೊಂಡು, ಆರೋಪಿಗಳ ವಿರುದ್ಧ ಪ.ಮಾ.ವ ಸಂಖ್ಯೆ:36/99-2000,ದಿನಾಂಕ:8-5-2000ರಂದು ಮೊಕದ್ದಮೆಯನ್ನು ದಾಖಲಿಸಿ ಕೊಂಡು ಪಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಪಕರಣದ ಮುಂದಿನ ತನಿಖೆಯ ಬಗ್ಗೆ ಸೊತ್ತು ಮತ್ತು ಕಡತಗಳನ್ನು ಅಬಕಾರಿ ನಿರೀಕ್ಷಕರು, ಉಳ್ಳಾಲ ವಲಯ ಇವರಿಗೆ ದಿ:29-5-2000 ರಂದು ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ಸೊತ್ತುಗಳು

1) ಲಾರಿ ಸಂ: KA-02-A-5687.

2) 35 ಲೀಟರು ಗಾತದ 215 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 7500 ಲೀಟರು ಮದ್ಯಸಾರ. (211x35+3x30+1x25)

3) 142 ಪಾಲಿಥಿನ್ ಚೀಲಗಳಲ್ಲಿ ಅಂದಾಜು ತಲಾ 25 ಕೆ.ಜಿ ಯಂತೆ ಸುಣ್ಣದ ಪೌಡರ್.

4) ಮೆ:ಗೋವಿಂದ ಇಂಡಸ್ಟ್ರೀಸ್ ಪ್ಲಾಟ್ ನಂ:875 ಇಂಡಸ್ಟ್ರೀಯಲ್ ಎಸ್ಟೇಟ್, ಆನೇಕಲ್ಲು, ಬೆಂಗಳೂರು ಇವರು ನೀಡಿರುವ ಸುಣ್ಣದ ಪೌಡರಿಗೆ ಸಂಬಂಧಿಸಿದ ಇನ್ ವಾಯ್ಸ್ ಸಂ:91/2000-01 ದಿನಾಂಕ:06.05.2000.

(ಮೇಲಿನ ಮದ್ಯಸಾರದಿಂದ 375 ಮಿಲಿಯ 215 ಸೀಸೆಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆಯಲಾಗಿದೆ.)

5) ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳು 1) ವಾಹನದ ನೊಂದಣಿ ಪುಸ್ತಕ ಸಂ:299-829 2) ಇನ್ಶೂರೆನ್ಸ್ ಪಾಲಿಸಿ ಸರ್ಟಿಫಿಕೇಟು ಸಂ:7763, 3) ವಾಹನ ಚಾಲಕನ ಡ್ರೈವಿಂಗ್ ಲೈಸೆನ್ಸ್ ಪುಸ್ತಕ ನಮೂನೆ ಸಂ:013785. 4) ಟರ್ಪಾಲು ಮತ್ತು ಹಗ್ಗ.

ಸದಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸೊತ್ತುಗಳಲ್ಲಿ ಮದ್ಯಸಾರವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದಿ ಮಾದರಿಯನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞ, ಮಂಗಳೂರುರವರು ದಿನಾಂಕ:11.05.2000ರ ವರದಿಯಲ್ಲಿ ಮದ್ಯಸಾರದಲ್ಲಿ ಮದ್ಯಸಾರ ಪಮಾಣ 66 ಡಿಗಿ ಒ.ಪಿ (94.76%) ಇರುವುದಾಗಿ ದೃಢೀಕರಣ ಪತ ನೀಡಿರುತ್ತಾರೆ. ಅಬಕಾರಿ ನಿರೀಕ್ಷಕರು, ಗುಪ್ತ ವಾರ್ತದಳ ಮಂಗಳೂರು ವಿಭಾಗ ಇವರ ತನಿಖಾ ವರದಿ ಸಂ:ಇಐಬಿ/ಅ.ಇ.(3) ಪಮಾವ ಸಂ:36/99-2000, ದಿನಾಂಕ:11.05.2000ರಲ್ಲಿ ವಾಹನವನ್ನು ಹೊರತುಪಡಿಸಿ ಉಳಿದ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಂದಿನ ಪಾದಿಕಾರದ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರ ನ್ಯಾಯಾಲಯದ ಆದೇಶ ಸಂ:ಎಸ್‌ಡಿಕೆ:548:ಡಿಟಿಸಿಆರ್:99-2000 ದಿ:15-5-2000 ರ ಅದೇಶದಲ್ಲಿ ಪಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನದ ಮುಟ್ಟುಗೋಲು ಪಕಿಯೆಯನ್ನು ಕಾಯ್ದಿರಿಸಿ, ಜಪ್ತು ಪಡಿಸಿಕೊಂಡ 7500 ಲೀಟರು ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ಮೈಸುಗರ್ ಸಾರಾಯಿ ಸಂಸ್ಕರಣಾ ಘಟಕಕ್ಕೆ ಹಂಚಿಕೆ ಮಾಡಲು ಆದೇಶಿಸಿರುತ್ತಾರೆ.

ಸದಿ ವಾಹನದ ಆರ್.ಸಿ ಮಾಲೀಕರಾದ ಶೀ ಎಸ್.ಗಂಗಯ್ಯ ಅಲಿಯಾಸ್ ಸಿದ್ದ ಗಂಗಯ್ಯ ಬಿನ್ ತೋಪಯ್ಯ, 18 ಕಿ.ಮೀಟರು ತುಮಕೂರು ರಸ್ತೆ, ಮಾದನಾಯಕನ ಹಳ್ಳಿ, ಮಾದವಾರ ಅಂಚೆ, ಬೆಂಗಳೂರು ಇವರು ತಮ್ಮ ವಕೀಲರ ಮುಖಾಂತರ ದಿನಾಂಕ:10.05.2000ರಂದು ಅರ್ಜಿಯನ್ನು ಸಲ್ಲಿಸಿ, ತಾನು ಸದಿ ವಾಹನವನ್ನು ಮೆ: ಗೋವಿಂದ ಇಂಡೆಸ್ಟ್ರೀಸ್ ಪ್ಲಾಟ್ ನಂ:875, ಗೀಗ್ನಿನ್ ಇಂಡಸ್ಟ್ರೀಯಲ್ ಎಸ್ಟೇಟ್, ಆನೇಕಲ್ಲು, ಬೆಂಗಳೂರು ಇವರಿಗೆ ಸರಕು ಸಾಗಾಣಿಕೆಗೆ ಬಾಡಿಗೆ ಆಧಾರದಲ್ಲಿ ನೀಡಲಾಗಿದ್ದು, ಸದಿ ಅಪರಾಧಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿ ವಾಹನವನ್ನು ತನ್ನ ಮಧ್ಯಂತರ ಸುಪರ್ದಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ಈ ಪಾದಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಂತೆ ಕಾರಣ ಕೇಳಿ ನೋಟಿಸನ್ನು ದಿನಾಂಕ:01.08.2000ರಂದು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಅರ್ಜಿದಾರರು ಈ ಪಾದಿಕಾರದಿಂದ ನೀಡಿರುವ ಕಾರಣ ಕೇಳಿ ನೋಟಿಸಿಗೆ ಉತ್ತರವನ್ನು ನೀಡಿರುತ್ತಾರೆ. ಸದಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಪಾದಿಕಾರವು ವಾಹನದ ಮೌಲ್ಯಕ್ಕೆ ಸಮಾನವಾದ ರೂ.2,00,000/- ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಹಾಗೂ ಇತರೆ ಷರತ್ತುಗಳಿಗೆ ಅನುಗುಣವಾಗಿ ದಿನಾಂಕ:13.11.2000ರ ಆದೇಶದಲ್ಲಿ ಮಧ್ಯಂತರ ಬಿಡುಗಡೆಗೆ ಆದೇಶಿಸಿದೆ. ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ರವರ ನ್ಯಾಯಾಲಯದ ಆದೇಶ ಸಂ:ಎಸ್‌ಡಿಕೆ: 548:ಡಿಟಿಸಿಆರ್:99-2000 ದಿ:13-11-2000ರ ಆದೇಶದ ವಿರುದ್ಧ ವಾಹನದ ಮಾಲೀಕರು ಮಾನ್ಯ 2ನೇ ಸೆಷನ್ಸ್ ಜಡ್ಜ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ಸಂ:168/2000 ಮತ್ತು 169/2000ರ ಮುಖಾಂತರ ಮೊರೆಹೊಕ್ಕು ಆದೇಶದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ 2ನೇ ಸೆಷನ್ಸ್ ಜಡ್ಜ್ ನ್ಯಾಯಾಧೀಶರು ತಮ್ಮ ಆದೇಶ ಸಂಖ್ಯೆ ಕ್ರಿಮಿನಲ್ ಅಪೀಲ್ ನಂ:168/2000 ಮತ್ತು 169/2000 ದಿ:27-5-2000ರಲ್ಲಿ ಈ ಪ್ರಾದಿಕಾರವು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿ

ರೂ. 2,00,000/- ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯ ಬದಲು ಅಷ್ಟೇ ಮೊತ್ತದ ಇಂಡೆಮಿನಿಟಿ ಬಾಂಡ್ ಹಾಗೂ ಇಬ್ಬರು ಶ್ಯೂರಿಟಿದಾರರನ್ನು ಒದಗಿಸುವ ಹಾಗೂ ಅಧಿಕೃತ ಅಧಿಕಾರಿಗಳು ಹಾಕಿರುವ ಇತರೆ ಷರತ್ತುಗಳ ಮೇಲೆ ವಾಹನವನ್ನು ಮಧ್ಯಂತರ ಬಿಡುಗಡೆಗೊಳಿಸುವಂತೆ ಆದೇಶ ನೀಡಿರುತ್ತದೆ. ಮಾನ್ಯ ಸೆಷನ್ಸ್ ನ್ಯಾಯಾಲಯದ ಆದೇಶದ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂ:ಎಸ್‌ಡಿಕೆ:548:ಡಿಟಿಸಿಆರ್:99-2000, ದಿನಾಂಕ:29.12.2000ರಲ್ಲಿ ಅರ್ಜಿದಾರರು 2,00,000/- ಮೌಲ್ಯದ ಇಂಡೆಮಿನ್ನಿಟಿ ಬಾಂಡ್ ಹಾಗೂ ಇದೇ ಮೊತ್ತಕ್ಕೆ ಸಮಾನವಾದ ಇಬ್ಬರು ಸ್ಥಳೀಯ ಜಾಮೀನುದಾರರನ್ನು ಸಲ್ಲಿಸಿದ್ದಲ್ಲಿ ಹಾಗೂ ಇತರೆ ಪರತ್ತಿಗೊಳಪಟ್ಟು ಅರ್ಜಿದಾರರ ವಶಕ್ಕೆ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಲು ಆದೇಶಿಸಿದೆ.

ಘನ ಸತ್ರ ನ್ಯಾಯಾಲಯದ ಆದೇಶಾನುಸಾರ ವಾಹನದ ಮಾಲೀಕರು ರೂ.2,00,000/- ಇಂಡೆಮಿನಿಟಿ ಬಾಂಡ್ ಮತ್ತು ಶ್ರೀ ವಿಜಯ ಚಂದ್ರ ರೆಡ್ಡಿ ಬಿನ್:ವೆಂಕಟ ರೆಡ್ಡಿ 882 ಚೆನ್ನಪ್ಪ ಬಡಾವಣೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಮತ್ತು ಗೋವಿಂದರಾಜು, ಬಿನ್ ಗಂಗಪ್ಪ, 224, ಕೆಂಚನಹಳ್ಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳನ್ನು ಶ್ಯೂರಿಟಿದಾರರಾಗಿ ಪ್ರಾಧಿಕಾರಕ್ಕೆ ಒಪ್ಪಿಸಿ,ವಾಹನವನ್ನು ದಿನಾಂಕ:04.02.2001ರಂದು ತನ್ನ ಸುಪರ್ದಿಗೆ ಪಡೆದು ಕೊಂಡಿರುತ್ತಾರೆ.

ತದನಂತರದಲ್ಲಿ ವಾಹನದ ಮಾಲೀಕರು ವಾಹನದ ಮದ್ಯಂತರ ಬಿಡುಗಡೆಗೆ ಸಲ್ಲಿಸಿದ್ದ ಇಂಡೆಮಿನಿಟ್ ಬಾಂಡನ್ನು ಮತ್ತು ಶ್ಯೂರಿಟಿಯನ್ನು ಹಿಂದಕ್ಕೆ ಪಡೆದುಕೊಂಡು ಇಂಡೆಮಿನಿಟಿ ಬಾಂಡ್‌ನ ಮೊತ್ತ ರೂ.2,00,000/-ವನ್ನು ಡಿ.ಡಿ ಸಂ:148770, ದಿನಾಂಕ:11.02.2009ರಂತೆ ಕೆನರಾ ಬ್ಯಾಂಕ್, ಚಿಕ್ಕಬಿದನಕಲ್ಲು, ತುಮಕೂರು, ಬೆಂಗಳೂರು ಇಲ್ಲಿಂದ ಪಡೆದು ಈ ಪ್ರಾಧಿಕಾರಕ್ಕೆ ಒಪ್ಪಿಸಿದ್ದು,ಸದ್ರಿ ಮೊತ್ತವನ್ನು ವಾಹನದ ಭದ್ರತೆಯಾಗಿ ಸರ್ಕಾರದ ರೆವೆನ್ಯೂ ಡೆಪಾಸಿಟ್ ಲೆಕ್ಕ ಶೀರ್ಷಿಕೆ ಸಂ:8443-00-101-0-01 ರಲ್ಲಿ ದಿನಾಂಕ:24.02.2009ರಂದು ಠೇವಣಿ ಇಡಲಾಗಿದೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಅಭಿಯೋಜನೆ ಪರ ಎರಡು ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅವರುಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಹಾಗೂ ಪ್ರತಿರಕ್ಷೆ ಸಾಕ್ಷಿಯಾಗಿ ವಾಹನದ ಮಾಲೀಕರ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:08.05.2000ರಂದು ಟಾಟಾ ಲಾರಿ ಸಂಖ್ಯೆ: KA-02-A-5687ರಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ 7500 ಲೀಟರು ಮದ್ಯಸಾರ ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಹುದೇ?

ಮೇಲಿನ ವಿವಾದಾಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ-1:

ಶ್ರೀ ಜಿ.ಕೆ ಸುಬ್ರಹ್ಮಣ್ಯ, ಅಂದಿನ ಅಬಕಾರಿ ನಿರೀಕ್ಷಕರು, ಇಐಬಿ, ಮಂಗಳೂರು ರವರು ದಿನಾಂಕ:08.11.2001ರಂದು ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಪಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು 1998 ರಿಂದ ಮಂಗಳೂರು ಅಬಕಾರಿ ಗುಪ್ತ ವಾರ್ತದಳದಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆ ಎಂದು, ದಿನಾಂಕ:05.08.2001 ರಂದು ಹಗಲು ಸುಮಾರು 11-45 ಗಂಟೆ ಸಮಯಕ್ಕೆ ಮಂಗಳೂರು ಮಹಾನಗರ ಪಾಲಿಕೆಯ ಪಂಪುವೆಲ್ ರಸ್ತೆಯ ಹತ್ತಿರ ರಾಷ್ಟ್ರೀಯ ಹೆದ್ದಾರಿ 17ರಲ್ಲಿ ಕಾರ್ಯನಿಮಿತ್ತ ಸಿಬ್ಬಂದಿಯವರೊಂದಿಗೆ ಮತ್ತು ಅಬಕಾರಿ ಉಪ ಅಧೀಕ್ಷಕರೊಂದಿಗೆ ಹೋಗುತ್ತಿರುವಾಗ ಪಂಪುವೆಲ್ ವೃತ್ತದ ಉಳ್ಳಾಲ ಕಡೆಗೆ ಹೋಗುವ ರಸ್ತೆಯಲ್ಲಿ ವಾಹನ ಸಂ:KA-02-A-5687 ಲಾರಿ ನಿಂತಿದ್ದು, ಅದರಲ್ಲಿ ಸರಕು ತುಂಬಿದ್ದು ಟರ್ಪಾಲಿನಿಂದ ಮುಚ್ಚಿ ದಾರದಿಂದ ಬಿಗಿದಿದ್ದು, ಸದ್ರಿ ಲಾರಿಯ ಹತ್ತಿರ ಹೋಗಿ ನೋಡಲಾಗಿ ಲಾರಿಯಲ್ಲಿ ಚಾಲಕನಿದ್ದು, ಆತನ ಪಕ್ಕದಲ್ಲಿ ಇನ್ನೊಬ್ಬ ವ್ಯಕ್ತಿ ಕುಳಿತಿದ್ದನು. ಸರಕಿನ ಬಗ್ಗೆ ಚಾಲಕನಲ್ಲಿ ವಿಚಾರಿಸಲಾಗಿ ಸುಣ್ಣದ ಚೀಲವೆಂದು ತಿಳಿಸಿದನು. ಸದ್ರಿ ಸರಕಿನ ಬಗ್ಗೆ ದಾಖಲಾತಿಗಳನ್ನು ಕೇಳಲಾಗಿ ಮೆ:ಗೋವಿಂದ ಇಂಡಸ್ಟ್ರೀಸ್, ಬೆಂಗಳೂರು ಇಲ್ಲಿಂದ ಮಂಗಳೂರು ಮಾರ್ಕೆಟ್ ರಸ್ತೆಯಲ್ಲಿರುವ ಹಾರ್ಡ್‌ವೇರ್ ಸ್ಟೋರಿಗೆ ಎಂದು ಬರೆದಿದ್ದು, ಅದರಲ್ಲಿ 25 ಕೆ.ಜಿ ತೂಕದ 360 ಚೀಲಗಳು ಇದೆ ಎಂದು ಇನ್ ವಾಯ್ಸ್ ನಲ್ಲಿ ಬರೆದಿತ್ತು. ಇದನ್ನು ನೋಡಿದಾಗ ಚಾಲಕ ಮತ್ತು ಇನ್ನೊಬ್ಬ ವ್ಯಕ್ತಿ ಅನುಮಾನದಲ್ಲಿ ವರ್ತಿಸುತ್ತಿದ್ದು, ವಾಹನದಿಂದ ಸ್ಪಿರಿಟ್‌ನ ಘಾಟು ವಾಸನೆ ಬರುತ್ತಿದ್ದು ಸದ್ರಿ ವಾಹನವನ್ನು ವಿವರವಾಗಿ ತಪಾಸಣೆ ಮಾಡಲು ತೀರ್ಮಾನಿಸಿ ಸ್ಥಳದಲ್ಲಿ ದೊರೆತ ಬಾಲಕೃಷ್ಣ ಎಂಬವನನ್ನು ಸಾಕ್ಷಿಯನ್ನಾಗಿ ಲಾರಿ ತಪಾಸಣೆಗೆ ನ್ಯಾಯಾಲಯದ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದ ಕಾರಣ, ಸರ್ಚ್ ಮೆಮೊವನ್ನು ತಯಾರಿಸಿ, ಲಾರಿಯಲ್ಲಿದ್ದ ಟರ್ಪಾಲನ್ನು ಸರಿಸಿ ನೋಡಲಾಗಿ ಮೇಲ್ನೋಟಕ್ಕೆ ಸುಣ್ಣದ ಚೀಲವನ್ನು ತುಂಬಿದ್ದು ಕಂಡು ಬಂತು. ಸುಣ್ಣದ ಚೀಲವನ್ನು ಸರಿಸಿ ನೋಡಿದಾಗ ಕೆಳಗಡೆ ಬಿಳಿ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ದ್ರಾವಕ ತುಂಬಿದ್ದು, ಸದ್ರಿ ಕ್ಯಾನಿನ ಮುಚ್ಚಳ ತೆಗೆದು ನೋಡಲಾಗಿ ಸ್ಪಿರಿಟ್ ಎಂಬುವುದಾಗಿ ಕಂಡು ಬಂತು. ವಿವರವಾಗಿ ನೋಡಲಾಗಿ 215 ಬಿಳಿ ಬಣ್ಣದ ಕ್ಯಾನುಗಳಲ್ಲಿ ಸ್ಪಿರಿಟ್ ತುಂಬಿದ್ದು, ಸದ್ರಿ ಕ್ಯಾನುಗಳನ್ನು 142 ಸುಣ್ಣದ ಚೀಲಗಳಿಂದ ಮುಚ್ಚಲಾಗಿತ್ತು. ಈ ರೀತಿ ಸ್ಪಿರಿಟ್ ನ್ನು ಹೊಂದಿ ಸಾಗಾಣೆ ಮಾಡಲು ರಹದಾರಿ ಪತ್ರವನ್ನು ಕೇಳಲಾಗಿ ಚಾಲಕನಾಗಲೀ, ಇನ್ನೊಬ್ಬ ವ್ಯಕ್ತಿಯಾಗಲೀ ಹಾಜರುಪಡಿಸಲಿಲ್ಲ. ರಹದಾರಿ ಪತ್ರಗಳಿಲ್ಲದೇ ಸ್ಪಿರಿಟ್ ಸಾಗಾಟವು ರಾಜ್ಯ ಅಬಕಾರಿ ಕಾಯಿದೆಗೆ ವಿರೋಧವೆಂದು ಪಂಚರ ಸಮಕ್ಷಮ ಲಾರಿಯಲ್ಲಿದ್ದವರಿಗೆ ವಿರೋಧವೆಂದು ತಿಳಿಸಿ ನಂತರ ಕ್ಯಾನಿನಲ್ಲಿದ್ದ ಸ್ಪಿರಿಟನ್ನು ಅಂದಾಜು ಮಾಡಲಾಗಿ 211 ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಮತ್ತು 3 ಕ್ಯಾನುಗಳಲ್ಲಿ ತಲಾ 30 ಲೀಟರಿನಂತೆ ಮತ್ತು 1 ಕ್ಯಾನಿನಲ್ಲಿ 25 ಲೀಟರು ಹೀಗೆ ಒಟ್ಟು 7500 ಲೀ ಸ್ಪಿರಿಟ್ ಕಂಡು

ಬಂತು. ನಂತರ ಸದಿ ಕ್ಯಾನುಗಳಿಂದ ರಾಸಾಯನಿಕ ಪರೀಕ್ಷೆಗೆ ಪತಿ ಕ್ಯಾನಿನಿಂದ 375 ಎಂ.ಎಲ್‌ನಂತೆ ಬೇರೆ ಸೀಸೆಗಳಲ್ಲಿ ತೆಗೆದುಕೊಂಡು ಸೀಸೆಗಳಿಗೆ ಮತ್ತುಕ್ಯಾನುಗಳಿಗೆ ಅನುಕಮವಾಗಿ ಸೀಲು ಮಾಡಲಾಯಿತು. ಚಾಲಕನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಲಿಂಗೇಗೌಡ. ಬಿನ್ ಸಿದ್ದಪ್ಪ. ಪ್ರಾಯ 28 ವರ್ಷ. ಮತ್ತು ಇನ್ನೊಬ್ಬನ ಹೆಸರು ಸಿದ್ದಪ್ಪ ಬಿನ್ ತಿಮ್ಮಪ್ಪ ಬೆಂಗಳೂರು ಎಂದು ತಿಳಿಸಿದರು. ನಂತರ ಮೊಹರಿನ ನಮೂನೆಯನ್ನು ತಯಾರಿಸಿ ಆರೋಪಿಗಳ ಹೆಸರು ಮತ್ತು ವಿಳಾಸದ ಗುರುತು ಚೀಟಿಗಳನ್ನು ಮಾದರಿ ಸೀಸೆಗಳಿಗೆ ಹಚ್ಚಿಸಲಾಯಿತು. ಮತ್ತು ಕ್ಯಾನುಗಳನ್ನು ಗುರುತಿಸಲಾಯಿತು. ಸದಿ ಲಾರಿಯು ಕಂದು ಬಣ್ಣದಿಂದ ಕೂಡಿದ್ದು ನಂಬರ್: KA-02-A-5687 ಎಂದು ಲಾರಿಯ ಹಿಂದೆ ಮತ್ತು ಮುಂದೆ ಬದಿಗೆ ಬರೆದಿರುತ್ತದೆ. ಲಾರಿಯು ಟಾಟಾ ಕಂಪೆನಿ ನಿರ್ಮಿತವಾಗಿದ್ದು, ಚಾಲಕನು ಚಾಲಕನ ಲೈಸೆನ್ಸ್ ಮತ್ತು ವಾಹನದ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾನೆ. ರಹದಾರಿ ಪತ್ರಗಳಿಲ್ಲದೇ ಇದ್ದ ಹಾಗೂ ಸ್ಪಿರಿಟ್ ಸಾಗಾಟವು ರಾಜ್ಯ ಅಬಕಾರಿ ಕಾಯಿದೆಗೆ ವಿರೋಧವೆಂದು ಆರೋಪಿಗಳಿಗೆ ತಿಳಿಸಿ ಸ್ಥಳದಲ್ಲಿಯೇ ಮಹಜರು ತಯಾರಿಸಿ ಸ್ಪಿರಿಟ್ ಮತ್ತು ಇತರ ಎಲ್ಲಾ ಸೊತ್ತುಗಳನ್ನು ಆರೋಪಿಗಳೊಂದಿಗೆ ದಸ್ತಗಿರಿ ಮಾಡಿ ಕಛೇರಿಗೆ ಕರೆತಂದು ಆರೋಪಿಗಳ ವಿರುದ್ಧ ತಕ್ಷೀರನ್ನು ದಾಖಲಿಸಿಕೊಂಡು ಅದೇ ದಿವಸ ಆರೋಪಿಗಳನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಸಂಬಂಧಪಟ್ಟ ದಾಖಲಾತಿಗಳನ್ನು ಅಧಿಕೃತ ಅಧಿಕಾರಿಗಳ ಮುಂದೆ ಹಾಜರುಪಡಿಸಲಾಯಿತು. ನಂತರ ತಕ್ಷೀರಿಗೆ ಸಂಬಂಧ ಪಟ್ಟಂತೆ ದಾಖಲೆಗಳನ್ನು ಮತ್ತು ಸೊತ್ತುಗಳನ್ನು ಉಳ್ಳಾಲ ವಲಯ ನಿರೀಕ್ಷಕರಿಗೆ ಹಸ್ತಾಂತರಿಸಲಾಯಿತು. ಸದ್ರಿ ದಿನದಂದು ಜಪ್ತು ಪಡಿಸಿದ ವಾಹನ ಮತ್ತು ಸೊತ್ತುಗಳನ್ನು ನೋಡಿ ಮಹಜರನ್ನು ನಿಶಾನೆ ಪಿ-1 ಎಂದು (ಮಹಜರಿನ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ) ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು, ಮಹಜರಿನ ಮೇಲಿನ ಸಹಿಯನ್ನು ನಿಶಾನೆ ಪಿ-2 ಎ ಎಂದು, ತಯಾರಿಸಿದ ಸೊತ್ತು ಪಟ್ಟಿಯನ್ನು ನಿಶಾನೆ ಪಿ-3 ಎಂದೂ ಗುರುತಿಸಲಾಯಿತು ಎಂದು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

2. ಟೆಂಡರ್ ಅರ್ಜಿಯಲ್ಲಿ ವಾಹನಗಳಿಗೆ ಪ್ರತ್ಯೇಕವಾಗಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಬರೆದಿರಬೇಕು.
3. ಟೆಂಡರ್ ಅರ್ಜಿಗಳನ್ನು ವರ್ಗಾವಣೆ ಮಾಡಲಾಗುವುದಿಲ್ಲ.
4. ಪ್ರತಿಯೊಬ್ಬ ಟೆಂಡರ್‌ದಾರರು/ಬಿಡ್‌ದಾರರು ಅರ್ಜಿಯೊಂದಿಗೆ 1,000/–ರೂಗಳ ಡಿ.ಡಿ.ಯನ್ನು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್ ರವರ ಹೆಸರಿಗೆ ಠೇವಣಿ ಮಾಡಬೇಕು ಮತ್ತು ಈ ಹಣಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ಕೊಡಲಾಗುವುದಿಲ್ಲ. ಠೇವಣಿ ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಪೂರ್ಣವಾದ ವಿವರಗಳೊಂದಿಗೆ ಭರ್ತಿಮಾಡಿದ ಟೆಂಡರ್ ಅರ್ಜಿಯನ್ನು ದಿನಾಂಕ: 21.10.2009ರಂದು ಸಮಯ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ತದನಂತರ ಬಂದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಅಥವಾ ಅವರಿಂದ ನೇಮಿಸಲ್ಪಟ್ಟಿರುವ ಅಧಿಕಾರಿಗಳು ಮೊಹರುಗಳನ್ನು ತೆರೆದು ಖರೀದಿಸುವ ಸಂಸ್ಥೆಗಳು ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಿ ಸಂಸ್ಥೆಗಳ ಪಟ್ಟಿಯನ್ನು ಮತ್ತು ಅವರುಗಳು ಖರೀದಿಸಲು ಸೂಚಿಸಿರುವ ದರಗಳ ಪಟ್ಟಿಯನ್ನು ತಯಾರಿಸುವರು.
7. ಟೆಂಡರ್ ಕವರ್‌ಗಳನ್ನು ದಿನಾಂಕ: 22.10.2009 ರಂದು ಬೆಳಿಗ್ಗೆ 11.00 ಗಂಟೆಗೆ ಈ ಕಛೇರಿಯಲ್ಲಿ ತೆರೆಯಲಾಗುವುದು. ಇಚ್ಛೆಯುಳ್ಳ ಟೆಂಡರ್‌ದಾರರು/ ಬಿಡ್‌ದಾರರು /ಪ್ರತಿನಿಧಿಗಳು ಟೆಂಡರ್ ತೆರೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
8. ಮೋಟಾರ್ ಸೈಕಲ್‌ಗಳನ್ನು ಖರೀದಿಸಲು ಅತೀ ಹೆಚ್ಚಿನ ದರಗಳನ್ನು ನಮೂದಿಸಿರುವ ಟೆಂಡರ್/ ಬಿಡ್‌ದಾರರನ್ನು ಯಶಸ್ವಿ ಟೆಂಡರ್/ ಬಿಡ್‌ದಾರರೆಂದು ಪರಿಗಣಿಸಿ ದಾಖಲಿಸಲಾಗುವುದು.
9. ಟೆಂಡರ್ ಅರ್ಜಿಯಲ್ಲಿ ಬೆಲೆಯನ್ನು ಬರೆಯುವಾಗ ಏನಾದರೂ ತಿದ್ದುಪಡಿ ಮಾಡಿದ್ದಲ್ಲಿ ಆ ಸ್ಥಳದಲ್ಲಿ ಟೆಂಡರ್‌ದಾರರು ತಮ್ಮ ಪೂರ್ಣವಾದ ಸಹಿಯನ್ನು ಮಾಡತಕ್ಕದ್ದು.
10. ಯಶಸ್ವಿ ಟೆಂಡರ್/ಬಿಡ್‌ದಾರರನ್ನು ದಾಖಲಿಸಿದ ನಂತರ ಉಳಿದ ಟೆಂಡರ್/ಬಿಡ್‌ದಾರರ ಡಿ.ಡಿ.ಗಳನ್ನು ತಕ್ಷಣದಲ್ಲಿಯೇ ಹಿಂತಿರುಗಿಸಲಾಗುವುದು.
11. ಯಶಸ್ವಿ ಟೆಂಡರ್/ಬಿಡ್‌ದಾರರು ಖರೀದಿಸಿದ ಮೋಟಾರ್ ಸೈಕಲ್‌ಗಳ ಒಟ್ಟು ಹಣದಲ್ಲಿ ಶೇಕಡ 25%ರಷ್ಟನ್ನು ನಗದಾಗಿ ಸ್ಥಳದಲ್ಲಿಯೇ ಪಾವತಿಸಬೇಕಾಗಿರುತ್ತದೆ ಹಾಗೂ ಉಳಿದ ಹಣವನ್ನು 15 ದಿನಗಳೊಳಗಾಗಿ ಪಾವತಿಸಿ ವಾಹನಗಳನ್ನು ಪಡೆಯಬಹುದಾಗಿರುತ್ತದೆ. ತಪ್ಪಿದಲ್ಲಿ ಠೇವಣಿ ಹಣವನ್ನು ವಾಪಸ್ಸು ನೀಡಲಾಗುವುದಿಲ್ಲ. ಮತ್ತು ಅವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ. ಹಾಗೂ ಹೊಸದಾಗಿ ಮೋಟಾರ್ ಸೈಕಲ್‌ಗಳನ್ನು ವಿಲೇವಾರಿ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.
12. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
13. ಎಲ್ಲಾ ನಗದು ಹಣವನ್ನು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್‌ರವರ ಹೆಸರಿಗೆ ಪಾವತಿಸಿದ ನಂತರ (ನಗದು ಶಾಖೆಯಲ್ಲಿ) ಅಧಿಕೃತ ರಸೀದಿಯನ್ನು ನೀಡಲಾಗುವುದು.
14. ಮಾರಾಟವಾದ ಮೋಟಾರ್ ಸೈಕಲ್‌ಗಳನ್ನು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರ ಒಪ್ಪಿಗೆ ಪಡೆದ ನಂತರ ಹಸ್ತಾಂತರಿಸಲಾಗುವುದು.
15. ಇದಕ್ಕೆ ಅನ್ವಯವಾಗುವ ವ್ಯಾಟ್ ಹಾಗೂ ಇತರೆ ಚಾರ್ಜ್‌ಗಳನ್ನು ಪ್ರತ್ಯೇಕವಾಗಿ ವಸೂಲಿ ಮಾಡಲಾಗುವುದು.

16. ಯಶಸ್ವಿ ಟೆಂಡರ್/ ಬಿಡ್‌ದಾರರು ನಿರುಪಯುಕ್ತ ಮೋಟಾರ್ ಸೈಕಲ್‌ಗಳ ಪೂರ್ತಿ ಹಣವನ್ನು ಪಾವತಿಸಿದ ನಂತರ ಅವುಗಳನ್ನು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್‌ರವರ ಕಛೇರಿಯಿಂದ ತಮ್ಮ ಸ್ವಂತ ಖರ್ಚಿನಿಂದ ಸಾಗಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.
17. ಟೆಂಡರ್ ಕಂ ಹರಾಜನ್ನು ಯಾವುದೇ ಕಾರಣಕ್ಕಾಗಿ ರದ್ದುಗೊಳಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್‌ರವರು ಹೊಂದಿರುತ್ತಾರೆ. ಇವರ ನಿರ್ಣಯವೇ ಅಂತಿಮವಾಗಿರುತ್ತದೆ.
18. ಮೇಲೆ ತಿಳಿಸಿರುವ ಟೆಂಡರ್ ಕಂ ಹರಾಜಿನಲ್ಲಿ ಷರತ್ತು ಮತ್ತು ನಿಬಂಧನೆಗಳ ವಿಷಯದಲ್ಲಿ ಯಾವುದೇ ವಾದ–ವಿವಾದ ಉದ್ಭವಿಸಿದಲ್ಲಿ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು ರವರು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.
19. ನಿರುಪಯುಕ್ತ ಮೋಟಾರ್ ಸೈಕಲ್‌ಗಳನ್ನು ಪೊಲೀಸ್ ಅಧೀಕ್ಷಕರು, ವೈರ್‌ಲೆಸ್‌ರವರ ಕಛೇರಿ, ನಂ.1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು ಇಲ್ಲಿ ರಜಾದಿನಗಳಂದು ಹೊರತುಪಡಿಸಿ, ಉಳಿದ ದಿನಗಳಲ್ಲಿ ಕಛೇರಿ ವೇಳೆಯಲ್ಲಿ ಪರೀಕ್ಷಿಸಬಹುದಾಗಿರುತ್ತದೆ.

ಪಿ.ಆರ್. 681 ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಮಂಗಳೂರು ವಿಭಾಗ, ಮಂಗಳೂರು

ಸಮಯಾವಧಿ ವಿಸ್ತರಣೆ

ಲೋ.ಇ:ಮಂ.ವಿ:ಟಿ.ಎನ್.ಡಿ(23):2009–10:ಎಇ–1, ಮಂಗಳೂರು, ದಿನಾಂಕ: 26ನೇ ಆಗಸ್ಟ್ 2009

ದಿನಾಂಕ: 15.08.2009ರ 'ಕರಾವಳಿ ಅಲೆ' ಮತ್ತು 'ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ನಂಬ್ರ: ಲೋ.ಇ:ಮಂ.ವಿ:ಟಿ.ಎನ್.ಡಿ(23):2009–10:ಎಇ1: ದಿನಾಂಕ:12.8.2009ರ ಪ್ರಕಟಣೆಯಲ್ಲಿ ಸೂಚಿಸಿದ ಕಾಮಗಾರಿಗಳಿಗೆ ಟೆಂಡರ್‌ನ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ:

1. ಕಾಮಗಾರಿ ಹೆಸರು: ನಬಾರ್ಡ್ ಆರ್.ಐ.ಡಿ.ಎಫ್–14 (ಪದವಿ ಪೂರ್ವ ಕಾಲೇಜುಗಳಿಗೆ ಹೆಚ್ಚುವರಿ ಕೊಠಡಿ ನಿರ್ಮಾಣ) ಕ್ರಮ ಸಂಖ್ಯೆ 1 ರಿಂದ 6 ಕಾಮಗಾರಿಗಳು
2. ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ: 11.9.2009 (ಕಛೇರಿ ವೇಳೆಯಲ್ಲಿ)
3. ಖಾಲಿ ಟೆಂಡರು ಫಾರಂಗಳನ್ನು ನೀಡುವ ದಿನಾಂಕ:14.9.2009 ರಿಂದ 15.9.2009 ರವರೆಗೆ (ಕಛೇರಿ ವೇಳೆಯಲ್ಲಿ)
4. ಭರ್ತಿ ಮಾಡಿದ ಟೆಂಡರು ಸ್ವೀಕರಿಸುವ ಅಂತಿಮ ದಿನಾಂಕ: 16.9.2009ರ ಸಂಜೆ 4.00 ಗಂಟೆಯವರೆಗೆ

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜನಿಯರ್,
ಪಿ.ಆರ್. 706 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು.

ಕೃಷಿ ಅಧಿಕಾರಿಗಳ ಕಛೇರಿ, ಮಣ್ಣು ಆರೋಗ್ಯ ಕೇಂದ್ರ, ಶೇಷಾದ್ರಿ ರಸ್ತೆ, ಬೆಂಗಳೂರು–1

ಟೆಂಡರ್–ಕಂ–ಬಹಿರಂಗ ಹರಾಜು ಪ್ರಕಟಣೆ

ಸಂಖ್ಯೆ:ಕೃಅ(ಮಾಕೇಂ)/ಅನುಪ/ಜಡವಸ್ತು/ಹರಾಜು/2009–10, ದಿನಾಂಕ: 24ನೇ ಆಗಸ್ಟ್ 2009

ವಿಷಯ: ಕೃಷಿ ಅಧಿಕಾರಿ, ಮಣ್ಣು ಆರೋಗ್ಯ ಕೇಂದ್ರ, ಬೆಂಗಳೂರು ಕಛೇರಿಯಲ್ಲಿರುವ ಅನುಪಯುಕ್ತ ಜಡವಸ್ತುಗಳನ್ನು (ಪೀಠೋಪಕರಣಗಳು) ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕೃಷಿ ಇಲಾಖೆಗೆ ಸೇರಿದ ವಿವಿಧ ಮಾದರಿಯ ಅನುಪಯುಕ್ತ ಜಡವಸ್ತುಗಳನ್ನು (ಪೀಠೋಪಕರಣಗಳು) ಹಾಲಿ ಇರುವ ಸ್ಥಿತಿಯಲ್ಲಿ ದಿನಾಂಕ:8.10.2009 ರಂದು ಅಪರಾಹ್ನ 2.00 ಗಂಟೆಗೆ ಕೃಷಿ ಅಧಿಕಾರಿ, ಮಣ್ಣು ಆರೋಗ್ಯ ಕೇಂದ್ರ, ಶೇಷಾದ್ರಿ ರಸ್ತೆ, ಬೆಂಗಳೂರು, ಕೃಷಿ ಆಯುಕ್ತಾಲಯದ ಆವರಣದ ಕೇಂದ್ರ ಗೋದಾಮಿನಲ್ಲಿ ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಹೆಚ್ಚಿನ ವಿವರಗಳು ಹಾಗೂ ಷರತ್ತುಗಳಿಗೆ ಕೇಂದ್ರ ಕಛೇರಿಯ ಸೂಚನಾ ಫಲಕ ಅವಲೋಕಿಸುವುದು ಅಥವಾ ಕೃಷಿ ಅಧಿಕಾರಿ, ಮಣ್ಣು ಆರೋಗ್ಯ ಕೇಂದ್ರ ಇವರನ್ನು ಸಂಪರ್ಕಿಸಿ ಪಡೆಯಬಹುದು.

ಕೃಷಿ ಅಧಿಕಾರಿಗಳು
(ಮಣ್ಣು ಆರೋಗ್ಯ ಕೇಂದ್ರ), ಬೆಂಗಳೂರು–1

ದಿನಾಂಕ:8.10.2009 ರಂದು ಅಪರಾಹ್ನ 2.00 ಗಂಟೆಗೆ ಕೃಷಿ ಅಧಿಕಾರಿಗಳ ಕಛೇರಿ, ಶೇಷಾದ್ರಿ ರಸ್ತೆ, ಬೆಂಗಳೂರು–1, (ಮಣ್ಣು ಆರೋಗ್ಯ ಕೇಂದ್ರ), ಪ್ರಯೋಗಾಲಯದಲ್ಲಿ ಅನುಪಯುಕ್ತ ಜಡವಸ್ತುಗಳನ್ನು (ಪೀಠೋಪಕರಣ) ಟೆಂಡರ್–ಕಂ–ಬಹಿರಂಗ ಹರಾಜಿಗೆ ನಿಗದಿಪಡಿಸಲಾದ ಷರತ್ತುಗಳು:–

1. ಅನುಪಯುಕ್ತ ಸಾಮಗ್ರಿಗಳನ್ನು ಹಾಲಿ ಇರುವ ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
2. ಟೆಂಡರುದಾರರು ದರವನ್ನು ಖಾಲಿ ಕಾಗದದಲ್ಲಿ ದರ ನಮೂದಿಸಿ ಲಕೋಟೆಯಲ್ಲಿ ಮೊಹರು ಮಾಡಿ ಕೃಷಿ ಅಧಿಕಾರಿ, (ಮಣ್ಣು ಆರೋಗ್ಯ ಕೇಂದ್ರ) ಬೆಂಗಳೂರು ಇವರ ಪದನಾಮದಲ್ಲಿ ಡಿ.ಡಿ/ಅಥವಾ ನಗದು ರೂಪದಲ್ಲಿ ರೂ.1000/–ಇ.ಎಂ.ಡಿ.ಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ದಿನಾಂಕ:7.10.2009 ರಂದು ಅಪರಾಹ್ನ 4.00 ಗಂಟೆ ಒಳಗೆ ಕೃಷಿ ಅಧಿಕಾರಿ (ಮಣ್ಣು ಆರೋಗ್ಯ ಕೇಂದ್ರ), ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿ ಇಟ್ಟಿರುವ ಟೆಂಡರ್ ಪೆಟ್ಟಿಗೆಯಲ್ಲಿ ಹಾಕಬೇಕು. ರೂ.1000/–ಇ.ಎಂ.ಡಿ.ಹುಂಡಿ ಇಲ್ಲದಿರುವ ಟೆಂಡರ್ ಮಾನ್ಯ ಮಾಡಲಾಗುವುದಿಲ್ಲ. ಹರಾಜಿನಲ್ಲಿ ಭಾಗವಹಿಸುವವರು. ರೂ.1000/– (ರೂ.ಒಂದು ಸಾವಿರ) ಮಾತ್ರ ಠೇವಣಿ ಇಟ್ಟು ಹರಾಜಿನಲ್ಲಿ ಭಾಗವಹಿಸುವುದು.
3. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಮುಂಚಿತವಾಗಿ ರೂ.1000/– ನಗದು ಠೇವಣಿ ನೀಡಿ ಹರಾಜಿನಲ್ಲಿ ಭಾಗವಹಿಸುವುದು.
4. ಟೆಂಡರ್ ಹಾಕಿರುವರು ಸಹ ಹರಾಜಿನಲ್ಲಿ ಭಾಗವಹಿಸಬಹುದು. ಇವರು ಸಹಾ ರೂ.1000/– ಠೇವಣಿ ನೀಡಿ ಭಾಗವಹಿಸುವುದು.
5. ಯಶಸ್ವಿ ಬಿಡ್ಡುದಾರರು/ಟೆಂಡರುದಾರರು ಠೇವಣಿ ಮೊಬಲಗು ಸ್ಥಳದಲ್ಲಿಯೇ ಪಾವತಿಸಬೇಕು. ಸಂಬಂಧಿಸಿದ ಅಧಿಕಾರಿಯ ಅನುಮೋದನೆಯ ನಂತರ ಶೇ.75 ಭಾಗ ಹಾಗೂ ನಿಯಮಾನುಸಾರ ತೆರಿಗೆ ಪಾವತಿಸಿ 7 ದಿನಗಳ ಒಳಗೆ ತಮ್ಮ ಸ್ವಂತ ಖರ್ಚಿನಲ್ಲಿ ಈ ಕಛೇರಿಯಿಂದ ಹರಾಜಾದ ವಸ್ತುಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ತಪ್ಪಿದಲ್ಲಿ ನೀವು ನೀಡಿರುವ ಠೇವಣಿ ಮತ್ತು ಶೇ.25 ಭಾಗ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಲ್ಲದೆ ಯಶಸ್ವಿ ಬಿಡ್ಡುದಾರರು ಆಖೈರು ಬಿಡ್ಡು ಮೊಬಲಗಿನ ಶೇಕಡಾ 25 ಭಾಗ ಪಾವತಿಸದಿದ್ದರೆ ಅವರು ನೀಡಿರುವ ಠೇವಣಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ನಂತರ ಅವರಿಗೆ ಈ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ.
6. ಯಶಸ್ವಿ ಬಿಡ್ಡು / ಟೆಂಡರುದಾರರು ಹೊರತುಪಡಿಸಿ ಉಳಿದವರಿಗೆ ಠೇವಣಿ ಮೊತ್ತ ಹಿಂತಿರುಗಿಸಲಾಗುವುದು.
7. ಹರಾಜು ಕೈಗೊಳ್ಳುವ/ರದ್ದುಪಡಿಸುವ/ಮುಂದೂಡುವ ಹಾಗೂ ಬಿಡ್ ಅಂಗೀಕರಿಸುವ ಮತ್ತು ತಿರಸ್ಕರಿಸುವ ಹಕ್ಕು ಕಾಯ್ದಿರಿಸಿಕೊಳ್ಳಲಾಗಿದೆ.
8. ನಿಯಮಾನುಸಾರ ತೆರಿಗೆಗಳನ್ನು ಪಾವತಿಸಬೇಕಾಗುವುದು.

ಕೃಷಿ ಅಧಿಕಾರಿಗಳು,
ಪಿ.ಆರ್. 705 (ಮಣ್ಣು ಆರೋಗ್ಯ ಕೇಂದ್ರ), ಬೆಂಗಳೂರು–560001

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಮಯಾವಧಿ ವಿಸ್ತರಣೆ

ಲೋ.ಇ:ಮಂ.ವಿ:ಟಿ.ಎನ್.ಡಿ(8):2009–10:ಎಇ–1, ಮಂಗಳೂರು, ದಿನಾಂಕ: 27ನೇ ಆಗಸ್ಟ್ 2009

ದಿನಾಂಕ: 31.7.2009ರ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು ದಿನಾಂಕ:1.8.2009 'ಪ್ರಜಾವಾಣಿ' ದಿನಪತ್ರಿಕೆಗಳಲ್ಲಿ ಪ್ರಕಟವಾದ ಈ ಕಛೇರಿಯ ಟೆಂಡರ್ ನೋಟಿಫಿಕೇಶನ್ ನಂ:ಲೋ.ಇ:ಮಂ.ವಿ:ಟಿ.ಎನ್.ಡಿ(8):2009–10:ಎಇ1: ದಿನಾಂಕ:29.7.2009ರ ಪ್ರಕಟಣೆಯಲ್ಲಿ ಸೂಚಿಸಿದ ಕಾಮಗಾರಿಗಳಿಗೆ ಟೆಂಡರ್‌ನ ಸಮಯಾವಧಿ ವಿಸ್ತರಣೆಯನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ:

1. 5054 ಟಿ.ಎಸ್.ಪಿ (ನಬಾರ್ಡ್)– ಕ್ರಮ ಸಂಖ್ಯೆ 1 ರಿಂದ 3 ಕಾಮಗಾರಿಗಳು.
2. 5054 ಟಿ.ಎಸ್.ಪಿ (ಒ.ಆರ್.ಎಫ್)– ಕ್ರಮ ಸಂಖ್ಯೆ 1 ರಿಂದ 3 ಕಾಮಗಾರಿ.
3. 5054 ಎಸ್.ಸಿ.ಪಿ (ನಬಾರ್ಡ್)– ಕ್ರಮ ಸಂಖ್ಯೆ 1 ರಿಂದ 7 ಕಾಮಗಾರಿಗಳು.
4. 5054 ಎಸ್.ಸಿ.ಪಿ (ಒ.ಆರ್.ಎಫ್)– ಕ್ರಮ ಸಂಖ್ಯೆ 1 ರಿಂದ 6 ಕಾಮಗಾರಿಗಳು.

ಖಾಲಿ ಟೆಂಡರು ಫಾರಂಗಳ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕ: 19.9.2009

ಖಾಲಿ ಟೆಂಡರು ಫಾರಂಗಳನ್ನು ನೀಡುವ ದಿನಾಂಕ: 22.9.2009 ರಿಂದ 23.9.2009

ಭರ್ತಿ ಮಾಡಿದ ಟೆಂಡರು ಸ್ವೀಕರಿಸುವ ಅಂತಿಮ ದಿನಾಂಕ: 25.9.2009ರ ಸಂಜೆ 4.00 ಗಂಟೆಯವರೆಗೆ

ಮೇಲಿನ ಬದಲಾವಣೆಗಳನ್ನು ಹೊರತುಪಡಿಸಿ ಇನ್ನಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ. ಹಾಗೂ http//www.kpwd.gov.in ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 712 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಇ–ಟೆಂಡರ್ – ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ) (2ನೇ ಕರೆ)
ಸಂಖ್ಯೆ:ಲೋ.ಇ:ಮಂವಿ:ಟಿಎನ್‌ಡಿ(27ಇ):2009–10:ಎಇ1, ಮಂಗಳೂರು, ದಿನಾಂಕ: 27ನೇ ಆಗಸ್ಟ್ 2009

1 ಈ ಕೆಳಗೆ ತಿಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಟೆಂಡರ್‌ನ್ನು ಕರ್ನಾಟಕ ಸರಕಾರದ ರಾಜ್ಯಪಾಲರ ಪರವಾಗಿ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ https://eproc.karnataka.gov.in ನಲ್ಲಿ ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರು ಅರ್ಹರಾದ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್‌ನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿರುತ್ತಾರೆ. ಟೆಂಡರುದಾರರು ಟೆಂಡರ್ ನಿಯಮಾವಳಿಯ ಕ್ಲಾಜ್ 3 ರಂತೆ ಕನಿಷ್ಟ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ.

2. ದಿನಾಂಕ: 15.9.2009 ರಿಂದ ಟೆಂಡರುದಾರರು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರು ಡಾಕ್ಯುಮೆಂಟ್‌ಗಳನ್ನು ಪಡೆಯಬಹುದಾಗಿರುತ್ತದೆ. (Download).

3. ಟೆಂಡರುಗಳು ಈ ಕೆಳಗೆ ನೀಡಲಾದ ವಿವರದಂತೆ ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಬೇಕು. ಇ.ಎಂ.ಡಿ.ಯನ್ನು ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬಹುದಾಗಿರುತ್ತದೆ ಮತ್ತು ಅದರ ಊರ್ಜಿತ ಅವಧಿಯು ಟೆಂಡರು ಊರ್ಜಿತ ಅವಧಿಗಿಂತ 45 ದಿನಗಳು ಹೆಚ್ಚಾಗಿ ಇರಬೇಕು.

4. ಟೆಂಡರುಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್‌ನಲ್ಲಿ ದಿನಾಂಕ: 22.9.2009ರ ಅಪರಾಹ್ನ 4.00 ಗಂಟೆ (16 :00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಟೆಂಡರನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯಂತೆ ತೆರೆಯಲಾಗುವುದು.

5. ಹೆಚ್ಚಿನ ವಿವರಗಳನ್ನು ಟೆಂಡರು ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಠೇವಣಿ (ಲಕ್ಷ ರೂ.ಗಳಲ್ಲಿ)	ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ (ಮಳೆಗಾಲ ಸೇರಿ)
	ನಬಾರ್ಡ್ ಆರ್.ಐ.ಡಿ.ಎಫ್–14 (ರಸ್ತೆಗಳು)			
1	ಬಂಟ್ವಾಳ ತಾಲ್ಲೂಕಿನ ಕುಡ್ಡು ಪದವು–ಅಮ್ಟ್ಯ ರಸ್ತೆ ಅಭಿವೃದ್ಧಿ	100.00	2.00	12 ತಿಂಗಳು
2	ಪುತ್ತೂರು ತಾಲ್ಲೂಕಿನ ಐವರನಾಡು–ಪಾಲಪ್ಪಾಡಿ ಅಮಲ ರಸ್ತೆ ಅಭಿವೃದ್ಧಿ	69.00	1.38	9 ತಿಂಗಳು
3	ಸುಳ್ಯ ತಾಲ್ಲೂಕಿನ ನರಕೋಡು–ಕೊಲ್ಚಾರು–ಬಂಡ್ಯಡ್ಕ ರಸ್ತೆ ಅಭಿವೃದ್ಧಿ	95.00	1.90	9 ತಿಂಗಳು

ಕಾರ್ಯನಿರ್ವಾಹಕ ಇಂಜಿನಿಯರ್,
ಪಿ.ಆರ್. 713 ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ಮಂಗಳೂರು ವಿಭಾಗ, ಮಂಗಳೂರು.

Executive Engineer, PWP & IWT Department Mangalore Division, Mangalore Vocational Training Improvement Project (VTIP)

(Credit#: 4319-IN and Project ID:P099047)

INVITATION FOR BID (IFB)

NATIONAL COMPETITIVE BIDDING

No.PWD/MNG/TND(I.T.I)/AE-2/09-10, Dated: 27th August 2009

Bid No.:28/2009-10

1. The Government of India has received a credit from the International Development Association towards the cost of Vocational Training Improvement Project (VTIP) and intends to apply a part of the funds to cover eligible payments under the contracts for construction of works as detailed below. Bidding is open to all bidders from eligible source countries as defined in the IBRD Guidelines for Procurement. Bidders from India should, however, be registered with the Government of Karnataka or other State Government/Government of India, or State /Central Government Undertakings. Bidders are advised to note the minimum qualification criteria specified in Clause 4 of the instruction to Bidders to qualify for the award of the contract.

2. The Karnataka State Centre. Mangalore Division, Mangalore invites bids for the construction of work detailed in the table.

3. Bidding documents (and additional copies) may be purchased from the office of the Executive Engineer, PWP & IWT Department Mangalore Division, Mangalore. from 15.09.2009 to 26.09.2009 for a non-refundable fee (three sets) as indicated, in the form of cash or Demand Draft on any Scheduled bank payable at Mangaloe in favour of Executive Engineer, PWP & IWT Department Mangalore Division, Mangalore. Interested bidders may obtain further information at the same address. Bidding documents requested by mail will be despatched by registered/speed post on payment of an extra amount of Rs.2000/- The Executive Engineer, PWP & IWT Department Mangalore Division, Mangalore, will not be held responsible for the postal delay if any, in the delivery of the documents or non-receipt of the same.

4. Bids must be accompanied by security of the amount specified for the work in the table below, drawn in favour of the The Executive Engineer, PWP & IWT Department Mangalore Division, Mangalore. Bid Security will have to be in any one of the forms as specified in the bidding document and shall have to be valid for 45 days beyond the validity of the bid.

5. Bids must be delivered to the Executive Engineer, PWP & IWT Department Mangalore Division Mangalore on or before 16.00 Hours on 29.09.2009 (date) and will be opened on the same day at 16.30 Hours in the presence of the bidders who wish to attend. If the office happens to be closed on the date of the receipt of the bids as specified, the bids will be received and opened on the next working day at the same time and venue.

6. A pre bid meeting will be held on 22.09.2009 at 11.00 A.M at the office of the Executive Engineer, PWP & IWT Department Mangalore Division, Mangalore to clarify the issues and to answer questions on any matter that may be raised at that stage as stated in Clause 9.2 of instructions to Bidders of the bidding document.

7. Other details can be seen in the bidding documents.

TABLE

package No.	Name of work	Approximate value of work	Bid Security (Rs)	Cost of document (Rs)	Period of Completion
1.	Construction of C.O.E Block for Government I.T.I. at Mangalore in Mangalore Taluk of D.K. District	Rs.85.00 Lakhs	Rs.1.70 Lakhs	Rs.5200/-	6 Months (including Monsoon)
2.	Construction of C.O.E Block for Government I.T.I (Women's) at Narimogaru in Puttur Taluk D.K. District	Rs.85.00 Lakhs	Rs.1.70 Lakhs	Rs [illegible]/-	6 Months (including Monsoon)

P.R. 714

Exe[illegible]
Public Work[illegible] Water
Transport Departmen[illegible] angalore

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಪ್ರಾದೇಶಿಕ, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅರಣ್ಯ ಕಾಮಗಾರಿಗಳ ಟೆಂಡರ್ ಪ್ರಕಟಣೆ

ಸಂಖ್ಯೆ : ಎ2/ಬಿಯುಡಿ/ಸಿ.ಆರ್-10/2009-10, ದಿನಾಂಕ: 15ನೇ ಆಗಸ್ಟ್ 2009.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ವಿವಿಧ ಯೋಜನೆಯಡಿ 2009-10 ನೇ ಸಾಲಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಗೊಳಪಟ್ಟಿರುವ ವಲಯಗಳಲ್ಲಿ **ಷೆಡ್ಯೂಲ್ 'ಎ'** ನಲ್ಲಿ ತೋರಿಸಿರುವ ಕಾಲಬದ್ಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈ ವಿಭಾಗದಲ್ಲಿ ನೋಂದಾಯಿಸಿರುವ ಅರಣ್ಯ ಗುತ್ತಿಗೆದಾರರಿಂದ ಪ್ರತಿಯೊಂದು ಕಾಮಗಾರಿಗಳಿಗೆ ಪ್ರತ್ಯೇಕ ಟೆಂಡರ್ ಕರೆಯಲಾಗಿದೆ.

ದಿನಾಂಕ: 17-9-2009 ರಂದು ಅಪರಾಹ್ನ 3-00 ಗಂಟೆಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಕೆಳಗೆ ಸಹಿ ಮಾಡಿದವರು ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಗಳನ್ನು ಅಪರಾಹ್ನ 3.30 ಗಂಟೆಗೆ ತೆರೆಯುವರು, ಮತ್ತು ಸದರಿ ದಿನಾಂಕದಂದು ಕಾರಣಾಂತರದಿಂದ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ **ದಿನಾಂಕ: 24-9-2009 ರಂದು ಅಪರಾಹ್ನ 3.00 ಗಂಟೆಯೊಳಗೆ** ಎರಡನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿ ಸಲ್ಲಿಸುವ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಸದರಿ ದಿನಾಂಕದಂದು 3.00 ಗಂಟೆಯೊಳಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದಿದ್ದಲ್ಲಿ ಕಾರಣಾಂತರದಿಂದ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ **ದಿನಾಂಕ: 01-10-2009 ರಂದು ಅಪರಾಹ್ನ 3.00 ಗಂಟೆಯೊಳಗೆ** ಮೂರನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿ ಸಲ್ಲಿಸುವ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಟೆಂಡರ್ ಲಕೋಟೆಗಳನ್ನು ಅಪರಾಹ್ನ 3.30 ಗಂಟೆಗೆ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

SCHEDULE – A

2009-10ನೇ_ಸಾಲಿನಲ್ಲಿ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆಯಡಿ ಬೆಳೆಸಬೇಕಾದ ನೆಡುತೋಪುಗಳ ವಿವರ

ಕ್ರ ಸಂ.	ವಲಯ	ಕಾಮಗಾರಿ ತೆಗೆದುಕೊಳ್ಳುವ ಪ್ರದೇಶ	ಕಾಮಗಾರಿಗಳ ವಿವರ	ಮಾದರಿ	ಭೌತಿಕ (ಹೆ.ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. (ಇಡಿಗಂಟು) (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
I. Assisted Natural Re-generation ಮುಂಗಡ ಕಾಮಗಾರಿಗಳು								
1	ಶಿಡ್ಲಘಟ್ಟ	ರಾಗಿಮಾಕಲಹಳ್ಳಿ ಗ್ರಾಮ ಅರಣ್ಯ ಸಮಿತಿ	ಮುಂಗಡ ಕಾಮಗಾರಿಗಳು	02	45	468000-00	11700-00	31-3-2010
2.	ಶಿಡ್ಲಘಟ್ಟ	ಎಸ್.ವೆಂಕಟಾಪುರ ಗ್ರಾಮ ಅರಣ್ಯ ಸಮಿತಿ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	02	50	520000-00	13000-00	31-3-2010
3.	ಚಿಕ್ಕಬಳ್ಳಾಪುರ	ಮಧುರೇನಹಳ್ಳಿ ಸ.ನಂ.37	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	02	50	520000-00	13000-00	31-3-2010
4.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಎಮ್ಮೆಗುಡ್ಡ ರಾಜ್ಯ ಅರಣ್ಯ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	02	50	520000-00	13000-00	31-3-2010
II. ಮಣ್ಣು ಸಂರಕ್ಷಣಾ ಕಾಮಗಾರಿ (S.M.C. WORKS)								
1.	ಶಿಡ್ಲಘಟ್ಟ	ರಾಗಿಮಾಕಲಹಳ್ಳಿ ಗ್ರಾಮ ಅರಣ್ಯ ಸಮಿತಿ	ಮಣ್ಣು ಸಂರಕ್ಷಣಾ ಕಾಮಗಾರಿ	02	45	164700-00	4150-00	31-3-2010
2.	ಶಿಡ್ಲಘಟ್ಟ	ಎಸ್.ವೆಂಕಟಾಪುರ ಗ್ರಾಮ ಅರಣ್ಯ ಸಮಿತಿ	ಮಣ್ಣು ಸಂರಕ್ಷಣಾ ಕಾಮಗಾರಿ (ಹೆಚ್ಚುವರಿ ಅಂದಾಜು ಗುರಿ)	02	50	183000-00	4600-00	31-3-2010
3.	ಚಿಕ್ಕಬಳ್ಳಾಪುರ	ಮಧುರೇನಹಳ್ಳಿ ಸ.ನಂ.37	ಮಣ್ಣು ಸಂರಕ್ಷಣಾ ಕಾಮಗಾರಿ (ಹೆಚ್ಚುವರಿ ಅಂದಾಜು ಗುರಿ)	02	50	183000-00	4600-00	31-3-2010

ಕ್ರ ಸಂ.	ವಲಯ	ಕಾಮಗಾರಿ ತೆಗೆದುಕೊಳ್ಳುವ ಪ್ರದೇಶ	ಕಾಮಗಾರಿಗಳ ವಿವರ	ಮಾದರಿ	ಭೌತಿಕ (ಹೆ.ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. (ಇಡಿಗಂಟು) (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
4.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಎಮ್ಮೆಗುಡ್ಡ ರಾಜ್ಯ ಅರಣ್ಯ	ಮಣ್ಣು ಸಂರಕ್ಷಣಾ ಕಾಮಗಾರಿ (ಹೆಚ್ಚುವರಿ ಅಂದಾಜು ಗುರಿ)	02	50	183000–00	4600–00	31–3–2010
III. Advance works for Fuel wood & Small Timber Production Plantation ಮುಂಗಡ ಕಾಮಗಾರಿಗಳು								
1	ಶಿಡ್ಲಘಟ್ಟ	ಅಂಬಿಗಾನಹಳ್ಳಿ ಬ್ಲಾಕ್–I	ಮುಂಗಡ ಕಾಮಗಾರಿಗಳು	04	25	359350–00	9000–00	31–3–2010
2	ಶಿಡ್ಲಘಟ್ಟ	ಅಂಬಿಗಾನಹಳ್ಳಿ ಬ್ಲಾಕ್–II	ಮುಂಗಡ ಕಾಮಗಾರಿಗಳು	04	25	359350–00	9000–00	31–3–2010
3.	ಶಿಡ್ಲಘಟ್ಟ	ಎಸ್.ವೆಂಕಟಾಪುರ	ಮುಂಗಡ ಕಾಮಗಾರಿಗಳು	04	25	359350–00	9000–00	31–3–2010
4.	ಚಿಂತಾಮಣಿ	ಉಲ್ಲಪ್ಪನಹಳ್ಳಿ	ಮುಂಗಡ ಕಾಮಗಾರಿಗಳು	04	25	359350–00	9000–00	31–3–2010
5.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಬ್ಲಾಕ್– I	ಮುಂಗಡ ಕಾಮಗಾರಿಗಳು	04	25	359350–00	9000–00	31–3–2009
6.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಬ್ಲಾಕ್– II ಎಮ್ಮೆಗುಡ್ಡ ರಾಜ್ಯ ಅರಣ್ಯ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	04	25	359350–00	9000–00	31–3–2010
7.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಬ್ಲಾಕ್– III ಎಮ್ಮೆಗುಡ್ಡ ರಾಜ್ಯ ಅರಣ್ಯ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	04	25	359350–00	9000–00	31–3–2010
IV. ಮಣ್ಣು ಸಂರಕ್ಷಣಾ ಕಾಮಗಾರಿ (S.M.C. WORKS)								
1	ಶಿಡ್ಲಘಟ್ಟ	ಅಂಬಿಗಾನಹಳ್ಳಿ	ಮಣ್ಣು ಸಂರಕ್ಷಣಾ ಕಾಮಗಾರಿ	04	25	140750–00	3550–00	31–3–2010
2	ಶಿಡ್ಲಘಟ್ಟ	ಅಂಬಿಗಾನಹಳ್ಳಿ	ಮಣ್ಣು ಸಂರಕ್ಷಣಾ ಕಾಮಗಾರಿ	04	25	140750–00	3550–00	31–3–2010
3.	ಶಿಡ್ಲಘಟ್ಟ	ಎಸ್.ವೆಂಕಟಾಪುರ	ಮಣ್ಣು ಸಂರಕ್ಷಣಾ ಕಾಮಗಾರಿ	04	25	140750–00	3550–00	31–3–2010
4.	ಚಿಂತಾಮಣಿ	ಉಲ್ಲಪ್ಪನಹಳ್ಳಿ	ಮಣ್ಣು ಸಂರಕ್ಷಣಾ ಕಾಮಗಾರಿ	04	25	140750–00	3550–00	31–3–2010
5.	ಗೌರಿಬಿದನೂರು	ಗೊಡ್ಡಾವಲಹಳ್ಳಿ	ಮಣ್ಣು ಸಂರಕ್ಷಣಾ ಕಾಮಗಾರಿ	04	25	140750–00	3550–00	31–3–2009
6.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಬ್ಲಾಕ್– I ಎಮ್ಮೆಗುಡ್ಡ ರಾಜ್ಯ ಅರಣ್ಯ	ಮಣ್ಣು ಸಂರಕ್ಷಣಾ ಕಾಮಗಾರಿ (ಹೆಚ್ಚುವರಿ ಅಂದಾಜು ಗುರಿ)	04	25	140750–00	3550–00	31–3–2010
7.	ಗೌರಿಬಿದನೂರು	ಗೊಡ್ಡಾವಲಹಳ್ಳಿ ಬ್ಲಾಕ್– II ಎಮ್ಮೆಗುಡ್ಡ ರಾಜ್ಯ ಅರಣ್ಯ	ಮಣ್ಣು ಸಂರಕ್ಷಣಾ ಕಾಮಗಾರಿ (ಹೆಚ್ಚುವರಿ ಅಂದಾಜು ಗುರಿ)	04	25	140750–00	3550–00	31–3–2010
V. ಕ್ಷೀಣಿತ ಅರಣ್ಯ ಅಭಿವೃದ್ಧಿ ಯೋಜನೆ (DDF)								
1	ಬಾಗೇಪಲ್ಲಿ	ರಾಮೋಜಿಪಲ್ಲಿ	ಮುಂಗಡ ಕಾಮಗಾರಿಗಳು	–	20	219080–00	5500–00	31–3–2010
VI Forest Protection Regenaration & Cultural Operation -139 Major Works								
1.	ಶಿಡ್ಲಘಟ್ಟ	ಪಲಿಚೆರ್ಲು	ಮುಂಗಡ ಕಾಮಗಾರಿಗಳು	–	25	362600–00	9100–00	31–3–2010
VII. Eco-Tourism-139-Major Works								
1.	ಚಿಂತಾಮಣಿ	ಕೈವಾರ ತಪೋವನ	Formation of Trekking path	–	2 kms	25000–00	650–00	31–3–2010
2.	ಚಿಂತಾಮಣಿ	ಕೈವಾರ ತಪೋವನ	Construction of poltforms for tents 12'x8' size	–	5 Nos	75000–00	3500–00	31–3–2010
3	ಚಿಂತಾಮಣಿ	ಕೈವಾರ ತಪೋವನ	Construction of	–	1 No.	50000–00	1250–00	31–3–2010

ಕ್ರ. ಸಂ.	ವಲಯ	ಕಾಮಗಾರಿ ತೆಗೆದುಕೊಳ್ಳುವ ಪ್ರದೇಶ	ಕಾಮಗಾರಿಗಳ ವಿವರ	ಮಾದರಿ	ಭೌತಿಕ (ಹೆ.ಗಳಲ್ಲಿ)	ಟೆಂಡರ್ ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. (ಇಡಿಗಂಟು) (ರೂ.ಗಳಲ್ಲಿ)	ಕಾಮಗಾರಿ ಪೂರೈಸ ಬೇಕಾದ ದಿನಾಂಕ
			store room					
4.	ಚಿಂತಾಮಣಿ	ಕೈವಾರ ತಪೋವನ	Construction of Pargola/repairs to existing Pargola	–	5 Nos.	150000–00	4000–00	31–3–2010
5.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	Construction of Pargola	–	1 No.	100000–00	2500–00	31–3–2010
			VIII. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ (K.F.D.F.)					
1.	ಶಿಡ್ಲಘಟ್ಟ	ತಿರುಮಲ್ಲಯ್ಯನ ದಿಣ್ಣೆ/ ಕೆಂಪನಹಳ್ಳಿ	ಮುಂಗಡ ಕಾಮಗಾರಿಗಳು	–	22 ಹೆ.	319088–00	8000–00	31–3–2010
2.	ಶಿಡ್ಲಘಟ್ಟ	ಪಲಿಚೆರ್ಲು	ಮುಂಗಡ ಕಾಮಗಾರಿಗಳು	–	22 ಹೆ.	319088–00	8000–00	31–3–2010
3	ಚಿಕ್ಕಬಳ್ಳಾಪುರ	ತಿಪ್ಪೇನಹಳ್ಳಿ ಸ.ನಂ.84 ಎನ್.ಡಿ.ಬಿ. 2ನೇ ಬ್ಲಾಕ್	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	–	25 ಹೆ.	362600–00	9100–00	31–3–2010
4.	ಗೌರಿಬಿದನೂರು	ಕುರುಡಿ ಬ್ಲಾಕ್–1	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	–	25 ಹೆ.	362600–00	9100–00	31–3–2010
5.	ಗೌರಿಬಿದನೂರು	ಕುರುಡಿ ಬ್ಲಾಕ್–2	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	–	25 ಹೆ.	362600–00	9100–00	31–3–2010
6.	ಬಾಗೇಪಲ್ಲಿ	ಪಾಲಿಕೆರೆ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	–	25 ಹೆ.	362600–00	9100–00	31–3–2010
7.	ಬಾಗೇಪಲ್ಲಿ	ಯಲ್ಲಂಪಲ್ಲಿ	ಮುಂಗಡ ಕಾಮಗಾರಿಗಳು (ಹೆಚ್ಚುವರಿ ಅಂದಾಜು ಗುರಿ)	–	25 ಹೆ.	362600–00	9100–00	31–3–2010

ದಿನಾಂಕ:17–9–2009, 24–10–2009 ಮತ್ತು 01–10–2009 ರಂದು ನಡೆಯಲಿರುವ ಟೆಂಡರ್‌ಗಳಿಗೆ ಟೆಂಡರ್ ನಮೂನೆಗಳನ್ನು ಅನುಕ್ರಮವಾಗಿ ದಿನಾಂಕ: 15–09–2009, 22–09–2009 ಮತ್ತು 29–9–2009 ರಂದು ಮಧ್ಯಾಹ್ನ 1.00 ಗಂಟೆವರೆಗೆ ಕಛೇರಿ ವೇಳೆಯಲ್ಲಿ ನೀಡಲಾಗುವುದು. ಒಂದು ಟೆಂಡರ್ ಫಾರಂನ ಬೆಲೆ ರೂ. 200/– (ತೆರಿಗೆ ಪ್ರತ್ಯೇಕ), ಒಂದೊಂದು ಕೆಲಸಕ್ಕೆ (ಒಂದು ಯುನಿಟ್‌ಗೆ) ಠೇವಣಿಯನ್ನು ಡಿ.ಡಿ. ರೂಪದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಚಿಕ್ಕಬಳ್ಳಾಪುರ ಇವರ ಹೆಸರಿಗೆ ಷೆಡ್ಯೂಲ್ ಕಾಲಂ ಸಂಖ್ಯೆ 8 ರಲ್ಲಿ ನಮೂದಿಸಿರುವಂತೆ ಟೆಂಡರ್ ನಮೂನೆಯೊಂದಿಗೆ ಲಗತ್ತಿಸಬೇಕು. ಹೆಚ್ಚಿನ ವಿವರಗಳಿಗೆ ಈ ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.

ವಿವರವಾದ ಟೆಂಡರ್ ಷರತ್ತುಗಳು

1. ಟೆಂಡರ್‌ನಲ್ಲಿ ಭಾಗವಹಿಸುವವರು ಈ ವಿಭಾಗದಲ್ಲಿ 2009–10 ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೋಂದಾಯಿಸಿಕೊಂಡಿರಬೇಕು.
2. ಟೆಂಡರ್ ಫಾರಂಗಳನ್ನು ಪ್ರತಿ ಫಾರಂಗೆ ರೂ. 200/–(ತೆರಿಗೆ ಪ್ರತ್ಯೇಕ) ಪಾವತಿ ಮಾಡಿ ದಿನಾಂಕ: 15–9–2009 ಮತ್ತು ದಿನಾಂಕ: 22–9–2009 ಮತ್ತು 29–9–2009 ರಂದು ಕಛೇರಿ ಕೆಲಸದ ವೇಳೆಯಲ್ಲಿ 1.00 ಗಂಟೆಯವರೆಗೆ ಪಡೆಯತಕ್ಕದ್ದು.
3. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ವಲಯವಾರು ಮತ್ತು ಕೆಲಸವಾರು ಮೊಹರು ಮಾಡಿದ ಲಕೋಟೆಯಲ್ಲಿ ಸಲ್ಲಿಸುವುದು.
4. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ: 17–9–2009 ರಂದು ಮಧ್ಯಾಹ್ನ 1.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಚಿಕ್ಕಬಳ್ಳಾಪುರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಮೇಲ್ಕಂಡ ದಿನಾಂಕದಂದು ಕಾರಣಾಂತರದಿಂದ ಟೆಂಡರ್ ನಡೆಯದಿದ್ದರೆ ಇದೇ

ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 24–9–2009 ರಂದು ಅಪರಾಹ್ನ 3.00 ಗಂಟೆಯೊಳಗೆ ಎರಡನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿ ಸಲ್ಲಿಸುವ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಮತ್ತು ಸದರಿ ದಿನಾಂಕದಂದು 3.00 ಗಂಟೆಯೊಳಗೆ ಟೆಂಡರ್‌ಗಳನ್ನು ತೆರೆಯಲಾಗುವುದು. ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದಿದ್ದಲ್ಲಿ ಕಾರಣಾಂತರದಿಂದ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ ದಿನಾಂಕ: 1–10–2009 ರಂದು ಅಪರಾಹ್ನ 3.00 ಗಂಟೆಯೊಳಗೆ ಮೂರನೇ ಬಾರಿಗೆ ನೋಂದಾಯಿತ ಇಚ್ಛೆಯುಳ್ಳ ಅರಣ್ಯ ಗುತ್ತಿಗೆದಾರರಿಂದ ಭರ್ತಿ ಮಾಡಿ ಸಲ್ಲಿಸುವ ಟೆಂಡರ್‌ಗಳನ್ನು ಸ್ವೀಕೃತಿ ಮಾಡಲಾಗುವುದು ಟೆಂಡರ್ ಲಕೋಟೆಗಳನ್ನು ಅಪರಾಹ್ನ 3.30 ಗಂಟೆಗೆ ಟೆಂಡರ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

5. ಈ ಅರಣ್ಯ ಕಾಮಗಾರಿಗಳು ಕಾಲಬದ್ಧ ಕೆಲಸಗಳಾಗಿದ್ದು ಈ ಎಲ್ಲಾ ಕೆಲಸಗಳನ್ನು ಋತುಮಾನಕ್ಕೆ ಅನುಗುಣವಾಗಿ (ಕಾಲಬದ್ಧ) ಆಯಾ ವಲಯ ಅರಣ್ಯಾಧಿಕಾರಿಗಳ ನಿರ್ದೇಶನ ಮತ್ತು ಮೇಲಾಧಿಕಾರಿಗಳ ನಿರ್ದೇಶನದಂತೆಯೂ ಜಾರಿಗೊಳಿಸಲು ಬದ್ಧರಾಗಿರಬೇಕು. ಮೇಲಿನ ಕೆಲಸಗಳು ಕಾಲಬದ್ಧವಾಗಿದ್ದು, ಒಂದು ಪಕ್ಷ ಯಾವುದಾದರೂ ವಲಯದಲ್ಲಿ ಟೆಂಡರ್‌ಗೆ ಮುಂಚೆ ಕೆಲಸಗಳನ್ನು ಕೈಗೊಂಡಿದ್ದ ಪಕ್ಷದಲ್ಲಿ ಕೆಲವು ಕೆಲಸಗಳನ್ನು ಕೈ ಬಿಡಬೇಕಾದ ಸಂದರ್ಭದಲ್ಲಿ ಅಂತಹ ಕೆಲಸಗಳು ಈ ಪ್ರಕಟಣೆಯಿಂದ ಹೊರತುಪಡಿಸಿದವುಗಳಾಗಿರುತ್ತವೆ. ಮತ್ತು ಒಂದು ವೇಳೆ ಸ್ಥಳ ಬದಲಾವಣೆಯಾದರೂ ಸಹ ಅಂತಹ ಕೆಲಸಗಳನ್ನು ಗುರುತುಪಡಿಸಿಕೊಟ್ಟ ಸ್ಥಳದಲ್ಲಿ ಪೂರ್ಣಗೊಳಿಸಬೇಕಾಗುತ್ತದೆ.
6. ಪ್ರತಿ ಟೆಂಡರ್‌ದಾರರು ಈ ಕಾಮಗಾರಿಯನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವಾಹನಗಳ ವ್ಯವಸ್ಥೆಯನ್ನು ಸ್ವತಂತ್ರವಾಗಿ ಮಾಡಿಕೊಳ್ಳಬೇಕು.
7. ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗದಿಪಡಿಸಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಚಿಕ್ಕಬಳ್ಳಾಪುರ ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ. ರೂಪದಲ್ಲಿ ಪಡೆದು ಪಾವತಿಸಬೇಕಾಗಿರುತ್ತದೆ.
8. ಗುತ್ತಿಗೆದಾರರು ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅವುಗಳನ್ನು ತಿರಸ್ಕರಿಸಲಾಗುವುದು ಮತ್ತು ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಚಿಕ್ಕಬಳ್ಳಾಪುರ ರವರ ತೀರ್ಮಾನವೇ ಅಂತಿಮವಾಗಿರುತ್ತದೆ.
9. ನಿಗದಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ.
10. ಯಾವುದೇ ಕಾರಣಗಳನ್ನು ನೀಡದೆ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ವಿಭಾಗ, ಚಿಕ್ಕಬಳ್ಳಾಪುರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.
11. ಈ ಮೇಲಿನ ಕಾಮಗಾರಿ ಅನುಷ್ಠಾನ ಸಂಬಂಧ ಹಣ ಪಾವತಿಸುವುದು ಆಯಾ ಯೋಜನೆಗಳಡಿ ಬಿಡುಗಡೆಗೊಳಿಸುವ ಅನುದಾನ ಹಾಗೂ ಅನುಮೋದನೆಯ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಒಂದು ಪಕ್ಷ ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ಹಣಕ್ಕೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.
12. ಟೆಂಡರ್ ಪ್ರಕಟಣೆ ಕಲಂ 6 ಮತ್ತು 7 ರಲ್ಲಿ ತೋರಿಸಿರುವ ಯುನಿಟ್ ಕಾಸ್ಟ್ (Unit Cost) ಮತ್ತು ಅಂದಾಜು ಮೊತ್ತ (Estimated Cost) ಮಂಜೂರಾದ ಅಂದಾಜು ಪಟ್ಟಿಯಲ್ಲಿ (Sanction Estimate) ವಿವರವಾಗಿ ತಿಳಿಸಿರುವ ಎಲ್ಲಾ ಕೆಲಸಗಳನ್ನು ಮಂಜೂರಾದ ಅಂದಾಜು ಪಟ್ಟಿಗಳು ಮತ್ತು ಇಲಾಖೆಯವರು ನಿಗದಿಪಡಿಸಿದ ಅಳತೆಗಳ ಪ್ರಕಾರ ಕೈಗೊಳ್ಳಬೇಕು. ವನಪಾಲಕರು ಮತ್ತು ವಲಯ ಅರಣ್ಯಾಧಿಕಾರಿಗಳ ಉಸ್ತುವಾರಿಯಲ್ಲಿ ಆಗಿಂದಾಗ್ಗೆ ಮುಕ್ತಾಯವಾದ ಕೆಲಸಗಳನ್ನು ಸಂಬಂಧಪಟ್ಟ ವನಪಾಲಕರು ಕ್ಷೇತ್ರ ಟಿಪ್ಪಣಿ ಪುಸ್ತಕದಲ್ಲಿ (ಎಫ್.ಎನ್.ಬಿ) ದಾಖಲು ಮಾಡಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳು ಶೇ 100 ರಷ್ಟು ಕ್ಷೇತ್ರ ಅಳತೆ ಮಾಡಿದ ನಂತರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಮೇಲಾಧಿಕಾರಿಗಳಿಂದ ತನಿಖೆ ಮಾಡಿಸಿ, ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಕ್ಷೇತ್ರ ಟಿಪ್ಪಣಿ ಪುಸ್ತಕದೊಂದಿಗೆ (ಎಫ್.ಎನ್.ಬಿ) ಉಪಸಂರಕ್ಷಣಾಧಿಕಾರಿಯವರ ಕಛೇರಿಗೆ ಚಿಕ್ಕಬಳ್ಳಾಪುರ ವಿಭಾಗಕ್ಕೆ ಒಪ್ಪಿಸಬೇಕಾಗುತ್ತದೆ. ಬಿಲ್ ಹಣ ಸಂದಾಯ ಮಾಡುವಾಗ ಬಿಲ್‌ಗಳಲ್ಲಿ ನಿಯಮದಂತೆ ಸರ್ಕಾರವು ನಿಗದಿಪಡಿಸಿರುವ ಎಲ್ಲಾ ತೆರಿಗೆಗಳನ್ನು ಒಂದೇ ಬಾರಿಗೆ ಕಡಿತಗೊಳಿಸಲಾಗುವುದು. ಮತ್ತು ತೆರಿಗೆಗಳು ಸರ್ಕಾರದ ಆದೇಶದ ಅನ್ವಯ ಪರಿಷ್ಕೃತವಾದಲ್ಲಿ ನಿಯಮದಂತೆ ಕಡಿತಗೊಳಿಸಲಾಗುವುದು.
13. ಕೆಲಸಗಳನ್ನು ನಿರ್ವಹಿಸುವಾಗ ನೆಡುತೋಪುಗಳು / ನರ್ಸರಿಗಳಲ್ಲಿ ಹಾಳು ಮಾಡಿದಲ್ಲಿ, ಗಿಡ, ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟವನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ವಸೂಲು ಮಾಡಲಾಗುವುದು./ ಬಿಲ್ಲುಗಳಲ್ಲಿ ಕಟಾವು ಮಾಡಲಾಗುವುದು ಮತ್ತು ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

14. ಟೆಂಡರ್‌ನಲ್ಲಿ ಭಾಗವಹಿಸಲಿಚ್ಛಿಸುವ ಗುತ್ತಿಗೆದಾರರು **"ಕರ್ನಾಟಕ ಸಾರ್ವಜನಿಕ ಸಂಗ್ರಹಣದಲ್ಲಿ ಪಾರದರ್ಶಕ ಕಾಯ್ದೆ 1999 (1)·(ಎ)"** ದಂತೆ ಮೇಲೆ ನಮೂದಿಸಿದ ರೀತಿಯ ಕೆಲಸಗಳನ್ನು ಕರ್ನಾಟಕ ಅರಣ್ಯ ಇಲಾಖೆಯ ಯಾವುದೇ ವಿಭಾಗದಲ್ಲಿ ಕನಿಷ್ಠ ಒಂದು ವರ್ಷ ಸಮರ್ಪಕವಾಗಿ ನಿರ್ವಹಿಸಿದ ಅನುಭವ ಹೊಂದಿರಬೇಕು. ಹಾಗೂ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕೃತ ಪತ್ರಗಳನ್ನು ಒದಗಿಸಬೇಕು.
15. ಯಾವುದೇ ಅರಣ್ಯ ವಿಭಾಗದಲ್ಲಿ ಗುತ್ತಿಗೆದಾರರು ಡಿ–ಫಾಲ್ಟರ್ ಆಗಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ.
16. ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತು ಇತರೆ ಅನುಕೂಲಗಳನ್ನು ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರ ಯಾವುದೇ ನಷ್ಟ ಹಾನಿ ಇತ್ಯಾದಿಗಳಿಗೆ ಜವಾಬ್ದಾರರಲ್ಲ.
17. ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿದಲ್ಲಿ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ / ಅವಕಾಶವಿರುವುದಿಲ್ಲ.
18. ಯಾವುದೇ ನ್ಯಾಯಾಲಯಗಳಲ್ಲಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟಂತಹ ಯಾವುದೇ ವ್ಯಕ್ತಿಗಳು ಈ ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ.
19. ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜು ಪಟ್ಟಿಗಳ ಅಂದಾಜು ಸಂಭವನೀಯ ದರವಾಗಿರುತ್ತದೆ. ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಾಗೂ ಕ್ಷೇತ್ರ ಅಳತೆಗಳನುಸಾರವಾಗಿ ಹಣ ಪಾವತಿಸಲಾಗುವುದು.
20. ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಗೆ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಮೇಲಾಧಿಕಾರಿಗಳು ಕಾಲಕಾಲಕ್ಕೆ ನೀಡುವ ಲಿಖಿತ/ಮೌಖಿಕ ಆದೇಶಗಳಿಗನುಗುಣವಾಗಿ ಇರತಕ್ಕದ್ದು ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.
21. ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು ಅತಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಮಂಜೂರಾದ ದರಗಳಲ್ಲಿ ಶೇ.5 ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಮತ್ತು ಮೇಲಾಧಿಕಾರಿಗಳು ನೀಡುವ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇ.ಎಂ.ಡಿ. ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
22. ಟೆಂಡರ್ ಕಂಪನಿಯ ವತಿಯಿಂದ / ಸಂಘ ಸಂಸ್ಥೆಗಳು ಕೊಡುವ ಸಂದರ್ಭದಲ್ಲಿ
    - ಆ) ಕಂಪನಿಯ / ಸಂಘ ಸಂಸ್ಥೆಗಳು ನೋಂದಾಯಿತ ಸಂಸ್ಥೆಗಳಾಗಿರಬೇಕು.
    - ಇ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಹಾಕಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರಿನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.
23. ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇ.ಎಂ.ಡಿ. ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೋಂದಾವಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೋಂದಾವಣೆಯಾಗಿರಬೇಕು. ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.
24. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೆ ಯಾವುದೇ ಕೆಲಸಗಳನ್ನು ಪ್ರಾರಂಭಿಸಬಾರದು. ಟೆಂಡರಿನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ವಿಭಾಗ ಇವರಿಂದ ತಿಳುವಳಿಕೆ ನೀಡಿದ ಏಳು (7) ದಿನಗಳೊಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ರೂ.200/– ಮೌಲ್ಯದ ಛಾಪಾ ಕಾಗದದಲ್ಲಿ ಸಲ್ಲಿಸಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಲಿಖಿತ ಆದೇಶವನ್ನು ಪಡೆದು ಕೆಲಸ ಪ್ರಾರಂಭಿಸತಕ್ಕದ್ದು. ಈ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ಇವರು ಹೊಂದಿರುತ್ತಾರೆ.
25. ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ಅಥವಾ ನಿಗದಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಅಥವಾ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇ.ಎಂ.ಡಿ. ಮತ್ತು ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಗುತ್ತಿಗೆ ಕೆಲಸವನ್ನು

ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963 ರ ಕಲಂ 109 ಮತ್ತು 119 ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

26. ಯಶಸ್ವಿಯಾದ ಬಿಡ್‌ದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5 ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣ ಕಾಮಗಾರಿಗಳು ಪೂರ್ಣಗೊಳಿಸಿದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ಮತ್ತು ಕಾಮಗಾರಿಯ ಮುಕ್ತಾಯ ವರದಿ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

27. ಕೆಲಸ ಪೂರ್ಣಗೊಂಡ ದಿನಾಂಕದಿಂದ ಒಂದು (1) ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ಲೋಪ/ದೋಷ ಕಂಡು ಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಿಂದ ಲೋಪ/ದೋಷ ಪರಿಹರಿಸಬೇಕಾಗುವುದು.

28. ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ / ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ಅದಕ್ಕೆ ಗುತ್ತಿಗೆದಾರರೆ ಜವಾಬ್ದಾರರಾಗಿದ್ದು ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಗುತ್ತಿಗೆದಾರರೇ ನೀಡಬೇಕಾಗುತ್ತದೆ.

29. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೆ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

30. ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೋಂದಣಿ ಮಾಡಲಾಗುವುದಿಲ್ಲ.

31. ಸರ್ಕಾರದಿಂದ ಆಗಿಂದಾಗ್ಗೆ ಬರುವ ಆದೇಶಗಳನ್ವಯ ಕಾಲಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ಪ್ರಾದೇಶಿಕ ಅರಣ್ಯ ವಿಭಾಗದವರು ವಿಧಿಸುವ ಷರತ್ತುಗಳಿಗೆ ಬದಲಾವಣೆಗಳಿಗೆ ಗುತ್ತಿಗೆದಾರರು ಬದ್ದರಾಗಿರಬೇಕು.

32. ಟೆಂಡರ್ ಫಾರಂಗಳನ್ನು ಬೇರೆಯವರ ಹೆಸರಿಗೆ ಪರಭಾರೆ ಮಾಡುವಂತಿಲ್ಲ. ಈ ಕಛೇರಿಯಿಂದ ನೀಡಲಾದ ಅಧಿಕೃತ ಟೆಂಡರ್ ಫಾರಂಗಳನ್ನು ಹೊರತು ಪಡಿಸಿ ಬೇರಾವ ಮುದ್ರಿತ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.

33. ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕೆಲಸದ ಸ್ಥಳ ಪರಿಮಾಣಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತವೆ. ಇದಕ್ಕೆ ಕಾಮಗಾರಿಗಳ ತತ್ಸಂಬಂಧಿತ ವ್ಯತ್ಯಾಸದ ಪರಿ ಪ್ರಮಾಣಕ್ಕೆ ಪ್ರತ್ಯೇಕ ಟೆಂಡರು ಕರೆಯಲಾಗುವುದಿಲ್ಲ. ಆದರೆ, ಅದೇ ದರದಲ್ಲಿ ವ್ಯತ್ಯಾಸಿತ ಪರಿಮಾಣದ ಕೆಲಸಗಳನ್ನು ಕೈಗೊಳ್ಳಲು ಬದ್ಧರಾಗಿರಬೇಕಾಗುತ್ತದೆ.

34. ಸಕ್ಷಮ ಪ್ರಾಧಿಕಾರದ ನಿರ್ಧಾರದ ಮೇರೆಗೆ ಯಾವುದೇ ಕಾಮಗಾರಿ ತೆಗೆದು ಹಾಕುವ ಹೊಸದಾಗಿ ಸೇರ್ಪಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

35. ಕಾಮಗಾರಿಗಳಿಗೆ ನಿರ್ಧಿಷ್ಟ ಪಡಿಸಿದ ಮೊತ್ತವು ನೆಡುತೋಪು ಕಾವಲು ಕೆಲಸದ ಮೊತ್ತವನ್ನು ಒಳಗೊಂಡಿದ್ದು ಕಾಮಗಾರಿ ನಿರ್ವಹಣೆ ಬಾಬ್ತು ಪಾವತಿಯಲ್ಲಿ ಕಾವಲು ಮೊತ್ತವನ್ನು ಕಳೆದು ಪಾವತಿಸಲಾಗುವುದು.

36. ಎಂಪ್ಲಾಯೀಸ್ ಪ್ರಾವಿಡೆಂಟ್ ಫಂಡ್ ಮತ್ತು ಲೇಬರ್ ವೇಜಸ್ ಆ್ಯಕ್ಟ್ ವಿಧಿಸಿದ ಎಲ್ಲಾ ಷರತ್ತುಗಳಿಗೂ ಗುತ್ತಿಗೆದಾರರೆ ಜವಾಬ್ಧಾರರಾಗಿರುತ್ತಾರೆ. ಮತ್ತು ಈ ಸಂಬಂಧ ಉದ್ಭವವಾಗುವ ಎಲ್ಲಾ ಕಾನೂನು ಮತ್ತು ವ್ಯಾಜ್ಯಗಳಿಗೆ ಗುತ್ತಿಗೆದಾರರೆ ಹೊಣೆಯಾಗಿರತಕ್ಕದ್ದು.

37. ಟೆಂಡರ್ ಪ್ರಕಟಣೆ ಕಾಲಂ 6 ಮತ್ತು 7 ರಲ್ಲಿ ತೋರಿಸಿರುವ ಭೌತಿಕ ಗುರಿ ಮತ್ತು ಅಂದಾಜು ಮೊತ್ತ (Estimated Cost) ಗಳಲ್ಲಿ ಹೆಚ್ಚು ಮತ್ತು ಕಡಿಮೆ ವ್ಯತ್ಯಾಸವಾದಲ್ಲಿ ಗುತ್ತಿಗೆದಾರರು ಬದ್ಧರಾಗಿರತಕ್ಕದ್ದು.

38. ಷೆಡ್ಯೂಲ್(ಎ)ನಲ್ಲಿ ನಮೂದಿಸಿರುವ ರೋಮನ್ ಸಂಖ್ಯೆ: Iರ (Assisted Natural Re-generation)ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ: (2) (3) ಮತ್ತು (4) ರೋಮನ್ ಸಂಖ್ಯೆ II ರ S.M.C. ಕಾಮಗಾರಿಗಳಲ್ಲಿ ಕ್ರಮ ಸಂಖ್ಯೆ: 2,3 ಮತ್ತು 4 ರೋಮನ್ ಸಂಖ್ಯೆ: III ರ (Fuelwood and Small Timber Protection) ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ: 6 ಮತ್ತು 7 ರೋಮನ್ ಸಂಖ್ಯೆ: IVರ S.M.C. ಕಾಮಗಾರಿಗಳಲ್ಲಿ 6 ಮತ್ತು 7 ಹಾಗೂ ರೋಮನ್ ಸಂಖ್ಯೆ 8 ರ ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ: 3,4,5,6 ಮತ್ತು 7ರ ಕಾಮಗಾರಿಗಳು ಹೆಚ್ಚುವರಿ ಅಂದಾಜು ಗುರಿಯಾಗಿದ್ದು ಸದರಿ ಕಾಮಗಾರಿಗಳು, ಮೇಲಾಧಿಕಾರಿಗಳಿಂದ ಅನುಮೋದನೆಗೊಂಡಲ್ಲಿ ಮಾತ್ರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ.

ಪಿ.ಆರ್. 723

PUBLIC WORKS, PORTS & INLAND WATER TRANSPORT DEPARTMENT

Office of the Executive Engineer, National Highway Division, Chitradurga

No.ENH/CTA/AE-1 /T.Noti/NH-206/UT//2009-10/1172, Dated: 29th August 2009

2nd CALL SHORT TERM TENDER NOTIFICATION UNDER E-PROCUREMENT

(Two Cover System)

Tender is invited from the qualified bidders for the following works under E-procurement procedure.

Sl No	Name of Work	Amount put to tender Amount in Rs	Bid Security /EMD. Amount in Rs
1	Shifting **of water supply pipe line** from KM 202.00 to 205.20 of NH-206 Tumkur-Honnavara Section under job No:206/KNT/2009/591	4831680.00	96700.00

Last Date & Time for Tender Queries/ Clarifications : 9-9-2009 16 Hours.
Last Date & Time for receipt of tenders 11-9-2009 16 Hours
Date & Time for Opening of Technical Bid 14-09-2009 11 Hours
Date & Time for Opening of Financial Bid : 16-09-2009 11 Hours

Further details can be had from the office of the Executive Engineer, National Highway Division, Chitradurga, during working hours and in Government Website: http://eproc.karnataka.gov.in.

Executive Engineer, NH Dn., Chitradurga.

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಾಷ್ಟ್ರೀಯ ಹೆದ್ದಾರಿ ವಿಭಾಗ, ಚಿತ್ರದುರ್ಗ

ನಂ. ಇಎನ್‌ಹೆಚ್/ಸಿಟಿಎ/ಎಇ-1/ಟಿಎನ್‌ಓಟಿಐ/ಎನ್‌ಹೆಚ್-206/2009-10/1172, ದಿನಾಂಕ: 29ನೇ ಆಗಸ್ಟ್ 2009

ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಡಿಯಲ್ಲಿಯ ಅಲ್ಪಾವಧಿ ಟೆಂಡರ್ 2 ನೇ ಕರೆ

(ಎರಡು ಲಕೋಟೆ ಪದ್ಧತಿ)

ಕರ್ನಾಟಕ ರಾಜ್ಯ ರಾಜ್ಯಪಾಲರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ವಿಭಾಗ ಚಿತ್ರದುರ್ಗ ಕಛೇರಿಯಿಂದ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಡಿಯಲ್ಲಿಯ ಅಲ್ಪಾವಧಿ ಟೆಂಡರ್‌ಅನ್ನು ಕರೆಯಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ
1	ರಾಷ್ಟ್ರೀಯ ಹೆದ್ದಾರಿ 206 ತುಮಕೂರು ಹೊನ್ನಾವರ ಸೆಕ್ಷನ್‌ನ ಕಿ.ಮೀ. 202.00 ರಿಂದ 205.20ರವರೆಗೆ **ನೀರಿನ ಕೊಳವೆಗಳನ್ನು** ಸ್ಥಳಾಂತರಿಸುವ ಕಾಮಗಾರಿ ಜಾಬ್ ಸಂಖ್ಯೆ: 206-ಕೆಎನ್‌ಟಿ-2009-591	4831680.00	96700.00

ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ : 9-09-2009 ಸಮಯ: 16.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 11-9-2009 ಸಮಯ: 16.00
ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ವೇಳೆ : 14-09-2009 ಸಮಯ: 11.00
ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ : 16-09-2009 ಸಮಯ: 11.00

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಾಷ್ಟ್ರೀಯ ಹೆದ್ದಾರಿ ವಿಭಾಗ, ಚಿತ್ರದುರ್ಗ ಕಛೇರಿ ವೇಳೆಯಲ್ಲಿ ಅಥವಾ ಸರ್ಕಾರಿ ವೆಬ್‌ಸೈಟ್ : http://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಕಾರ್ಯಪಾಲಕ ಅಭಿಯಂತರರು,
ರಾಷ್ಟ್ರೀಯ ಹೆದ್ದಾರಿ ವಿಭಾಗ, ಚಿತ್ರದುರ್ಗ.

ಪಿ.ಆರ್. 725

FORM - I

(See Rule 9)

POLICE DEPARTMENT

Office of the Commissioner of Police Hubli-Dharwad

NOTIFICATION

Shri **SURESH S/o NIJAGUNE, CHELIN, CPC-2248, BENDIGERI POLICE STATION, HUBLI.** Working as CIVIL POLICE CONSTABLE in the Department of / Office of BENDIGERI POLICE STATION, HUBLI is permitted to change his/her name to Shri **SURESH S/o NIJAGUNE. CHOLIN.**

Commissioner of Police,
Hubli-Dharwad

P.D. 133

FORM - IV

(See Rule 12)

NOTICE

It is hereby notified that the undersigned has changed his/her name from **PALANI** to **PALANI SWAMY**

PALANI

P.D. 134

FORM - I

(See Rule 9)

POLICE DEPARTMENT

Office of the Superintendent of Police, Raichur

NOTIFICATION

No.EST/4/SR/2009, Raichur, Dated: 18th August 2009

Sri **HUSENAPPA** Working as Civil Police Constable No.245 in the Police Department, Office of the Superintendent of Police, Raichur District is permitted to change his name to Sri **VISHWAKRANTI**

Superintendent of Police
Raichur

P.D. 135

ನಮೂನೆ-1

(ನಿಯಮ-9)

ಕಂದಾಯ ಇಲಾಖೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ

ಅಧಿಸೂಚನೆ

ಕ್ರಸಂ: ಸಿಬ್ಬಂದಿ(2)/ವಹಿ-27/2007-08, ದಿನಾಂಕ: 1ನೇ ಸೆಪ್ಟೆಂಬರ್ 2008

ಶ್ರೀ **ಹಯಾತಸಾಬ ಮಹ್ಮದಗೌಸ ತತ್ತಿಪೂರಿ** ದ್ವಿತೀಯ ದರ್ಜೆ ಸಹಾಯಕರು, ತಹಶೀಲ್ದಾರ್ ಕಾರ್ಯಾಲಯ, ಶಿಗ್ಗಾಂವ, ಕಂದಾಯ ಇಲಾಖೆ ಇವರು ತಮ್ಮ ಹೆಸರನ್ನು **ಹಯಾತಸಾಬ ಮಹ್ಮದಗೌಸ** ಧಾರವಾಡ ಅಂತಾ ಬದಲಾಯಿಸಲು ಅನುಮತಿ ನೀಡಿದೆ.

ಪಿ.ಆರ್. 136 ಜಿಲ್ಲಾಧಿಕಾರಿಗಳು, ಹಾವೇರಿ

ನಮೂನೆ-1

(9ನೇ ನಿಯಮ ನೋಡಿ)

ವಾಣಿಜ್ಯ ತೆರಿಗೆ ಇಲಾಖೆ

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ-1, ಗಾಂಧಿನಗರ, ಬೆಂಗಳೂರು-560 009

ಅಧಿಸೂಚನೆ

ಹುಬ್ಬಳ್ಳಿಯಲ್ಲಿರುವ, ವಾಣಿಜ್ಯ ತೆರಿಗೆ ಇಲಾಖೆಯ ವಾಣಿಜ್ಯ ತೆರಿಗೆ ಅಧಿಕಾರಿ (ವಸೂಲಿ-1) ಕಛೇರಿಯಲ್ಲಿ ವಾಣಿಜ್ಯ ತೆರಿಗೆ ಪರಿವೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ **ನಾಗರತ್ನಾ ಶಾಂ.ಸುಕಾಲಿ** ಅವರಿಗೆ, ಅವರ ಹೆಸರನ್ನು ಶ್ರೀಮತಿ **ನಾಗರತ್ನಾ ಚಂದ್ರಶೇಖರ ಬರಮಯ್ಯನವರ** ಎಂದು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಪ್ರದೀಪ್ ಸಿಂಗ್ ಖರೋಲ

ಪಿ.ಡಿ. 137 ವಾಣಿಜ್ಯ ತೆರಿಗೆ ಆಯುಕ್ತರು, (ಕರ್ನಾಟಕ), ಬೆಂಗಳೂರು

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ | ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೧೦, ೨೦೦೯ (ಭಾದ್ರಪದ ೧೯, ಶಕ ವರ್ಷ ೧೯೩೧) | ಸಂಚಿಕೆ ೩೭

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ:ಕಂಇ 55 ಎಲ್‌ಆರ್‌ಎಂ 2009, ಬೆಂಗಳೂರು, ದಿನಾಂಕ: 1ನೇ ಆಗಸ್ಟ್ 2009

ಶ್ರೀ ಕಂಚಿಕಾಮಕೋಟ ಮೆಡಿಕಲ್ ಟ್ರಸ್ಟ್ (ರಿ), ಕೊಯಮತ್ತೂರು, ಚೆನ್ನೈ, ಇವರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಅರಕೆರೆ ಗ್ರಾಮದ ಸ.ನಂ.224/1 ರಲ್ಲಿ 0.34 ಗುಂಟೆ ಕೃಷಿ ಜಮೀನನ್ನು ದೇವಸ್ಥಾನ ಕಟ್ಟುವ ಉದ್ದೇಶಕ್ಕಾಗಿ ದಾನ ರೂಪದಲ್ಲಿ ಪಡೆಯಲು ನಮೂನೆ 15–ಎ ಮತ್ತು ನಮೂನೆ 15–ಎಎ, ಗಳಲ್ಲಿನ ಮಾಹಿತಿ ಅನುಸರಿಸಿ ಜಿಲ್ಲಾಧಿಕಾರಿ, ಶಿವಮೊಗ್ಗ ಜಿಲ್ಲೆ, ಇವರ ಪತ್ರ ಸಂಖ್ಯೆ:ಎಲ್‌ಆರ್‌ಎಫ್.ಸಿಆರ್.56/2006–07 ದಿನಾಂಕ:29.12.2008 ರಲ್ಲಿ ಪ್ರಸ್ತಾಪಿತ ಮೇಲ್ಕಂಡ 0.34 ಗುಂಟೆ ಜಮೀನನ್ನು ದಾನವಾಗಿ ಪಡೆಯಲು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109(1ಎ) ರಡಿ ಅನುಮೋದನೆ/ವಿನಾಯಿತಿ ನೀಡುವ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಖರೀದಿಸಲು ಖಾತೆದಾರರಿಂದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಜಮೀನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಪಿ.ಟಿ.ಸಿ.ಎಲ್) ಅಧಿನಿಯಮ 1978, ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿಗಳು ಹಾಗೂ ಇನ್ನಿತರ ಪರಭಾರೆ ನಿಷೇಧ ಕಾಯ್ದೆಗಳ ವ್ಯಾಪ್ತಿಗೆ ಒಳಪಡುವುದಿಲ್ಲ.

ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟ ಉದ್ದೇಶಕ್ಕಾಗಿ ಎಷ್ಟೇ ವಿಸ್ತೀರ್ಣದ ಭೂಮಿಯನ್ನು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರ ಕಲಂ 63, 79ಎ, 79ಬಿ ಅಥವಾ 80ರ ಅವಕಾಶಗಳಿಂದ ವಿನಾಯಿತಿ ನೀಡಲು ಸದರಿ ಅಧಿನಿಯಮದ ಕಲಂ 109(1ಎ) ರಡಿ ಅವಕಾಶ ಕಲ್ಪಿಸಿದೆ.

ಈ ಪ್ರಸ್ತಾವನೆ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧಿನಿಯಮ 1995ರ ಕಲಂ 109(1ಎ) ಮತ್ತು ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ನಿಯಮಗಳು, 1996ರ ನಿಯಮ 38–ಬಿ ಮತ್ತು 38–ಸಿ ರಲ್ಲಿನ ಷರತ್ತುಗಳನ್ನು ಪೂರೈಸಿದ್ದು ಕರ್ನಾಟಕ ಭೂ ಸುಧಾರಣೆ ಅಧಿನಿಯಮ 1961ರ ಕಲಂ 63. 79ಎ, 79ಬಿ, ಅಥವಾ 80ಕ್ಕೆ ವಿನಾಯಿತಿ ನೀಡಿ ಶ್ರೀ ಕಂಚಿಕಾಮಕೋಟಿ ಮೆಡಿಕಲ್ ಟ್ರಸ್ಟ್ (ರಿ), ಕೊಯಮತ್ತೂರು, ಚೆನ್ನೈ, ಇವರು ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ ಅರಕೆರೆ ಗ್ರಾಮದ ಸ.ನಂ.224/1 ರಲ್ಲಿ 0.34 ಗುಂಟೆ ಕೃಷಿ ಜಮೀನನ್ನು ದೇವಸ್ಥಾನ ಕಟ್ಟುವ ಉದ್ದೇಶಕ್ಕಾಗಿ ದಾನ ರೂಪದಲ್ಲಿ ಪಡೆಯಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 109(1ಎ)ರಡಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಸರ್ಕಾರದ ಅನುಮತಿ ನೀಡಲಾಗಿದೆ:–

1. ಯಾವ ಉದ್ದೇಶಕ್ಕಾಗಿ ಜಮೀನನ್ನು ಖರೀದಿಸಲು ಅನುಮತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಸದರಿ ಜಮೀನನ್ನು ಎರಡು ವರ್ಷದೊಳಗಾಗಿ ಉಪಯೋಗಿಸತಕ್ಕದ್ದು. ಮತ್ತು ಆ ಬಗ್ಗೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಲಿಖಿತವಾಗಿ ಮಾಹಿತಿ ನೀಡತಕ್ಕದ್ದು.
2. ವಿನಾಯಿತಿ ಪಡೆದವರು ಸರ್ಕಾರ ಅಥವಾ ಯಾವುದೇ ಷೆಡ್ಯೂಲ್ಡ್ ಬ್ಯಾಂಕ್ ಅಥವಾ ಸಹಕಾರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಒಂದಕ್ಕೆ ಅಥವಾ ಕಂಪನಿ ಕಾಯ್ದೆ, 1956ರ ಕಲಂ 3 ರಲ್ಲಿ ಹೇಳಿರುವಂತೆ ಶೇಕಡ 51 ಪೇಯ್ಡ್ ಅಪ್ ಷೇರು ಬಂಡವಾಳ ಹೊಂದಿದ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ನಿಯಂತ್ರಿತ ಅಥವಾ ಎರಡರ ಹಿಡಿತ ಹೊಂದಿರುವ ಸರ್ಕಾರದ ಸಂಘ/ಸಂಸ್ಥೆ ಒಂದಕ್ಕೆ ಖಾತರಿ ನೀಡಿ ಅಡಮಾನ ಹಾಗೂ ಇತರೆ ಹೊಣೆ ಮಾಡಿ ಸಾಲ ಪಡೆಯುವುದನ್ನು ಹೊರತುಪಡಿಸಿ ಸದರಿ ಜಮೀನನ್ನು ನಿಗದಿತ ಉದ್ದೇಶಕ್ಕಲ್ಲದೆ ಬೇರೆ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.
3. ಜಮೀನು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಡಿ.ಪಿ/ಒ.ಡಿ.ಪಿ. ವ್ಯಾಪ್ತಿಯೊಳಗೆ ಬಂದರೆ, ಅದರಂತೆ ಅನುಮತಿ ಪಡೆದು ಉಪಯೋಗಿಸತಕ್ಕದ್ದು.
4. ಈ ಅನುಮತಿಯು ಕರ್ನಾಟಕ ಭೂಸುಧಾರಣೆ ಅಧಿನಿಯಮ, 1961ರ ಕಲಂ 109 ರನ್ವಯ ವಿನಾಯಿತಿ ಮಾತ್ರವಾಗಿರುತ್ತದೆ. ಬೇರೆ ಕಾನೂನುಗಳ ಉಲ್ಲಂಘನೆಯಾದಲ್ಲಿ ಸಂಬಂಧಿಸಿದ ಕಾಯ್ದೆಯಡಿ ಅಗತ್ಯ ಕ್ರಮ ಜರುಗಿಸಲು ಅವಕಾಶವಿರುತ್ತದೆ.
5. ಈ ಜಮೀನನ್ನು ವ್ಯವಸಾಯದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸಿಕೊಳ್ಳಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಕಲಂ 95 ರಂತೆ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯತಕ್ಕದ್ದು.
6. ಸಂಸ್ಥೆ ನಡೆಸುವ ಚಟುವಟಿಕೆಗಳು ಸ್ಥಳೀಯ ಕಾನೂನು, ಕರ್ನಾಟಕ ಮತ್ತು ಭಾರತದ ಕಾನೂನುಗಳನ್ನು ಪಾಲಿಸತಕ್ಕದ್ದು.
7. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಜಮೀನಿನ ವಿನ್ಯಾಸಕ್ಕೆ ನಗರ ಯೋಜನಾ ಇಲಾಖೆ/ಅಭಿವೃದ್ಧಿ ಪ್ರಾಧಿಕಾರ/ಸ್ಥಳೀಯ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯತಕ್ಕದ್ದು.
8. ಮೇಲಿನ ಷರತ್ತುಗಳು ಉಲ್ಲಂಘನೆಯಾದಲ್ಲಿ ಈಗ ನೀಡಲಾಗಿರುವ ಅನುಮತಿಯನ್ನು ಕಾನೂನು ರೀತ್ಯ ರದ್ದುಪಡಿಸಲಾಗುವುದು ಮತ್ತು ಪ್ರಸ್ತಾಪಿತ ಭೂಮಿಯನ್ನು ಋಣಮುಕ್ತವಾಗಿ ಸರ್ಕಾರದಲ್ಲಿ ನಿಹಿತ ಮಾಡಿಕೊಳ್ಳಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 356 **ಟಿ.ಎನ್. ನಾರಾಯಣಗೌಡ**

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಸುಧಾರಣೆ)

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸೋರಹುಣಸೆ ಗ್ರಾಮದ ಸರ್ವೆ ನಂ.29 ರಲ್ಲಿ 1-20 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರಡಿ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ: 1. ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ವರ್ತೂರುರವರ ಪತ್ರ ದಿನಾಂಕ:20.08.2008.
2. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ:ಎಲ್.ಎನ್.ಡಿ.:ಸಿ.ಆರ್:172/08-09 ದಿನಾಂಕ:23.07.2009.
3. ಸರ್ಕಾರದ ಪತ್ರ ಸಂಖ್ಯೆ: ಆರ್.ಡಿ:70:ಎಲ್‌ಜಿಪಿ 2008 ದಿನಾಂಕ: 08.08.2008.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸೋರಹುಣಸೆ ಗ್ರಾಮದ ಸರ್ವೆ ನಂ.29 ಮತ್ತು 48 ರಲ್ಲಿ 4-00 ಎಕರೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ ಮಂಜೂರು ಮಾಡುವಂತೆ ಉಲ್ಲೇಖ(1)ರ ಪತ್ರದಲ್ಲಿ ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ವರ್ತೂರುರವರು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಕೋರಿರುತ್ತಾರೆ.

ದಿನಾಂಕ:21.08.2008ರ ಟಿಪ್ಪಣಿಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು, ಈ ಸರ್ವೆ ನಂಬರ್ ಜಮೀನುಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜಿಗೋಸ್ಕರ ಕಾಯ್ದಿರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ. ಸೋರಹುಣಸೆ ಗ್ರಾಮದ ಸ.ನಂ.29ರಲ್ಲಿ 1-20 ಎಕರೆ/ಗುಂಟೆ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಾಯ್ದಿರಿಸಲು ಉಲ್ಲೇಖ(2)ರ ಪತ್ರದಲ್ಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರು ನಕ್ಷೆ ತಯಾರಿಸಿ, ಕಡತದೊಂದಿಗೆ ವರದಿ ಮಾಡಿರುತ್ತಾರೆ.

2002–03ನೇ ಸಾಲಿನ ಆರ್.ಟಿ.ಸಿ.ದಾಖಲೆಯಂತೆ ಸೋರಹುಣಸೆ ಗ್ರಾಮದ ಸರ್ವೆ ನಂ.29 ಒಟ್ಟು 11–27 ಎಕರೆ/ಗುಂಟೆ ಜಮೀನಿದ್ದು, ಸರ್ಕಾರಿ ಮುಫತ್‌ಕಾವಲ್ ಎಂಬುದಾಗಿ ವರ್ಗೀಕೃತವಾಗಿರುತ್ತದೆ. ತಹಶೀಲ್ದಾರ್‌ರವರ ವರದಿಯಂತೆ ಈ ಜಮೀನು ಖುಲ್ಲಾ ಇರುತ್ತದೆ. ಆದ್ದರಿಂದ ಸೋರಹುಣಸೆ ಹಾಗೂ ಸುತ್ತಮುತ್ತಲ ಗ್ರಾಮಗಳ ಅನುಕೂಲಕ್ಕಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಾಯ್ದಿರಿಸುವುದು ಸೂಕ್ತವಾಗಿರುತ್ತದೆ. ಅಂತೆಯೇ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನಂ: ಎಲ್‌ಎನ್‌ಡಿ(ಪೂ)ಸಿಆರ್: 64/2009–10, ದಿನಾಂಕ: 22ನೇ ಜುಲೈ 2009

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಸೋರಹುಣಸೆ ಗ್ರಾಮದ ಸರ್ವೆ ನಂ.29 ರಲ್ಲಿ ಸರ್ಕಾರಿ ಮುಫತ್ತು ಕಾವಲು ಎಂಬುದಾಗಿ ವರ್ಗೀಕೃತವಾದ 11–27 ಎಕರೆ/ಗುಂಟೆ ಜಮೀನಿನ ಪೈಕಿ ಮೋಜಣಿದಾರರು ತಯಾರಿಸಿರುವ ನಕ್ಷೆ, ತಹಶೀಲ್ದಾರ್‌ರವರ ವರದಿ ಮತ್ತು ಉಲ್ಲೇಖ(1)ರ ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜುರವರ ಕೋರಿಕೆಯಲ್ಲಿನ ಅಂಶಗಳನ್ನು ಮತ್ತು ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಗಣಿಸಿ, ಉಲ್ಲೇಖ (3)ರ ಸರ್ಕಾರದ ಸುತ್ತೋಲೆಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ಸೋರಹುಣಸೆ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜನ್ನು ವಿಸ್ತರಿಸಿ, ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರಡಿ ಕಾಯ್ದಿರಿಸಿ ಆದೇಶಿಸಿದೆ.

ವಿಶೇಷ ಜಿಲ್ಲಾಧಿಕಾರಿಗಳು,
ಪಿ.ಆರ್. 357 ಬೆಂಗಳೂರು ಜಿಲ್ಲೆ, ಬೆಂಗಳೂರು.

ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರ ನಡವಳಿಕೆಗಳು

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸರ್ವೆ ನಂ.106 ರಲ್ಲಿನ 0–30 ಗುಂಟೆ ಜಮೀನನ್ನು ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆಗೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರಡಿ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ:
1. ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ ರವರ ಪತ್ರಸಂಖ್ಯೆ:ಉನಿ/ಬೆಂನಜಿ./ಕಟ್ಟಡ,/07–08/806 ದಿನಾಂಕ:24.07.2007.
2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿರವರ ಪತ್ರ ಸಂಖ್ಯೆ: ಅಬಿ(1)ಪಶುಪಾಲನಾ:ಸಿಆರ್:28/06–07 ದಿನಾಂಕ:17.09.2007.
3. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರ ಪತ್ರ ಸಂಖ್ಯೆ:ಎಲ್.ಎನ್.ಡಿ.:ಸಿ.ಆರ್:158,160, 161/07–08 ದಿನಾಂಕ:19.11.2007 ಮತ್ತು ನಂ.ಎಲ್‌ಎನ್‌ಡಿ:ಸಿಆರ್:551/08–09 ದಿನಾಂಕ:02.06.2009.

ಪ್ರಸ್ತಾವನೆ:

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸರ್ವೆ ನಂ.106 ರಲ್ಲಿ 80x60 ಅಡಿ ಅಳತೆಯ ನಿವೇಶನವನ್ನು ಪಶುವೈದ್ಯ ಸೇವಾ ಇಲಾಖೆಗೆ ನೀಡುವಂತೆ ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ನಡವಳಿಕೆ ನಡೆಸಿದ್ದು, ಸದರಿ ನಿವೇಶನವನ್ನು ಇಲಾಖೆ ಮಂಜೂರು ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆಯ ಉಪನಿರ್ದೇಶಕರು ಕೋರಿರುತ್ತಾರೆ.

ಉಲ್ಲೇಖ (2)ರ ಪತ್ರದಲ್ಲಿ ಪ್ರಶ್ನಿತ ನಿವೇಶನದಲ್ಲಿ ಪಶು ಚಿಕಿತ್ಸಾಲಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಲು ಜಾಗವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಉಲ್ಲೇಖ (3)ರ ತಹಶೀಲ್ದಾರ್‌ರವರ ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿದ್ದು, ದೊಡ್ಡಗುಬ್ಬಿ ಗ್ರಾಮದ ಸ.ನಂ.106 ರಲ್ಲಿ 0–30 ಗುಂಟೆ ಜಮೀನನ್ನು ದೊಡ್ಡ ಗುಬ್ಬಿ ಗ್ರಾಮದ ಪಶುವೈದ್ಯ ಶಾಲೆ ಕಟ್ಟಡಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71 ರಡಿ ಕಾಯ್ದಿರಿಸಲು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಆದೇಶ

ನಂ: ಎಲ್‌ಎನ್‌ಡಿ(ಪೂ)ಸಿಆರ್:89/2007–08, ದಿನಾಂಕ: 4ನೇ ಜುಲೈ 2009

ಪ್ರಸ್ತಾವನೆಯಲ್ಲಿ ವಿವರಿಸುವಂತೆ, ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆರವರ ಕೋರಿಕೆ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಪತ್ರ ಹಾಗೂ ಉಲ್ಲೇಖ (3)ರ ತಹಶೀಲ್ದಾರ್‌ರವರ ವರದಿಯನ್ನು ಪರಿಗಣಿಸಿ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ದೊಡ್ಡಗುಬ್ಬಿ ಗ್ರಾಮದ ಸರ್ವೆ ನಂ.106 ರಲ್ಲಿನ 0–30 ಗುಂಟೆ ಜಮೀನನ್ನು ಪಶುವೈದ್ಯ ಸೇವಾ ಇಲಾಖೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71 ರಡಿ ಕಾಯ್ದಿರಿಸಿ ಆದೇಶಿಸಿದೆ.

ಹೆಚ್. ರಾಮಾಂಜನೇಯ
ವಿಶೇಷ ಜಿಲ್ಲಾಧಿಕಾರಿಗಳು,
ಪಿ.ಆರ್. 358 ಬೆಂಗಳೂರು ಜಿಲ್ಲೆ, ಬೆಂಗಳೂರು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ತಿದ್ದುಪಡಿ ಅಧಿಕೃತ ಜ್ಞಾಪನ

ಸಂಖ್ಯೆ: ಎಲ್.ಎನ್.ಡಿ(ಪೂ)/ಸಿಆರ್/13/2009-10, ದಿನಾಂಕ: 1ನೇ ಆಗಸ್ಟ್ 2009

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆದೂರು ಗ್ರಾಮದ ಸ.ನಂ.24ರಲ್ಲಿನ 21-00 ಎಕರೆ ಜಮೀನನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಮಸಂಖ್ಯೆ ದಿನಾಂಕ:18.08.2008.

2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆರವರ ಪತ್ರ ಸಂ:65/2009-10 ದಿನಾಂಕ:04.04.2009.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಹಾಗೂ ಉಲ್ಲೇಖ (1)ರನ್ವಯ ಈ ಕಛೇರಿಯ ಅಧಿಕೃತ ಜ್ಞಾಪನಾ ಆದೇಶದಲ್ಲಿ ವಿಷಯದಲ್ಲಿ ಪ್ರಸ್ತಾಪಿಸಿದ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಆದೂರು ಗ್ರಾಮದ ಸ.ನಂ.24ರ ವಿಸ್ತೀರ್ಣ 21-00 ಎಕರೆ ಎಂದು ನಮೂದಾಗಿದ್ದು, ಸರ್ವೆ.ನಂ.74ರ ಬದಲಿಗೆ 24 ಎಂದು ಆಗಿರುವುದನ್ನು ಸರ್ವೆ.ನಂ.74 ಎಂದು ಓದಿಕೊಳ್ಳುವುದು ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ವಿಶೇಷ ಜಿಲ್ಲಾಧಿಕಾರಿಗಳು,
ಪಿ.ಆರ್. 359 ಬೆಂಗಳೂರು ಜಿಲ್ಲೆ, ಬೆಂಗಳೂರು.

ತಹಶೀಲ್ದಾರರ ಕಾರ್ಯಾಲಯ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ

ನಮೂನೆ-27

38ನೇ ನಿಯಮ 68(1) ಪ್ರಕರಣದ ಮೇರೆಗೆ ಘೋಷಣೆ

ನಂ. ಎಲ್‌ಎನ್‌ಡಿ (1) ಮಿಸ್ ಎವ 30/09-10, ದಿನಾಂಕ: 11ನೇ ಆಗಸ್ಟ್ 2009

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರ್ಕಾರಿ ಖರಾಬು ಕೆರೆ ಭಾಗವು ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ

ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮದ 1964ರ 68ನೇ ಪ್ರಕರಣದ 1ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸರ್ಕಾರಿ ಕೆರೆ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಕೆರೆ ಭಾಗದಲ್ಲಿ ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ ಖರಾಬು ಕೆರೆ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವ ಇರುವ ಇತರೆ ಯಾವುದೇ ಹಿತಾಸಕ್ತಿ ಹೊಂದಿರುವ ಯಾವುದೇ ಸಾರ್ವಜನಿಕರು ಅಥವಾ ಯಾವುದೇ ವ್ಯಕ್ತಿಯು ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಮತ್ತು ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮಿಷನರ್‌ಗೆ ಬರಹದಲ್ಲಿ ತಿಳಿಸತಕ್ಕದ್ದು. ಮತ್ತು ಸದ್ರಿ ಆಕ್ಷೇಪಣೆಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣದಲ್ಲಿ ಉಪ ಸಂಬಂಧಿಸಿರುವಂತೆ ಡೆಪ್ಯೂಟಿ ಕಮೀಷನರ್‌ರವರ ಪರಿಶೀಲನೆಗೊಳಪಟ್ಟಿರುತ್ತದೆ.

ಅನುಸೂಚಿ

ಸರ್ಕಾರಿ ಖರಾಬು ಕೆರೆಯ ಭಾಗದಲ್ಲಿ ಬರುವ ಗ್ರಾಮಗಳು	:	ಮಿಳ್ಳಗಟ್ಟ
ತಾಲ್ಲೂಕು	:	ಶಿವಮೊಗ್ಗ
ಜಿಲ್ಲೆ	:	ಶಿವಮೊಗ್ಗ
ಕೆರೆಯ ಭಾಗ ಅಥವಾ ಭಾಗಗಳ ವರ್ಣನೆ ರಸ್ತೆ	:	ಸರ್ಕಾರಿ ಖರಾಬುಕೆರೆ ಮಿಳ್ಳಗಟ್ಟ ಸ.ನಂ. 104ರಲ್ಲಿ
ಭಾಗಗಳ ಸರಿ ಸುಮಾರು ವಿಸ್ತೀರ್ಣ	:	23.01 ಎಕರೆ

ಚೆಕ್ಕುಬಂದಿ

1. ಉತ್ತರಕ್ಕೆ	:	ಊರು, ರೀ.ಸ.ನಂ.27, 26
2. ದಕ್ಷಿಣಕ್ಕೆ	:	ಮಂಡ್ಲಿ ಗ್ರಾಮದ ಗಡಿ 103, 93
3. ಪೂರ್ವಕ್ಕೆ	:	ಊರು, ರಿ.ಸ.ನಂ.92
4. ಪಶ್ಚಿಮಕ್ಕೆ	:	ಮಂಡ್ಲಿ ಗ್ರಾಮದ ರಿ.ಸ.ನಂ. 105, 106, 107

ಪಿ.ಆರ್. 375

ತಹಶೀಲ್ದಾರ್,
ಶಿವಮೊಗ್ಗ ತಾಲ್ಲೂಕು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ನಮೂನೆ–27

ನಂ.ಎಲ್‌ಎನ್‌ಡಿ.ಸಿಆರ್.22/08–09, ದಿನಾಂಕ: 7ನೇ ಆಗಸ್ಟ್ 2009

ವಿಷಯ: ಗುಂಡಿಬಂಡೆ ತಾಲ್ಲೂಕು, ಗುಡಿಬಂಡೆ ಗ್ರಾಮದ ಸ.ನಂ.199 ರಲ್ಲಿ 1–00 ಎಕರೆ ಜಮೀನನ್ನು ಅಗ್ನಿಶಾಮಕ ಠಾಣೆಗೆ ಮತ್ತು ವಸತಿ ಗೃಹಕ್ಕಾಗಿ ಮಂಜೂರು ಮಾಡುವ ಉದ್ದೇಶಕ್ಕಾಗಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.166/07–08, ದಿನಾಂಕ: 07/03/2008, 22/12/2008.

2. ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.222/06–07, ದಿನಾಂಕ:03/04/2007.

3. ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್. 9/05–06, ದಿನಾಂಕ: 13/03/2007, 15/07/2008 ಮತ್ತು 22/05/2009.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ 'ಪೂಟ್ ಖರಾಬ್' ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಪೂಟ್ ಖರಾಬ್ ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ ಪೂಟ್ ಖರಾಬ್ ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳಿಸಲು ಉದ್ದೇಶಿಸಿರುವುದಾಗಿ ಈ ಮೂಲಕ ಘೋಷಿಸುತ್ತದೆ.

ಸದರಿ 'ಪೂಟ್ ಖರಾಬ್' ಪ್ರದೇಶದಲ್ಲಿ ಅಥವಾ ಅವರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಚಿಕ್ಕಬಳ್ಳಾಪುರ
ತಾಲ್ಲೂಕು	:	ಗುಡಿಬಂಡೆ
ಹೋಬಳಿ	:	ಕಸಬಾ
ಗ್ರಾಮ	:	ಗುಡಿಬಂಡೆ

ಸ.ನಂ.199 ರ ಪೂಟ್ ಖರಾಬು 5–05 (ಅ) ಪೈಕಿ ಮತ್ತೆ ಪೂಟ್ ಖರಾಬ್ (ಬಿ) 0–09 ರ ಪೈಕಿ 1–00 ಎಕರೆ ಜಮೀನು ಸಾರ್ವಜನಿಕ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ನೇಯ್ಗೆರಾಮಯ್ಯ
ಪಶ್ಚಿಮಕ್ಕೆ	:	ಎಲ್ಲೋಡು ರಸ್ತೆ
ಉತ್ತರಕ್ಕೆ	:	ಶ್ರೀನಿವಾಸ ಬಿನ್ ವೆಂಕಟರಾಮಯ್ಯ
ದಕ್ಷಿಣಕ್ಕೆ	:	ಸರ್ವೆ ನಂಬರ್ 199 ರ ಉಳಿಕೆ

ಪಿ.ಆರ್. 381

ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ಭೂ ಆರ್ಜನೆ ಅಧಿನಿಯಮ 17ನೇ ಪ್ರಕರಣದ ಅನ್ವಯ 4(1) ನೇ ಪ್ರಕರಣದ ಮೇರೆಗೆ

ಅಧಿಸೂಚನೆ ಕ್ರಮಾಂಕ: ಎಲ್‌ಎಕ್ಯೂ / ಎಸ್‌ಆರ್ /34/09-10, ದಿನಾಂಕ: 17ನೇ ಆಗಸ್ಟ್ 2009

